ಭಾನುವಾರ, ಆಗಸ್ಟ್ 6, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಹಿರೋಶಿಮಾ ದಿನ
ಹಿರೋಶಿಮಾ ದಿನದ ಅಂಗವಾಗಿ ಮುಂಬೈನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಬಾಲಕಿ

ಎಂಜಿನಿಯರಿಂಗ್ ಕೋರ್ಸ್ ಶುಲ್ಕ ಶೇ 3ರಷ್ಟು ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023-24ರ ಶೈಕ್ಷಣಿಕ ವರ್ಷದ ಎಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕವನ್ನು ರಾಜ್ಯ ಸರ್ಕಾರ ಶೇ 3ರಷ್ಟು ಇಳಿಕೆ ಮಾಡಿದೆ.

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಬೇಡಿಕೆಗೆ ಸಮ್ಮತಿಸಿದ್ದ ಹಿಂದಿನ ಬಿಜೆಪಿ ಸರ್ಕಾರ ಶೇ 10ರಷ್ಟು ಶುಲ್ಕ ಹೆಚ್ಚಳ ಮಾಡಲು ಕಳೆದ ಏಪ್ರಿಲ್‌ನಲ್ಲಿ ಒಪ್ಪಿಗೆ ನೀಡಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಶುಲ್ಕ ಹೆಚ್ಚಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿ, ಆದೇಶ ಹಿಂಪಡೆಯಲು ತಾಂತ್ರಿಕ ಶಿಕ್ಷಣ ಇಲಾಖೆಗೆ ಸೂಚಿಸಿದ್ದರು.

ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆಸಿದ ಉನ್ನತ ಹಾಗೂ ತಾಂತ್ರಿಕ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಹಿಂದಿನ ಸರ್ಕಾರ ಒಪ್ಪಿದ ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಬದಲಾಗಿ, ಶೇ 7ರಷ್ಟು ಹೆಚ್ಚಳ ಮಾಡಲು ಸಮ್ಮತಿ ಸೂಚಿಸಿದ್ದಾರೆ.

2022-23ರ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳ ಸರ್ಕಾರಿ ಕೋಟಾದ ವಿದ್ಯಾರ್ಥಿಗಳ ಶುಲ್ಕ ₹38,200 ಇತ್ತು. ಅಲ್ಪಸಂಖ್ಯಾತರ ಕಾಲೇಜುಗಳಲ್ಲಿ (ಟೈಪ್-1) ₹91,796, ಅನುದಾನರಹಿತ ಕಾಲೇಜುಗಳಲ್ಲಿ (ಟೈಪ್-2) ₹98,984 ಮತ್ತು ಡೀಮ್ಡ್ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ₹91,796 ಇತ್ತು. ಪ್ರಸಕ್ತ ಸಾಲಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಹಿಂದಿನ ಮೊತ್ತಕ್ಕೆ ಶೇ 7ರಷ್ಟು ಹೆಚ್ಚುವರಿ ಶುಲ್ಕ ಪಾವತಿಸಬೇಕಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು, ಉಡುಪಿಯಲ್ಲಿ ಅತಿ ಕಡಿಮೆ ಪ್ರಕರಣಗಳು

ರಾಜ್ಯದಲ್ಲಿ 45,557 ಬಾಲತಾಯಂದಿರು

• ಕೆ.ನರಸಿಂಹಮೂರ್ತಿ


ಮೈಸೂರು: ರಾಜ್ಯದಲ್ಲಿ ಮೂರೂವರೆ ವರ್ಷದಲ್ಲಿ 45,557 ಬಾಲಕಿಯರು ತಾಯಂದಿರಾಗಿದ್ದಾರೆ. ಕೋವಿಡ್ ಮೊದಲ ಮತ್ತು ಎರಡನೇ ಅವಧಿಗಿಂತಲೂ, ಆ ನಂತರದ ವರ್ಷದಲ್ಲಿ (2022) ಈ ಸಂಖ್ಯೆ ಹೆಚ್ಚಾಗಿದೆ.


30 ಜಿಲ್ಲೆಗಳ ಪೈಕಿ ಬೆಂಗಳೂರು ನಗರ ಜಿಲ್ಲೆಯಲ್ಲೇ ಒಟ್ಟಾರೆ ಪ್ರಕರಣಗಳು ಅತಿ ಹೆಚ್ಚಿವೆ. ನಗರದ ‘ಒಡನಾಡಿ’ ಸೇವಾ ಸಂಸ್ಥೆಯು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿ ಸಲ್ಲಿಸಿದ್ದ ಅರ್ಜಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯವು 2020ರಿಂದ 2023 ಜೂನ್‌ವರೆಗಿನ ಮಾಹಿತಿಯನ್ನು ನೀಡಿದೆ. ಈ ಮಾಹಿತಿಯಲ್ಲಿ ಈ ಅಂಶ ಇದೆ.


ಬೆಂಗಳೂರು ನಗರದ ನಂತರ ಅತಿ ಹೆಚ್ಚು ಬಾಲ ತಾಯಂದಿರು ಇರುವ ಇರುವ ಜಿಲ್ಲೆ ಮೈಸೂರು. ನಂತರದ ಮೂರು ಜಿಲ್ಲೆಗಳು; ಚಿತ್ರದುರ್ಗ, ಬಳ್ಳಾರಿ, ತುಮಕೂರು.

ಕೋವಿಡ್ ನಂತರದ ವರ್ಷ 2022ರಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ 2 ಸಾವಿರಕ್ಕೂ ಹೆಚ್ಚು ಪ್ರಕರಣಗಳು ನಡೆದಿವೆ. ಕಲಬುರಗಿ, ಬಳ್ಳಾರಿ, ಮೈಸೂರು, ತುಮಕೂರು, ಬೆಳಗಾವಿ ಮತ್ತು ಚಿತ್ರದುರ್ಗದಲ್ಲಿ 1 ಸಾವಿರಕ್ಕಿಂತ ಹೆಚ್ಚು ಹಾಗೂ 2 ಸಾವಿರಕ್ಕಿಂತ ಕಡಿಮೆ ಪ್ರಕರಣಗಳು ವರದಿಯಾಗಿವೆ. ಪ್ರಸ್ತುತ ವರ್ಷದ ಮೊದಲ ಆರು ತಿಂಗಳಲ್ಲೂ ಬೆಂಗಳೂರು ನಗರ ಜಿಲ್ಲೆಯಲ್ಲೇ ಅಧಿಕ (374) ಪ್ರಕರಣಗಳಿವೆ.

ಅತಿ ಕಡಿಮೆ: ಇಡೀ ರಾಜ್ಯದಲ್ಲಿ ಉಡುಪಿಯಲ್ಲಿ ಅತಿ ಕಡಿಮೆ (86) ಪ್ರಕರಣಗಳು ದಾಖಲಾಗಿವೆ. ದಕ್ಷಿಣ ಕನ್ನಡದಲ್ಲಿ 148 ಪ್ರಕರಣಗಳು ವರದಿಯಾಗಿವೆ. ಉಳಿದ, 11 ಜಿಲ್ಲೆಗಳಲ್ಲಿ ಪ್ರಕರಣಗಳ ಸಂಖ್ಯೆ 1 ಸಾವಿರದ ಒಳಗಿವೆ.







ಬಾಲತಾಯಂದಿರ ಜೀವನ ಸುಧಾರಣೆ ಮತ್ತು ಅವರ ಮಕ್ಕಳ ಆರೈಕೆ ವಿಷಯದಲ್ಲಿ ವಿಶೇಷ ಕಾರ್ಯಕ್ರಮ ರೂಪಿಸುವುದು ಅಗತ್ಯ

ಎಂ.ಎಲ್.ಪರಶುರಾಮ್
‘ಒಡನಾಡಿ’ ಸಂಸ್ಥೆಯ ನಿರ್ದೇಶಕ

‘ಆರೋಗ್ಯ ಇಲಾಖೆ ಹೆಚ್ಚಿನ ಗಮನಹರಿಸಲಿ’



‘ಬಾಲತಾಯಂದಿರು ಮತ್ತು ಅವರ ಮಕ್ಕಳ ಯೋಗಕ್ಷೇಮದ ವಿಚಾರದಲ್ಲಿ ಆರೋಗ್ಯ ಇಲಾಖೆಯು ಹೆಚ್ಚಿನ ಗಮನ ಹರಿಸಬೇಕು. ಸಮಾಜದ ನಿಂದನೆಯಿಂದಲೂ ರಕ್ಷಿಸಬೇಕು’ ಎಂದು ‘ಒಡನಾಡಿ’ ಸಂಸ್ಥೆಯ ನಿರ್ದೇಶಕ ಎಂ.ಎಲ್.ಪರಶುರಾಮ್ ಪ್ರತಿಪಾದಿಸುತ್ತಾರೆ.

‘ಬಾಲಕಿಯೊಬ್ಬಳು ಗರ್ಭಿಣಿ, ತಾಯಿ ಆದಳೆಂದರೆ, ಆಕೆ ಶಿಕ್ಷಣದಿಂದ ವಂಚಿತಳಾದಳೆಂದೇ ಅರ್ಥ. ಆಕೆ ತನ್ನ ಮಗುವಿಗೆ ಏನು ಕಲಿಸಬಲ್ಲಳು? ಅಂಥ ಪರಿಸ್ಥಿತಿಯಿಂದ ಆಕೆಯನ್ನು ಹೊರಕ್ಕೆ ತಂದು ಸಬಲಗೊಳಿಸುವುದು ಹೇಗೆ? ಈ ತಾಯಂದಿರಲ್ಲಿ ಅಪೌಷ್ಟಿಕತೆಯಿಂದ ಬಳಲುತ್ತಿರುವವರೆಷ್ಟು ಮಂದಿ? ಪೋಷಕರಿಲ್ಲದವರೆಷ್ಟು ಮಂದಿ ಎಂಬುದನ್ನು ಪರಿಶೀಲಿಸಬೇಕು’ ಎಂದು ಅವರು ಅಭಿಪ್ರಾಯಪಡುತ್ತಾರೆ.

‘ಬಾಲ್ಯವಿವಾಹ ಮತ್ತು ಅತ್ಯಾಚಾರವೇ ಬಾಲತಾಯಂದಿರ ಸಂಖ್ಯೆ ಹೆಚ್ಚಾಗಲು ಕಾರಣ. ಇಂಥ ಪ್ರಕರಣಗಳು ನಡೆಯದಂತೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದೂ ಅತ್ಯವಶ್ಯವಾಗಿದೆ’ ಎನ್ನುತ್ತಾರೆ.

ಸುದ್ದಿ 2 ನಿಮಿಷ

ವಾರ್ಡನ್‌ಗೆ ಬಾರಿಸಿ ಎಂದ ಶಾಸಕ

ಚಿತ್ರದುರ್ಗ: ಕಳಪೆ ಗುಣಮಟ್ಟದ ಆಹಾರ ಪೂರೈಕೆ ಮಾಡಿರುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಅಹವಾಲು ಆಲಿಸುವ ವೇಳೆ ಶಾಸಕ ಕೆ.ಸಿ.ವೀರೇಂದ್ರ, ‘ಕೊಠಡಿಯಲ್ಲಿ ಕೂಡಿಹಾಕಿ ವಾರ್ಡನ್‌ಗೆ ಬಾರಿಸಿ’ ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಕಾನೂನು ಮತ್ತು ಬಿ.ಇಡಿ ಕಾಲೇಜು ವಿದ್ಯಾರ್ಥಿಗಳ ಹಾಸ್ಟೆಲ್‌ಗೆ ಭೇಟಿ ನೀಡಿದ್ದ ಅವರು, ವಾರ್ಡನ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವ ವೇಳೆ ಹೀಗೆ ಮಾತನಾಡಿದ್ದಾರೆ.

ಕೊಳೆತ ತರಕಾರಿ ಬಳಸಿ ಮಾಡಿದ ಅಡುಗೆಯಲ್ಲಿ ಹುಳ-ಗಳಿರುತ್ತವೆ ಎಂದು ಆರೋಪಿಸಿ ವಿದ್ಯಾರ್ಥಿಗಳು ಆಗಸ್ಟ್ 3ರಂದು ಪ್ರತಿಭಟನೆ ನಡೆಸಿದ್ದರು.

‘ಇನ್ನೊಮ್ಮೆ ಊಟದಲ್ಲಿ ಹುಳಗಳು ಸಿಕ್ಕರೆ ಆರಿಸಿ ಒಂದು ತಟ್ಟೆಗೆ ಹಾಕಿಕೊಂಡು ವಾರ್ಡನ್‌ಗೆ ತಿನ್ನಿಸಿ. ಕೊಠಡಿಯೊಂದರ-ಲ್ಲಿ ಕೂಡಿಹಾಕಿ ಸರಿಯಾಗಿ ಬಾರಿಸಿ. ನಾನಿದ್ದೇನೆ, ಯೋಚನೆ ಮಾಡಬೇಡಿ. ಇದು ಯಾಕೊ ಅತಿಯಾಗಿದೆ. ವಾರ್ಡನ್‌ಗೆ ಥಳಿಸಿದರೆ ಮಾತ್ರ ಪರಿಸ್ಥಿತಿ ಸರಿಹೋಗುತ್ತದೆ. ಇಲ್ಲವಾದರೆ ಇವರಿಗೆ ಅರಿವಾಗುವುದಿಲ್ಲ’ ಎಂದು ಶಾಸಕರು ಹೇಳಿರುವುದು ವಿಡಿಯೊದಲ್ಲಿದೆ.

‘ಹಾಸ್ಟೆಲ್ ವಿದ್ಯಾರ್ಥಿಗಳಿಗೆ ತೀರಾ ಕಳಪೆ ಗುಣಮಟ್ಟದ ಆಹಾರ ನೀಡಲಾಗಿದೆ. ಊಟದಲ್ಲಿ ಹುಳು, ಗುಟ್ಕಾ ಪ್ಯಾಕೆಟ್‌ಗಳು ಸಿಕ್ಕಿರುವುದನ್ನು ಕಂಡು ನೋವಿನಿಂದ ಹಾಗೆ ಮಾತನಾಡಿದ್ದೆ. ಕಾನೂನು ಕೈಗೆತ್ತಿಕೊಳ್ಳದಂತೆ ಹಾಗೂ ದುಡುಕದಂತೆಯೂ ಅವರಿಗೆ ಬುದ್ಧಿವಾದ ಹೇಳಿ ಬಂದಿದ್ದೇನೆ’ ಎಂದು ಶಾಸಕ ವೀರೇಂದ್ರ ಸ್ಪಷ್ಟನೆ ನೀಡಿದ್ದಾರೆ.



ಜಮಗಿ ಶಾಲೆ: ಶಿಕ್ಷಕರ ನಿಯೋಜನೆ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಗಡಿ ಗ್ರಾಮ ಜಮಗಿ ಸರ್ಕಾರಿ ಪ್ರೌಢಶಾಲೆಗೆ ಶನಿವಾರ ಇಬ್ಬರು ಶಿಕ್ಷಕರನ್ನು ನಿಯೋಜಿಸಲಾಗಿದೆ.

ಸಮೀಪದ ವಡಗಾಂವ್ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಗಣಿತ ಮತ್ತು ಸಮಾಜ ವಿಜ್ಞಾನ ಪಾಠ ಮಾಡುವ ಇಬ್ಬರು ಶಿಕ್ಷಕರನ್ನು ನಿಯೋಜಿಸಲಾಗಿದೆ. ಇವರು ವಾರದಲ್ಲಿ ಮೂರು ದಿನ ಜಮಗಿ ಶಾಲೆ ಮಕ್ಕಳಿಗೆ ಪಾಠ ಮಾಡುತ್ತಾರೆ. ಆದಷ್ಟು ಬೇಗ ಇಬ್ಬರು ಅತಿಥಿ ಶಿಕ್ಷಕರನ್ನು ನೇಮಿಸಲು ಮುಖ್ಯಶಿಕ್ಷಕರಿಗೆ ಆದೇಶ ನೀಡಲಾಗಿದೆ. ವಿಭಾಗ ಮಟ್ಟದ ವರ್ಗಾವಣೆ ಕೌನ್ಸೆಲಿಂಗ್‌ನಲ್ಲಿ ಇಬ್ಬರು ಶಿಕ್ಷಕರು ಈ ಶಾಲೆಗೆ ಬರಲಿದ್ದಾರೆ. ಅಲ್ಲಿಯ ತನಕ ಈ ವಿದ್ಯಾರ್ಥಿಗಳಿಗೆ ಕಲಿಕೆಯಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು ಎಂದು ಕ್ಷೇತ್ರ ಸಮನ್ವಯಾಧಿಕಾರಿ ಪ್ರಕಾಶ ರಾಠೋಡ್ ತಿಳಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಸೂಚನೆಯ ಮೇರೆಗೆ ರಾಠೋಡ್ ಅವರು ಶಾಲೆಗೆ ಶನಿವಾರ ಭೇಟಿ ನೀಡಿ ಪರಿಶೀಲಿಸಿದ್ದಾರೆ.

‘ಆರು ಶಿಕ್ಷಕರಲ್ಲಿ ಐವರ ವರ್ಗಾವಣೆ!’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಶನಿವಾರ ವರದಿ ಪ್ರಕಟಗೊಂಡಿತ್ತು.

ಸಿಇಟಿ, ನೀಟ್: ಇಂದು ಸೀಟ್ ಮ್ಯಾಟ್ರಿಕ್ಸ್ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಸಿಇಟಿ ಮತ್ತು ನೀಟ್ ಸೀಟ್ ಮ್ಯಾಟ್ರಿಕ್ಸ್ ವಿವರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಆಗಸ್ಟ್ 6ರ ಭಾನುವಾರ ಬೆಳಿಗ್ಗೆ 7 ಗಂಟೆಗೆ ಪ್ರಕಟಿಸಲಿದೆ. ಅರ್ಹ ಅಭ್ಯರ್ಥಿಗಳು ತಮ್ಮ ಆದ್ಯತೆಯ ಅನುಸಾರ ಸಂಯೋಜಿತವಾಗಿ ಐಚ್ಛಿಕಗಳನ್ನು (ಆಪ್ಶನ್ಸ್) ದಾಖಲಿಸಲು ಆಗಸ್ಟ್ 9ರ ಬೆಳಿಗ್ಗೆ 10 ಗಂಟೆಯವರೆಗೆ ಅವಕಾಶವಿದೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

‘ಅಭ್ಯರ್ಥಿಗಳು ತಮ್ಮ ಐಚ್ಛಿ-ಕಗಳನ್ನು ಬದಲಿಸಲು ಅಥವಾ ಪರಿಷ್ಕರಿಸಲು ಆಗಸ್ಟ್ 11ರ ಬೆಳಿಗ್ಗೆ 8ರಿಂದ 14ರ ಬೆಳಿಗ್ಗೆ 11 ಗಂಟೆಯವರೆಗೆ ಅವಕಾಶವಿದೆ. ಅದಕ್ಕೂ ಮೊದಲು ಆಗಸ್ಟ್ 11ರಂದು ಬೆಳಿಗ್ಗೆ 6 ಗಂಟೆಗೆ ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟ-ಸಲಾಗುವುದು. 16ರಂದು ಬೆಳಿಗ್ಗೆ 6 ಗಂಟೆಗೆ ಮೊದಲನೇ ಸುತ್ತಿನ ನೈಜ ಸೀಟು ಹಂಚಿಕೆ ಫಲಿತಾಂಶ ಪ್ರಕ-ಟಿಸಲಾಗುವುದು’ ಎಂದು ಅವರು ತಿಳಿಸಿದ್ದಾರೆ.

ಒಂದಕ್ಕಿಂತ ಹೆಚ್ಚು ಕೋರ್ಸ್‌ಗಳಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳು ತಮ್ಮ ಆದ್ಯತೆಗ-ಳನ್ನು ಒಂದೇ ಪೋರ್ಟಲ್‌ನಲ್ಲಿ ದಾಖಲಿಸಬೇಕು. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡ ವಿಡಿಯೊವನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ (http://kea.kar.nic.in) ಪ್ರಕ-ಟಿಸಲಾಗಿದೆ. ಅದನ್ನು ಅಭ್ಯರ್ಥಿಗಳು ಗಮನಿಸಬೇಕು ಎಂದು ಅವರು ಹೇಳಿದ್ದಾರೆ.

‘ಆಯುರ್ವೇದ, ಯುನಾನಿ, ಹೋಮಿಯೋಪಥಿ, ಯೋಗ ಮತ್ತು ನ್ಯಾಚುರೋಪಥಿ ಹಾಗೂ ಬಿ.ಎಸ್‌ಸಿ (ನರ್ಸಿಂಗ್) ಕೋರ್ಸ್‌ಗಳ ಸೀಟ್ ಮ್ಯಾಟ್ರಿಕ್ಸ್ ವಿವರವನ್ನು ಸರ್ಕಾರ ಇನ್ನೂ ಕೊಟ್ಟಿರುವು-ದಿಲ್ಲ. ಇದು ಪ್ರಾಧಿಕಾರಕ್ಕೆ ಬಂದ ನಂತರ ಎರಡನೇ ಸುತ್ತಿನ ಸೀಟು ಹಂಚಿಕೆಯನ್ನು ತಿಳಿಸಲಾಗುವುದು. ಒಟ್ಟಿನಲ್ಲಿ ಕಾಲಕಾಲಕ್ಕೆ ಹೊರಡಿಸುವ ಸೂಚನೆಗಳನ್ನು ತಿಳಿದುಕೊಳ್ಳಲು ಅಭ್ಯರ್ಥಿಗಳು ದಿನಕ್ಕೆ ಎರಡು ಬಾರಿಯಾದರೂ ಪ್ರಾಧಿಕಾರದ ವೆಬ್‌ಸೈಟ್ ನೋಡಬೇಕು’ ಎಂದೂ ಅವರು ಕೋರಿದ್ದಾರೆ.

ಮುಂಗಾರು: ಶೇ 12ರಷ್ಟು ಮಳೆ ಕೊರತೆ

ಆಗಸ್ಟ್‌ನಲ್ಲಿ ಬೇಸಿಗೆಯ ಬಿಸಿಲ ವಾತಾವರಣ, ಮಲೆನಾಡಿನಲ್ಲೂ ಅಭಾವ

• ಆದಿತ್ಯ ಕೆ.ಎ.

ಬೆಂಗಳೂರು: ರಾಜ್ಯದಲ್ಲಿ ಜುಲೈ ತಿಂಗಳಲ್ಲಿ ಅಬ್ಬರಿಸಿದ್ದ ಮುಂಗಾರು ಮತ್ತೆ ಕೈಕೊಡುವ ಲಕ್ಷಣಗಳು ಕಾಣಿಸುತ್ತಿವೆ. ಮಲೆನಾಡು, ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಆಗಸ್ಟ್ ತಿಂಗಳಲ್ಲಿ ವಿಪರೀತ ಮಳೆ, ಚಳಿ ವಾತಾವರಣದ ಬದಲಿಗೆ ಸುಡು ಬಿಸಿಲಿದೆ.

ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಈವರೆಗೆ ಶೇ 12ರಷ್ಟು ಮಳೆ ಕೊರತೆಯಾಗಿದೆ. ಕಳೆದ ಏಳು ದಿನಗಳ ಅವಧಿಯಲ್ಲೇ ಶೇ 63ರಷ್ಟು ಮಳೆಯ ಅಭಾವ ಸೃಷ್ಟಿಯಾಗಿದ್ದು, ತಡವಾಗಿ ಬಿತ್ತನೆ ಕಾರ್ಯ ನಡೆಸಿದ ರೈತರು ಕಂಗಾಲಾಗಿದ್ದಾರೆ. ಇದೇ ವಾತಾವರಣ ಮುಂದುವರಿದರೆ ಬಿತ್ತನೆ ಬೀಜಗಳು ಮೊಳಕೆ ಒಡೆಯುವುದು ಕಷ್ಟ ಎಂದು ರೈತರು ಅಳಲು ತೋಡಿಕೊಳ್ಳು-ತ್ತಾರೆ.

ಜುಲೈ ಮಧ್ಯದಲ್ಲಿ ನಿರಂತರ ಮಳೆಯಿಂದ ಪ್ರಮುಖ ನದಿಗಳು ಉಕ್ಕೇರಿದ್ದವು. ಈಗ ನದಿಯಲ್ಲಿ ನೀರಿನಮಟ್ಟ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿದೆ. ಆಗಸ್ಟ್ ಮೊದಲ ವಾರದಲ್ಲೂ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬೀಳುತ್ತಿಲ್ಲ. ಕಳೆದ ಒಂದು ವಾರದಲ್ಲಿ ವಾಡಿಕೆ ಮಳೆ ಪ್ರಮಾಣವು 66 ಮಿ.ಮೀ ಆಗಿತ್ತು. ಆದರೆ, 22.3 ಮಿ.ಮೀನಷ್ಟು ಮಾತ್ರ ಮಳೆ ಸುರಿದಿದೆ. ಆಗಸ್ಟ್‌ನಲ್ಲಿ ಶೇ 63ರಷ್ಟು ಮಳೆ ಕೊರತೆ ಎದುರಾಗಿದ್ದು, ರೈತರ ಆತಂಕವನ್ನು ಹೆಚ್ಚಿಸಿದೆ.

ಮುಂಗಾರು ಅನಿಶ್ಚಿತತೆ: ಈ ವರ್ಷ ಆರಂಭದಿಂದಲೂ ನೈರುತ್ಯ ಮುಂಗಾರು ಅನಿಶ್ಚಿತವಾಗಿದೆ. ಜೂನ್ 1ರಿಂದ ಆಗಸ್ಟ್ 5ರ ತನಕ ವಾಡಿಕೆ ಮಳೆ ಪ್ರಮಾಣವು 514 ಮಿ.ಮೀ ಆಗಿತ್ತು. ಬದಲಿಗೆ 452 ಮಿ.ಮೀನಷ್ಟು ಸುರಿದಿದ್ದು ಮುಂಗಾರು ಅಭಾವ ಸೃಷ್ಟಿಸಿದೆ. ಪ್ರಮುಖ ನದಿಗಳ ಉಗಮ ಸ್ಥಳವಾದ ಮಲೆನಾಡು ಜಿಲ್ಲೆಗಳಲ್ಲೂ ಒಂದು ವಾರದಿಂದ ಬಿಸಿಲಿನ ತಾಪ ಕಾಣಿಸಿಕೊಂಡಿದೆ. ವಾಡಿಕೆಯಷ್ಟು ಮಳೆ ಸುರಿದಿದ್ದರೆ, ಅಂತರ್ಜಲ ವೃದ್ಧಿಯಾಗಬೇಕಿತ್ತು. ಜತೆಗೆ, ನದಿಗಳಲ್ಲಿ ಸಮೃದ್ಧವಾಗಿ ನೀರು ಹರಿಯಬೇಕಿತ್ತು. ಜಲಾಶಯಗಳ ಒಳಹರಿವೂ ದಿಢೀರ್ ತಗ್ಗಿದೆ.

ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ-ದಲ್ಲಿ ಶೇ 25, ಹಾಸನದಲ್ಲಿ ಶೇ 19, ಚಿಕ್ಕ-ಮಗಳೂರಿನಲ್ಲಿ ಶೇ 31, ಕೊಡಗಿನಲ್ಲಿ ಶೇ 38ರಷ್ಟು ಮಳೆ ಕೊರತೆಯಾಗಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಅಧಿ-ಕಾರಿಯೊಬ್ಬರು ಮಾಹಿತಿ ನೀಡಿದರು.

‘ಉತ್ತರ ಒಳನಾಡಿನ ಬಳ್ಳಾರಿ, ವಿಜಯನಗರ, ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ ಸೇರಿದಂತೆ 13 ಜಿಲ್ಲೆಗಳಲ್ಲಿ ಜುಲೈನಲ್ಲಿ ವಾಡಿಕೆಗಿಂತ ಶೇ 5ರಷ್ಟು ಅಧಿಕ ಮಳೆಯಾಗಿತ್ತು. ಈಗ ಜಿಲ್ಲೆಯಲ್ಲೂ ಮಳೆ ಕೈಕೊಟ್ಟಿದೆ’ ಎಂದು ಅಧಿಕಾರಿಗಳು ಹೇಳಿದರು.

‘ಇನ್ನೆರಡು ತಿಂಗಳು ನೈರುತ್ಯ ಮುಂಗಾರು ಸಾಮಾನ್ಯಕ್ಕಿಂತ ಕಡಿಮೆ ಆಗಲಿದೆ’ ಎಂದು ಹವಾಮಾನ ತಜ್ಞರು ಎಚ್ಚರಿಸಿದ್ದಾರೆ. ರಾಜ್ಯದ ಪ್ರಮುಖ 14 ಜಲಾಶಯಗಳ ನೀರಿನ ಸಂಗ್ರಹ ಸಾಮರ್ಥ್ಯವು 895.45 ಟಿಎಂಸಿ ಅಡಿಯಾಗಿದೆ. ಪ್ರಸ್ತುತ 622.08 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಿದೆ. ಕಳೆದ ವರ್ಷ ಈ ಅವಧಿಯಲ್ಲಿ 693.73 ಟಿಎಂಸಿ ಅಡಿಗಳಷ್ಟು ನೀರಿನ ಸಂಗ್ರಹವಿತ್ತು.

ಮೂರು ತಿಂಗಳ ಅವಧಿಯಲ್ಲಿ ಮಳೆಯ ಪ್ರಮಾಣ (ಮಿ.ಮೀಗಳಲ್ಲಿ)

ತಿಂಗಳು	ವಾಡಿಕೆ ಮಳೆ	ಸುರಿದ ಮಳೆ	ಕೊರತೆ	ಅಧಿಕ ಮಳೆ
ಜೂನ್	199	87	ಶೇ 56	-
ಜುಲೈ	271	349	-	ಶೇ 29
ಆಗಸ್ಟ್ 5ರ ತನಕ	66	22.3	ಶೇ 63	-

ವಿಭಾಗವಾರು ಸ್ಥಿತಿ (ಮಿ.ಮೀಗಳಲ್ಲಿ)

ವಿಭಾಗ	ವಾಡಿಕೆ	ಸುರಿದ ಮಳೆ	ಕೊರತೆ
ದಕ್ಷಿಣ ಒಳನಾಡು	307	320	ಶೇ 2
ಮಲೆನಾಡು	1,216	870	ಶೇ 28
ಕರಾವಳಿ	2,305	2,025	ಶೇ 12

ಪ್ರಮುಖ ಜಲಾಶಯಗಳ ಈಗಿನ ಸ್ಥಿತಿಗತಿ (ಟಿಎಂಸಿಯಲ್ಲಿ)

ಜಲಾಶಯ	ಆಗಸ್ಟ್ 5,2023	ಆಗಸ್ಟ್ 5,2022
ಕೆಆರ್‌ಎಸ್	35.33	48.18
ಹಾರಂಗಿ	8.38	7.58
ಹೇಮಾವತಿ	30.73	36.86
ಕಬಿನಿ	18.77	18.91
ಭದ್ರಾ	47.15	69.45
ತುಂಗಭದ್ರಾ	84.76	101.11
ಆಲಮಟ್ಟಿ	120.76	110.38
ಲಿಂಗನಮಕ್ಕಿ	72.32	97.20
ನಾರಾಯಣಪುರ	30.17	31.23

15 ದಿನಗಳ ಹಿಂದೆ ತೇವಾಂಶ ಹೆಚ್ಚಳದಿಂದಾಗಿ ಬಿತ್ತನೆ ಸಾಧ್ಯವಾಗಿರಲಿಲ್ಲ. ಈಗ ಬಿತ್ತನೆ ಕಾರ್ಯ ನಡೆದಿದ್ದು, ಮಳೆ ಬರಲಿ ಎಂದು ಬೇಡಿಕೊಳ್ಳುವ ಸ್ಥಿತಿ ಬಂದಿದೆ

ರುದ್ರೇಶ್, ಕೃಷಿಕ, ಮಾಯಕೊಂಡ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.41	4,890	5,356
ಹಾರಂಗಿ	2,859	2,858.65	3,184	1,000
ಕಬಿನಿ	2284.00	2,282.73	4,649	6,000
ಹೇಮಾವತಿ	2,922	2,915.05	2,709	200
ಲಿಂಗನಮಕ್ಕಿ	1,819	1,789.60	18,715	3,004
ಸೂಪಾ (ಮೀ)	564	545.95	12,338	3,648
ಮಾಣಿ	595	581.30	2,764	00
ತುಂಗಭದ್ರಾ	1,633	1,627.44	9,850	6,123
ಮಲಪ್ರಭಾ	2079.5	2,065.30	3,458	194
ಘಟಪ್ರಭಾ	2175	2,160.36	12,177	1,711
ಭದ್ರಾ	186	164.50	4,011	192
ಆಲಮಟ್ಟಿ (ಮೀ)	519.60	519.47	85,751	42,731
ನಾರಾಯಣಪುರ (ಮೀ)	492.25	491.56	42,000	38,944

* ನೆಲಮಟ್ಟದಿಂದ



ಕಳ್‌ಬಾಡ್ಯಾನ ಆಟ... ಮೊಹರಂ ಅಲಾಯಿ ದೇವರುಗಳ ವಿಸರ್ಜನಾ ಮೆರವಣಿಗೆಗೂ ಮುನ್ನ ಕೊಪ್ಪಳದಲ್ಲಿ ಶನಿವಾರ ನಡೆದ ‘ಕಳ್‌ಬಾಡ್ಯಾ’ ನ ಆಟ ಸಾಕಷ್ಟು ಸಂಖ್ಯೆಯಲ್ಲಿ ಸೇರಿದ್ದ ಜನರನ್ನು ರಂಜಿಸಿತು –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಭ್ರಷ್ಟಾಚಾರ ವಿಚಾರಣೆ ಮಧ್ಯೆ ನಿಲ್ಲಿಸುವಂತಿಲ್ಲ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಭ್ರಷ್ಟಾಚಾರ ಪ್ರಕರಣದಲ್ಲಿ ವಿಶೇಷ ನ್ಯಾಯಾಧೀಶರು ಅಪರಾಧದ ವಿಚಾರಣೆ ಅಂಗೀಕರಿಸಿ ಆರೋಪಿಯ ವಿರುದ್ಧ ದೋಷಗಳನ್ನು ಪಟ್ಟಿ ಮಾಡಿದ ನಂತರ ಪೂರ್ವಾನುಮತಿಯ ಅಲಭ್ಯತೆ ಅಥವಾ ಅಮಾನ್ಯತೆಯ ಕಾರಣದಿಂದ ಆ ಪ್ರಕರಣದ ವಿಚಾರಣೆಯನ್ನು ಮಧ್ಯದಲ್ಲಿ ನಿಲ್ಲಿಸುವಂತಿಲ್ಲ ಅಥವಾ ತಡೆಯಾಜ್ಞೆ ನೀಡುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರನ್ನು ಒಳಗೊಂಡ ಪೀಠವು, ‘ವಿಚಾರಣೆಯ ಮಧ್ಯದಲ್ಲಿ ಪ್ರಕರಣ ರದ್ದುಗೊಳಿಸುವ ಮಧ್ಯಂತರ ಅರ್ಜಿಯು ವಿಚಾರಣೆಗೆ ಯೋಗ್ಯವಲ್ಲ. ಆದರೆ, ಪೂರ್ವಾನುಮತಿಯ ಮಂಜೂರಾತಿ ಬಗ್ಗೆ ವಿಚಾರಣೆಯ ಕೊನೆಯ ವಾದ ಪ್ರತಿವಾದದ ವೇಳೆ ಪ್ರಸ್ತಾಪಿಸಬಹುದು’ ಎಂದು ತಿಳಿಸಿದೆ.

ಪೂರ್ವಾನುಮತಿ ಮಾನ್ಯತೆ ಕುರಿತು ಪ್ರಶ್ನೆಗಳಿದ್ದಲ್ಲಿ ಅದನ್ನು ಪ್ರಕರಣದ ವಿಚಾರಣೆ ಆರಂಭಿಸುವ ಮೊದಲೇ ಗಮನಕ್ಕೆ ತರುವುದು ಉತ್ತಮ ಎಂದು ಪೀಠ ಹೇಳಿದೆ.

2018ರ ಆಗಸ್ಟ್ 16ರಂದು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 13 (2)ರೊಂದಿಗೆ ಸೆಕ್ಷನ್ 13 (1) (ಇ) ಅಡಿಯಲ್ಲಿ ದಾಖಲಾದ ದೋಷಾರೋಪಗಳನ್ನು ಖುಲಾಸೆಗೊ-ಳಿಸಿದ್ದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಲೋಕಾಯುಕ್ತ ಮೇಲ್ಮನವಿ ಸಲ್ಲಿಸಿತ್ತು. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯನಿರ್ವಾ-ಹಕ ಎಂಜಿನಿಯರ್ ಎ.ಸುಬ್ಬೇಗೌಡ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆಗೆ ಪಡೆದಿರುವ ಪೂರ್ವಾನುಮತಿ ಕಾನೂನುಬಾಹಿರ ಹಾಗೂ ವ್ಯಾಪ್ತಿಗೆ ಒಳಪಟ್ಟಿಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿತ್ತು.

ಸೌಜನ್ಯಾ ತಾಯಿ, ಕುಟುಂಬದ ಮೇಲೆ ದೌರ್ಜನ್ಯ: ಮಹಿಳಾ ಸಂಘಟನೆ ಖಂಡನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸೌಜನ್ಯಾ ಕುಟುಂಬಕ್ಕೆ ಭದ್ರತೆ ನೀಡಲು ಆಗ್ರಹ
- ಅತ್ಯಾಚಾರಿಗೆ ಕಠಿಣ ಶಿಕ್ಷೆ ವಿಧಿಸಲು ಒತ್ತಾಯ

ಬೆಂಗಳೂರು: ಧರ್ಮಸ್ಥಳದ ಉಜಿರೆಯ ಸೌಜನ್ಯಾ ಪ್ರಕರಣದಲ್ಲಿ ನ್ಯಾಯ ಕೇಳುತ್ತಿರುವ ಸೌಜನ್ಯಾ ಅವರ ತಾಯಿ ಮತ್ತು ಕುಟುಂಬದವರ ಮೇಲೆ ನಡೆದ ದೌರ್ಜನ್ಯವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಖಂಡಿಸಿದೆ.

ಕರ್ನಾಟಕ ಶ್ರೀ ಮಂಜುನಾಥ ಸ್ವಾಮಿ ಭಕ್ತವೃಂದ ಎಂಬ ಸಂಘಟನೆಯವರು ಸೌಜನ್ಯಾಳ ಕುರಿತು ನಡೆಸುತ್ತಿದ್ದ ಸಮಾವೇಶ, ಹಕ್ಕೊತ್ತಾಯ ಸಭೆಯಲ್ಲಿ ಭಾಗವಹಿಸಲೆಂದು ಹೋಗಿದ್ದ ಸೌಜನ್ಯಾ ತಾಯಿ ಕುಸುಮಾವತಿ, ಸಹೋದರಿಯರಾದ ಸೌಂದರ್ಯ, ಸೌಹಾರ್ದ ಮತ್ತು ಸಹೋದರ ಜಯರಾಮ ಅವರ ಮೇಲೆ ದೌರ್ಜನ್ಯ ಎಸಗಲಾಗಿದೆ. ಈ ಕುಟುಂಬಕ್ಕೆ ಸರ್ಕಾರ ಭದ್ರತೆ ನೀಡಬೇಕು ಎಂದು ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಮೀನಾಕ್ಷಿ ಬಾಳಿ, ಪ್ರಧಾನ ಕಾರ್ಯದರ್ಶಿ ದೇವಿ ಆಗ್ರಹಿಸಿದ್ದಾರೆ.

ಸೌಜನ್ಯಾ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿದವರನ್ನು ಮತ್ತು ಅವರನ್ನು ಬಚಾವ್ ಮಾಡು-ತ್ತಿರುವವರನ್ನು ಗುರುತಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಿರುವವರು ಸೌಜನ್ಯಾ ಪರವಾಗಿ ಹೋರಾಟ ಮಾಡುತ್ತಿರು-ವವರ ಮೇಲೆ ಹರಿ ಹಾಯುತ್ತಿದ್ದಾರೆ.

ಕುಸುಮಾವತಿಯವರು ‘ಇದು ನನ್ನ ಮಗಳ ಪರವಾಗಿ ನಡೆಯುತ್ತಿರುವ ಹೋರಾಟ. ಆದ್ದರಿಂದ ನಮಗೆ ವೇದಿಕೆ ಮೇಲೆ ಅವಕಾಶ ಕೊಡಿ’ ಎಂದು ಕೇಳಿದ್ದೇ ಅಪರಾಧ ಎಂಬಂತೆ ಆಯೋಜಕರು ಘೋಷಣೆ ಕೂಗುತ್ತ ದೂರ ಸರಿಸಿದ್ದಾರೆ. ಜಯರಾಮ ಅವರ ಕಾಲರ್ ಪಟ್ಟಿ ಹಿಡಿದು ಎಳೆದಾಡಲಾಗಿದೆ. ಕುಸುಮಾವತಿಯ-ವರ ವೇಲ್ ಹಿಡಿದು ಎಳೆದಾಡಿದ್ದಾರೆ ಎಂದು ದೂರಿದ್ದಾರೆ.

ನ್ಯಾಯ ಕೇಳಲು ಬಂದವರನ್ನು ದೇವರ ಹೆಸರು ಹೇಳಿಕೊಂಡು ಎಳೆದಾಡಲಾಗಿದೆ. ಮಂಜುನಾಥ ಸ್ವಾಮಿಯ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿರುವವರನ್ನು ನಿಗ್ರಹಿಸಬೇಕು. ದೇವರನ್ನು ದೇವರಂತೆ ಇರಲು ಬಿಟ್ಟು ಹೊಟ್ಟೆ ಹೊರೆಯುವ ಹುಸಿ ಭಕ್ತರನ್ನು ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ.

ಆರ್ಯ ವೈಶ್ಯರ ಅಭಿವೃದ್ಧಿ ಕ್ರಿಯಾಯೋಜನೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ಮೂಲಕ ನಾಲ್ಕು ಯೋಜನೆಗಳ ಅಡಿಯಲ್ಲಿ ₹10 ಕೋಟಿ ವೆಚ್ಚ ಮಾಡುವ ಕ್ರಿಯಾಯೋಜನೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯ-ಕ್ಷತೆಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಆರ್ಯ ವೈಶ್ಯ ಸಮುದಾಯದ 500 ಮಂದಿಗೆ ಸ್ವಯಂ ಉದ್ಯೋಗ ಯೋಜನೆಯಡಿ ವ್ಯಾಪಾರ ಚಟುವಟಿಕೆ ಕೈಗೊಳ್ಳಲು ಶೇಕಡ 4ರ ಬಡ್ಡಿ ದರದಲ್ಲಿ ತಲಾ ₹1 ಲಕ್ಷ ಸಾಲ ಮತ್ತು ಸಹಾಯಧನ ನೀಡುವುದು, ಆರ್ಯ ವೈಶ್ಯ ಆಹಾರ ವಾಹಿನಿ ಆರಂಭಿಸಲು ಬ್ಯಾಂಕ್‌ನಿಂದ ಸಾಲ ಪಡೆದ 40 ಮಂದಿಗೆ ತಲಾ ₹2 ಲಕ್ಷ ಸಹಾಯಧನ ಒದಗಿಸುವ ಕಾರ್ಯಕ್ರಮ-ಗಳಿಗೆ ಒಪ್ಪಿಗೆ ದೊರೆತಿದೆ.

‘ವಾಸವಿ ಜಲಶಕ್ತಿ ಯೋಜನೆ’ ಅಡಿಯಲ್ಲಿ ಸಮುದಾಯದ 40 ಮಂದಿ ಸಣ್ಣ ರೈತರಿಗೆ ಕೊಳವೆ ಬಾವಿ ಮತ್ತು ಪಂಪ್‌ಸೆಟ್ ಅಳವಡಿಸಲು ₹2 ಲಕ್ಷ ಸಾಲ ಹಾಗೂ ₹50,000 ಸಹಾಯಧನ ನೀಡುವ ಯೋಜನೆ ಇದೆ. ‘ಅರಿವು ಶೈಕ್ಷಣಿಕ ಸಾಲ ಯೋಜನೆ’ ಅಡಿಯಲ್ಲಿ ಸಿಇಟಿ ಹಾಗೂ ನೀಟ್ ಮೂಲಕ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ 50 ವಿದ್ಯಾರ್ಥಿಗಳಿಗೆ ಶೇ 2ರ ಬಡ್ಡಿ ದರದಲ್ಲಿ ₹1 ಲಕ್ಷ ಸಾಲ ನೀಡುವ ಯೋಜನೆಗೂ ಅನುಮೋದನೆ ನೀಡಲಾಯಿತು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯ, ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ದೀಪಶ್ರೀ.ಕೆ, ಕೌಶಲಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್.ಡಿ.ಗೌಡ, ಆರ್ಥಿಕ ಇಲಾಖೆ ಜಂಟಿ ಕಾರ್ಯದರ್ಶಿ ಎಚ್.ಎ ಶೋಭಾ ಹಾಗೂ ಇತರರು ಸಭೆಯಲ್ಲಿದ್ದರು.

ಆರೋಪಿ ಬಜರಂಗ ದಳ ಕಾರ್ಯಕರ್ತ: ಕಾಂಗ್ರೆಸ್ ಟ್ವೀಟ್; ಆತ ನಮ್ಮವನಲ್ಲ ಎಂದ ಬಜರಂಗದಳ

ಮನೆಯ ಶೌಚಾಲಯದಲ್ಲಿ ವಿಡಿಯೊ: ಬಂಧನ

ಪ್ರಜಾವಾಣಿ ವಾರ್ತೆ



ಸುಶಾಂತ್ ಪೂಜಾರಿ

ಮೂಲ್ಕಿ (ದಕ್ಷಿಣ ಕನ್ನಡ): ಮೂಲ್ಕಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮನೆಯೊಂದರ ಶೌಚಾಲಯದ ಕಿಟಕಿ ಬಳಿ ಮೊಬೈಲ್ ಇಟ್ಟು ವಿಡಿಯೊ ಚಿತ್ರೀಕರಣ ಮಾಡಿದ ಆರೋಪದ ಮೇರೆಗೆ ಸುಮಂತ್ ಪೂಜಾರಿ (21) ಎಂಬ ಯುವಕನನ್ನು ಬಂಧಿಸಲಾಗಿದೆ.

‘ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 354 (ಸಿ) (ಮಹಿಳೆಯರ ಮಾನಭಂಗ ಯತ್ನ) ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66 ಇ (ವ್ಯಕ್ತಿಯ ಅನುಮತಿ ಇಲ್ಲದೇ, ಅವರ ಖಾಸಗಿತನಕ್ಕೆ ಧಕ್ಕೆ ತರುವಂತಹ ದೃಶ್ಯದ ಚಿತ್ರೀಕರಣ) ಅಡಿ ಪ್ರಕರಣ ದಾಖಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ತಿಳಿಸಿದ್ದಾರೆ.

‘ಮನೆಯ ಶೌಚಾಲಯದ ಕಿಟಕಿ ಬಳಿ ಆ.2ರ ರಾತ್ರಿಯಿಂದ ಆ.3ರ ಬೆಳಿಗ್ಗೆಯ ಅವಧಿಯಲ್ಲಿ ಮೊಬೈಲ್ ಇಟ್ಟು ಯುವಕನೊಬ್ಬ ವಿಡಿಯೊ ಚಿತ್ರೀಕರಣ ನಡೆಸಿದ್ದ. ಆರೋಪಿಯು ನನ್ನ, ನನ್ನ ತಾಯಿ ಹಾಗೂ ನನ್ನ ಸಹೋದರಿಯ ವಿಡಿಯೊ ಚಿತ್ರೀಕರಣ ನಡೆಸುವ ಉದ್ದೇಶ ಹೊಂದಿದ್ದಂತೆ ತೋರುತ್ತದೆ. ಆತ ಅಲ್ಲಿಟ್ಟಿದ್ದ ಫೋನ್ ಅನ್ನು ನೋಡಿದಾಗ ಅದರಲ್ಲಿ 18 ಸೆಕೆಂಡ್ ಅವಧಿಯ ಒಂದು ವಿಡಿಯೊ ಪತ್ತೆಯಾಗಿದೆ. ಆದರೆ, ಅದರಲ್ಲಿ ನಾನು ಶೌಚಾಲಯವನ್ನು ಪ್ರವೇಶಿಸಿದ ದೃಶ್ಯ ಮಾತ್ರ ಕಾಣಿಸಿತ್ತು. ಸಂಶಯ ಬಂದು ಆರೋಪಿಯ ಚಲನವಲನದ ಮೇಲೆ ನಿಗಾ ಇಟ್ಟಿದ್ದೆ. ಆತ ನಮ್ಮ ಮನೆಯ ಶೌಚಾಲಯದ ವಿಡಿಯೊ ಚಿತ್ರೀಕರಣ ನಡೆಸುತ್ತಿದ್ದಾಗಲೇ ಆತನನ್ನು ಹಿಡಿದು ಆತನ ಮೊಬೈಲ್ ಕಿತ್ತುಕೊಂಡಿದ್ದೆ ಎಂದು ಸಂತ್ರಸ್ತ ವ್ಯಕ್ತಿ ದೂರಿನಲ್ಲಿ ತಿಳಿಸಿದ್ದಾರೆ. ಆರೋಪಿಯ ಫೋನ್ ಅನ್ನು ಪೊಲೀಸರಿಗೆ ಒಪ್ಪಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

‘ಆರೋಪಿಯು 10ನೇ ತರಗತಿವರೆಗೆ ಓದಿದ್ದು, ನಿರುದ್ಯೋ-ಗಿಯಾಗಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾಂಗ್ರೆಸ್ ಟ್ವೀಟ್

ಆರೋಪಿಯು ಕೇಸರಿ ಶಾಲು ಹಾಕಿರುವ ಚಿತ್ರವನ್ನು ಕಾಂಗ್ರೆಸ್‌ನ ಕರ್ನಾಟಕ ಘಟಕವು ತನ್ನ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದು, ‘ಬಿಜೆಪಿ ರಕ್ಷಣಾ ಪಡೆ’ಯವನೊಬ್ಬ ಹಿಂದೂ ಹೆಣ್ಣುಮಕ್ಕಳ ವಿಡಿಯೊ ಮಾಡಿ ಸಿಕ್ಕಿಬಿದ್ದಿದ್ದಾನೆ. ಈತ ವಿಡಿಯೊ ಮಾಡಿ ಬಿಜೆಪಿ ಕಚೇರಿಗೆ ಕಳುಹಿಸುತ್ತಿದ್ದನೇ? ಅಥವಾ ಸಿ.ಟಿ.ರವಿ, ಪ್ರತಾಪಸಿಂಹ ಅವರಿಗೆ ಕಳುಹಿಸುತ್ತಿದ್ದನೇ? ಇವನಿಂದ ಸಂತ್ರಸ್ತಳಾದ ಯುವತಿ ಹಿಂದೂವಲ್ಲವೇ? ಈತನ ಕೃತ್ಯದ ಹಿಂದೆ ಯಾವ ಷಡ್ಯಂತ್ರವಿದೆ? ಶೋಭಾ ಕರಂದ್ಲಾಜೆ ಸೇರಿದಂತೆ ರಾಜ್ಯ ಬಿಜೆಪಿಯ ಎಲ್ಲಾ ಖಾಸಗಿ ತನಿಖಾಧಿಕಾರಿಗಳು ಏಕೆ ಮೌನವಾಗಿದ್ದಾರೆ’ ಎಂದು ಪ್ರಶ್ನೆ ಮಾಡಿದೆ.

‘ಆರೋಪಿ ಸುಮಂತ್ ಪೂಜಾರಿ ಬಜರಂಗ ದಳದ ಕಾರ್ಯಕರ್ತನಲ್ಲ. ವಿಡಿಯೊ ಮಾಡುತ್ತಿದ್ದ ಆರೋಪಿಯನ್ನು ಬಜರಂಗದಳದವರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಇದನ್ನು ಸಹಿಸಲಾಗದ ಕಿಡಿಗೇಡಿಗಳು ಆರೋಪಿಯು ಬಜರಂಗ ದಳದ ಕಾರ್ಯಕರ್ತ ಎಂದು ಅಪಪ್ರಚಾರ ಮಾಡುತ್ತಿದ್ದಾರೆ’ ಎಂದು ಬಜರಂಗ ದಳದ ಮೂಲ್ಕಿ ಪ್ರಖಂಡದ ಅಮಿತ್ ಶೆಟ್ಟಿ ಎಸ್. ಕೋಡಿ ಅವರು ಸ್ಪಷ್ಟೀಕರಣ ನೀಡಿದ್ದಾರೆ.

ನಾಡಬಾಂಬ್ ಸ್ಫೋಟಿಸಿ ಕಾಡುಹಂದಿ ಹತ್ಯೆ

ಪ್ರಜಾವಾಣಿ ವಾರ್ತೆ

ಕಾರವಾರ: ತಾಲ್ಲೂಕಿನ ಚೆಂಡಿಯಾ ಗ್ರಾಮದ ಸ್ಮಶಾನದ ಬಳಿ ಶುಕ್ರವಾರ ತಡರಾತ್ರಿ ಕಾಡುಹಂದಿಯೊಂದ-ನ್ನು ನಾಡಬಾಂಬ್ ಸ್ಫೋಟಿಸಿ ಹತ್ಯೆ ಮಾಡಲಾಗಿದೆ.

‘ಕಾಂತಾರ ಚಿತ್ರ ವೀಕ್ಷಣೆ ಬಳಿಕ ಗ್ರಾಮದ ಹಲವರು ಈ ಕಾಡುಹಂದಿಗೆ ಪ್ರತಿದಿನ ಆಹಾರ ನೀಡಿ, ಉಪಚ-ರಿಸುತ್ತಿದ್ದರು. ಅಂತಹ ಪ್ರಾಣಿಯನ್ನೇ ದುಷ್ಕರ್ಮಿಗಳು ಕೊಂದಿದ್ದಾರೆ' ಎಂದು ಗ್ರಾಮಸ್ಥ ದೀಪಕ್ ಉಗಾ ನಾಯ್ಕ ಬೇಸರಿಸಿದರು.

‘ಕೋಳಿ ಮಾಂಸದಲ್ಲಿ ನಾಡಬಾಂಬ್ ಇಟ್ಟು ಹಂದಿ ಹತ್ಯೆ ಮಾಡಲಾಗಿದೆ. ಈ ಬಗ್ಗೆ ತನಿಖೆ ನಡೆ-ಸಲಾಗುತ್ತಿದೆ’ ಎಂದು ಆರ್‌ಎಫ್‌ಒ ರಾಘವೇಂದ್ರ ನಾಯ್ಕ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಭಾನುವಾರ, ಆಗಸ್ಟ್ 6, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಿರ ಭೇಟಿ
ಬಾಲಿವುಡ್ ನಟ ಸನ್ನಿ ಡಿಯೋಲ್ ಅವರು ಶನಿವಾರ ಅಮೃತಸರದ ಸ್ವರ್ಣ ಮಂದಿರಕ್ಕೆ ಭೇಟಿ ನೀಡಿದರು





ಯುಪಿಎಸ್‌ಸಿ ಪರೀಕ್ಷಾ ಪ್ರಕ್ರಿಯೆ ಮಾರ್ಪಾಡಿಗೆ ಸಂಸದೀಯ ಸಮಿತಿ ಶಿಫಾರಸು

ನಾಗರಿಕ ಸೇವೆ: ಎಂಜಿನಿಯರ್, ವೈದ್ಯರೇ ಸಿಂಹಪಾಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ಐಎಎಸ್, ಐಪಿಎಸ್ ಸೇರಿದಂತೆ ಭಾರತೀಯ ನಾಗರಿಕ ಸೇವಾ ಹುದ್ದೆಗಳ ಭರ್ತಿಗೆ ನಡೆಸುವ ಪರೀಕ್ಷೆಯಲ್ಲಿ ಯಶಸ್ವಿಯಾಗುವ ಮೂವರು ಅಭ್ಯರ್ಥಿಗಳ ಪೈಕಿ ಇಬ್ಬರು ಎಂಜಿನಿಯರ್ ಅಥವಾ ವೈದ್ಯರಿರುತ್ತಾರೆ ಎಂದು ಸಂಸದೀಯ ಸಮಿತಿ ತಿಳಿಸಿದೆ.

ಇತ್ತೀಚೆಗೆ ಸಂಸದ ಸುಶೀಲ್ ಕುಮಾರ್ ಮೋದಿ ಅವರ ಅಧ್ಯಕ್ಷತೆಯ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಕಾನೂನು ಮತ್ತು ನ್ಯಾಯದ ಸಂಸದೀಯ ಸಮಿತಿಯು ಲೋಕಸಭೆಯಲ್ಲಿ ಮಂಡಿಸಿದ ಕೇಂದ್ರದ ನೇಮಕಾತಿ ಸಂಸ್ಥೆಗಳ ಕಾರ್ಯ ನಿರ್ವಹಣೆ ಕುರಿತ ವಿಮರ್ಶಾ ವರದಿಯು ಈ ಮಾಹಿತಿಯನ್ನು ಬಹಿರಂಗಗೊಳಿಸಿದೆ.

ಪ್ರತಿವರ್ಷ ಆಯ್ಕೆಯಾಗುವ ಅಭ್ಯರ್ಥಿಗಳ ಪೈಕಿ ಶೇ 70ರಷ್ಟು ಮಂದಿ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಪದವಿ ಶಿಕ್ಷಣ ಪಡೆದಿರುತ್ತಾರೆ ಎಂದು ಹೇಳಿದೆ.

ಯುಪಿಎಸ್‌ಸಿ ನಡೆಸುವ ಪರೀಕ್ಷೆಯತ್ತ ಈ ಎರಡೂ ಕ್ಷೇತ್ರದ ಪದವೀಧರರಿಗೆ ಇರುವ ಸೆಳೆತ ಸಹಜ ವಾದುದು. ಆದರೆ, ಇದು ದೇಶದಲ್ಲಿ ವೃತ್ತಿಪರ ಪರಿಣತ ಎಂಜಿನಿಯರ್ ಹಾಗೂ ವೈದ್ಯರ ಅಭಾವ ಸೃಷ್ಟಿಗೆ ನಾಂದಿ ಹಾಡಿದೆ ಎಂದು ವರದಿ ಆತಂಕ ವ್ಯಕ್ತಪಡಿಸಿದೆ.

ಅಲ್ಲದೇ, ಮೂರು ಹಂತದ ಪರೀಕ್ಷೆಯು ಸುದೀರ್ಘ ಪ್ರಕ್ರಿಯೆಯಾಗಿದ್ದು, ಇದನ್ನು ಮಾರ್ಪಡಿಸುವ ಬಗ್ಗೆ ಕೇಂದ್ರ ಸರ್ಕಾರವು ಮರುಚಿಂತನೆ ನಡೆಸುವ ಅಗತ್ಯವಿದೆ ಎಂದು ಶಿಫಾರಸು ಮಾಡಿದೆ.

ವರದಿಯಲ್ಲಿ ಏನಿದೆ?: ಯುಪಿ ಎಸ್‌ಸಿಯು 2011–2020ರ ಅವಧಿ ಯಲ್ಲಿ ನಡೆಸಿರುವ



ಪರೀಕ್ಷೆಯಲ್ಲಿ ಒಟ್ಟು 10,679 ಅಭ್ಯರ್ಥಿಗಳು ಆಯ್ಕೆಯಾಗಿ ದ್ದಾರೆ. ಇವರಲ್ಲಿ 5,880 ಎಂಜಿನಿಯರಿಂಗ್ (ಶೇ 55.06) ಹಾಗೂ 1,130 ವೈದ್ಯಕೀಯ ಪದವೀಧರರು ಇದ್ದಾರೆ (ಶೇ 10.58). ಒಟ್ಟಾರೆ ಈ ಎರಡೂ ಕ್ಷೇತ್ರದಲ್ಲಿ ಶಿಕ್ಷಣ ಪಡೆದ 7,010 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಇವರ ಪ್ರಮಾಣ ಶೇ 65.64ರಷ್ಟಿದೆ ಎಂದು ವಿವರಿಸಿದೆ.

ಮತ್ತೊಂದೆಡೆ ನಾಗರಿಕ ಸೇವೆಗಳಿಗೆ ಮಾನವಿಕ ವಿಷಯಗಳಲ್ಲಿ ಪದವಿ ಪಡೆದವರು ಆಯ್ಕೆಯಾಗುವ ಪ್ರಮಾಣ ಕಡಿಮೆ ಇದೆ. ಈ ಅವಧಿಯಲ್ಲಿ 2,835 ಅಭ್ಯರ್ಥಿಗಳಷ್ಟೇ (ಶೇ 26.54) ಆಯ್ಕೆಯಾಗಿದ್ದಾರೆ. ಉಳಿದ 834 ಅಭ್ಯರ್ಥಿಗಳು (ಶೇ 7.8) ಇತರೇ ವಿಷಯಗಳಲ್ಲಿ ಪದವಿ ಅಧ್ಯಯನ ಮಾಡಿದವರಾಗಿದ್ದಾರೆ ಎಂದು ಹೇಳಿದೆ.

ಪ್ರತಿವರ್ಷ ಎಂಜಿನಿಯರಿಂಗ್ ಶಿಕ್ಷಣ ಪಡೆದ ಸಾವಿರಾರು ವಿದ್ಯಾರ್ಥಿಗಳು ಪರೀಕ್ಷೆಗೆ ಸಿದ್ಧತೆ ನಡೆಸುತ್ತಾರೆ. ಹಾಗಾಗಿ, ತಂತ್ರಜ್ಞಾನ ಕ್ಷೇತ್ರವು ಪರಿಣತ ತಂತ್ರಜ್ಞರ ಕೊರತೆ ಎದುರಿಸುವಂತಾಗಿದೆ. ಇದರಿಂದ ದೇಶದ ಅಭ್ಯುದಯದ ಮೇಲೂ ಗಂಭೀರ ಪರಿಣಾಮ ಬೀರುತ್ತಿದೆ ಎಂದು ವರದಿ ಕಳವಳ ವ್ಯಕ್ತಪಡಿಸಿದೆ.

2016ರಲ್ಲಿ ಆಯ್ಕೆಯಾದ 1,209 ಅಭ್ಯರ್ಥಿಗಳ ಪೈಕಿ 717 ಹಾಗೂ 2017ರಲ್ಲಿ ಆಯ್ಕೆಯಾದ 1,056 ಅಭ್ಯರ್ಥಿಗಳ ಪೈಕಿ 699 ಮಂದಿ ಎಂಜಿನಿಯರಿಂಗ್ ಪದವೀಧರರಾಗಿದ್ದಾರೆ. 2012ರಲ್ಲಿ ಈ ಪ್ರಮಾಣ ಕೊಂಚ ಇಳಿಕೆಯಾಗಿದ್ದು, 1,091 ಹುದ್ದೆಗಳ ಪೈಕಿ 408 ಮಂದಿಯಷ್ಟೇ ಆಯ್ಕೆಯಾಗಿದ್ದಾರೆ.

2014ರಲ್ಲಿ ಆಯ್ಕೆಯಾದ 1,363 ಅಭ್ಯರ್ಥಿಗಳ ಪೈಕಿ 183 ವೈದ್ಯಕೀಯ ಪದವೀಧರರಿದ್ದಾರೆ. 2020ರಲ್ಲಿ ವೈದ್ಯಕೀಯ ಶಿಕ್ಷಣ ಪಡೆದ 33 ಮಂದಿಯಷ್ಟೇ ಆಯ್ಕೆಯಾಗಿದ್ದಾರೆ.

ಸುದೀರ್ಘ ಪ್ರಕ್ರಿಯೆ: ಕೆಲವು ಅಭ್ಯರ್ಥಿಗಳು ಮೊದಲ ಪ್ರಯತ್ನದಲ್ಲೇ ಉತ್ತೀರ್ಣರಾದರೆ, ಬಹುತೇಕರಿಗೆ ಎರಡು–ಮೂರನೇ ಪ್ರಯತ್ನದಲ್ಲಿ ಯಶಸ್ಸು ಸಿಗುತ್ತದೆ.

ಆಯ್ಕೆಯು ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನದ ಹಂತವನ್ನು ಒಳಗೊಂಡಿರುತ್ತದೆ. ಇದು ಸುದೀರ್ಘ ಪ್ರಕ್ರಿಯೆಯಾಗಿದೆ. ಹಾಗಾಗಿ, ಇದಕ್ಕೆ ಕಠಿಣ ತಯಾರಿ ನಡೆಸುವ ಆಕಾಂಕ್ಷಿಗಳು ಹೆಚ್ಚಿನ ಸಮಯವನ್ನೂ ವ್ಯಯಿಸುತ್ತಾರೆ. ಹಾಗಾಗಿ, ನೇಮಕಾತಿ ಪ್ರಕ್ರಿಯೆಯ ಬದಲಾವಣೆಗೆ ಇದು ಸಕಾಲವಾಗಿದೆ ಎಂದು ವರದಿ ಹೇಳಿದೆ.

ಕಲಾಪದ ವೇಳೆ ರಾಜೀನಾಮೆ ಪ್ರಕಟಿಸಿದ ನ್ಯಾಯಮೂರ್ತಿ

ಪ್ರಜಾವಾಣಿ ವಾರ್ತೆ

ಮುಂಬೈ: ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠದ ನ್ಯಾಯಮೂರ್ತಿಯಾಗಿದ್ದ ರೋಹಿತ್ ದೇವ್ ಅವರು ನ್ಯಾಯಾಲಯದ ಕಲಾಪದ ವೇಳೆಯಲ್ಲೇ ರಾಜೀನಾಮೆ ವಿಷಯವನ್ನು ಪ್ರಕಟಿಸಿ, ನೆರೆದಿದ್ದವರಲ್ಲಿ ಅಚ್ಚರಿ ಮೂಡಿಸಿದ್ದಾರೆ.

ಅವರು ರಾಜೀನಾಮೆ ನೀಡಲು ಏನು ಕಾರಣ ಎಂಬ ಬಗ್ಗೆ ಮಾಹಿತಿ ಇಲ್ಲ.

ಕೋರ್ಟ್ ಸಭಾಂಗಣದಲ್ಲಿ ಶುಕ್ರವಾರ ಕಲಾಪ ನಡೆಯುತ್ತಿದ್ದಾಗ, ‘ನಾನು ಇಲ್ಲಿ ಹಾಜರಿರುವ ಎಲ್ಲರ ಕ್ಷಮೆ ಕೋರುತ್ತೇನೆ. ನಾನು ನಿಮ್ಮನ್ನು ಬೈದಿದ್ದೇನೆ. ನೀವು ಸುಧಾರಿಸಬೇಕು ಎಂಬ ಉದ್ದೇಶದಿಂದಲೇ ಹಾಗೆ ಮಾಡಿದ್ದೆ. ನೀವೆಲ್ಲ ನನ್ನ ಕುಟುಂಬದಂತೆ. ಹೀಗಾಗಿ ಯಾರಿಗೂ ನೋವುಂಟು ಮಾಡಲು ಬಯಸುವುದಿಲ್ಲ’ ಎಂದಿದ್ದಾರೆ.

‘ನಾನು ರಾಜೀನಾಮೆ ಸಲ್ಲಿಸಿದ್ದೇನೆ ಎಂದು ತಿಳಿಸಲು ವಿಷಾದಿಸುತ್ತೇನೆ. ಆತ್ಮಗೌರವಕ್ಕೆ ವಿರುದ್ಧವಾಗಿ ಕಾರ್ಯನಿರ್ವಹಿಸಲು ನನಗೆ ಆಗದು. ನೀವು ಶ್ರಮವಹಿಸಿ ಕೆಲಸ ಮಾಡಿ’ ಎಂದು ನ್ಯಾಯಮೂರ್ತಿ ದೇವ್ ಹೇಳಿದರು ಎನ್ನಲಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ನೀಡಿದ್ದೇನೆ. ರಾಜೀನಾಮೆ ಪತ್ರವನ್ನು ರಾಷ್ಟ್ರಪತಿ ಅವರಿಗೆ ಕಳುಹಿಸಿದ್ದೇನೆ’ ಎಂದೂ ತಿಳಿಸಿದ್ದಾರೆ.

ನಕ್ಸಲರೊಂದಿಗೆ ನಂಟು ಹೊಂದಿದ್ದ ಆರೋಪದಡಿ ಬಂಧಿತರಾಗಿದ್ದ ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿದ್ದ ಹೋರಾಟಗಾರ ಜಿ.ಎನ್.ಸಾಯಿಬಾಬಾ ಅವರನ್ನು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಬಾಂಬೆ ಹೈಕೋರ್ಟ್‌ನ ವಿಭಾಗೀಯ ಪೀಠ ಆರೋಪಮುಕ್ತಗೊಳಿಸಿತ್ತು. ಈ ಪೀಠದಲ್ಲಿ ದೇವ್ ಇದ್ದರು.

ಜ್ಞಾನವಾಪಿ: ಬೀಗ ತೆರೆದ ಎಎಸ್‌ಐ

ಪ್ರಜಾವಾಣಿ ವಾರ್ತೆ

ಲಖನೌ: ವಾರಾಣಸಿಯ ಜ್ಞಾನವಾಪಿ ಆವರಣದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ನಡೆಸುತ್ತಿರುವ ವೈಜ್ಞಾನಿಕ ಸಮೀಕ್ಷೆ ಎರಡನೇ ದಿನವಾದ ಶನಿವಾರವೂ ಮುಂದುವರಿಯಿತು.

ಹಿಂದೂ ಹಾಗೂ ಮುಸ್ಲಿಂ ಅರ್ಜಿದಾರರ ಸಮಕ್ಷಮದಲ್ಲಿ ಎಎಸ್‌ಐ ಅಧಿಕಾರಿಗಳು ಮಸೀದಿಯ ಬೀಗಗಳನ್ನು ತೆರೆದು, ಸಮೀಕ್ಷೆ ಕೈಗೊಂಡರು. ಈ ಕಾರ್ಯ 7 ಗಂಟೆಗಳ ಕಾಲ ನಡೆಯಿತು.

ಮಸೀದಿ ಒಳಭಾಗದಲ್ಲಿ ಛಾಯಾಚಿತ್ರಗಳನ್ನು ಸೆರೆ ಹಿಡಿದ ಎಎಸ್‌ಐ ತಂಡ, ವಿಡಿಯೊ ಚಿತ್ರೀಕರಣವನ್ನೂ ನಡೆಸಿತು. 3–ಡಿ ತಂತ್ರಜ್ಞಾನವನ್ನು ಬಳಸಿಯೂ ಮಾಹಿತಿ ಸಂಗ್ರಹಿಸಿತು ಎಂದು ಮೂಲಗಳು ಹೇಳಿವೆ.

‘ಹಿಂದೂ ಹಾಗೂ ಮುಸ್ಲಿಂ ಕಕ್ಷಿದಾರರು ಸಮೀಕ್ಷೆ ಕಾರ್ಯಕ್ಕೆ ಸಹಕರಿಸುತ್ತಿದ್ದಾರೆ’ ಎಂದು ವಾರಾಣಸಿ ಜಿಲ್ಲಾಡಳಿತದ ಅಧಿಕಾರಿ ತಿಳಿಸಿದ್ದಾರೆ.

‘ನಂದಿ ವಿಗ್ರಹದ ಮುಂದಿರುವ ಕಟ್ಟಡವೊಂದರ ಅಡಿಪಾಯದಲ್ಲಿ (ತೆಹಖಾನಾ) ಸಾಕಷ್ಟು ಪ್ರಮಾಣದ ಅವಶೇಷ ಹಾಗೂ ಸಾಮಗ್ರಿಗಳು ಬಿದ್ದಿದ್ದವು. ಅವುಗಳನ್ನು ತೆರವುಗೊಳಿಸುವಂತೆ ಎಎಸ್‌ಐ ತಂಡ ಸೂಚಿಸಿತು’ ಎಂದು ಸಮೀಕ್ಷೆ ವೇಳೆ ಉಪಸ್ಥಿತರಿದ್ದ ಹಿಂದೂ ಅರ್ಜಿದಾರರ ಪ್ರತಿನಿಧಿಯೊಬ್ಬರು ಹೇಳಿದ್ದಾರೆ.

ನ್ಯಾಯಾಲಯಕ್ಕೆ ಸಮೀಕ್ಷೆ ವರದಿ ಸಲ್ಲಿಸಲು ಎಎಸ್‌ಐಗೆ ಜಿಲ್ಲಾ ನ್ಯಾಯಾಲಯ ನಾಲ್ಕು ವಾರಗಳ ಅವಕಾಶ ನೀಡಿದೆ.

ಎಎಸ್‌ಐನಿಂದ ಸಮೀಕ್ಷೆ ನಡೆಸುವಂತೆ ವಾರಾಣಸಿ ಜಿಲ್ಲಾ ನ್ಯಾಯಾಲಯ ನೀಡಿದ್ದ ಆದೇಶಕ್ಕೆ ತಡೆ ನೀಡುವಂತೆ ಕೋರಿ ಮುಸ್ಲಿಂ ಅರ್ಜಿದಾರರು ಸಲ್ಲಿಸಿದ್ದ ಮೇಲ್ಮನವಿಯನ್ನು ಅಲಹಾಬಾದ್ ಹೈಕೋರ್ಟ್ ಗುರುವಾರ ತಿರಸ್ಕರಿಸಿತ್ತಲ್ಲದೇ, ಸಮೀಕ್ಷೆಗೆ ಅನುಮತಿ ನೀಡಿ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಮಸೀದಿ ಆವರಣದ ಸಮೀಕ್ಷೆ ಶುಕ್ರವಾರ ಮತ್ತೆ ಆರಂಭಗೊಂಡಿತು.

‘ಜಿಪಿಆರ್’ ತಂತ್ರಜ್ಞಾನ ಬಳಕೆ’

ನವದೆಹಲಿ(ಪಿಟಿಐ): ಜ್ಞಾನವಾಪಿ ಮಸೀದಿ ಕುರಿತ ವೈಜ್ಞಾನಿಕ ಸಮೀಕ್ಷೆಯಲ್ಲಿ ‘ಭೂ ಭೇದಕ ರಾಡಾರ್’ (ಜಿಪಿಆರ್) ತಂತ್ರಜ್ಞಾನವನ್ನು ಬಳಸಲಾಗುತ್ತದೆ. ಮಸೀದಿ ಕೆಳಗೆ ಯಾವುದಾದರೂ ಕಟ್ಟಡ ಹೂತಿರುವುದನ್ನು ಪತ್ತೆ ಹಚ್ಚಲು ಈ ತಂತ್ರಜ್ಞಾನ ನೆರವಾಗುತ್ತದೆ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಮಾಜಿ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಈ ತಂತ್ರಜ್ಞಾನ ಬಳಕೆಗಾಗಿಯೇ ವಿನ್ಯಾಸಗೊಳಿಸಿರುವ ಉಪಕರಣವನ್ನು ನೆಲದ ಮೇಲಿರಿಸಿ, ವಿದ್ಯುತ್‌ಕಾಂತೀಯ ತರಂಗಗಳನ್ನು (ಎಲೆಕ್ಟ್ರೊ ಮ್ಯಾಗ್ನೆಟಿಕ್ ವೇವ್) ನೆಲದಡಿ ಕಳುಹಿಸಲಾಗುತ್ತದೆ. ನೆಲದಡಿಯಲ್ಲಿ ಇಟ್ಟಿಗೆ, ಮರಳು, ಕಲ್ಲು ಅಥವಾ ಲೋಹಗಳಿಗೆ ಈ ತರಂಗಗಳು ಅಪ್ಪಳಿಸುತ್ತವೆ. ಮಾನಿಟರ್ ಪರದೆ ಮೇಲೆ ಮೂಡುವ ಈ ಕುರಿತ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಿಸಲಾಗುತ್ತದೆ’ ಎಂದು ಎಎಸ್‌ಐನ ನಿವೃತ್ತ ಹೆಚ್ಚುವರಿ ಮಹಾನಿರ್ದೇಶಕ ಬಿ.ಆರ್. ಮಣಿ ಹೇಳಿದ್ದಾರೆ. ‘ತಜ್ಞರ ಮೇಲ್ವಿಚಾರಣೆಯಲ್ಲಿ ಮಾತ್ರ ಜಿಪಿಆರ್ ತಂತ್ರಜ್ಞಾನವನ್ನು ಬಳಸ ಬೇಕು. ಕಟ್ಟಿಗೆ ಅಥವಾ ಮೂಳೆಯಂತಹ ಸಾವಯವ ಮಾದರಿಗಳಿದ್ದಲ್ಲಿ ‘ಕಾರ್ಬನ್ ಡೇಟಿಂಗ್’ ತಂತ್ರಜ್ಞಾನ ಬಳಸಿ, ವಿಶ್ಲೇಷಣೆ ನಡೆಸಲಾಗುತ್ತದೆ ಎಂದೂ ಹೇಳಿದ್ದಾರೆ.



ವಾರಾಣಸಿಯ ಜ್ಞಾನವಾಪಿ ಆವರಣದಲ್ಲಿ ಶನಿವಾರ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಸಿಬ್ಬಂದಿ ಸಮೀಕ್ಷೆ ನಡೆಸಿ, ಸುರಿಯುತ್ತಿದ್ದ ಮಳೆಯಲ್ಲೇ ಹೊರಬಂದರು —ಪಿಟಿಐ ಚಿತ್ರ

ಮತ್ತೊಂದೆಡೆ, ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ಶುಕ್ರವಾರ ನಡೆಸಿದ್ದ ಸುಪ್ರೀಂಕೋರ್ಟ್, ಅಲಹಾಬಾದ್ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ನಿರಾಕರಿಸಿತ್ತು.

‘92ರ ಬಳಿಕ ನಡೆದ ದೊಡ್ಡ ಕೋಮುಗಲಭೆ’

ನೂಹ್ (ಪಿಟಿಐ): ನೂಹ್‌ನಲ್ಲಿ 1992ರ ನಂತರ ಹಿಂದೂ– ಮುಸಲ್ಮಾನರ ನಡುವೆ ಇಷ್ಟು ದೊಡ್ಡ ಪ್ರಮಾಣದ ಕೋಮುಗಲಭೆಯನ್ನು ಕಂಡಿರಲಿಲ್ಲ ಎಂದು ಇಲ್ಲಿನ ನಿವಾಸಿಗಳು ಹೇಳುತ್ತಾರೆ.

ಆರು ಜನರ ಸಾವು, ಹಲವು ಅಂಗಡಿ ಮುಂಗಟ್ಟುಗಳ ಧ್ವಂಸಕ್ಕೆ ಕಾರಣವಾದ ಇಲ್ಲಿನ ಕೋಮುಗಲಭೆಗೆ ಬಲಪಂಥೀಯ ಹಿಂದೂ ಗುಂಪು ಅಥವಾ ಸ್ಥಳೀಯ ಮುಸ್ಲಿಂ ನಾಯಕರು ಕಾರಣ ಎಂದು ಇಲ್ಲಿನ ಜನರು ಆರೋಪಿಸುತ್ತಾರೆ. ಅದರ ಜತೆಗೆ ಆಡಳಿತದ ವೈಫಲ್ಯದತ್ತಲೂ ಬೊಟ್ಟು ಮಾಡುತ್ತಾರೆ.

ವಿಎಚ್‌ಪಿ ಆಯೋಜಿಸಿದ್ದ ಮೆರವಣಿಗೆಗೆ ಕೆಲ ದೇಶ ವಿರೋಧಿಗಳು ಅಡ್ಡಿಪಡಿಸಿದರು. ಆ ಮೂಲಕ ಮುಸ್ಲಿಂ ನಾಯಕರು ಅಶಾಂತಿ ಸೃಷ್ಟಿಸಲು ಜನರನ್ನು ಪ್ರಚೋದಿಸಿದರು ಎಂದು ಬಲಪಂಥೀಯ ಗುಂಪಿನ ಹಿರಿಯ ಸದಸ್ಯರೊಬ್ಬರು ದೂರಿದರು.

‘ಹಿಂಸಾಚಾರಕ್ಕೆ ಆಡಳಿತಾತ್ಮಕ ನಿರ್ಲಕ್ಷ್ಯ ಕಾರಣ. ಮೆರವಣಿಗೆಯನ್ನು ನಿರ್ವಹಿಸಲು ಕೆಲವೇ ಮಂದಿ ಪೊಲೀಸರನ್ನು ನಿಯೋಜಿಸಲಾಗಿತ್ತು’ ಎಂದು ಸ್ಥಳೀಯ ನಿವಾಸಿ ಶ್ರೀಕಿಶನ್ ಅಸಮಾಧಾನ ವ್ಯಕ್ತಪಡಿಸಿದರು.

‘ಮೆರವಣಿಗೆಯಲ್ಲಿ ಭಾಗವಹಿಸಿದ್ದ ಕೆಲವರು ಘರ್ಷಣೆ ನಡೆಯುವುದಕ್ಕೂ ಕೆಲ ಗಂಟೆಗಳ ಮುನ್ನ ಪ್ರಚೋದನಕಾರಿ ಭಾಷಣಗಳನ್ನು ಮಾಡಿದರು. ಈ ವೇಳೆ ಸ್ಥಳದಲ್ಲಿ ಇದ್ದದ್ದು ಕೆಲವೇ ಪೊಲೀಸರು. ಅವರು ಕ್ರಮ ತೆಗೆದುಕೊಳ್ಳುವ ವೇಳೆಗಾಗಲೇ ಹಿಂಸಾಚಾರ ಭುಗಿಲೆದ್ದಿತ್ತು’ ಎಂದು ಅವರು ಪ್ರತಿಕ್ರಿಯಿಸಿದರು.

‘ನನಗೀಗ 65 ವರ್ಷ. ನೂಹ್‌ನಲ್ಲಿ 1992ರ ನಂತರ ಇಷ್ಟು ದೊಡ್ಡ ಪ್ರಮಾಣದ ಹಿಂಸಾಚಾರವನ್ನು ನೋಡಿರಲಿಲ್ಲ’ ಎಂದು ಹೇಳಿ ದರು.

‘ಬಾಬರಿ ಮಸೀದಿ ಧ್ವಂಸದ (1992) ನಂತರ ನೂಹ್‌ನಲ್ಲಿ ಈ ರೀತಿಯ ಕೋಮುಗಲಭೆ ಕಂಡಿರಲಿಲ್ಲ. ವಿಎಚ್‌ಪಿ ಮೆರವಣಿಗೆ ಸಂದರ್ಭದಲ್ಲಿ ಜಿಲ್ಲಾಡಳಿತ ಹೆಚ್ಚು ನಿಗಾ ವಹಿಸಿದ್ದರೆ ಗಲಭೆಯನ್ನು ತಡೆಯಬಹುದಿತ್ತು’ ಎಂದು ಮತ್ತೊಬ್ಬ ಸ್ಥಳೀಯ ನಿವಾಸಿ ಜಾವೇದ್ ಪ್ರತಿಕ್ರಿಯಿಸಿದರು.

‘ಹಿಂಸಾಚಾರದಿಂದ ಅಂಗಡಿಗಳನ್ನು ಮುಚ್ಚಲಾಗಿದೆ. ಕೋಮ ಗಲಭೆಯು ನಮಗೆ ಮಾನಸಿಕವಾಗಿ ಮತ್ತು ಆರ್ಥಿಕವಾಗಿ ದುಷ್ಪರಿಣಾಮ ಬೀರಿದೆ. ನಮ್ಮ ಕುಟುಂಬದ ಸದಸ್ಯರು ಆತಂಕದಲ್ಲಿ ಜೀವನ ನಡೆಸುವಂತಾಗಿದೆ’ ಎಂದು ನೂಹ್‌ನ ತರಕಾರಿ ವ್ಯಾಪಾರಿ ಸಾದಿರ್ ಹುಸೇನ್ ಹೇಳಿದರು.

ರೋಹ್ಟಕ್‌ನ ಮಸೀದಿ ಗೇಟಿಗೆ ಕಲ್ಲು ಎಸೆತ: ಪ್ರಕರಣ ದಾಖಲು

ಚಂಡೀಗಢ (ಪಿಟಿಐ): ಹರಿಯಾಣದ ರೋಹ್ಟಕ್ ಜಿಲ್ಲೆಯ ಅನವಾಲ್ ಗ್ರಾಮದಲ್ಲಿ ಮಸೀದಿಯೊಂದರ ಗೇಟಿಗೆ ದುಷ್ಕರ್ಮಿಗಳು ಕಲ್ಲುಗಳಿಂದ ಹೊಡೆದಿರುವ ಘಟನೆ ಶುಕ್ರವಾರ ರಾತ್ರಿ ನಡೆದಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ 10.30ರ ಸುಮಾರಿನಲ್ಲಿ ಈ ಘಟನೆ ನಡೆದಿದೆ ಎಂದು ಮಸೀದಿಯ ಧರ್ಮಗುರು ಇಕ್ಬಾಲ್ ದೂರು ನೀಡಿದ್ದಾರೆ. ಈ ಕುರಿತು ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಕೈಗೊಳ್ಳಲಾಗಿದೆ. ಅಲ್ಲದೆ ಮಸೀದಿ ಸುತ್ತಮುತ್ತ ಬಿಗಿ ಭದ್ರತೆ ಒದಗಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ವಿಎಚ್‌ಪಿ ಯಾತ್ರಾ ಸಂದರ್ಭದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದ ನೂಹ್ ಸೇರಿದಂತೆ ರಾಜ್ಯದ ಇತರ ಭಾಗಗಳು ಸಹಜ ಸ್ಥಿತಿಗೆ ಮರಳಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಗಸ್ಟ್ 31ರಿಂದ ‘ಇಂಡಿಯಾ’ ಸಭೆ

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದ ಮುಂದಿನ ಸಭೆಯು ಆಗಸ್ಟ್ 31 ಮತ್ತು ಸೆಪ್ಟೆಂಬರ್ 1ರಂದು ಮುಂಬೈನಲ್ಲಿ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲಿ ನಡೆದ ಸಭೆಯ ಸ್ವರೂಪದಲ್ಲೇ ಮುಂಬೈನ ಸಭೆಯೂ ನಡೆಯಲಿದೆ. ಮುಖ್ಯಸಭೆಗೂ ಮುನ್ನ ಆಗಸ್ಟ್ 31ರಂದು ‘ಇಂಡಿಯಾ’ದ ನಾಯಕರು ಅನೌಪಚಾರಿಕವಾಗಿ ಒಂದೆಡೆ ಸೇರಲಿದ್ದಾರೆ. ಎರಡೂ ದಿನ ನಡೆಯಲಿರುವ ಸಭೆಯಲ್ಲಿ ಭಾಗವಹಿಸಲು ಎಲ್ಲ ನಾಯಕರು ಒಪ್ಪಿದ್ದಾರೆ’ ಮೂಲಗಳು ಮಾಹಿತಿ ನೀಡಿವೆ.

‘ಪೊವಾಯಿ ಹೋಟೆಲೊಂದರಲ್ಲಿ ಸಭೆ ನಡೆಯುವ ಸಾಧ್ಯತೆ ಇದ್ದು, ಸಭೆಯ ಬಳಿಕ ಸೆ. 1ರ ಸಂಜೆ ಪತ್ರಿಕಾಗೋಷ್ಠಿ ನಡೆಸಲಾಗುವುದು. ಶಿವಸೇನಾ (ಉದ್ಧವ್ ಠಾಕ್ರೆ ಬಣ), ಎನ್‌ಸಿಪಿ (ಶರದ್ ಪವಾರ್) ಮತ್ತು ಕಾಂಗ್ರೆಸ್ ಜಂಟಿಯಾಗಿ ‘ಇಂಡಿಯಾ’ದ 3ನೇ ಸಭೆ ಆಯೋಜಿಸಲಿವೆ’ ಎನ್ನಲಾಗಿದೆ.

ಈ ನಡುವೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಅವರನ್ನು ಭೇಟಿ ಮಾಡಿದ್ದು, ವಿರೋಧಪಕ್ಷಗಳ ಮುಂದಿನ ನಡೆಯ ಕುರಿತು ಚರ್ಚಿಸಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಡುವೆ ಉತ್ತಮ ಸಮನ್ವಯ ರೂಪಿಸಲು ಜಂಟಿ ಕಾರ್ಯದರ್ಶಿಯನ್ನು ಶೀಘ್ರದಲ್ಲೇ ನೇಮಿಸಲಾಗುವುದು. ವಿವಿಧ ರಾಜ್ಯಗಳಲ್ಲಿ ಮುಂಬರುವ ಚುನಾವಣೆಗಳಲ್ಲಿ ಆಖಾಡಕ್ಕಿಳಿಯಲಿರುವ ಪಕ್ಷಗಳ ನಡುವಿನ ಭಿನ್ನಾಭಿಪ್ರಾಯಗಳ ನಿವಾರಣೆ ಕಾರ್ಯವೂ ನಡೆಯಲಿದೆ ಎನ್ನಲಾಗಿದೆ.

ಹಲವರಿಗೆ ಗೃಹಬಂಧನ: ಮೆಹಬೂಬಾ ಆರೋಪ

ಶ್ರೀನಗರ (ಪಿಟಿಐ): ‘ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ 4ನೇ ವಾರ್ಷಿಕೋತ್ಸವದ ದಿನವೇ(ಶನಿವಾರ) ತಮ್ಮನ್ನು ಹಾಗೂ ಪಕ್ಷದ ಕೆಲವು ಹಿರಿಯ ನಾಯಕರನ್ನು ಗೃಹಬಂಧನದಲ್ಲಿ ಇರಿಸಲಾಗಿದೆ’ ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಆರೋಪಿಸಿದ್ದಾರೆ. ‘ವಾರ್ಷಿಕೋತ್ಸವ ಆಚರಿಸಿ ಎಂದು ಜನರಿಗೆ ಕರೆ ನೀಡುವ ಫಲಕ ಹಾಕಲಾಗಿದೆ. ಆದರೆ, ಜನರ ಭಾವನೆ ಉಸಿರುಗಟ್ಟಿಸುವಂತೆ ಮಾಡಲಾಗುತ್ತಿದೆ’ ಎಂದೂ ದೂರಿದರು.

ನೂಹ್ ಹಿಂಸಾಚಾರದಲ್ಲಿ ಭಾಗಿಯಾಗಿದ್ದವರ ಕಟ್ಟಡಗಳ ಮೇಲೂ ಕ್ರಮ

3ನೇ ದಿನವೂ ಅನಧಿಕೃತ ಕಟ್ಟಡ ತೆರವು

ಗುರುಗ್ರಾಮ (ಪಿಟಿಐ): ಹರಿಯಾಣದಲ್ಲಿ ಕೋಮುಗಲಭೆ ಸಂಭವಿಸಿದ್ದ ನೂಹ್ ಜಿಲ್ಲೆಯಲ್ಲಿ ಅನಧಿಕೃತ ಕಟ್ಟಡ ಮತ್ತು ಸ್ವತ್ತುಗಳ ತೆರವು ಕಾರ್ಯಾಚರಣೆ ಸತತ ಮೂರನೇ ದಿನವಾದ ಶನಿವಾರವೂ ಮುಂದುವರಿಯಿತು.

ನಲ್ಹಾರ್ ವೈದ್ಯಕೀಯ ಕಾಲೇಜಿನ ಸುತ್ತಲಿನ 2.6 ಎಕರೆ ಪ್ರದೇಶದಲ್ಲಿದ್ದ ಅನಧಿಕೃತ ನಿರ್ಮಾಣಗಳನ್ನು ಜಿಲ್ಲಾಡಳಿತ ಜೆಸಿಬಿ, ಬುಲ್ಡೋಜರ್ ಬಳಸಿ ತೆರವುಗೊಳಿಸಿತು. ಈ ಕಾರ್ಯಾಚರಣೆಯಲ್ಲಿ 15 ಇತರೆ ತಾತ್ಕಾಲಿಕ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ಇವೆಲ್ಲ ಕಾನೂನು ಬಾಹಿರವಾಗಿ ನಿರ್ಮಿಸಲಾಗಿದ್ದ ಕಟ್ಟಡಗಳಾಗಿದ್ದು, ಅವುಗಳ ಮಾಲೀಕರಿಗೆ ಮೊದಲೇ ನೋಟಿಸ್ ನೀಡಲಾಗಿದೆ. ಇವುಗಳಲ್ಲಿ ಕೆಲ ಮಾಲೀಕರು, ವಿಎಚ್‌ಪಿಯ ‘ಬ್ರಿಜ್ ಮಂಡಲ್ ಧಾರ್ಮಿಕ ಯಾತ್ರೆ’ ವೇಳೆ ನಡೆದ ಹಿಂಸಾಚಾರದಲ್ಲಿ ಭಾಗಿಯಾಗಿದ್ದಾರೆ’ ಎಂದು ಜಿಲ್ಲಾಧಿಕಾರಿ ಅಶ್ವನಿ ಕುಮಾರ್ ಮಾಹಿತಿ ನೀಡಿದರು.

ನೂಹ್‌ನ ಅಡ್ಬಾರ್ ಚೌಕ್‌ನಿಂದ ಆರಂಭವಾಗಿರುವ ತೆರವು ಕಾರ್ಯಾಚರಣೆಯು ತಿರಂಗಾ ಚೌಕ್ ತನಕ ಮುಂದುವರಿಯಲಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಇತ್ತೀಚೆಗೆ ವಿಎಚ್‌ಪಿ ಯಾತ್ರಾ ಸಂದರ್ಭದಲ್ಲಿ ನಡೆದ ಹಿಂಸಾಚಾರದಿಂದ ರಾಜ್ಯದ ವಿವಿಧೆಡೆ ಕೋಮು ಗಲಭೆ ಸಂಭವಿಸಿತ್ತು. ಈ ಗಲಭೆಯಲ್ಲಿ ಗೃಹ ರಕ್ಷಕ ದಳದ ಇಬ್ಬರು ಸಿಬ್ಬಂದಿ ಸೇರಿ ಒಟ್ಟು ಆರು ಜನರು ಮೃತಪಟ್ಟಿದ್ದರು. ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ 56 ಎಫ್‌ಐಆರ್‌ಗಳನ್ನು ದಾಖಲಿಸಿದ್ದು 145 ಜನರನ್ನು ಬಂಧಿಸಲಾಗಿದೆ. ಅಲ್ಲದೆ ಸಾಮಾಜಿಕ ಜಾಲ ತಾಣಗಳಲ್ಲಿ ಈ ಕುರಿತು ವದಂತಿಗಳನ್ನು ಹಬ್ಬಿಸುತ್ತಿದ್ದ 10 ಮಂದಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅವರು ವಿವರಿಸಿದರು.

ನೂಹ್ ಜಿಲ್ಲೆಯ ವಿವಿಧೆಡೆ ಜಿಲ್ಲಾಡಳಿತವು ಸುಮಾರು 250 ಅನಧಿಕೃತ ಗುಡಿಸಲುಗಳನ್ನು ತೆರವುಗೊಳಿಸಿದೆ. ಶುಕ್ರವಾರದ ಕಾರ್ಯಾಚರಣೆಯು, ಕೋಮುಗಲಭೆಯಲ್ಲಿ ತೊಡಗಿದ್ದವರ ವಿರುದ್ಧ ನಡೆದದ್ದಾಗಿದೆ ಎಂದು ಗೃಹ ಸಚಿವ ಅನಿಲ್ ವಿಜ್ ಮಾಹಿತಿ ನೀಡಿದರು.



ಹರಿಯಾಣದ ನೂಹ್‌ನಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿದ ಜಿಲ್ಲಾಡಳಿತ

ಭಾನುವಾರ, ಆಗಸ್ಟ್ 6, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



‘ಅಗ್ನಿವೀರ’
ಪಟ್ನಾದಲ್ಲಿ ನಡೆದ ಅಗ್ನಿವೀರರ ನಿರ್ಗಮನ ಪಥಸಂಚಲನದ ಬಳಿಕ ಯೋಧರೊಬ್ಬರನ್ನು ಕುಟುಂಬದವರು ಅಭಿನಂದಿಸಿದರು



WEEKEND CORNER

ಕ್ಲಾಸಿಫೈಡ್ಸ್

SDE
SITES FOR SALE NEAR RAJANKUNTE
Bangalore Urban, Yelahanka Taluk
1799/- Per Sft
* Ready For Registration & Construction
* Bank Loans Available
* 30 Feet wide Roads
Highlights
* Adjacent to Aditya Engineering College
* Presidency College University
* Just Cricket Academy
* Sai Vidya Institute of Technology
DC Conversion E-Katha
7019040221 / 9036207777 / 9611146463

BDA SITE 5 BHK HOUSE FOR SALE

Hosakerehalli
Lift, modular kitchen, commercial space in basement floor, Built-up: 2900 sft (Basement+Gr+3 flrs) South east corner.
Call: 7406 219 219

LAND REQUIRED
NIGHTINGALES MEDICAL TRUST is looking for 7 acres of land located within 40 km from Hebbal or KR Puram with good accessibility and water source.
Interested parties with clear titles can contact:
94490 51502 / 92431 00560
Email: nightingalesmt@gmail.com
www.nightingaleseldercare.com

RIVERSIDE RESORT PROPERTY for SALE / RENT / LEASE
Location : 2 kms. from world famous JOGFALLS, Karnataka.
Premium Rooms, Boating Area, Surrounded by Lush Green Forest & Hills Just Next to River Sharavati.
CALL : 9019369350

READY TO BUILD Sri Anugraha Layout
BMRDA PLOTS FOR SALE
Thavarekere to Chandrappa Circle Main Road, Ajjanahalli
Few Sites available 30x40 & 30x50
5 Minutes Drive from Thavarekere & Big Banlyan tree
Attached Proposed 120Ft Road, Immediate Registration
* 100% Developed with Amenities
* Street Lights, Sewage Lines
* Electricity & Water Connection
* Septic Tank, Wide Tar Roads
* Garden & Tree Plantation
GOOD NEWS for Salaried & IT Holders. JUST PAY Rs. 2.0 Lakh for Booking remaining 80% Loan Available
For more Details & Site Visit
Call: 9663911326 / 9513060760

BOOK FAIR
Indian & Imported Books BOOKS BY WEIGHT
1 KG Rs. 100/-
1 KG Rs. 200/-
1 KG Rs. 500/-
Exhibition Cum Sale @
PMR Memorial Trust, 137, 1st Cross 5th Block, Koramangala, Near Jyothi Nivas College Bangalore-560095
Contact: 9740017961
Timings: 10.00 AM to 10.00 PM

NCF First Time in KR PURAM Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
ITI Ground, Next to Hanging Bridge, KR Puram, Bengaluru
AQUA TUNNEL SHOW

VISIT TODAY | Daily : 4pm - 9pm | Call : 8904727123

Hasiru Bhoomi Your Own Weekend Farm
CALL FOR MORE DETAILS : +91 8147873745
FARM LANDS FOR SALE IN NORTH BENGALURU
JUST 18KM FROM YELAHANKA NEW TOWN
www.hasirubhoomi.com

ಸ್ಪರ್ಧಾ ಮಿತ್ರ ACADEMY
IAS/KAS
Prelims & Mains
PSI/PDO/FDA
Ist and IInd Paper
RRB/SSC/BANK
New Batch from Aug. 7th
Online & Offline Classes
Admission Open
Opp. Maruthi Medicals, Near Attiguppe Metro Station, B'lore.
95351 11133 | 95351 11188

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Arkavathi Layout

30X30 CORNER North west Arkhavathi layout 2nd Block and 30x40 40x60 20x30 3rd and 7th Block. USR-7019770736/ 8951614989.

Banashankari

BANASHANKARI 6TH Stage- WANTED/ AVAILABLE BDA Sites All Measurements Residential/ Commercial Sites Contact- 8050908920/ 9986866661

SITE FOR SALE, North Face, 860 Sqft. Vidyapeeta Khadhi Board Attached, Srinivasanagar. Contact: 9880037307, 6363673199.

SALE BSK 6th stage 10 Block 30x40 North Facing 80Lakh Also 40x60 East Facing 4th Block 2Cr and 20x30 48 lakh Negotiable 9945373839, 9620041313

'AVAILABLE AND' Wanted Banashankari 6th Stage,20x30,30x40,40x60, 50x80,Corner Properties Also Available: 9901033573

'AVAILABLE 'AND Wanted Banashankari 6th Stage, Anjanapura, BDA And BBMP Sites,20X30,30X40,40X60, 50X80,Contact:9900097239

BTM Layout

BTM 4TH stage 2nd block 40x60 BDA and 30x40 30x50 40x60 A khatha. USR-7019770736/ 8951614989.

Basavanagudi

SALE COMMERCIAL 60x90 Corner Site Basavanagudi 100feet Road Contact: 9611844667 8123515830

Basaweshwaranagar

COMMERCIAL NORTH East Corner, Fully Developed Area 2230 Sft, Near Pushpanjali Theater, Shivanagar Bangalore: 9343782958

Gnanabharathi

***BDA 30X40** E/F Site sale* Owner, Jnanabharathi 3rd Block,Near Jnanabharathi Metro Station, Developed area.9742681666

"GNANABHARATHI 2ND-BLOCK (Nagadevanahalli) 30x40 West Facing Site very good Location, Contact Genuine Buyers. 9916140866"

Jigani

SITE FOR SALE 46x91 feet Semi Commercial, Near APC Circle Jigani- Brokers excuse: 8073052299/ 8884808899

J P Nagar

JPNAGAR 8TH Phase, Royal County BDA Site Sale, 30x50, S/F, 9000/- Negotioble: 9538680364 / 9513004587

Kengeri

RESIDENTIAL SITE 30x40 located at Srikrishnamruta Nagar Layout, Ramohalli Village, Kengeri for sale. Contact: 9611584028.

Kumaraswamy Layout

25X30 EAST Facing BDA Site Sale Kumaraswamy Layout Near Police Station. Clear Titles. Contact:- 9342197377

Kanakapura Road

SALE BDA approved layout Kanaka Layout 30x40 South Facing Good location Near Kanakapura Road Rate 9000/- Negotiable. 9945373839, 9620041313

Kempegowda Layout

BDA SITES For Sale @ Kempegowda Layout 20x30, 30x40, 40x60 6363496142 9845555666

SALE COMMERCIAL 50x80 W/F Site Kempegowda Layout on 330' Road. 1st Block H-Sector, half km From Magadi Nice Road Junction. 7750/Sft, 50x80 E/F, 7 Block E-Sector 330' Road. 7700/Sft:- 9606323666

KEMPEGOWDA LAYOUT, Commercial Site for Sale, 7th Block, J Sector 50x80, 80' Road, North Facing, Kumar 9945112279

Magadi Road

1080SQFT- SITE Sale Corner Triangle Shape, DC Conversion, E-Katha Kadabagere Cross, Shivani Greens Call: 9845044335

Mysore

SITE FOR SALE 100'x80' North facing Adipampa Road, Mysore, suitable for complex, hospital, flats.Contact: 9901628999.

Rajarajeshwari Nagar

'A' KHATA Property for Sale in RajarajeshwariNagar 40x60, East facing. Sites. Call: 9448288522

SITE FOR SALE @ 9000/- GATTIGERE SUDARSHAN LAYOUT RAJARAJESHWARI NAGAR CALL:9740252729 / 9535912777

Vijayanagar

"30X40 NF Prime Residential Site Vayalikavale HBCS Layout, Vijayanagara [Genuine Buyers] Immediate Sale Contact- 9845143579"

Vishweshwariah Layout

***SALE* VISHVESHWARAIAH** LAYOUT 1st Block 40x60 North-facing and 4th Block 50x80 East-facing,good location.Contact: 9844533371/ 9341733480

40X60 BHARATHNAGAR BEL Society Site Sale 60 Feet Road and 40x60 BDA 1st Block: 9964971895

BDA 40X60 30X40 Vishveshwaraiah Owner Meeting 8200/- Kempegowda Layout 20X30, 30X40 Sale 7th J -Sector: 9844845864

"VISHVESHWARAIAH 4TH-BLOCK BDA Two sites for sale 30x40 North face, Good location. Contact: 8618934679"

25X40 NF BBMP A' KATHA Rs. 9000/- NEGOTIABLE VISHWESHWARAIAH 1ST BLOCK NEAR SATELLITE CLUB: 9916826976

AVAILBLE VISHWESHVARAIAH Layout 4th Block 30X40 East Face 70% White Loan Good Location Contact: 9901156708

35X30 NORTH Facing, revenue Site No.13, Opposite Podar International School, at Kodigehalli. Contact: 8105251219

VISHWESHWARAIAH LAYOUT BDA 6TH Block 30x40 E/F 40FT Road Good Location Near Oxford College:7975532914

SALE 30x40 VISHVESWARAIAH LAYOUT 4th Block south facing 78 lakh Negotiable. Contact: 9945373839, 9620041313

DH ಪ್ರಜಾವಾಣಿ
BOOK YOUR REAL ESTATE
AD IN DECCAN HERALD ALL KARNATAKA & PRAJAVANI ALL KARNATAKA
@ 800/-* Per Sqcm Single Column
@ 900/-* Per Sqcm Multi Column
conditions apply*
For More Details Contact:
9845114560 | 9731810277 | 9901641752 | 9886213331
080- 45557163 | 45557164
dhclassifieds@deccanherald.co.in www.dhclassifieds.com

Flat

J P Nagar

NEW FLATS for Sale, J.P.Nagar near Tippu Circle,2 BHK &.3 BHK, 39,00,000/-& 45,00,000/,(Low Price) Completion in 3 months Bank Loan will be approved (only Muslims)Contact- Simha: 9036706304 Shahzad: 6364062086.

Magadi Road

KITTANAHALLI- FLATS 320/ 640 Sft 14/ 27 lakhs with registration. Possession- December. Avail discount. 8197263750

Sanjaynagar

SANJAYNAGAR Kalpana Chawla Road 3-BHK Flat 1770sqft North Facing Semi Furnished Rs 1.85Cr Owner:9448787599

Vasanth Nagar

FLAT FOR Rent 2 BHK semi furnished at golf link Apartment behind lemeridian hotel 35k + Maintenance contact person Ramesh: 9535194621

House

Banashankari

BANASHANKARI 2ND near BDA complex 50x75 Residential & Semi-commercial 5 BHK Duplex old house 7,50,00,000/- 9740292904.

BTM Layout

SALE BTM 1st Stage 30x40 East, West Facing Both Built-up 3000sqft Rs.2.70cr Call:9845210269

Basaveshwaranagar

SALE: SITE with House Ground Floor And First Floor A Khatha With Bank Loan: 9008470328

Chandra Layout

CHANDRA LAYOUT Near Venkateshwara Layout 30x40 East Facing, East Door, 3 Floors House Sale. 9008418631.

Electronic City

1575 SQFT NF Site with 2 BHK New House at Begur. A' Khatha. 1.5KM from Hosur Road Metro Station. Rs. 99L: 9008930130

Girinagar

40X60, 4-BHK Duplex Independent House For Sale, with Garden Space and Covered Car Parking. 9620204588

HRBR Layout

***HRBR LAYOUT** 2nd block* Kalyan-Nagar 20x30 west-facing old house 1,10,00,000/-negotiable. ABHILASHA CONSULTANT. 9480565758

Jayanagar

SALE 40X40 Jayanagar 7th Block North Facing With 2BHK Ground Floor and First Floor 2BHK Excellent Location Call:9844134068 9066399102

J P Nagar

J.P.NAGAR 2ND 40x63, 3 BHK 3 unit House 6,00,00,000/-, 30x40, 2 BHK 3 unit House 2,75,00,000/- 9740292904.

"FOR SALE J.P.Nagar 6th Phase 20x30 BDA West facing 3 floors old house. Janardhan- 9845183995"

Kumaraswamy Layout

HOUSE:NEW DUPLEX House for Sale BDA 4 BHK 900sqft full teak and Granite flooring, nearby 15F Bus-stop. 9343307910.

Koramangala

SALE 30X80-SITE South West Corner With Well Maintained old 3 Bedrooms House Near Koramangala Club Call:9341231877

M G Road And Around

ARCHITECT DESIGNED 7 Bedroom Bungalow for sale in Brunton Road Off. M.G. Road, 3520 Sqft plot, can be easily converted into commercial space. Ph: 9844015899.

Nagarabhavi

"NAGARABHAVI BDA Complex D-Group Layout 30x40 4BHK Duplex House North door, 30x40 vacant Site. 9448432633"

Rajajinagar

GAYATHRINAGAR 60X30 East facing site with two floors, 2 BHK house each for sale, 20K per Sqft. Cheque payment only. Call 9483046925

Sanjaynagar

SALE STILT-FLOOR Parking-Plus 3-floors Each Consisting of a 3 BHK House With Lift and Solar Vinayaka Layout Bhoopsandra Call:6361859856

Ulsoor

INDEPENDENT HOUSE SALE, ULSOOR, Nandanavana G Street 425 Sqft, 1250 Built Area, 2Floors. 60L. 9141560795.

Agricultural Land

Ramanagar

AGRICULTURAL LANDS Sale Near Ramanagar 1.5-Acre and 3-Acres 55,00,000/- PerAcre Clear Title. Contact- 9900115519

Commercial Building

Jayanagar

***JAYANAGAR 9TH** Block* Commercial PG Building 40x70 Corner5floors,Rental income 7.20 lakhs,Price 10.5cr. Contact.9945079777

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call:9663001940.

Commerical

Commercial Street

COMMERCIAL PROPERTY for Sale- Commercial Street prime location 1134 sqft, first cross. Contact: 9902736284

M G Road And Around


FOR SALE / RENT COMMERCIAL Property on Magrath Road Near Garuda Mall 3600 Sq. ft Fully Furnished. Independent Unit on 1st Floor.
Call- 9242286495

Hesaraghatta

COMMERCIAL PROPERTY for SALE 40x60 North Facing Rent Earning 55k, at Acharya College Road, Chikkaabaanavaara, Bangalore. Rs. 2.25 Cr. Contact: 9663895768

COMMERCIAL SITE, Excellent location.Opposit to Acharya Engineering College, Hesaraghatta Main Road- For Sale.700sft. 9845583070

Koramangala

SALE OF Residential Apartment complexin Koramangala III-Block, Bengaluru-560034.Contact: Kamran Ahmed, 7892275757, 7795454077

Farm House/ Land/ Resorts

Out-Station

3 GUNTAS situated in Goravanahalli Theetha Main Road. Koratagere Thaluk. Contact details 9480295874, 8884555566

Industrial & Factory

Kanakapura Road

SALE BANK Auction Harohalli KIADB Industrial estate.18 Acres with 1 lakh sft building. Laser cutting machineries and other machineries. Generators etc.30 cr. Bank Transaction. Arun 9945699789.

Residential/ Commercial

Rajarajeshwari Nagar

PRIME RESIDENTIAL Property for Sale 15408 Sqft (can be developed Semi Commercial also) Expected Price Rs.12750/- per sq.ft. Contact:- 9845049400

Sadashiva Nagar

PREMIUM RESIDENTAL VACANT PLOT OPP PARK ACROSS SADASHIVANAGAR SWIMMING POOL CONTACT OWNER 9844018823

BUILDERS ESSENTIAL

Building Contractors

KANTHI CONSTRUCTION We Construct Your Dream House. Premium Quality, Reasonable Price, Timely Completion: 9880785589/ 9066487178

Water Proofing

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Agricultural Land Converted

General

"WANTED AGRICULTURE or Commercial Land in & around Bangalore for Investment, Brokers Excuse. 9902973903/ 8197225837"

Sites

Vishweshwariah Layout

"REQUIRED 30X40 Site Vishveshwaraiah Layout 3rd, 5th, 7th, 8th Block Direct Registration, Owners only Contact: 7892224597"

"REQUIRED NAGARABHAVI, Vishveshwaraiah, Kempegowda Layout 20x30, 30x40, 40x60, 50x80 Sites, Contact Genuine sellers only. 9845268611'

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

J P Nagar

SALE BDA JPNAGAR 8th phase 2nd Block 40x60 west facing Commercial Site Rate 11250/- per sqft 9620041313, 9945373839

Multiple Locations

ANJANAPURA- ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

"WANTED BDA-SITES Banashankari, J.P.Nagar 7th,8th Phase, Vishweshwaraiah Layout only owners Contact: "Krishna"- 9092028055. NO Brokers/ Resellers"

RENTAL PROPERTIES

Accommodation Available

Commercial


For Rent WHITEFIELD -3290 sq. ft. Fully Furnished Independent Unit on 8th Floor, Ample Parking Brigade IRV Centre **Contact-9242286495**

OFFICE PREMISES Rent #33 Swiss Complex Mezzanine Floor M-1, 840 Sqft Race Course Road, Bangalore- 560001 Call: 9845081411/08029521081

COMMERCIAL BUILDING available for Rent 450 sqft, 3rd Floor at Goraguntepalya, Tumkur Road, Bengaluru. Mob-9448274566

COMMERCIAL BUILDING for Rent, Ground floor 1500 sqft, 2nd 1000 sqft, 3rd 1000 sqft. Hoysala Circle, Kengeri Upanagara. Contact: 9449218890

House

INDEPENDENT 2BHK HOUSE RENT KIRLOSKAR LAYOUT BANAVARA MAIN ROAD OPPOSITE SAPTHAGIRI ENGINEERING COLLEGE WITH CAR PARKING: 9844031953

BUSINESS

Business to Business

Business

BUISNESS PARTNER required running project with 6 to 10lakhs investment monthly fixed income arround 1lakh 6364436973

Business Offers

Finance

LOAN AGAINST Property/ Business/ Projects: Contact : +918754809650, Mail: babainvestments7@gmail.com

Business For Sale

ಮಾರಾಟಕ್ಕೆ ವ್ಯಾಪಾರ
ರಾಮಯ್ಯ ಕಾಲೇಜು ಬಸ್-ಸ್ಟಾಪ್, ಮತ್ತಿಕೆರೆ ಸಮೀಪವಿರುವ ಪ್ರಮುಖ ಸ್ಥಳದಲ್ಲಿ ಉತ್ತಮ ಚಾಲನೆಯಲ್ಲಿರುವ ಉನ್ನತ ದರ್ಜೆಯ ಲಾಂಡ್ರಿ ವ್ಯಾಪಾರ ಮಾರಾಟಕ್ಕಿದೆ. ಖರೀದಿದಾರರು ಪ್ರೇಮಕುಮಾರ್ ಅವರನ್ನು
9482617400 / 9980612022
ಸಂಪರ್ಕಿಸಬಹುದು.

ELECTRONICS MANUFACTURING Company (EMS) Immediate Lease/ Sale Contact 9739443920

MATRIMONIAL

Brides Wanted

Brahmin

WANTED BRIDES
CNB, Hindu, 32 y, 5'10", CA IRS, Commissioner, Income Tax
Brahmin, 32 y, 5'8", MBBS MD Doctor, Bangalore
Brahmin, 31 y, "6', Chartered Accountant Bangalore
Contact USHODHAYA (Personalized Matrimonial Services)
96119 19477
98868 84291

Grooms Wanted

Hindu

GROOM WANTED for a pretty Girl, date of birth 22.11.1994, Hindu, Khatriya, Gotra Bayaghapadma, Education BE Electronics & Communication, MBA (HR), PhD final year, SRM Chennai. Can speak English, Hindi, Bengali. Desirable / preference same qualified profession employed within 30 to 32 yrs. Should not be Mangalic. Matching candidates can send their detailed resume, with latest profile photo to **WhatsApp on + 91 98451 34810**

EDUCATIONAL

Correspondence Courses

STUDY AT Home SSLC DIRECT 2nd PUC Regular Class Science Commerce Arts. BA,B.Com,BBA, B.Sc,BCA,BSW, B.LISc,B.Ed, M.Ed, M.LISc,MA M.Com,M.Sc, MBA, MSW, MCA,PG-Diploma Courses, Contact: Manasa Correspondence College. Malleshwaram Circle Bangalore. 9663555154/ 9880498484.

Tuitions

HOME TUITION (Bengalooru) Maths Class 7th, 8th, 9th, 10th Teaching Experience 15years. 8660320590

PUBLIC NOTICE

PUBLIC NOTICE

Public are hereby notified that my client proposes to purchase the below mentioned Property from (1)**Mr.PRAKASH MURALIDHAR,** Son of Late.Mr.Muralidhar Hiranand and (2)**Mrs.GEETHA PRAKASH,** wife of Mr.Prakash Muralidhar both are at No.5/1, 8 th Cross Road, Laxmi Road, Shanthinagar, Bangalore-560027, who have represented that they purchased the Schedule Property from the Bangalore Development Authority, in terms of a Sale Deed dated 15/07/2016 registered as Document No.1290/2016-17 in Book-I and stored in C.D.No.BDAD220 in the office of the Addl. District Registrar, Bangalore read with Rectification Deed dated 17/09/2016 registered as Document No.1979/2016-17 in Book-I and stored in CD No. BDAD221 in the office of the Sub-Registrar, Addl.District Registrar, Bangalore. Persons objecting for the proposed purchase or having any right in the Schedule Property may lodge their objections and/or claims with the undersigned along with supporting documentary evidence within Ten (10) days from the date of this publication and objections and/or claims received thereafter will not be binding on my client and my client will proceed to purchase the Schedule Property as if there are no claimants/objections.

SCHEDULE

All that Vacant Site No.587, situated in 9 th Block, Banashankari 6th Stage, Bangalore, measuring **East to West:** 24.00 mtrs and **North to South:** 15.00 mtrs in all measuring 360 Sq.mtrs and bounded by: **East** : Property bearing No.570 ; **West** : Road ; **North:** Property bearing No. 586; and **South** : Property bearing No.587A.

Sri. KUSUMA R. MUNIRAJU, Sri.KUSUMA KAUSHIK
Advocates, No.101, EDEN PARK, No.20, Vittal Mallya Road, BANGALORE-560 001. Tel : 080 - 22217971.
BANGALORE Dt: 29/07/2023

ಭಾನುವಾರ, ಆಗಸ್ಟ್ 6, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 217 | ಪುಟ 26
• www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ನಗರ ನಾಗರಿಕತೆಯಲ್ಲಿ ಪಾರಿವಾಳಗಳು ತಲೆನೋವಾಗಿರುವುದೇಕೆ?

ಸೆಂಥಿಲ್ ಬಾಲಾಜಿ ಆಪ್ತನ ಮನೆಯಲ್ಲಿ ₹22 ಲಕ್ಷ ಪತ್ತೆ 7
ಭಾರತಕ್ಕೆ ಬರಲಿದೆ 17 ಸಾವಿರ ಟನ್: ಸಚಿವೆ ಅನುಪ್ರಿಯಾ ಮಾಹಿತಿ
ಲ್ಯಾಪ್‌ಟಾಪ್ ಆಮದು ನಿರ್ಬಂಧ ಜಾರಿ ಮುಂದೂಡಿಕೆ 8
ಭೂತಾನ್ ಅಡಿಕೆ ಆಮದಿಗೆ ಒಪ್ಪಿಗೆ 8

ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿಗೆ ಇನ್ನೂ ಕೂಡಿ ಬರದ ಕಾಲ

ಹಳಿಗೆ ಬಾರದ ಬದುಕು

ಒಳನೋಟ

ಗಣಿಗಾರಿಕೆಯ 'ರಿಪಬ್ಲಿಕ್'

ಪ್ರತಿಕ್ರಿಯಿಸಿ: 9606038256
feedback@prajavani.co.in

• ಶಶಿಕಾಂತ ಎಸ್. ಶೆಂಬೆಳ್ಳಿ

ಜಿಲ್ಲಾವಾರು ಗಣಿಬಾಧಿತ ಗ್ರಾಮಗಳ ವಿವರ			
125	66	60	59
ಬಳ್ಳಾರಿ	ವಿಜಯನಗರ	ಚಿತ್ರದುರ್ಗ	ತುಮಕೂರು



ಹೊಸಪೇಟೆ: ಎತ್ತ ನೋಡಿದರತ್ತ ಹಸಿರು ಹೊದ್ದು ನಿಂತ ಗಿರಿ ಶ್ರೇಣಿಗಳು, ಅದರ ನಡುವೆ ದಾರಿ ಕಾಣದಂತೆ ಸುತ್ತಲೂ ಸದಾ ಆವರಿಸಿಕೊಂಡಿರುವ ಕೆಂಪು ದೂಳು, ತಿರುವುಗಳಿಂದ ಕೂಡಿರುವ ದುರ್ಗಮ ರಸ್ತೆಗಳಲ್ಲಿ ಅತಿ ವೇಗದಲ್ಲಿ ಮೈಮೇಲೆ ಎರಗಿ ಬರುವ ಸಾಲು ಸಾಲು ಟ್ರಕ್, ಟಿಪ್ಪರ್‌ಗಳು. ಇವುಗಳಿಂದ ತಪ್ಪಿಸಿಕೊಂಡು ಮನೆ ಸೇರುವುದೇ ಆಸುಪಾಸಿನ ಹಳ್ಳಿಗಳ ಜನರಿಗೆ ದೊಡ್ಡ ಸವಾಲು.

ಮನೆ ಸೇರಿದ ನಂತರವೂ ಅವರಿಗೆ ನೆಮ್ಮದಿಯಿಲ್ಲ. ವಾಸವಿರುವ ಮನೆಗಳಿಂದ 400 ರಿಂದ 500 ಮೀಟರ್ ಅಂತರದಲ್ಲಿ ಸ್ಫೋಟಗಳ ಸದ್ದು. ಭೂಕಂಪನ ಇಲ್ಲವೇ ಯುದ್ಧಭೂಮಿಯಲ್ಲಿದ್ದ ಅನುಭವ. ನಡುರಾತ್ರಿ ಸ್ಫೋಟದ ಸದ್ದಿಗೆ ಮಕ್ಕಳು ಬೆಚ್ಚಿ ಬಿದ್ದು ನಿದ್ರೆಯಿಂದ ಎದ್ದರೆ ಗುಮ್ಮನ ಕಥೆ ಹೇಳಿ, ಸಂತೈಸಿ ಮಲಗಿಸಬೇಕಾದ ಅನಿವಾರ್ಯತೆ ಪೋಷಕರದು.

ತಾಲ್ಲೂಕು ಕೇಂದ್ರ ಸಂಡೂರಿನಿಂದ 35 ಕಿ.ಮೀ ಅಂತರದಲ್ಲಿರುವ ಕಮತೂರು ಗ್ರಾಮವನ್ನು ದೂರದಿಂದ ನೋಡಿದರೆ ಥೇಟ್ ದ್ವೀಪದಂತೆ ಭಾಸವಾಗುತ್ತದೆ. ಕಣ್ಣು ಹಾಯಿಸಿದಲ್ಲೆಲ್ಲಾ ಹಸಿರಿನ ಗಿರಿಗಳು ಕಾಣುತ್ತವೆ. ಹತ್ತಿರ ಹೋಗಿ ನೋಡಿದರೆ ಇನ್ನೊಂದು ಬದಿಯಲ್ಲಿ ಗಣಿಗಾರಿಕೆಯಿಂದ ಬೆಟ್ಟಗಳು ಬೋಳಾಗಿರುವುದು ಗೋಚರಿಸುತ್ತದೆ. ಗ್ರಾಮದ ಸುತ್ತ 500 ಮೀಟರ್ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಸತತವಾಗಿ ಗ್ರಾಮದ ವ್ಯಾಪ್ತಿ ಕುಗ್ಗುತ್ತ ಹೋಗುತ್ತಿದೆ. ಇದರ ಪರಿಣಾಮ ಕೃಷಿ ಮೇಲೂ ಉಂಟಾಗಿದೆ. ಪದವಿ ಮುಗಿಸಿದ ಯುವಕರಿಗೆ ಉದ್ಯೋಗಗಳಿಲ್ಲ. ಕೃಷಿ ಚಟುವಟಿಕೆಗಳು ಹೆಚ್ಚಾಗಿ ನಡೆಯದ ಕಾರಣ ಗುಳೆ ಹೋಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಗಣಿಗಳಲ್ಲಿನ ಸ್ಫೋಟಕ್ಕೆ ಸುತ್ತಮುತ್ತಲ ಗ್ರಾಮದ ಬಹುತೇಕ ಮನೆಗಳ ಗೋಡೆಗಳಲ್ಲಿ ಬಿರುಕು ಮೂಡಿವೆ. ಕೆಲವು ಮನೆಗಳ ಗೋಡೆಗಳು ಕುಸಿದು ಬಿದ್ದಿವೆ. ಇನ್ನುಳಿದವು ಯಾವುದೇ ಸಂದರ್ಭದಲ್ಲಿ ನೆಲಕ್ಕುರುಳುವ ಆತಂಕವಿದೆ. ಈ ಆತಂಕ, ದುಗುಡದ ನಡುವೆ ಬದುಕು ಮುಂದುವರೆಸುವ ಅನಿವಾರ್ಯತೆ. ಹೀಗೆ ಹತ್ತು ಹಲವು ಸಂಕಷ್ಟಗಳ ನಡುವೆ ಬದುಕು ನಡೆಸುತ್ತಿರುವವರು ಕಮತೂರು ಗ್ರಾಮದ ಜನ.

ಅಕ್ರಮ ಗಣಿಗಾರಿಕೆಗೆ ತಡೆ ಬಿದ್ದು ದಶಕಕ್ಕೂ ಹೆಚ್ಚು ಸಮಯ ಕಳೆದಿದೆ. ಆದರೆ, ಅದು ಪರಿಸರ, ಜನಜೀವನದ ಮೇಲೆ ಬೀರಿದ ಕೆಟ್ಟ ಪರಿಣಾಮ ಇನ್ನೂ ಮಾಸಿಲ್ಲ. ಗಾಯ ವಾಸಿಯಾಗುವ ಮುನ್ನವೇ ಮತ್ತೆ ಮತ್ತೆ ಪೆಟ್ಟು ಬೀಳುತ್ತಲೇ ಇದೆ. ದಶಕದ ಹಿಂದಿಗೂ ಈಗಿರುವ ಪರಿಸ್ಥಿತಿಗೂ ದೊಡ್ಡ ವ್ಯತ್ಯಾಸವೆಂದರೆ ಹಿಂದೆ ಅಕ್ರಮ ಗಣಿಗಾರಿಕೆ ನಡೆಯುತ್ತಿತ್ತು. ಈಗ ಕಾನೂನುಬದ್ಧವಾಗಿ ನಡೆಯುತ್ತಿದೆ. ಆದರೆ, ಗಣಿಗಾರಿಕೆ ಚಟುವಟಿಕೆಗಳು ಎಗ್ಗಿಲ್ಲದೆ ನಡೆಯುತ್ತಿರುವುದರಿಂದ ಜನರು ಇನ್ನೂ ಸಮಸ್ಯೆಗಳ ಸುಳಿಯಲ್ಲೇ ಬದುಕು ನಡೆಸುವಂತಾಗಿದೆ.

ಈ ಊರಿನ ಜನಸಂಖ್ಯೆ ಸರಿಸುಮಾರು ಎರಡು ಸಾವಿರ. ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಮಾಡಿದ್ದಾರೆ. ಪೈಪ್‌ಲೈನ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದಾರೆ. ಉಳಿದಂತೆ ಹೆಚ್ಚೇನೂ ಅಭಿವೃದ್ಧಿ ಆಗಿಲ್ಲ.

4ನೇ ಪುಟ ನೋಡಿ

ಮೊದಲ ಹಂತದಲ್ಲಿ 37 ಯೋಜನೆ–ಪಿ.ಸಿ. ರೇ

'ಓವರ್‌ಸೈಟ್ ಅಥಾರಿಟಿ ಇದುವರೆಗೆ ಎಂಟು ಸಭೆಗಳನ್ನು ನಡೆಸಿದೆ. ಇದರಲ್ಲಿ 289 ಯೋಜನೆಗಳ ಅನುಷ್ಠಾನಕ್ಕೆ ₹6,900 ಕೋಟಿ ಖರ್ಚಿಗೆ ಆಡಳಿತಾತ್ಮಕ ಒಪ್ಪಿಗೆ ಸಿಕ್ಕಿದೆ. ಮೊದಲ ಹಂತದಲ್ಲಿ ₹687 ಕೋಟಿಯಲ್ಲಿ 37 ಯೋಜನೆಗಳನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸ್ವಲ್ಪ ವಿಳಂಬವಾಗಿದೆ. ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಎರಡು ತಿಂಗಳಲ್ಲಿ ಕೆಲಸ ಆರಂಭವಾಗಲಿದೆ' ಎಂದು ಕರ್ನಾಟಕ ಗಣಿ ಪರಿಸರ ಪುನರುಜ್ಜೀವನ ನಿಗಮ (ಕೆಎಂಇಆರ್‌ಸಿ) ವ್ಯವಸ್ಥಾಪಕ ನಿರ್ದೇಶಕ ಪಿ.ಸಿ. ರೇ 'ಪ್ರಜಾವಾಣಿ'ಗೆ ಮಾಹಿತಿ ಹಂಚಿಕೊಂಡರು.

'ರಸ್ತೆಗಳ ಅಭಿವೃದ್ಧಿ, ಅರಣ್ಯೀಕರಣ, ನೀರಾವರಿ, ಶಾಲೆ, ಅಂಗನವಾಡಿಗಳ ನಿರ್ಮಾಣ, ಸಂಪರ್ಕ ವ್ಯವಸ್ಥೆ ಸುಧಾರಣೆಗೆ ಒತ್ತು ಕೊಡಲಾಗುವುದು. ಕಾಲಕಾಲಕ್ಕೆ ಓವರ್‌ಸೈಟ್ ಅಥಾರಿಟಿ ಸಭೆ ನಡೆಸುತ್ತಿದೆ. ಅದರ ಸೂಚನೆ ಪ್ರಕಾರ, ಗಣಿಬಾಧಿತ ಜಿಲ್ಲೆಗಳಿಂದ ವರದಿ ತರಿಸಿಕೊಂಡು ಅಲ್ಲಿನ ಬೇಡಿಕೆಗಳಿಗೆ ತಕ್ಕಂತೆ ಯೋಜನೆ ರೂಪಿಸಲಾಗುತ್ತಿದೆ. ಕೆಎಂಇಆರ್‌ಸಿಯಲ್ಲಿ ಒಟ್ಟು ₹25,000 ಕೋಟಿ ಹಣವಿದೆ. ಹಣಕಾಸು ಇಲಾಖೆಯು ಭಾರತೀಯ ರಿಸರ್ವ್ ಬ್ಯಾಂಕ್ ಮೂಲಕ ಅದನ್ನು ಹೂಡಿಕೆ ಮಾಡಲಾಗುತ್ತದೆ. ಓವರ್‌ಸೈಟ್ ಅಥಾರಿಟಿ ಮೂಲಕ ಕಾಲಕಾಲಕ್ಕೆ ರೂಪಿಸಲಾಗುವ ಯೋಜನೆಗಳಿಗೆ ತಕ್ಕಂತೆ ಹಣ ಬಿಡುಗಡೆಗೊಳಿಸಲಾಗುತ್ತದೆ' ಎಂದು ತಿಳಿಸಿದರು.

'ಗೃಹಜ್ಯೋತಿ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ವಿಧಾನಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್ ಪಕ್ಷವು ನೀಡಿದ್ದ 'ಐದು ಗ್ಯಾರಂಟಿ'ಗಳಲ್ಲಿ ಒಂದಾದ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡುವ 'ಗೃಹಜ್ಯೋತಿ' ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಇಲ್ಲಿ ಚಾಲನೆ ನೀಡಿದರು.

ಕೇಂದ್ರ ಸರ್ಕಾರ ಹಾಗೂ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸುವ ಜತೆಗೆ ಮುಂದಿನ ವರ್ಷ ನಡೆಯಲಿರುವ ಲೋಕಸಭಾ ಚುನಾವಣಾ ಪ್ರಚಾರಕ್ಕಾಗಿ ಕಾಂಗ್ರೆಸ್ ಮುಖಂಡರು ಕಾರ್ಯಕ್ರಮವನ್ನು ಬಳಸಿಕೊಂಡರು.

ದೇಶದ ಹಿತಕ್ಕಾಗಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷದ 'ಕೈ' ಹಿಡಿದು ಆಶೀರ್ವದಿಸಬೇಕು ಎಂದು ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೋರಿದರು.

2B ಪುಟ ನೋಡಿ





ಮಣಿಪುರ: ಮತ್ತೆ ಐವರ ಹತ್ಯೆ

ಇಂಫಾಲ್ (ಪಿಟಿಐ): ಸಂಘರ್ಷ ಪೀಡಿತ ಮಣಿಪುರದ ವಿಷ್ಣುಪುರ ಹಾಗೂ ಚುರಾಚಾಂದಪುರ ಜಿಲ್ಲೆಯಲ್ಲಿ ಮತ್ತೆ ಹಿಂಸಾಚಾರ ನಡೆದಿದ್ದು, ಕ್ವಾಕ್ತಾ ಪಟ್ಟಣದ ಬಳಿಯ ಗ್ರಾಮವೊಂದರಲ್ಲಿ ಮೈತೇಯಿ ಸಮುದಾಯಕ್ಕೆ ಸೇರಿದ ಮೂವರನ್ನು ಕುಕಿ ಬಂಡುಕೋರರು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಚುರಾಚಾಂದಪುರ ಜಿಲ್ಲೆಯ ಫೋಲ್ಜಾಂಗ್ ಗ್ರಾಮದಲ್ಲಿ ಕುಕಿ ಸಮುದಾಯದ ಇಬ್ಬರ ಮೃತದೇಹಗಳು ಪತ್ತೆಯಾಗಿವೆ ಎಂದಿದ್ದಾರೆ.

ಮೈತೇಯಿ ಸಮುದಾಯದ ಮೃತರಲ್ಲಿ 67 ವರ್ಷ ವಯಸ್ಸಿನ ವ್ಯಕ್ತಿ, ಅವರ ಮಗ ಮತ್ತು ನೆರೆ ಮನೆಯ ವ್ಯಕ್ತಿ ಸೇರಿದ್ದಾರೆ. ಆಕ್ರಮಣಕಾರರು ಚುರಾಚಾಂದಪುರದವರು. ರಾತ್ರಿ ಮಲಗಿದ್ದ ಮೂವರ ಮೇಲೆ ಅವರು ಗುಂಡಿನ ದಾಳಿ ಮಾಡಿದ್ದಾರೆ. ಬಳಿಕ, ಕತ್ತಿಯಿಂದ ಅವರನ್ನು ತುಂಡರಿಸಿದ್ದಾರೆ. ಸಂತ್ರಸ್ತರು ಮೊದಲಿಗೆ ಪರಿಹಾರ ಶಿಬಿರದಲ್ಲಿದ್ದರು. ಪರಿಸ್ಥಿತಿ ಸುಧಾರಿಸಿದ ಕಾರಣ ಶುಕ್ರವಾರವಷ್ಟೇ ಕ್ವಾಕ್ತಾಕ್ಕೆ ಮರಳಿದ್ದರು. ಘಟನೆ ನಡೆದ ವೇಳೆ ಮೃತರ ಕುಟುಂಬದ ಮಹಿಳೆಯರು ಪರಿಹಾರ ಶಿಬಿರದಲ್ಲೇ ಇದ್ದರು ಎಂದು ಹೇಳಿದ್ದಾರೆ.

ಘಟನೆ ನಡೆದ ಕೂಡಲೇ ಕ್ವಾಕ್ತಾದಲ್ಲಿ ನೆರೆದ ಉದ್ರಿಕ್ತರ ಗುಂಪು ಚುರಾಚಾಂದಪುರಕ್ಕೆ ತೆರಳಲು ಮುಂದಾಗಿತ್ತು. ಆದರೆ ಅವರನ್ನು ಭದ್ರತಾ ಸಿಬ್ಬಂದಿ ತಡೆದರು ಎಂದು ಅವರು ಹೇಳಿದ್ದಾರೆ.

ಗುಂಡಿನ ಚಕಮಕಿ: ಶನಿವಾರ ಬೆಳಿಗ್ಗೆ ಕ್ವಾಕ್ತಾದಲ್ಲಿ ಮಣಿಪುರ ಪೊಲೀಸರು ಮತ್ತು ಬಂಡುಕೋರರ ನಡುವೆ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಒಬ್ಬರು ಪೊಲೀಸ್ ಸಿಬ್ಬಂದಿ ಸೇರಿ ಮೂವರು ಗಾಯಗೊಂಡಿದ್ದಾರೆ.

7ನೇ ಪುಟ ನೋಡಿ

ಪರಿಷತ್‌ಗೆ ನಾಮನಿರ್ದೇಶನ ವಿವರ ಕೇಳಿದ ರಾಜ್ಯಪಾಲರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ಗೆ ಎಂ.ಆರ್. ಸೀತಾರಾಮ್, ಮನ್ಸೂರ್ ಅಲಿ ಖಾನ್ ಮತ್ತು ಎಚ್.ಪಿ. ಸುಧಾಮ್ ದಾಸ್ ಹೆಸರು ನಾಮನಿರ್ದೇಶನ ಮಾಡಲು ಪರಿಗಣಿಸುವ ಮೊದಲು ಅವರ ವಿರುದ್ಧ ರಾಜ್ಯಪಾಲರಿಗೆ ಸಲ್ಲಿಕೆಯಾಗಿರುವ ದೂರುಗಳನ್ನು ಪರಿಶೀಲಿಸಿ, ನಿಯಮಗಳನ್ವಯ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯ ಕಾರ್ಯದರ್ಶಿಗೆ ರಾಜಭವನ ಪತ್ರ ಬರೆದಿದೆ.

ರಾಜ್ಯಪಾಲರ ಪರವಾಗಿ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರು ಆಗಸ್ಟ್ 4ರಂದು ಈ ಪತ್ರ ಬರೆದಿದ್ದಾರೆ.

'ಶಿಕ್ಷಣ, ಸಹಕಾರ, ಸಂಸ್ಕೃತಿ ಮತ್ತು ಸಾಮಾಜಿಕ ಸೇವೆಯ ಕ್ಷೇತ್ರದ ಪ್ರತಿನಿಧಿಗಳಾಗಿ ಪರಿಷತ್‌ಗೆ ಈ ಮೂವರನ್ನು ನಾಮನಿರ್ದೇಶನ ಮಾಡಲು ರಾಜ್ಯ ಸರ್ಕಾರ ಮುಂದಾಗಿರುವುದು ಗೊತ್ತಾಗಿದೆ. ಆದರೆ, ಅವರ ಮೇಲೆ ಕೆಲವು ಆರೋಪಗಳಿವೆ' ಎಂದು ಕರ್ನಾಟಕ ರಾಜ್ಯ ಮುಸ್ಲಿಂ ಜನ ಜಾಗೃತಿ ವೇದಿಕೆ ಮತ್ತು 'ನ್ಯಾಯಮಿತ್ರ' ಸಂಘಟನೆಯ ಕಾರ್ಯದರ್ಶಿ ರಾಘವಾಚಾರ್ ಶಾಸ್ತ್ರಿ ಅವರು ಕೆಲವು ದಾಖಲೆಗಳ ಸಹಿತ ರಾಜ್ಯಪಾಲರಿಗೆ ಪ್ರತ್ಯೇಕ ದೂರುಗಳನ್ನು ಸಲ್ಲಿಸಿದ್ದರು. ಈ ದೂರುಗಳ ಸಹಿತ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಅವರಿಂದ ವಿವರವನ್ನು ಕೇಳಲಾಗಿದೆ.

7ನೇ ಪುಟ ನೋಡಿ

ಪಾಕ್ ಮಾಜಿ ಪ್ರಧಾನಿ ಇಮ್ರಾನ್‌ಖಾನ್‌ಗೆ ಸಜೆ

ಇಸ್ಲಾಮಾಬಾದ್/ಲಾಹೋರ್ (ಪಿಟಿಐ): ಇಸ್ಲಾಮಾಬಾದ್‌ನ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಶನಿವಾರ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಭ್ರಷ್ಟಾಚಾರ ಪ್ರಕರಣದ ಸಂಬಂಧ ಮೂರು ವರ್ಷದ ಸಜೆ ವಿಧಿಸಿ ಆದೇಶಿಸಿದೆ.



ಆದೇಶದ ಹಿಂದೆಯೇ ಪೊಲೀಸರು ಲಾಹೋರ್‌ನ ನಿವಾಸದಿಂದ ಇಮ್ರಾನ್ ಅವರನ್ನು ಬಂಧಿಸಿದರು. 'ಬಂಧನ ಅನಿರೀಕ್ಷಿತ. ಬೆಂಬಲಿಗರು ಮೌನವಾಗಿ ಕುಳಿತುಕೊಳ್ಳಬಾರದು' ಎಂದು ಇಮ್ರಾನ್ ಖಾನ್ ವಿಡಿಯೊ ಸಂದೇಶ ಬಿಡುಗಡೆ ಮಾಡಿದ್ದಾರೆ.

ಜೈಲುಶಿಕ್ಷೆಯ ಜೊತೆಗೆ 1 ಲಕ್ಷ ರೂಪಾಯಿ ದಂಡವನ್ನೂ ಕೋರ್ಟ್ ವಿಧಿಸಿದೆ. ದಂಡ ಪಾವತಿಸಲು ವಿಫಲವಾದಲ್ಲಿ ಹೆಚ್ಚುವರಿ 6 ತಿಂಗಳು ಸಜೆ ಅನುಭವಿಸಬೇಕು ಎಂದು ನ್ಯಾಯಾಧೀಶ ಹುಮಯೂನ್ ದಿಲಾವರ್ ಅವರು ಆದೇಶದಲ್ಲಿ ತಿಳಿಸಿದ್ದಾರೆ. ಪ್ರಧಾನಿಯಾಗಿದ್ದ ಅವಧಿಯಲ್ಲಿ ಬಂದಿದ್ದ ದುಬಾರಿ ಮೌಲ್ಯದ ಗಡಿಯಾರವೊಂದನ್ನು ಮಾರಾಟ ಮಾಡಿ ಲಾಭಗಳಿಸಿದ್ದಾರೆ ಎಂದು ಇಮ್ರಾನ್ ಖಾನ್ ಅವರ ವಿರುದ್ಧ ಭ್ರಷ್ಟಾಚಾರ ಪ್ರಕರಣವು ದಾಖಲಾಗಿತ್ತು.

ತೋಷಖಾನಾ ಪ್ರಕರಣ ಎಂದೇ ದೇಶದಲ್ಲಿ ಕುಖ್ಯಾತಿಯಾಗಿದ್ದ ಪ್ರಕರಣ ಸಂಬಂಧ ಚುನಾವಣಾ ಆಯೋಗ ಕಳೆದ ವರ್ಷ ದೂರು ದಾಖಲಿಸಿತ್ತು. ಇದೇ ಆರೋಪದಡಿ ಖಾನ್ ಅವರ ಸದಸ್ಯತ್ವವನ್ನು ಆಯೋಗವು ಅ.21, 2022ರಂದು ರದ್ದುಪಡಿಸಿತ್ತು.

ಇನ್ನೊಂದು ಸುದ್ದಿ 8

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅರಳುವ ಹಾದಿಯಲ್ಲಿ ಪುಟ್ಟಪೋರನ ದುರಂತ ಅಂತ್ಯ

ಬೆಂಗಳೂರು: ಕೊಪ್ಪರಂ ಶ್ರೇಯಸ್ ಹರೀಶ್ ತನ್ನ ವಯಸ್ಸಿನ ಮಕ್ಕಳಿಗಿಂತ ಭಿನ್ನ ವ್ಯಕ್ತಿತ್ವದ ಹುಡುಗ. ಆತನ ಓರಗೆಯ ಹುಡುಗರೆಲ್ಲರೂ ಆಟಿಕೆಯ ವಾಹನಗಳಲ್ಲಿ ಆಡಿ ಸಂತಸ ಪಡುತ್ತಿದ್ದ ಹೊತ್ತಿನಲ್ಲಿಯೇ ರೇಸ್ ಟ್ರ್ಯಾಕ್‌ನಲ್ಲಿ ಬೈಕ್ ಓಡಿಸಿದ್ದ ಸಾಹಸಿ. ಆದರೆ ಶ್ರೇಯಸ್ ಸಾಹಸಯಾತ್ರೆಗೆ ಈಗ ತೆರೆಬಿದ್ದಿದೆ.


9

ಪಾಕ್ ಜನಸಂಖ್ಯೆ 24.01 ಕೋಟಿ 8




ರಾಜ್ಯಕಂಡ ಅಪ್ರತಿಮ ಧೀಮಂತ ನಾಯಕರು,
ಕಾಂಗ್ರೆಸ್ ಪಕ್ಷದ ಹಿರಿಯ ರಾಜಕೀಯ ಮುತ್ಸದ್ಧಿ,
ಬಡವರ ಬಂಧು, ನಮ್ಮ-ನಿಮ್ಮೆಲ್ಲರ ನೆಚ್ಚಿನ
ಪ್ರಬುದ್ಧ ನಾಯಕರು, ಮಾಜಿ ಉಪಮುಖ್ಯಮಂತ್ರಿ,
ರಾಜ್ಯ ಸರ್ಕಾರದ ಗೃಹ ಸಚಿವರಾದ
ಡಾ. ಜಿ.ಪರಮೇಶ್ವರ್ ರವರಿಗೆ
ಜನುಮದಿನದ
ಶುಭಾಶಯಗಳು
ಎ.ಸಿ. ಶ್ರೀನಿವಾಸ್
ಶಾಸಕರು, ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ,
ಬೆಂಗಳೂರು

ಬಾಲಕಿ ಎದುರು ಪ್ಯಾಂಟ್ ಬಿಚ್ಚಿದ್ದ ವ್ಯಕ್ತಿಗೆ 3 ವರ್ಷ ಶಿಕ್ಷೆ



ಬೆಂಗಳೂರು: ಬಾಲಕಿ ಎದುರು ತನ್ನ ಪ್ಯಾಂಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದ ಅಪರಾಧಿ ರಹಮತ್–ಉಲ್ಲಾ ಬೇಗ್‌ಗೆ (33) ಮೂರು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ನಗರದ 1ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಭಾರತಿನಗರ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

12 ವರ್ಷದ ಬಾಲಕಿ, 2020ರ ಫೆ. 9ರಂದು ಬೆಳಿಗ್ಗೆ ತಮ್ಮ ಸಾಕುನಾಯಿ ಜೊತೆ ಮನೆ ಎದುರು ನಿಂತುಕೊಂಡಿದ್ದಳು. ಇದೇ ವೇಳೆ ಬಾಲಕಿ ಎದುರು ರಹಮತ್–ಉಲ್ಲಾ, ತನ್ನ ಪ್ಯಾಂಟ್ ಬಿಚ್ಚಿ ಅಸಭ್ಯವಾಗಿ ವರ್ತಿಸಿದ್ದ. ಹೆದರಿದ್ದ ಬಾಲಕಿ, ಮನೆಯೊಳಗೆ ಹೋಗಿದ್ದಳು.

ಅವಳನ್ನು ಆತ ಹಿಂಬಾಲಿಸಿದ್ದ. ಪೋಷಕರನ್ನು ಕಂಡು ಮನೆಯಿಂದ ಓಡಿಹೋಗಿದ್ದ. ಗಾಬರಿಗೊಂಡಿದ್ದ ಬಾಲಕಿ, ಘಟನೆ ಬಗ್ಗೆ ಪೋಷಕರಿಗೆ ಮಾಹಿತಿ ನೀಡಿದ್ದಳು. ನಂತರವೇ ಪೋಷಕರು ಠಾಣೆಗೆ ಬಂದು ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಪೊಲೀಸ್ ಇನ್‌ಸ್ಪೆಕ್ಟರ್ ಜಿ.ಪಿ. ರಮೇಶ್, ರಹಮತ್–ಉಲ್ಲಾನನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಅಪರಾಧಿಗೆ 3 ವರ್ಷ ಜೈಲು ಶಿಕ್ಷೆ ಜೊತೆಯಲ್ಲಿ ₹ 20 ಸಾವಿರ ದಂಡ ವಿಧಿಸಿ ನ್ಯಾಯಾಲಯ ಆದೇಶಿಸಿದೆ. ಜೊತೆಗೆ, ಬಾಲಕಿಗೆ ₹ 25 ಸಾವಿರ ಪರಿಹಾರ ನೀಡುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನಿರ್ದೇಶನ ನೀಡಿದೆ' ಎಂದು ಪಿ. ಕೃಷ್ಣವೇಣಿ ತಿಳಿಸಿದರು.

ವಿಮಾನದಲ್ಲಿ ಬಂದು ಕಳ್ಳತನ: ದೆಹಲಿಯಲ್ಲಿ ಸಿಕ್ಕಿಬಿದ್ದ ನಾಲ್ವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಉತ್ತರ ಪ್ರದೇಶದ ನಾಲ್ವರು ಆರೋಪಿಗಳನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮಿಂತು ವಿಶ್ವಾಸ್, ಹರೀಶ್ ಚಂದ್ರ, ಜಸ್ವೀರ್ ಹಾಗೂ ಚಂದ್ರಬಾನು ಬಂಧಿತರು. ಉತ್ತರಪ್ರದೇಶದಿಂದ ವಿಮಾನದಲ್ಲಿ ನಗರಕ್ಕೆ ಆಗಾಗ ಬರುತ್ತಿದ್ದ ಆರೋಪಿಗಳು, ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು. ನಾಲ್ವರನ್ನೂ ಬಂಧಿಸಿ ₹ 78 ಲಕ್ಷ ಮೌಲ್ಯದ 1 ಕೆ.ಜಿ 430 ಗ್ರಾಂ ಚಿನ್ನಾಭರಣ ಹಾಗೂ ವಜ್ರದ ಒಡವೆ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದರು. ದೆಹಲಿ, ಕರ್ನಾಟಕ, ಕೇರಳ ಹಾಗೂ ರಾಜಸ್ಥಾನ್ ರಾಜ್ಯಗಳಲ್ಲಿ ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದರು.


ಮಿಂತು ವಿಶ್ವಾಸ್


ಜಸ್ವೀರ್


ಹರೀಶ್ ಚಂದ್ರ


ಚಂದ್ರಬಾನು

ವಿಮಾನದಲ್ಲಿ ಸಂಚಾರ, ಲಾಡ್ಜ್‌ನಲ್ಲಿ ವಾಸ್ತವ್ಯ: 'ಉತ್ತರ ಪ್ರದೇಶದಿಂದ ವಿಮಾನದಲ್ಲಿ ನಗರಕ್ಕೆ ಬರುತ್ತಿದ್ದ ಆರೋಪಿಗಳು, ಇಲ್ಲಿಯ ಲಾಡ್ಜ್‌ಗಳಲ್ಲಿ ಉಳಿದುಕೊಳ್ಳುತ್ತಿದ್ದರು. ಆರಂಭದಲ್ಲಿ, ದ್ವಿಚಕ್ರ ವಾಹನ ಕದಿಯುತ್ತಿದ್ದರು. ಅದರಲ್ಲಿಯೇ ನಗರದ ಹಲವು ಪ್ರದೇಶಗಳಲ್ಲಿ ಸುತ್ತಾಡಿ ಮನೆಗಳನ್ನು ಗುರುತಿಸಿ ಕಳ್ಳತನಕ್ಕೆ ಸಂಚು ರೂಪಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ, ರಂಗೋಲಿ ಹಾಕಿರದ ಹಾಗೂ ಬೀಗ ಹಾಕಿರುತ್ತಿದ್ದ ಮನೆಗಳನ್ನು ಆರೋಪಿಗಳು ಗುರುತಿಸುತ್ತಿದ್ದರು. ರಾತ್ರಿ ವೇಳೆ ಮನೆಗಳಿಗೆ ನುಗ್ಗಿ, ಚಿನ್ನಾಭರಣ ಹಾಗೂ ನಗದು ಕದ್ದುಕೊಂಡು ಪರಾರಿಯಾಗುತ್ತಿದ್ದರು' ಎಂದರು.

ಗಡ್ಡ ಸುಳಿವು, ದೆಹಲಿಯಲ್ಲಿ ಸೆರೆ

'ಡಾಲರ್ಸ್ ಕಾಲೊನಿಯಲ್ಲಿರುವ ಸಾಫ್ಟ್‌ವೇರ್ ಎಂಜಿನಿಯರೊಬ್ಬರ ಮನೆಯೊಂದರಲ್ಲಿ ಇತ್ತೀಚೆಗೆ ಕಳ್ಳತನ ನಡೆದಿತ್ತು. ಈ ಬಗ್ಗೆ ದೂರು ದಾಖಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ, ಆರೋಪಿಯೊಬ್ಬನಿಗೆ ವಿಚಿತ್ರ ಶೈಲಿಯ ಗಡ್ಡವಿರುವುದು ಕಂಡಿತ್ತು' ಎಂದು ಪೊಲೀಸರು ಹೇಳಿದರು.

'ಗಡ್ಡದ ಆರೋಪಿ ಎಲ್ಲೆಲ್ಲಿ ಸುತ್ತಾಡಿದ್ದಾನೆ ಎಂಬುದನ್ನು ಕ್ಯಾಮೆರಾ ಮೂಲಕ ಪತ್ತೆ ಮಾಡಲಾಯಿತು. ಎಲ್ಲ ಆರೋಪಿಗಳು ದೆಹಲಿಗೆ ಹೊರಟಿದ್ದ ಸಂಗತಿ ಗೊತ್ತಾಗಿತ್ತು. ಅದೇ ಸುಳಿವು ಆಧರಿಸಿ ಪೊಲೀಸರ ತಂಡ ದೆಹಲಿಗೆ ಹೋಗಿತ್ತು. ಪಶ್ಚಿಮ ದೆಹಲಿಯ ತಿಲಕ್‌ನಗರದಲ್ಲಿ ಎಲ್ಲರೂ ಸಿಕ್ಕಿಬಿದ್ದರು. ನಂತರ, ಅವರನ್ನು ನಗರಕ್ಕೆ ಕರೆತಂದು ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು' ಎಂದು ತಿಳಿಸಿದರು.

ಮೋರಿಯಲ್ಲಿ ಮೃತದೇಹ ಪತ್ತೆ


ಸಂತೋಷ್

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ 48ರ ದಾನೋಜಿಪಾಳ್ಯದ ಬಳಿ ಮೋರಿಯಲ್ಲಿ ಕೊಳೆತ ಸ್ಥಿತಿಯಲ್ಲಿ ದೊಡ್ಡಬಳ್ಳಾಪುರದ ಬಸವೇಶ್ವರ ಬಡಾವಣೆ ನಿವಾಸಿ ಸಂತೋಷ್ ಕುಮಾರ್ (32) ಅವರ ಮೃತದೇಹ ಪತ್ತೆಯಾಗಿದೆ.

ಸ್ಥಳೀಯರು ಶನಿವಾರ ಮಧ್ಯಾಹ್ನ ಮೃತದೇಹ ಕಂಡು ಪೊಲೀಸರಿಗೆ ತಿಳಿಸಿದರು. ಇನ್‌ಸ್ಪೆಕ್ಟರ್ ಶಶಿಧರ್ ಅವರ ತಂಡ, ಮೃತ ವ್ಯಕ್ತಿಯ ಜೇಬಿನಲ್ಲಿದ್ದ ಮೊಬೈಲ್‌ನಿಂದ ಸಂಬಂಧಿಕರ ದೂರವಾಣಿ ಸಂಖ್ಯೆಗೆ ಕರೆ ಮಾಡಿದರು. ಸ್ಥಳಕ್ಕಾಗಮಿಸಿದ ಸಂಬಂಧಿಗಳು ಕೈಮೇಲಿದ್ದ ಹಚ್ಚೆ ಹಾಗೂ ಬಟ್ಟೆ, ಕನ್ನಡಕದ ಆಧಾರದ ಮೇಲೆ ಸಂತೋಷ್ ಕುಮಾರ್ ಎಂದು ಗುರುತಿಸಿದರು.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ದೊಡ್ಡಕುಂಚೆ ಗ್ರಾಮದ ನಿವಾಸಿ ಸಂತೋಷ್ ಕುಮಾರ್, ದೊಡ್ಡಬಳ್ಳಾಪುರದ ಬಸವೇಶ್ವರ ಬಡಾವಣೆಯಲ್ಲಿ ಪತ್ನಿ ಹಾಗೂ ಪುತ್ರನೊಂದಿಗೆ ನೆಲೆಸಿದ್ದರು. 15 ವರ್ಷಗಳಿಂದ ಚಾಲಕ ಆಗಿ ಕೆಲಸ ಮಾಡುತ್ತಿದ್ದರು.

'ವಾರದ ಹಿಂದೆ ಪತ್ನಿಯನ್ನು ತವರು ಮನೆಗೆ ಕಳಿಸಲು ನಂಜನಗೂಡಿಗೆ ತೆರಳಿದ್ದ ಸಂತೋಷ್, ಬಳಿಕ ಸ್ನೇಹಿತರೊಂದಿಗೆ ಕಾರಿನಲ್ಲಿ ತೆರಳಿದ್ದರು. ಅವರು ಅಪಘಾತದಿಂದ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದರೂ, ಕೊಲೆ ಆಗಿರುವ ಶಂಕೆಯಿದೆ. ಕುಟುಂಬಸ್ಥರ ದೂರಿನ ಅನುಸಾರ ತನಿಖೆ ನಡೆಸಲಾಗುವುದು' ಎಂದು ಪೊಲೀಸರು ತಿಳಿಸಿದರು.

ಲಾಡ್ಜ್‌ನಲ್ಲಿ ಮಹಿಳೆ ಕೊಲೆ

ಕುಣಿಗಲ್: ಪಟ್ಟಣದ ವಸತಿಗೃಹದಲ್ಲಿ ಬೆಂಗಳೂರಿನ ತಾವರೆಕೆರೆಯ ಲಕ್ಷ್ಮಮ್ಮ (28) ಅವರ ಕೊಲೆಯಾಗಿದ್ದು, ಪ್ರಕರಣದ ಸಂಬಂಧ ದಾವಣಗೆರೆಯ ಮಂಜುನಾಥ್ (22) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ತಾವರೆಕೆರೆ ಸಮೀಪದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಲಕ್ಷ್ಮಮ್ಮ ಕೆಲ ವರ್ಷಗಳಿಂದ ಪತಿಯಿಂದ ದೂರವಿದ್ದರು. ಅದೇ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಜೊತೆ ಸಲುಗೆ ಇತ್ತು.

ಮೊಬೈಲ್ ಸುಲಿಗೆ ಮಾಡಿದ್ದ ಅಪರಾಧಿಗೆ 7 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೊರಗುಂಟೆಪಾಳ್ಯ ಬಳಿಯ ಹೊರವರ್ತುಲ ರಸ್ತೆಯಲ್ಲಿ ಬೈಕ್ ಸವಾರರಿಗೆ ಚಾಕು ತೋರಿಸಿ ಮೊಬೈಲ್ ಸುಲಿಗೆ ಮಾಡಿದ್ದ ಅಪರಾಧಿ ಕಾರ್ತಿಕ್ ಕೆ. ಅಲಿಯಾಸ್ ಗುಂಡನಿಗೆ 7 ವರ್ಷ ಜೈಲು ಶಿಕ್ಷೆ ವಿಧಿಸಿ ನಗರದ 51ನೇ ಸಿಸಿಎಚ್ ನ್ಯಾಯಾಲಯ ಆದೇಶ ಹೊರಡಿಸಿದೆ.

ಆರ್‌ಎಂಸಿ ಯಾರ್ಡ್ ಠಾಣೆಯಲ್ಲಿ 2021ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶ ಸಿ.ಬಿ. ಸಂತೋಷ್ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎಚ್. ಭಾಸ್ಕರ್ ವಾದಿಸಿದ್ದರು.

'2021ರ ಜ. 3ರಂದು ಬೈಕ್ ಸವಾರರಿಬ್ಬರು ಹೊರವರ್ತುಲ ರಸ್ತೆಯಲ್ಲಿ ಹೊರಟಿದ್ದರು. ರಸ್ತೆ ಪಕ್ಕದಲ್ಲಿ ಬೈಕ್ ನಿಲ್ಲಿಸಿದ್ದ ಸವಾರ, ಮೂತ್ರ ವಿಸರ್ಜನೆಗೆ ಹೋಗಿದ್ದರು. ಹಿಂಬದಿ ಸವಾರ, ಬೈಕ್ ಮೇಲೆ ಕುಳಿತಿದ್ದರು. ಇದೇ ವೇಳೆ ಸ್ಥಳಕ್ಕೆ ಬಂದಿದ್ದ ಕಾರ್ತಿಕ್, ಚಾಕು ತೋರಿಸಿ ಮೊಬೈಲ್ ಕಸಿದುಕೊಂಡಿದ್ದ. ನಂತರ, ಮೂತ್ರ ವಿಸರ್ಜನೆಗೆ ಹೋಗಿದ್ದ ಸವಾರನನ್ನು ಬೆನ್ನಟ್ಟಿ ಹಿಡಿದು ಚಾಕು ತೋರಿಸಿ ಅವರ ಮೊಬೈಲ್ ಸಹ ಸುಲಿಗೆ ಮಾಡಿದ್ದ' ಎಂದು ಪೊಲೀಸರು ಹೇಳಿದರು.

'ಸವಾರರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು' ಎಂದು ತಿಳಿಸಿದರು.

ಜೈಲಿನಿಂದ ಹೊರಬಂದಿದ್ದ ರೌಡಿ ಹತ್ಯೆ

ಪ್ರಜಾವಾಣಿ ವಾರ್ತೆ


ರೌಡಿ ಮಹೇಶ್

ಅಪರಾಧ ಸುದ್ದಿ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾಗಿ ಮನೆಯತ್ತ ಹೊರಟಿದ್ದ ರೌಡಿ ಮಹೇಶ್ ಅಲಿಯಾಸ್ ಸಿದ್ದಾಪುರ ಮಹೇಶ್‌ನನ್ನು ಮಚ್ಚಿನಿಂದ ಕೊಚ್ಚಿ ಹತ್ಯೆ ಮಾಡಲಾಗಿದ್ದು, ಹಳೇ ವೈಷಮ್ಯದಿಂದಾಗಿ ಎದುರಾಳಿ ತಂಡದವರು ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

'ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಮಹೇಶ್, ಶುಕ್ರವಾರ ರಾತ್ರಿ 9.15ರ ಸುಮಾರಿಗೆ ಜೈಲಿನಿಂದ ಬಿಡುಗಡೆಯಾಗಿದ್ದ. ಕಾರಿನಲ್ಲಿ ಮನೆಯತ್ತ ಹೊರಟಿದ್ದ. ಹೊಸೂರು ರಸ್ತೆ ವೃತ್ತದಲ್ಲಿ ರಾತ್ರಿ 9.45ರ ಸುಮಾರಿಗೆ ಕಾರು ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ಮಚ್ಚಿನಿಂದ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮಹೇಶ್ ಹತ್ಯೆ ಮಾಡಲು ರೌಡಿ ವಿಲ್ಸನ್ ಗಾರ್ಡನ್ ನಾಗ ಹಾಗೂ ಸಹಚರರು ಸಂಚು ರೂಪಿಸಿದ್ದರು. ಅದರಂತೆ ನಾಗ, ಮೋಹನ ಅಲಿಯಾಸ್ ಡಬಲ್ ಮೀಟರ್, ಸುನೀಲ್ ಹಾಗೂ ಇತರರು ಕೊಲೆ ಮಾಡಿರುವ ಶಂಕೆ ಇದೆ. ಮಚ್ಚಿನಿಂದ ತಲೆಗೆ ಹೊಡೆದು ಮುಖ ವಿಕಾರಗೊಳಿಸಿದ್ದಾರೆ. ಸ್ಥಳದಲ್ಲೇ ಮಹೇಶ್ ಮೃತಪಟ್ಟಿದ್ದಾನೆ. ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಪ್ರತೀಕಾರಕ್ಕಾಗಿ ಕಾಯುತ್ತಿದ್ದ ಮಹೇಶ್

'ಹಾಸನದಲ್ಲಿ 2019ರಲ್ಲಿ ರೌಡಿ ಲಿಂಗನ ಕೊಲೆ ಆಗಿತ್ತು. ರೌಡಿ ವಿಲ್ಸನ್ ಗಾರ್ಡನ್ ನಾಗ ಹಾಗೂ ಸಹಚರರು ಕೃತ್ಯ ಎಸಗಿದ್ದರು. ಲಿಂಗನ ಸಹಚರನಾಗಿದ್ದ ಮಹೇಶ್, ನಾಗ ಹಾಗೂ ಇತರರನ್ನು ಕೊಂದು ಪ್ರತೀಕಾರ ತೀರಿಸಿಕೊಳ್ಳಲು ಕಾಯುತ್ತಿದ್ದ. ಅದು ತಿಳಿಯುತ್ತಿದ್ದಂತೆ ನಾಗ ಹಾಗೂ ಇತರರು, ಮಹೇಶ್ ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ' ಎಂದರು.

2 ಕೊಲೆ ಸೇರಿ 11 ಪ್ರಕರಣ ದಾಖಲು

'ಸಿದ್ದಾಪುರ ಠಾಣೆ ರೌಡಿ ಪಟ್ಟಿಯಲ್ಲಿ ಮಹೇಶ್ ಹೆಸರಿತ್ತು. 2 ಕೊಲೆ ಸೇರಿದಂತೆ 11 ಪ್ರಕರಣ ಈತನ ವಿರುದ್ಧ ದಾಖಲಾಗಿದ್ದವು' ಎಂದು ಪೊಲೀಸರು ತಿಳಿಸಿದರು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ಸ್ವಯಂಪ್ರೇರಿತ ದೂರು

ಅತ್ಯಾಚಾರ: ಶಾಲೆ ಮುಚ್ಚಲು ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತೂರು ಠಾಣೆ ವ್ಯಾಪ್ತಿಯಲ್ಲಿರುವ ಶಾಲೆಯೊಂದರ 10 ವರ್ಷದ ವಿದ್ಯಾರ್ಥಿನಿ ಮೇಲೆ ನಡೆದಿರುವ ಅತ್ಯಾಚಾರ ಪ್ರಕರಣ ಸಂಬಂಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಶಾಲೆ ಬಂದ್ ಮಾಡಲು ಶಿಕ್ಷಣ ಇಲಾಖೆಗೆ ಶಿಫಾರಸು ಮಾಡಿದೆ.

ಶಾಲೆಯ 2ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕಿಯನ್ನು ಮನೆಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ ಆರೋಪದಡಿ ಪ್ರಾಂಶುಪಾಲ ಲ್ಯಾಂಬರ್ಟ್ ಪುಷ್ಪರಾಜ್ (65) ಅವರನ್ನು ಈಗಾಗಲೇ ಪೊಲೀಸರು ಬಂಧಿಸಿದ್ದಾರೆ. ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಕೃತ್ಯದ ಬಗ್ಗೆ ಮಾಹಿತಿ ಪಡೆದ ಆಯೋಗದ ಅಧ್ಯಕ್ಷ ಕೆ. ನಾಗಣ್ಣ ಗೌಡ, ಸದಸ್ಯ ಶಶಿಧರ ಕೋಸಂಬಿ ನೇತೃತ್ವದ ತಂಡ, ಸಂತ್ರಸ್ತ ಬಾಲಕಿ ಮನೆ ಹಾಗೂ ಶಾಲೆಗೆ ಶನಿವಾರ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿತು. ಬೆಂಗಳೂರು ಪೂರ್ವ ತಾಲ್ಲೂಕಿನ ದಕ್ಷಿಣ ವಲಯ–4ರ ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ಆರ್. ರಾಮಮೂರ್ತಿ, ಮಕ್ಕಳ ಕಲ್ಯಾಣ ಅಧಿಕಾರಿ ಶಿವಕುಮಾರ್ ಜೊತೆಗಿದ್ದರು.

ವರ್ತೂರು ಠಾಣೆ ಪಿಎಸ್‌ಐ ಶ್ರೀನಿವಾಸ್ ಶಿರೂರ, ಶಾಲೆಯಲ್ಲಾದ ಕೃತದ ಬಗ್ಗೆ ತಂಡಕ್ಕೆ ವಿವರಣೆ ನೀಡಿದರು. ತಂಡದ ಸದಸ್ಯರು, ಅದನ್ನು ದಾಖಲಿಸಿಕೊಂಡರು.

ಭೇಟಿ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಕೆ. ನಾಗಣ್ಣಗೌಡ, 'ಸಂತ್ರಸ್ತ ವಿದ್ಯಾರ್ಥಿನಿ ಹಾಗೂ ಪೋಷಕರಿಗೆ ಸಾಂತ್ವನ ಹೇಳಲಾಗಿದೆ. ಕೃತ್ಯ ನಡೆದಿರುವ ಶಾಲೆ ಬಂದ್ ಮಾಡಿಸುವಂತೆ ಶಿಕ್ಷಣ ಇಲಾಖೆಗೆ ಶಿಫಾರಸು ಮಾಡಲಾಗಿದೆ. ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದರು.

'ಶಾಲೆಯಲ್ಲಿ 1ರಿಂದ 10ನೇ ತರಗತಿಯವರೆಗೆ 140 ಮಕ್ಕಳು ಓದುತ್ತಿದ್ದಾರೆ. ಏಕಾಏಕಿ ಶಾಲೆ ಮುಚ್ಚಿದರೆ ಅವರಿಗೆ ಸಮಸ್ಯೆಯಾಗಲಿದೆ. ಹೀಗಾಗಿ, ಶಿಕ್ಷಣ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ಸೋಮವಾರ (ಆ. 7) ಪೋಷಕರ ಸಭೆ ನಡೆಸಲಾಗುವುದು. ಮಕ್ಕಳನ್ನು ಬೇರೆ ಶಾಲೆಗಳಿಗೆ ಸೇರಿಸಲು ಎಲ್ಲ ವ್ಯವಸ್ಥೆ ಮಾಡಲಾಗುವುದು' ಎಂದು ತಿಳಿಸಿದರು.



ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ. ನಾಗಣ್ಣಗೌಡ ನೇತೃತ್ವದ ತಂಡ ಶಾಲೆಗೆ ಶನಿವಾರ ಭೇಟಿ ನೀಡಿ ಪೊಲೀಸರಿಂದ ಮಾಹಿತಿ ಪಡೆದುಕೊಂಡಿತು

'ಶಾಲೆ ಕಟ್ಟಡದ ಮೇಲೆಯೇ ಆರೋಪಿ ಮನೆ'

ಶಾಲೆ ಕಟ್ಟಡದ ಮೊದಲ ಮಹಡಿಯಲ್ಲಿರುವ ಆರೋಪಿ ಪುಷ್ಪರಾಜ್ ಮನೆಗೂ ಭೇಟಿ ನೀಡಿದ ಆಯೋಗದ ತಂಡ, ಹೆಚ್ಚಿನ ಮಾಹಿತಿ ಕಲೆಹಾಕಿತು.

'ಶಾಲೆ ಕಟ್ಟಡದ ಮೇಲೆಯೇ ಪ್ರಾಂಶುಪಾಲ ಮನೆ ಇದೆ. ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆಯಾ' ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ಪ್ರಶ್ನಿಸಿದರು. ಜೊತೆಗೆ, ತ್ವರಿತವಾಗಿ ಶಾಲೆಯನ್ನು ಮುಚ್ಚಲು ಕ್ರಮ ಕೈಗೊಳ್ಳಿ ಎಂದು ಶಿಫಾರಸು ಮಾಡಿದರು.

ಅಧಿಕಾರಿಗೆ ವಿಡಿಯೊ ಕರೆ: ₹6.80 ಲಕ್ಷ ಸುಲಿಗೆ



ಬೆಂಗಳೂರು: ಸರ್ಕಾರಿ ಅಧಿಕಾರಿಯೊಬ್ಬರ ಬೆತ್ತಲೆ ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡಿ ₹6.80 ಲಕ್ಷ ಸುಲಿಗೆ ಮಾಡಲಾಗಿದ್ದು, ಈ ಸಂಬಂಧ ನಗರದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಲ್ಲೇಶ್ವರ ನಿವಾಸಿಯಾಗಿರುವ ದೂರುದಾರ, ಕಮಿಷನರ್ ಬಿ. ದಯಾನಂದ್ ಅವರನ್ನು ಭೇಟಿಯಾಗಿ ದೂರು ಸಲ್ಲಿಸಿದ್ದಾರೆ. ಅದೇ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ದೂರುದಾರ ಈ ಹಿಂದೆ ಮುಖ್ಯಮಂತ್ರಿಯೊಬ್ಬರ ವಿಶೇಷ ಕರ್ತವ್ಯ ಅಧಿಕಾರಿಯಾಗಿ ಕೆಲಸ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಾರಾಷ್ಟ್ರದ ನಾಸಿಕ್‌ನಲ್ಲಿರುವ ಅತಿಥಿಗೃಹವೊಂದಕ್ಕೆ ಜೂನ್ 12ರಂದು ಹೋಗಿದ್ದರು. ಅದೇ ಸಂದರ್ಭದಲ್ಲಿ ವಿಡಿಯೊ ಕರೆ ಮಾಡಿದ್ದ ಯುವತಿಯೊಬ್ಬರು, ಲೈಂಗಿಕವಾಗಿ ಪ್ರಚೋದಿಸಿ ದೃಶ್ಯ ಚಿತ್ರೀಕರಿಸಿಕೊಂಡಿದ್ದರು. ಮರುದಿನ ಮೊಬೈಲ್‌ಗೆ ವಿಡಿಯೊ ಕಳುಹಿಸಿದ್ದ ಯುವತಿ, 'ನಿಮ್ಮ ಬೆತ್ತಲೆ ವಿಡಿಯೊ ನನ್ನ ಬಳಿ ಇದೆ. ಅಳಿಸಿಹಾಕಲು ಹಣ ನೀಡಬೇಕು. ಇಲ್ಲದಿದ್ದರೆ, ಸಾಮಾಜಿಕ ಮಾಧ್ಯಮಗಳಲ್ಲಿ ವಿಡಿಯೊ ಅಪ್‌ಲೋಡ್ ಮಾಡುತ್ತೇನೆ' ಎಂದು ಬೆದರಿಸಿದ್ದರು'

'ಹೆದರಿದ್ದ ದೂರುದಾರ, ಆರಂಭದಲ್ಲಿ ₹ 1.50 ಲಕ್ಷ ನೀಡಿದ್ದರು. ಸಿಬಿಐ ಅಧಿಕಾರಿ ಹೆಸರಿನಲ್ಲೂ ಕರೆ ಮಾಡಿದ್ದ ಯುವತಿ ಕಡೆಯವರು, ಹಣಕ್ಕೆ ಬೇಡಿಕೆ ಇರಿಸಿದ್ದರು. ಇದರಿಂದಾಗಿ ದೂರುದಾರ, ಹಂತ ಹಂತವಾಗಿ ಒಟ್ಟು ₹ 6.80 ಲಕ್ಷ ನೀಡಿದ್ದರು.

ಆರೋಪಿಗಳು ಪುನಃ ಹಣ ಕೇಳುತ್ತಿದ್ದಂತೆ, ಬೇಸತ್ತು ದೂರು ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸ್ಫೋಟಕ್ಕೆ ಸಂಚು: ಶಂಕಿತರು ನ್ಯಾಯಾಂಗ ಬಂಧನಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಸಿಸಿಬಿ ಪೊಲೀಸರು ಬಂಧಿಸಿದ್ದ ಆರು ಶಂಕಿತ ಉಗ್ರರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸುಲ್ತಾನ್‌ಪಾಳ್ಯದ ಮನೆಯೊಂದರ ಮೇಲೆ ಜುಲೈ 1ರಂದು ದಾಳಿ ಮಾಡಿದ್ದ ಸಿಸಿಬಿ ಪೊಲೀಸರು, ಶಂಕಿತರಾದ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ, ಹಾಗೂ ಮೊಹಮ್ಮದ್ ಉಮರ್‌ನನ್ನು ಬಂಧಿಸಿದ್ದರು. ಇವರ ಹೇಳಿಕೆ ಆಧರಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಬಾಂಬ್ ಸ್ಫೋಟ ಪ್ರಕರಣ ಅಪರಾಧಿ ಟಿ. ನಾಸೀರ್‌ನನ್ನು ಕಸ್ಟಡಿಗೆ ಪಡೆದಿದ್ದರು.

ಆರು ಶಂಕಿತ ಉಗ್ರರ ಕಸ್ಟಡಿ ಅವಧಿ ಮುಗಿದಿದ್ದರಿಂದ ಅವರೆಲ್ಲರನ್ನೂ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಶನಿವಾರ ಹಾಜರುಪಡಿಸಲಾಯಿತು. ವಿಚಾರಣೆ ನಡೆಸಿದ ನ್ಯಾಯಾಧೀಶರು, ಶಂಕಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ಹೊರಡಿಸಿದೆ.

ತನಿಖೆ ಮುಂದುವರಿಕೆ: '6ಶಂಕಿತರನ್ನು ವಿಚಾರಣೆ ನಡೆಸಿಸಾಕಷ್ಟು ಮಾಹಿತಿ ಕಲೆಹಾಕಲಾಗಿದೆ. ಅದರನ್ವಯ ತನಿಖೆ ಮುಂದುವರಿಸಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಪ್ರಕರಣದಲ್ಲಿ ಇನ್ನು ಹಲವರು ಭಾಗಿಯಾಗಿರುವ ಶಂಕೆ ಇದೆ. ಹಣದ ವಹಿವಾಟು ನಡೆದಿದ್ದು, ಈ ಬಗ್ಗೆಯೂ ಮಾಹಿತಿ ಪಡೆಯಬೇಕಿದೆ' ಎಂದು ತಿಳಿಸಿವೆ.

ಸ್ನೇಹಿತೆ ತಲೆಗೆ ರಾಡ್‌ನಿಂದ ಹಲ್ಲೆ ನಡೆಸಿದ ಟೆಕಿ

ಬೆಂಗಳೂರು: ಮೈಕೊ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಸ್ನೇಹಾ ಅವರ ತಲೆಗೆ ರಾಡ್‌ನಿಂದ ಹೊಡೆದು ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ರವಿಕುಮಾರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಸ್ನೇಹಾ, ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್. ಆರೋಪಿ ರವಿಕುಮಾರ್ ಸಹ ಸಾಫ್ಟ್‌ವೇರ್ ಎಂಜಿನಿಯರ್. ಗಾಯಗೊಂಡಿರುವ ಸ್ನೇಹಾ ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಸ್ನೇಹಾ ಹಾಗೂ ರವಿಕುಮಾರ್, ಇಂದಿರಾನಗರದಲ್ಲಿರುವ ಕಂಪನಿಯೊಂದರಲ್ಲಿ ಕೆಲ ತಿಂಗಳು ಒಟ್ಟಿಗೆ ಕೆಲಸ ಮಾಡಿದ್ದರು. ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದರೆಂದು ಗೊತ್ತಾಗಿದೆ. ಬೇರೆ ಕಂಪನಿಗೆ ಕೆಲಸಕ್ಕೆ ಸೇರಿದ್ದ ಸ್ನೇಹಾ, ರವಿಕುಮಾರ್ ಜೊತೆ ಮಾತನಾಡುತ್ತಿರಲಿಲ್ಲ. ಕರೆ ಸ್ವೀಕರಿಸುತ್ತಿರಲಿಲ್ಲ. ಇದರಿಂದ ಸಿಟ್ಟಾದ ಆರೋಪಿ, ಆಗಸ್ಟ್ 2ರಂದು ಸ್ನೇಹಾ ಅವರ ತಲೆಗೆ ರಾಡ್‌ನಿಂದ ಹೊಡೆದು ಪರಾರಿಯಾಗಿದ್ದ. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಷೇರು ವ್ಯವಹಾರದಲ್ಲಿ ನಷ್ಟ: ಪತ್ನಿ, ಮಕ್ಕಳ ಕೊಲೆ?

ಬೆಂಗಳೂರು: ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಕೊಂದು ಸಾಫ್ಟ್‌ವೇರ್ ಎಂಜಿನಿಯರ್ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಕಾಡುಗೋಡಿ ಪೊಲೀಸರು, ಕೃತ್ಯಕ್ಕೆ ಕಾರಣವೇನು ಎಂಬುದನ್ನು ಪತ್ತೆ ಮಾಡುತ್ತಿದ್ದಾರೆ. 'ವಿಜಯ್ ಅವರ ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಪರಿಶೀಲನೆ ನಡೆಸಲಾಗಿದೆ. ಷೇರು ವ್ಯವಹಾರದಲ್ಲಿ ಹಣ ತೊಡಗಿಸುತ್ತಿದ್ದ ವಿಜಯ್, ಅದರಿಂದ ನಷ್ಟ ಅನುಭವಿಸಿದ್ದರು. ಷೇರು ವ್ಯವಹಾರಕ್ಕಾಗಿ ಹಲವರ ಬಳಿ ಸಾಲ ಮಾಡಿದ್ದರು. ಸಾಲ ತೀರಿಸಲು ಸಂಬಳ ಸಾಲುತ್ತಿರಲಿಲ್ಲ. ಇದರಿಂದಾಗಿ ಅವರು ಖಿನ್ನತೆಗೆ ಒಳಗಾಗಿದ್ದರೆಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ನಿಧನ ವಾರ್ತೆ

ಎನ್.ಎಂ. ಮುನಿಯಪ್ಪ



ಬೆಂಗಳೂರು: ನಿವೃತ್ತ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಎನ್.ಎಂ. ಮುನಿಯಪ್ಪ (75) ನಗರದಲ್ಲಿ ಶನಿವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರು ಇದ್ದಾರೆ.

ಮುನಿಯಪ್ಪ ಅವರಿಗೆ ರಾಷ್ಟ್ರಪತಿ ಹಾಗೂ ಮುಖ್ಯಮಂತ್ರಿ ಪದಕಗಳು ಲಭಿಸಿದ್ದವು. ಬೆಂಗಳೂರು ಕಮಿಷನರೇಟ್ ವ್ಯಾಪ್ತಿ, ಪೊಲೀಸ್ ಪ್ರಧಾನ ಕಚೇರಿಯಲ್ಲಿ ಗುಪ್ತದಳದ ಪಿಎಸ್‌ಐ ಆಗಿ ಮಾಡಿ 2006ರಲ್ಲಿ ನಿವೃತ್ತರಾಗಿದ್ದರು. ಕೆಲ ವರ್ಷ ಸಿಬಿಐ ಕಚೇರಿಯಲ್ಲೂ ಕೆಲಸ ಮಾಡಿದ್ದರು.

ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಮಾನಸಿಕ ಸಮಸ್ಯೆಗಳಿಗೆ 'ಟೆಲಿ ಮನಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲಾ ರೀತಿಯ ಮಾನಸಿಕ ಸಮಸ್ಯೆಗಳಿಗೆ 'ಟೆಲಿ ಮನಸ್' ಸಹಾಯವಾಣಿ ಮೂಲಕ 20 ಭಾಷೆಗಳಲ್ಲಿ ಸೇವೆ ಒದಗಿಸಲಾಗುತ್ತಿದ್ದು, ಇದರ ಪ್ರಯೋಜನ ಪಡೆದುಕೊಳ್ಳಬೇಕು' ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ತಿಳಿಸಿದೆ.

'ಟೆಲಿ ಮನಸ್ ಯೋಜನೆ ಆರಂಭಕ್ಕೆ ಕರ್ನಾಟಕದ ಇ-ಮನಸ್ ಸೇವೆ ಪ್ರೇರಣೆ. ಕೋವಿಡ್ ಸಂಕಷ್ಟದ ವೇಳೆ ಈ ಯೋಜನೆ ಪ್ರಾರಂಭಿಸಿ, ಸಾವಿರಾರು ಮಂದಿಗೆ ದೂರವಾಣಿ ಮೂಲಕ ಸಲಹೆ ನೀಡಲಾಯಿತು. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಟೆಲಿ ಮನಸ್ ಸೆಲ್ ಸ್ಥಾಪಿಸಿ, ಅದರ ಮೂಲಕ ಆಪ್ತ ಸಮಾಲೋಚನ ಸೇವೆ ನೀಡಲಾಗುವುದು. ಮಾನಸಿಕ ತಜ್ಞರ ಕೊರತೆ ನೀಗಿಸಲು ಈ ಯೋಜನೆ ಸಹಕಾರಿ' ಎಂದು ಹೇಳಿದೆ.

'ವ್ಯಥೆಗೆ ಒಳಪಟ್ಟವರು, ಕೌಟುಂಬಿಕ ಸಮಸ್ಯೆಗೆ ಒಳಗಾದವರು, ಶೈಕ್ಷಣಿಕ ಒತ್ತಡಕ್ಕೆ ಒಳಗಾದವರು, ಆತ್ಮಹತ್ಯೆಯ ಆಲೋಚನೆ ಮಾಡುತ್ತಿರುವವರು, ಮಾದಕ ವಸ್ತುಗಳ ಸೇವನೆಯ ವ್ಯಸನಕ್ಕೆ ಒಳಗಾದವರು, ಜ್ಞಾಪಕ ಶಕ್ತಿ ತೊಂದರೆ ಇರುವವರು, ಆರ್ಥಿಕ ಒತ್ತಡದಲ್ಲಿ ಇರುವವರು ಸೇರಿ ಇತರೆ ಮಾನಸಿಕ ಸಮಸ್ಯೆ ಎದುರಿಸುತ್ತಿರುವವರು ಶುಲ್ಕ ರಹಿತ ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದು' ಎಂದು ತಿಳಿಸಲಾಗಿದೆ.

'ಸಂಸ್ಥೆಯ ಬೆಂಗಳೂರು ಹಾಗೂ ಧಾರವಾಡದ ಕೇಂದ್ರದಲ್ಲಿ ಟೆಲಿ ಮನಸ್ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಬೆಳಿಗ್ಗೆ 9ರಿಂದ ಸಂಜೆ 5 ರವರೆಗೆ ದೂರವಾಣಿ ಕರೆಗಳನ್ನು ಸ್ವೀಕರಿಸಲಾಗುತ್ತಿದೆ' ಎಂದು ಪ್ರಕಟಣೆ ತಿಳಿಸಿದೆ.

ಟೆಲಿ ಮನಸ್ ಸಹಾಯವಾಣಿ: 14416

ಮುಖ್ಯಾಂಶಗಳು

- 20 ಭಾಷೆಗಳಲ್ಲಿ ಸೇವೆ
- ಮಾನಸಿಕ ತಜ್ಞರ ಕೊರತೆ ನೀಗಿಸುವ ಯೋಜನೆ
- ಶುಲ್ಕ ರಹಿತ ದೂರವಾಣಿ ಕರೆಗೆ ಅವಕಾಶ

ನಿಗಮಗಳಿಗೆ ಸಾರಿಗೆ ಸಿಬ್ಬಂದಿ ಹಂಚಿಕೆ

ಬೆಂಗಳೂರು: ಸಾರಿಗೆಯ ನಾಲ್ಕು ನಿಗಮಗಳಿಗೆ ಪ್ರಥಮ ಬಾರಿಗೆ ಕೌನ್ಸೆಲಿಂಗ್ ಮೂಲಕ ಸಿಬ್ಬಂದಿಯನ್ನು ಹಂಚಿಕೆ ಮಾಡಲಾಯಿತು.

ಮೇಲ್ವಿಚಾರಕರು, ಅಧಿಕಾರಿಗಳು ಹಾಗೂ ಕಿರಿಯ ಅಧಿಕಾರಿಗಳನ್ನು ಅವರ ಇಚ್ಛೆಯಂತೆ ಹಂಚಿಕೆ ಮಾಡಲಾಗಿದೆ. 2,525 ಅಧಿಕಾರಿಗಳಲ್ಲಿ 2,380 ಮಂದಿ ಶಾಶ್ವತ ಹಂಚಿಕೆಯಾದರು. ಉಳಿದ 145 ಅಧಿಕಾರಿಗಳಿಗೆ ಪಾರದರ್ಶಕವಾಗಿ ಮತ್ತೆ ಕೌನ್ಸೆಲಿಂಗ್ ಮಾಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಮತ್ತು ಹಂಚಿಕೆ ಪ್ರಕ್ರಿಯೆಯ ಅಧಿಕಾರಯುತ ಸಮಿತಿ ಅಧ್ಯಕ್ಷರೂ ಆಗಿರುವ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಶನಿವಾರ ಸಾಂಕೇತಿಕವಾಗಿ ತಾಂತ್ರಿಕ ಇಲಾಖೆಯ ಮೇಲ್ವಿಚಾರಕ ಸಿಬ್ಬಂದಿ ಎಂ.ಜಿ. ಮೋಗಣ್ಣಗೌಡ, ಪ್ರದೀಪ್ ಕುಮಾರ್, ಆರ್.ಎ. ಕುಪ್ಪೇಲೂರ್ ಹಾಗೂ ನಳಿನಾಕ್ಷಿ ಎನ್. ಅವರಿಗೆ ಹಂಚಿಕೆ ಪತ್ರ ವಿತರಿಸಿದರು.


ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಸಾರಿಗೆ ತಾಂತ್ರಿಕ ಇಲಾಖೆಯ ಮೇಲ್ವಿಚಾರಕ ಸಿಬ್ಬಂದಿ ನಳಿನಾಕ್ಷಿ ಎನ್. ಅವರಿಗೆ ಹಂಚಿಕೆ ಪತ್ರ ವಿತರಿಸಿದರು. ಕೆಎಸ್‌ಆರ್‌ಟಿಸಿ ಎಂಡಿ ವಿ. ಅನ್ಬುಕುಮಾರ್ ಇದ್ದರು

'ಕರ್ನಾಟಕ' ನಾಮಕರಣಗೊಂಡು 50 ವರ್ಷ ● ವರ್ಷಪೂರ್ತಿ ಕಾರ್ಯಕ್ರಮ ಆಯೋಜನೆ

ಸುವರ್ಣ ಸಂಭ್ರಮಕ್ಕಿಲ್ಲ ಅನುದಾನ

● ವರುಣ ಹೆಗಡೆ

ಬೆಂಗಳೂರು: ರಾಜ್ಯವು 'ಕರ್ನಾಟಕ'ವೆಂದು ನಾಮಕರಣಗೊಂಡು 50 ವರ್ಷ ಪೂರ್ಣಗೊಳಿಸುತ್ತಿರುವುದರಿಂದ ಇಡೀ ವರ್ಷ ಕಾರ್ಯಕ್ರಮ ನಡೆಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯೋಜನೆ ರೂಪಿಸಿದೆ. ಆದರೆ, ಇದೇ ವೇಳೆ ಇಲಾಖೆಗೆ ಹೆಚ್ಚುವರಿ ಅನುದಾನ ನೀಡದಿರುವುದು ಸಾಂಸ್ಕೃತಿಕ ವಲಯದ ಅಸಮಾಧಾನಕ್ಕೆ ಕಾರಣವಾಗಿದೆ.

ಬರ, ಪ್ರವಾಹ, ಕೋವಿಡ್ ಸೇರಿ ವಿವಿಧ ಕಾರಣಗಳಿಂದ ಪ್ರತಿವರ್ಷ ಇಲಾಖೆಯ ವಾರ್ಷಿಕ ಅನುದಾನಗಳಿಗೆ ಕತ್ತರಿ ಹಾಕಲಾಗುತ್ತಿದೆ. ಇದರಿಂದ ಸಾಂಸ್ಕೃತಿಕ ಲೋಕ ಬಡವಾಗುತ್ತಿದೆ ಎಂಬ ಆರೋಪಗಳಿವೆ. ಇಲಾಖೆಗೆ ಹಂಚಿಕೆ ಮಾಡಿದ ಅನುದಾನದಲ್ಲಿ ಅರ್ಧದಷ್ಟು ಹಣ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವೇತನ ಮತ್ತು ಸಾರಿಗೆ ವೆಚ್ಚಕ್ಕೆ ಬಳಕೆಯಾಗುತ್ತದೆ. ಹೀಗಾಗಿ, ಹೊಸ ಯೋಜನೆಗಳು ಕಷ್ಟಸಾಧ್ಯವಾಗಿದ್ದು, ಹಳೆ ಯೋಜನೆಗಳು ಕುಂಟುತ್ತಾ ಸಾಗುತ್ತಿವೆ.

2020–21 ಹಾಗೂ 2021–22ನೇ ಸಾಲಿನಲ್ಲಿ ಕೋವಿಡ್ ಕಾರಣ ಇಲಾಖೆಗೆ ಅನುದಾನ ಕಡಿತ ಮಾಡಲಾಗಿತ್ತು. ಕಳೆದ ಸಾಲಿನಲ್ಲಿ ಬಹುತೇಕ ಅಕಾಡೆಮಿಗಳಿಗೆ ಕಾರ್ಯಕಾರಿ ಸಮಿತಿ ಇರಲಿಲ್ಲ. ಇಲಾಖೆಯೂ ವಿಶೇಷ ಯೋಜನೆಗಳನ್ನು ಹಮ್ಮಿಕೊಂಡಿರಲಿಲ್ಲ. ಈ ಸಾಲಿನಲ್ಲಿ ಇಲಾಖೆಯು 'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಎಂಬ ಯೋಜನೆ ಹಮ್ಮಿಕೊಂಡಿದೆ. ಇದನ್ನು ಬಜೆಟ್‌ನಲ್ಲಿಯೂ ಘೋಷಿಸಲಾಗಿದ್ದು, ಇದಕ್ಕೆ ಪ್ರತ್ಯೇಕ ಅನುದಾನ ಇರಿಸಿಲ್ಲ. ಅಕಾಡೆಮಿಗಳ ಕಾರ್ಯಕಾರಿ ಸಮಿತಿಗೆ ಕೂಡ ಶೀಘ್ರದಲ್ಲಿಯೇ ನೇಮಕಾತಿ ನಡೆಯಲಿದೆ.

ಹಂತ ಹಂತವಾಗಿ ಕಡಿತ: ಈ ಬಾರಿ ಇಲಾಖೆಗೆ ₹ 237 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. 2017-18 ನೇ ಸಾಲಿನಲ್ಲಿ ₹ 367 ಕೋಟಿ ನೀಡಲಾಗಿತ್ತು. ಅಲ್ಲಿಯವರೆಗೆ ವಿಶೇಷ ಯೋಜನೆಗಳಿಗೆ ಹೆಚ್ಚುವರಿಯಾಗಿ ಅನುದಾನವನ್ನೂ ಒದಗಿಸಲಾಗುತ್ತಿತ್ತು. ಬಳಿಕ ಹಂತ–ಹಂತವಾಗಿ ಅನುದಾನ ಕಡಿತ ಮಾಡಲಾಗಿದೆ. ಈ ಬಾರಿ 'ಶಕ್ತಿ' ಸೇರಿ ವಿವಿಧ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಹೊಂದಿಸುವ ಸಂಬಂಧ ಸಂಸ್ಕೃತಿ ಇಲಾಖೆಗೆ ಹೆಚ್ಚುವರಿ ಅನುದಾನ ನೀಡಿಲ್ಲ ಎನ್ನುವುದು ಇಲಾಖೆ ಮೂಲಗಳಿಂದ ತಿಳಿದು ಬಂದಿದೆ.

'ಕೆಲ ವರ್ಷಗಳಿಂದ ಇಲಾಖೆಗೆ ನೀಡುವ ಅನುದಾನ ಕಡಿತ ಮಾಡಲಾಗುತ್ತಿದೆ. ಇದರಿಂದ ಇಲಾಖೆಯ ವಾರ್ಷಿಕ ಕಾರ್ಯ-ಚಟುವಟಿಕೆಗಳಿಗೆ ಅನುದಾನ ಹೊಂದಿಸುವುದೂ ಕಷ್ಟವಾಗಲಿದೆ. ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಅನುದಾನದ ವಿಚಾರವಾಗಿ ನಮ್ಮೊಂದಿಗೆ ವಾಗ್ವಾದ ಮಾಡುತ್ತಾರೆ. ಅವರನ್ನು ಸಮಾಧಾನ ಮಾಡುವುದೇ ಸವಾಲಾಗಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಕೇಂದ್ರಗಳಿಗೂ ಕಡಿತ ಸಾಧ್ಯತೆ

ಸಂಸ್ಕೃತಿ ಇಲಾಖೆಯಡಿ ನಾಟಕ, ಲಲಿತ ಕಲೆ, ಸಾಹಿತ್ಯ ಸೇರಿ 14 ಅಕಾಡೆಮಿ, ಮೂರು ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ. ಅದೇ ರೀತಿ, 24 ಪ್ರತಿಷ್ಠಾನಗಳು, 6 ರಂಗಾಯಣಗಳು 2 ಸಂಶೋಧನಾ ಕೇಂದ್ರಗಳಿವೆ. 32 ಜಯಂತಿಗಳನ್ನೂ ಆಚರಿಸಲಾಗುತ್ತಿದೆ. ರಾಜ್ಯೋತ್ಸವ ಸೇರಿ ವಿವಿಧ ವಾರ್ಷಿಕ ಪ್ರಶಸ್ತಿಗಳು ತಲಾ ₹ 5 ಲಕ್ಷ ನಗದು ಹೊಂದಿವೆ. ಧನಸಹಾಯದಂತಹ ವಾರ್ಷಿಕ ಯೋಜನೆಗಳಡಿ ಸಂಘ–ಸಂಸ್ಥೆಗಳಿಗೆ ಅನುದಾನ ಒದಗಿಸಬೇಕಿದೆ. ಈ ಬಾರಿಯೂ ಇಲಾಖೆಯು ವಿವಿಧ ಅಕಾಡೆಮಿಗಳು, ಸಾಂಸ್ಕೃತಿಕ ಕೇಂದ್ರಗಳಿಗೆ ಅನುದಾನ ಕಡಿತಗೊಳಿಸುವ ಸಾಧ್ಯತೆಯಿದೆ ಎನ್ನಲಾಗಿದೆ.

ಸಂಸ್ಕೃತಿ ಇಲಾಖೆಗೆ ನೀಡಲಾದ ಅನುದಾನ

ವರ್ಷ	ಅನುದಾನ
2017-18	₹ 367 ಕೋಟಿ
2018-19	₹279 ಕೋಟಿ
2019-20	₹225 ಕೋಟಿ
2020-21	₹188 ಕೋಟಿ
2021-22	₹179 ಕೋಟಿ
2022-23	₹199 ಕೋಟಿ
2023-24	₹237 ಕೋಟಿ



ವರ್ಷಪೂರ್ತಿ ಕಾರ್ಯಕ್ರಮ, ಯೋಜನೆಗಳಿಗೆ ಅನುದಾನ ಹೊಂದಿಸಲಾಗುತ್ತದೆ. ಅಗತ್ಯವಿದ್ದಲ್ಲಿ ಸರ್ಕಾರ ಹೆಚ್ಚುವರಿ ಅನುದಾನ ಒದಗಿಸುತ್ತದೆ.
ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ



ಕಲೆ, ಸಂಸ್ಕೃತಿಗೆ ಸರ್ಕಾರಗಳು ಆದ್ಯತೆ ನೀಡುತ್ತಿಲ್ಲ. ಹಿಂದೆ ಕೋವಿಡ್ ಕಾರಣ ನೀಡಿ ಅನುದಾನ ಕಡಿತ ಮಾಡಲಾಗಿತ್ತು. ಸರ್ಕಾರಗಳ ನಡೆ ಬೇಸರವನ್ನುಂಟು ಮಾಡಿದೆ.
ಜೆ. ಲೋಕೇಶ್, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ



ಅಭಿವೃದ್ಧಿಯ ಪರಿಕಲ್ಪನೆ ಬದಲಾಗಬೇಕು. ಅನ್ನದಷ್ಟೇ ಆನಂದವೂ ಮುಖ್ಯ. ಸರ್ಕಾರಗಳಿಂದ ಕೃಷಿ ಬಜೆಟ್ ಮಾದರಿ ಸಂಸ್ಕೃತಿ ಬಜೆಟ್ ಮಂಡನೆ ಆಗಬೇಕು.
ಬಿ.ವಿ. ವಸಂತ ಕುಮಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಜಿ ಅಧ್ಯಕ್ಷ

'ಪ್ರಭಾರ' ಡಿಜಿ–ಐಜಿಪಿ ಇನ್ನು ಕಾಯಂ

ಪ್ರಜಾವಾಣಿ ವಾರ್ತೆ


ಅಲೋಕ್ ಮೋಹನ್

ಬೆಂಗಳೂರು: ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಿಕೊಂಡಿದ್ದ ಅಲೋಕ್ ಮೋಹನ್ ಅವರನ್ನು ಅದೇ ಹುದ್ದೆಗೆ ಕಾಯಂ ಮಾಡಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

2020 ಜನವರಿ 31ರಂದು ರಾಜ್ಯದ 41ನೇ ಡಿಜಿ–ಐಜಿಪಿ ಆಗಿ ಅಧಿಕಾರ ವಹಿಸಿಕೊಂಡಿದ್ದ ಪ್ರವೀಣ್ ಸೂದ್ ಅವರನ್ನು ಕೇಂದ್ರೀಯ ತನಿಖಾ ತನಿಖಾ ದಳದ (ಸಿಬಿಐ) ನೂತನ ನಿರ್ದೇಶಕರಾಗಿ ಮೇ ತಿಂಗಳಿನಲ್ಲಿ ನೇಮಕ ಮಾಡಲಾಗಿತ್ತು. ಇದರಿಂದಾಗಿ ತೆರವಾಗಿದ್ದ ಡಿಜಿ–ಐಜಿಪಿ ಹುದ್ದೆಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಆಗಿದ್ದ ಅಲೋಕ್ ಮೋಹನ್ ಅವರನ್ನು ಪ್ರಭಾರಿಯಾಗಿ ನಿಯೋಜಿಸಲಾಗಿತ್ತು.

ಮೇ 22ರಂದು ಅಧಿಕಾರ ವಹಿಸಿಕೊಂಡಿರುವ ಅಲೋಕ್ ಮೋಹನ್ ಅವರನ್ನು ರಾಜ್ಯದ 42ನೇ ಡಿಜಿ– ಐಜಿಪಿ ಆಗಿ ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸುದ್ದಿ 2 ನಿಮಿಷ

ಚಂದ್ರನ ಕಕ್ಷೆ ಸೇರಿದ ಗಗನ ನೌಕೆ

ನವದೆಹಲಿ: ಮೂರು ವಾರಗಳಲ್ಲಿ ಬಾಹ್ಯಾಕಾಶದಲ್ಲಿ 3 ಲಕ್ಷಕ್ಕೂ ಅಧಿಕ ಕಿ.ಮೀ. ಕ್ರಮಿಸಿದ ನಂತರ 'ಚಂದ್ರಯಾನ–3' ಗಗನನೌಕೆಯು ಶನಿವಾರ ಚಂದ್ರನ ಕಕ್ಷೆ ಯಶಸ್ವಿಯಾಗಿ ಸೇರಿತು.

'ಚಂದ್ರಯಾನ–3 ನೌಕೆಯನ್ನು ಚಂದ್ರನ ಕಕ್ಷೆಗೆ ಸೇರಿಸುವ ಕಾರ್ಯವನ್ನು ಬೆಂಗಳೂರಿನಲ್ಲಿರುವ ಇಸ್ರೊ ಟೆಲಿಮೆಟ್ರಿ ಟ್ರ್ಯಾಕಿಂಗ್ ಅಂಡ್ ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ಯಶಸ್ವಿಯಾಗಿ ನಿರ್ವಹಿಸಲಾಗಿದೆ' ಎಂದು ಇಸ್ರೊ ತಿಳಿಸಿದೆ. ಮುಂದಿನ 18 ದಿನಗಳ ಅವಧಿಯಲ್ಲಿ 'ಚಂದ್ರಯಾನ–3' ನೌಕೆಯ ವೇಗವನ್ನು ನಿಧಾನವಾಗಿ ಕಡಿಮೆ ಮಾಡಿ, ಅದನ್ನು ಚಂದ್ರನಿಂದ 100 ಕಿ.ಮೀ. ಅಂತರದ ಕೆಳ ಕಕ್ಷೆಗೆ ತರಲಾಗುತ್ತದೆ. ನಂತರ, ಆಗಸ್ಟ್ 23ರ ಸಂಜೆ 5.47ಕ್ಕೆ ಚಂದಿರನ ದಕ್ಷಿಣ ಧ್ರುವ ಪ್ರದೇಶದಲ್ಲಿ ಇಳಿಸುವ ಪ್ರಯತ್ನ ನಡೆಸಲಾಗುತ್ತದೆ. ಚಂದ್ರನ ಕಕ್ಷೆಯಲ್ಲಿ ಕೈಗೊಳ್ಳಬೇಕಿರುವ ಮುಂದಿನ ಕಾರ್ಯಾಚರಣೆಯನ್ನು ಭಾನುವಾರ ನೆರವೇರಿಸಲಾಗುತ್ತದೆ' ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಹೇಳಿದೆ.

ರೋವರ್ (ಪ್ರಜ್ಞಾನ್) ಹೊತ್ತ ಲ್ಯಾಂಡರ್ (ವಿಕ್ರಮ್) ನೌಕೆಯಿಂದ ಬೇರ್ಪಟ್ಟು, ಚಂದ್ರನತ್ತ ಪಯಣ ಬೆಳೆಸಲಿದೆ. ನೌಕೆಯಲ್ಲಿ ಅಳವಡಿಸಿರುವ 'ಶೇಪ್' ಚಂದ್ರನ ಕಕ್ಷೆಯಲ್ಲಿಯೇ ಪರಿಭ್ರಮಿಸಲಿದೆ. ಈ ಸಾಧನವು ಬಾಹ್ಯಾಕಾಶ ಕುರಿತು ಕಳಿಸುವ ಡೇಟಾವನ್ನು ಸೌರಮಂಡಲದಾಚೆ ಇದ್ದಿರ-ಬಹುದಾದ, ಭೂಮಿಯನ್ನೇ ಹೋಲುವ ಗ್ರಹಗಳ ಅನ್ವೇಷಣೆ ಕಾರ್ಯಕ್ಕೆ ಬಳಸಿಕೊಳ್ಳಲಾಗು-ತ್ತದೆ ಎಂದು ಅಶೋಕ ವಿಶ್ವವಿ-ದ್ಯಾಲಯದ ಖಭೌತ ವಿಜ್ಞಾನಿ ಸೋಮಕ್ ರಾಯಚೌಧರಿ ಹೇಳಿದ್ದಾರೆ.



ರವೀಂದ್ರನಾಥ ಆಯ್ಕೆ ಅಸಿಂಧು: ಹೈಕೋರ್ಟ್ ಆದೇಶಕ್ಕೆ ತಡೆ

ನವದೆಹಲಿ(ಪಿಟಿಐ): ಎಐಎಡಿಎಂಕೆ ಉಚ್ಚಾಟಿತ ಮುಖಂಡ ಹಾಗೂ ಸಂಸದ ಪಿ.ರವೀಂದ್ರನಾಥ ಅವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಿ ಮದ್ರಾಸ್ ಹೈಕೋರ್ಟ್ ಹೊರಡಿಸಿದ್ದ ಆದೇಶಕ್ಕೆ ಸುಪ್ರೀಂಕೋರ್ಟ್ ತಡೆ ನೀಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ರವೀಂದ್ರನಾಥ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಸೂರ್ಯಕಾಂತ ಹಾಗೂ ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠ ನಡೆಸಿತು. ಆಯ್ಕೆ ಪ್ರಶ್ನಿಸಿ ತಕರಾರು ಅರ್ಜಿ ಸಲ್ಲಿಸಿದ್ದ ಪಿ.ಮಿಲಾನಿ ಅವರಿಗೆ ಪೀಠ ನೋಟಿಸ್ ಜಾರಿ ಮಾಡಿತು.

ತಮಿಳುನಾಡಿನ ಥೇಣಿ ಲೋಕಸಭಾ ಕ್ಷೇತ್ರದಿಂದ 2019ರಲ್ಲಿ ಆಯ್ಕೆಯಾಗಿರುವ ರವೀಂದ್ರನಾಥ ಎಐಎಡಿಎಂಕೆಯ ಏಕೈಕ ಸಂಸದ. ಅವರು ಮಾಜಿ ಮುಖ್ಯಮಂತ್ರಿ ಹಾಗೂ ಎಐಎಡಿಎಂಕೆ ಉಚ್ಚಾಟಿತ ನಾಯಕ ಒ. ಪನ್ನೀರ್‌ಸೆಲ್ವಂ ಅವರ ಪುತ್ರ. 'ಈ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್ ಜುಲೈ 6ರಂದು ನೀಡಿರುವ ಆದೇಶಕ್ಕೆ ತಡೆ ನೀಡಲಾಗಿದ್ದು, ಮುಂದಿನ ಆದೇಶದ ವರೆಗೆ ರವೀಂದ್ರನಾಥ ಅವರು ಸಂಸದರಾಗಿ ಮುಂದುವರಿಯಲಿದ್ದಾರೆ' ಎಂದು ನ್ಯಾಯಪೀಠವು ಶುಕ್ರವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದೆ.

ವೆರ್ನನ್, ಫೆರೇರಾ ಬಿಡುಗಡೆ

ಮುಂಬೈ(ಪಿಟಿಐ): ಎಲ್ಗಾರ್ ಪರಿಷತ್–ಮಾವೋವಾದಿಗಳ ಜೊತೆ ಸಂಪರ್ಕ ಪ್ರಕರಣದಲ್ಲಿ ಆರೋಪಿಗಳಾಗಿರುವ, ಹೋರಾಟಗಾರರಾದ ವೆರ್ನನ್ ಗೊನ್ಸಾಲ್ವೆಸ್ ಮತ್ತು ಅರುಣ್ ಫೆರೇರಾ ಇಲ್ಲಿನ ನವಿಮುಂಬೈನಲ್ಲಿ-ರುವ ಜೈಲಿನಿಂದ ಶನಿವಾರ ಹೊರ ಬಂದರು.

ಈ ಇಬ್ಬರಿಗೆ ಸುಪ್ರೀಂಕೋರ್ಟ್ ಜುಲೈ 28ರಂದು ಜಾಮೀನು ಮಂಜೂರು ಮಾಡಿತ್ತು. ಈ ಹಿನ್ನೆಲೆಯಲ್ಲಿ, ಅವರ ಬಿಡುಗಡೆಗೆ ವಿಶೇಷ ನ್ಯಾಯಾಲಯವು ಶುಕ್ರವಾರ ಆದೇಶ ಹೊರಡಿಸಿತ್ತು. ತಲೋಜಾ ಜೈಲಿನಿಂದ ಹೊರಬರುತ್ತಿದ್ದಂತೆ, ಈ ಇಬ್ಬರು ಹೋರಾಟಗಾರರ ಬೆಂಬಲಿಗರು, ಸಂಬಂಧಿಗಳು ಅವರನ್ನು ಸ್ವಾಗತಿಸಿದರು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಇವರ ಬಿಡುಗಡೆಯೊಂದಿಗೆ, ಈ ಪ್ರಕರಣದಲ್ಲಿ ಬಂಧಿತರಾಗಿರುವ 16 ಮಂದಿ ಪೈಕಿ ಐವರು ಆರೋಪಿಗಳು ಜಾಮೀನಿನ ಮೇಲೆ ಹೊರ ಬಂದಂತಾಗಿದೆ.

ಆರೋಪಿಗಳಲ್ಲೊಬ್ಬರಾದ ಸ್ಟ್ಯಾನ್ ಸ್ವಾಮಿ ಅವರು 2021ರ ಜುಲೈನಲ್ಲಿ ಮುಂಬೈನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಈ ಪ್ರಕರಣ 2017ರ ಡಿ.31ರಂದು ಪುಣೆಯಲ್ಲಿ ನಡೆದಿದ್ದ ಎಲ್ಗಾರ್ ಪರಿಷತ್ ಸಭೆಗೆ ಸಂಬಂಧಿಸಿದ್ದಾಗಿದೆ. 'ಸಭೆಗೆ ಮಾವೋವಾದಿಗಳು ಆರ್ಥಿಕ ನೆರವು ನೀಡಿದ್ದರು. ಅಲ್ಲಿನ ಪ್ರಚೋದನಕಾರಿ ಭಾಷಣದಿಂದಾಗಿ ಭೀಮಾ– ಕೋರೆಗಾಂವ್ ಯುದ್ಧ ಸ್ಮಾರಕದ ಬಳಿ ಮಾರನೆ ದಿನ ಹಿಂಸಾತ್ಮಕ ಕೃತ್ಯಗಳು ನಡೆದಿದ್ದವು' ಎಂದು ಪೊಲೀಸರು ಆರೋಪಿಸಿದ್ದರು.



ನವಿಮುಂಬೈನ ತಲೋಜಾ ಜೈಲಿನಿಂದ ಶನಿವಾರ ವೆರ್ನನ್ ಗೊನ್ಸಾಲ್ವೆಸ್ ಮತ್ತು ಅರುಣ್ ಫೆರೇರಾ ಬಿಡುಗಡೆಯಾಗಿ ಹೊರಬಂದರು –ಪಿಟಿಐ ಚಿತ್ರ

'ಗೃಹಜ್ಯೋತಿ'ಗೆ ಚಾಲನೆ

ಒಂದನೇ ಪುಟದಿಂದ

'ಸಂಸತ್ತಿನಲ್ಲಿ ಮಾತಾಡಲು ಅವಕಾಶ ನೀಡದ ಮೋದಿ ಸರ್ಕಾರದ ವಿರುದ್ಧ ಏರುಧ್ವನಿಯಲ್ಲಿ ಕೂಗಾಡಿ ಸ್ವಲ್ಪ ಧ್ವನಿ ಕೆಟ್ಟಿದೆ' ಎಂದು ಭಾಷಣ ಆರಂಭಿಸಿದ ಮಲ್ಲಿಕಾರ್ಜುನ ಖರ್ಗೆ, 'ಈ ದೇಶ ಸುರಕ್ಷಿತವಾಗಿ ಇರಬೇಕಾದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು. ಸಂಸತ್ತಿನಲ್ಲಿ 'ಇಂಡಿಯಾ' ಪಕ್ಷಗಳು ಅಧಿಕಾರದಲ್ಲಿರಬೇಕು. ಆಗ ಮಾತ್ರ ಬಡವರ, ದೀನ–ದಲಿತರ, ಮಹಿಳೆಯರ ಹಿತ ಕಾಪಾಡಲು ಹಾಗೂ ಸಂವಿಧಾನವನ್ನು ರಕ್ಷಿಸಲು ಸಾಧ್ಯ. ಈ ದಿಸೆಯಲ್ಲಿ ನಾವೆಲ್ಲ ಒಂದಾಗಿ ಪಕ್ಷವನ್ನು ಅಧಿಕಾರಕ್ಕೆ ತರಬೇಕು' ಎಂದು ಕರೆ ನೀಡಿದರು.

'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲ ಬಡವರು, ಶ್ರಮಿಕರು, ರೈತರು, ಹೆಣ್ಣುಮಕ್ಕಳು, ಯುವಕರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಹೀಗಿದ್ದರೂ ಕಳೆದ ಬಾರಿಯ ಚುನಾವಣೆಯಲ್ಲಿ ಜನ ಏಕೆ ಮುನಿಸಿಕೊಂಡರು ಎಂಬುದು ಗೊತ್ತಾಗಲಿಲ್ಲ. ಈ ಹಿಂದೆ ಆಡಳಿತ ನಡೆಸಿದ್ದ ಬಿಜೆಪಿ ಸರ್ಕಾರ ಒಂದೇ ಒಂದು ಯೋಜನೆಯನ್ನೂ ಬಡವರಿಗಾಗಿ ಜಾರಿಗೆ ತಂದಿರಲಿಲ್ಲ. ಗ್ಯಾರಂಟಿ ಯೋಜನೆಗಳಿಂದ ರಾಜ್ಯ ದಿವಾಳಿಯಾಗಲಿದೆ ಎಂದು ಅಪಪ್ರಚಾರ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಈ ಯೋಜನೆಯ ಲಾಭ ಜನರಿಗೆ ಸಿಗುತ್ತಿಲ್ಲವೇ ಎಂಬ ಬಗ್ಗೆ ಗುಪ್ತಚರ ಇಲಾಖೆಯಿಂದ ಮಾಹಿತಿ ತರಿಸಿಕೊಳ್ಳಲಿ' ಎಂದು ಕುಟುಕಿದರು.


ಕಲಬುರಗಿಯಲ್ಲಿ ಶನಿವಾರ 'ಗೃಹಜ್ಯೋತಿ' ಯೋಜನೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಾನುಭವಿಗಳಿಗೆ 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಬಿಲ್ ರಸೀದಿಯ ನಮೂನೆಯನ್ನು ನೀಡಿದರು. ಇಂಧನ ಸಚಿವ ಕೆ.ಜೆ. ಜಾರ್ಜ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇದ್ದಾರೆ–ಪ್ರಜಾವಾಣಿ ಚಿತ್ರ /ತಾಜುದ್ದೀನ್ ಆಜಾದ್

'ದೇಶ ದಿವಾಳಿ ಮಾಡಿದ್ದು ಮೋದಿ'

'ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದ್ದರಿಂದ ರಾಜ್ಯ ದಿವಾಳಿಯಾಗಿಲ್ಲ. ನರೇಂದ್ರ ಮೋದಿ ಕರ್ನಾಟಕ ಹಾಗೂ ದೇಶವನ್ನು ದಿವಾಳಿ ಮಾಡಿದ್ದಾರೆ. ಬಿಜೆಪಿ ಸರ್ಕಾರ ರಾಜ್ಯವನ್ನು ಲೂಟಿ ಮಾಡಿದ್ದರಿಂದಲೇ ನಿರುದ್ಯೋಗ ಸಮಸ್ಯೆಯಾಗಿದೆ. ರಾಜ್ಯ ಆರ್ಥಿಕವಾಗಿ ಹಿಂದುಳಿಯಲು ಬಿಜೆಪಿ ಸರ್ಕಾರವೇ ಕಾರಣವಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

'ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವುದರ ಜೊತೆಗೆ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಎಲ್ಲ ಭರವಸೆಗಳನ್ನೂ ಮುಂದಿನ ಐದು ವರ್ಷಗಳಲ್ಲಿ ಈಡೇರಿಸುತ್ತೇವೆ' ಎಂದು ಭರವಸೆ ನೀಡಿದರು.

'371 (ಜೆ) ಸೌಲಭ್ಯ ಕಲ್ಪಿಸಿಕೊಟ್ಟಿರುವುದಕ್ಕೆ ಕಲ್ಯಾಣ ಕರ್ನಾಟಕ ಭಾಗದ ಜನ ಮಲ್ಲಿಕಾರ್ಜುನ ಖರ್ಗೆ ಅವರನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಹೀಗಿದ್ದರೂ ಖರ್ಗೆ ಅವರನ್ನು ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋಲಿಸಿದ್ದೀರಿ' ಎಂದು ಬೇಸರ ವ್ಯಕ್ತಪಡಿಸಿದ ಸಿದ್ದರಾಮಯ್ಯ, 'ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ' ಎಂದರು.

'ಸಿಖ್ಖರನ್ನು ಕೊಲ್ಲುವಂತೆ ಉದ್ರಿಕ್ತರಿಗೆ ಹೇಳುತ್ತಿದ್ದ ಟೈಟ್ಲರ್'

ನವದೆಹಲಿ(ಪಿಟಿಐ): '1984ರ ನವೆಂಬರ್ 1ರಂದು ಗುರುದ್ವಾರ ಪುಲ್ ಬಂಗಶ್ ಮುಂದೆ ನಿಂತ ಬಿಳಿ ಬಣ್ಣದ ಅಂಬಾಸಡರ್ ಕಾರಿನಿಂದ ಇಳಿದ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್, 'ಸಿಖ್ಖರನ್ನು ಕೊಲ್ಲಿರಿ... ಅವರು ನಮ್ಮ ತಾಯಿಯನ್ನು ಕೊಂದಿದ್ದಾರೆ' ಎಂದು ಜೋರಾಗಿ ಕೂಗಿದರು. ಬೆನ್ನಲ್ಲೇ, ಗುರುದ್ವಾರದಲ್ಲಿ ಮೂವರನ್ನು ಹತ್ಯೆ ಮಾಡಲಾಯಿತು...'

–ಮಾಜಿ ಕೇಂದ್ರ ಸಚಿವ ಟೈಟ್ಲರ್ ವಿರುದ್ಧದ ಪೂರಕ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖವಾಗಿರುವ ಹೇಳಿಕೆಯಲ್ಲಿನ ಅಂಶವಿದು.

ಸಿಖ್ ವಿರೋಧಿ ಗಲಭೆಯ ಪ್ರಕರಣದಲ್ಲಿ ಆರೋಪಿಯಾಗಿರುವ ಟೈಟ್ಲರ್ ಇಲ್ಲಿನ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಮುಂದೆ ಶನಿವಾರ ಹಾಜರಾದರು.

'ಏನೂ ಆಗುವುದಿಲ್ಲ. ನೀವು ಸಿಖ್ಖರನ್ನು ಹತ್ಯೆ ಮಾಡಿ ಅಷ್ಟೆ' ಎಂಬುದಾಗಿ ಟೈಟ್ಲರ್ ತಮ್ಮ ಬೆಂಬಲಿಗರಿಗೆ ಬೈಯುತ್ತಿದ್ದರು' ಎಂಬ ಹೇಳಿಕೆಯೂ ದೋಷಾರೋಪ ಪಟ್ಟಿಯಲ್ಲಿದೆ.

'ಮಾಧ್ಯಮಗಳಿಗೆ ಸಂಯಮ ಅಗತ್ಯ'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳು ಸುದ್ದಿ ಪ್ರಸ್ತುತಪಡಿಸುವಾಗ ಅನುಚಿತ ಅಥವಾ ಮಾನಹಾನಿಕರ ಭಾಷೆ ಬಳಕೆ ಮಾಡಬಾರದು' ಎಂದು ಹೈಕೋರ್ಟ್ ನಿರ್ದೇಶಿಸಿದೆ.

ವಕೀಲ ಸಮುದಾಯವನ್ನು ಕೀಳಾಗಿ ಪರಿಭಾವಿಸುವಂತಹ ಪದಗಳ ಬಳಕೆ ಮಾಡಿದ ಆರೋಪ ಎದುರಿಸುತ್ತಿದ್ದ 'ಸಂಯುಕ್ತ ಕರ್ನಾಟಕ', 'ಹೊಸ ದಿಗಂತ', 'ನವೋದಯ', ಮತ್ತು 'ಕಿತ್ತೂರು ಕರ್ನಾಟಕ' ಪತ್ರಿಕೆಗಳ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕ್ರಿಯೆಯನ್ನು ರದ್ದುಪಡಿಸಿದ ಧಾರವಾಡ ಪೀಠದಲ್ಲಿನ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠವು ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೊಂದರಲ್ಲಿ ವಕೀಲ ಸಮುದಾಯದ ಕುರಿತು 'ತಾಲಿಬಾನ್', 'ಗೂಂಡಾ', 'ಪುಂಡಾಟಿಕೆ' ಎಂಬ ಪದಗಳನ್ನು ಬಳಕೆ ಮಾಡಿದ್ದ ಮಾಧ್ಯಮಗಳ ನಡೆಗೆ ನ್ಯಾಯಪೀಠ ಅತೃಪ್ತಿ ವ್ಯಕ್ತಪಡಿಸಿದೆ.

'ಅರ್ಜಿದಾರರು ತಾವು ಬಳಕೆ ಮಾಡಿದ ಪದಗಳ ಬಗ್ಗೆ ಈಗಾಗಲೇ ವಿಷಾದ ವ್ಯಕ್ತಪಡಿಸಿದ್ದಾರೆ. ಇದನ್ನು ಮಾನ್ಯ ಮಾಡಿ ಅವರ ವಿರುದ್ಧದ ಪ್ರಕ್ರಿಯೆ ವಜಾ ಮಾಡುವುದು ಸೂಕ್ತ' ಎಂದು ಅಭಿಪ್ರಾಯಪಟ್ಟಿದೆ.

'ಮುದ್ರಣ ಮಾಧ್ಯಮದಲ್ಲಿ ಪ್ರಕಟವಾಗುವ ಸುದ್ದಿ ಅಂತಿಮ ಸತ್ಯ ಎಂದು ಸಮಾಜದ ದೊಡ್ಡ ವರ್ಗ ನಂಬುತ್ತದೆ. ಹೀಗಾಗಿ, ವರದಿಯಲ್ಲಿ ಅಸಂಸದೀಯ ಅಥವಾ ಮಾನಹಾನಿಕರ ಪದಗಳ ಬಳಕೆ ಮಾಡುವುದಕ್ಕೂ ಮುನ್ನ ಎಚ್ಚರಿಕೆ ವಹಿಸಬೇಕು' ಎಂದು ಕಿವಿಮಾತು ಹೇಳಿದೆ.

ಪ್ರಕರಣವೇನು?: ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್‌ನಲ್ಲಿ 2012ರಲ್ಲಿ ಮಾಧ್ಯಮ ಪ್ರತಿನಿಧಿಗಳು, ವಕೀಲರು ಮತ್ತು ಪೊಲೀಸರ ನಡುವೆ ಸಂಘರ್ಷ ಸಂಭವಿಸಿತ್ತು. ಇದರ ಬೆನ್ನಲ್ಲೇ, 'ಕ್ರಿಮಿನಲ್ ಪ್ರಕರಣ ಎದುರಿಸುವ ಪತ್ರಕರ್ತರನ್ನು ವಕೀಲರು ನ್ಯಾಯಾಲಯಗಳಲ್ಲಿ ಪ್ರತಿನಿಧಿಸಬಾರದು' ಎಂದು ವಕೀಲರ ಸಂಘಗಳು ನಿರ್ಧಾರ ಕೈಗೊಂಡಿದ್ದವು.

ಈ ವಿಚಾರ ವಿಧಾನ ಸಭೆಯಲ್ಲೂ ಪ್ರತಿಧ್ವನಿಸಿತ್ತು. ಶಾಸಕರೊಬ್ಬರು; ವಕೀಲರ ಸಂಘಗಳ ನಿರ್ಧಾರವು, 'ತಾಲಿಬಾನ್ ಮಾನಸಿಕತೆ' ಎಂದು ಜರೆದಿದ್ದರು.

'ಕಲಾಪದ ವರದಿ ಮಾಡುವಾಗ ಅಸಂಬದ್ಧ ಪದ ಬಳಕೆ ಮಾಡಿದ್ದಾರೆ. ಇಡೀ ವಕೀಲ ಸಮುದಾಯಕ್ಕೆ ಗೂಂಡಾ ಮನಃಸ್ಥಿತಿಯವರು ಎಂಬ ಹಣಪಟ್ಟಿ ಹಚ್ಚಿದ್ದಾರೆ' ಎಂದು ಆಕ್ಷೇಪಿಸಿ, ಈ ವರದಿಗಳನ್ನು ಪ್ರಕಟಿಸಿದ ಪತ್ರಿಕೆಗಳ ವಿರುದ್ಧ ವಕೀಲ ದಾವಲ್ ಸಾಬ್ ನದಾಫ್ ಖಾಸಗಿ ದೂರು ದಾಖಲಿಸಿದ್ದರು. ಪ್ರಕರಣ ವಿಚಾರಣೆ ಹಂತದಲ್ಲಿರುವಾಗ ಅರ್ಜಿದಾರ ಪತ್ರಿಕೆಗಳು ವರದಿಗೆ ವಿಷಾದ ವ್ಯಕ್ತಪಡಿಸಿ, ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕ್ರಿಯೆ ವಜಾ ಮಾಡುವಂತೆ ಕೋರಿದ್ದವು.

ಟ್ವಿಟರ್: ಮೇಲ್ಮನವಿ

ಬೆಂಗಳೂರು: ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ತಡೆ ಆದೇಶಗಳನ್ನು ಪ್ರಶ್ನಿಸಲಾಗಿದ್ದ ಅರ್ಜಿ ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಟ್ವಿಟರ್ ಮೇಲ್ಮನವಿ ಸಲ್ಲಿಸಿದೆ.

ಈ ಮೇಲ್ಮನವಿಯು ಹೈಕೋರ್ಟ್ ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಬೇಕಿದೆ.

ಕೇಂದ್ರ ಸರ್ಕಾರವು 2021ರ ಫೆಬ್ರುವರಿ 2 ಮತ್ತು 2022ರ ಫೆಬ್ರುವರಿ 29ರ ಮಧ್ಯದ ಅವಧಿಯಲ್ಲಿ 1,474 ಟ್ವಿಟರ್ ಖಾತೆಗಳು, 175 ಟ್ವೀಟ್, 256 ಯೂಆರ್‌ಎಲ್‌ಗಳು (ಯೂನಿಫಾರ್ಮ್ ರಿಸೋರ್ಸ್ ಲೊಕೇಟರ್) ಮತ್ತು ಒಂದು ಹ್ಯಾಶ್‌ಟ್ಯಾಗ್ ಅನ್ನು ನಿರ್ಬಂಧಿಸಿ ಆದೇಶ ಹೊರಡಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಟ್ವಿಟರ್ ಹೈಕೋರ್ಟ್ ಮೆಟ್ಟಿಲೇರಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿ ವಜಾಗೊಳಿಸಿತ್ತು. ಟ್ವಿಟರ್‌ನ ಎಲ್ಲಾ ವಾದಗಳನ್ನು ತಿರಸ್ಕರಿಸಿ 2023ರ ಜೂನ್ 30ರಂದು ₹50 ಲಕ್ಷ ದಂಡ ವಿಧಿಸಿ ಆದೇಶಿಸಿತ್ತು.

ನಗರದಲ್ಲಿ ಇಂದು

ವಾಕಥಾನ್: ಅತಿಥಿಗಳು: ದಿನೇಶ್ ಗುಂಡೂರಾವ್, ತಬಸ್ಸುಮ್ ರಾವ್, ಕೆ.ಆರ್. ಸುರೇಶ್, ಎಂ.ಎನ್. ಅನುಚಿತ್, ಸ್ಥಳ: ಕಂಠೀರವ ಕ್ರೀಡಾಂಗಣ, ಬೆಳಿಗ್ಗೆ 6.30
ಬೈಕ್–ಎ–ಥಾನ್: ಅತಿಥಿಗಳು: ಮೀರ್ ಸಯ್ಯದ್ ಕಿರ್ಮಾನಿ, ವಾಸು ದೀಕ್ಷಿತ್, ಡಾ.ಎಚ್.ವಿ. ಮಧುಸೂದನ್, ಆಯೋಜನೆ: ಸರ್ಜಿಕಲ್ ಸೊಸೈಟಿ ಆಫ್ ಬೆಂಗಳೂರು, ಸ್ಥಳ: ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ. ರಸ್ತೆ, ಬೆಳಿಗ್ಗೆ 7.30
'ಭಕ್ತಿ ಭಾವನಂದ ಅಖಂಡ ಭಜನೆ': ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9
ಎಚ್.ಕೆ. ಅಂತರರಾಷ್ಟ್ರೀಯ ಶಾಲೆಯ ಉದ್ಘಾಟನೆ: ಅತಿಥಿಗಳು: ಜಿ. ಪರಮೇಶ್ವರ್, ಎನ್. ಚಲುವರಾಯಸ್ವಾಮಿ, ಎಂ.ಎಸ್. ಭೋಸರಾಜು, ಎಂ. ಕೃಷ್ಣಪ್ಪ, ಟಿ.ಎ. ಶರವಣ, ಹೇಮಂತ್ ಕುಮಾರ್ ಎಸ್., ಆಯೋಜನೆ ಮತ್ತು ಸ್ಥಳ: ವಿನಯ್ ಗುರೂಜಿ ಆಶ್ರಮ, ಕಸ್ತೂರಿಬಾಯಿ ಚಾರಿಟಬಲ್ ಟ್ರಸ್ಟ್, ಉತ್ತರಹಳ್ಳಿ, ಬೆಳಿಗ್ಗೆ 9.30
ನೃತ್ಯ ಸಮಾಗಮ-2023: ಅತಿಥಿಗಳು: ಸಹನಾ ಭಟ್, ಪ್ರದೀಪ್ ಭಟ್, ಆಯೋಜನೆ: ಸಾಧನ ಸಂಗಮ ನೃತ್ಯ ಕೇಂದ್ರ, ಸ್ಥಳ: ಕೆಎಇ ಪ್ರಭಾತ ರಂಗಮಂದಿರ, ಬಸವೇಶ್ವನಗರ, ಬೆಳಿಗ್ಗೆ 9.30
ಮಕ್ಕಳ ರಕ್ಷಣೆಯ ಕುರಿತು ಸಮಾಲೋಚನೆ: ಉದ್ಘಾಟನೆ: ಪ್ರಸನ್ನ ಬಿ. ವರಾಳೆ, ಅಧ್ಯಕ್ಷತೆ: ಜಿ. ನರೇಂದ್ರ, ಉಪಸ್ಥಿತಿ: ಪಿ.ಎಸ್. ದಿನೇಶ್ ಕುಮಾರ್, ಕೆ. ಸೋಮಶೇಖರ್, ಕೆ.ಎಸ್. ಮುದಗಲ್, ಅತಿಥಿಗಳು: ನಾಗಣ್ಣಗೌಡ, ರಜನೀಶ್ ಗೋಯೆಲ್, ಸ್ಥಳ: ಕರ್ನಾಟಕ ನ್ಯಾಯಾಂಗ ಅಕಾಡೆಮಿ ಸಭಾಂಗಣ, ಬೆಳಿಗ್ಗೆ 9.30
ಶ್ರೀನಿವಾಸ ಪಾ. ನಾಯ್ಡು ಅವರ 'ಎಲ್ಲರಂತಲ್ಲ ನಾವು', ಸುಮಾ ಯು.ಕೆ ಅವರ 'ಮನಸುಗಳ ಮಿಲನ' ಪುಸ್ತಕಗಳ ಬಿಡುಗಡೆ, ಸ್ಪಷ್ಟ ಬರವಣಿಗೆ ಕಮ್ಮಟ: ಉದ್ಘಾಟನೆ: ನೀಲಿ ಲೋಹಿತ್, ಅಧ್ಯಕ್ಷತೆ: ಮಧು ಅಕ್ಷರಿ, ಪುಸ್ತಕಗಳ ಬಿಡುಗಡೆ: ಎಂ.ಆರ್. ಕಮಲ, ಅತಿಥಿಗಳು: ಅಜಯ್ ಕುಮಾರ್, ಅಂಬರೀಶ್, ಆಯೋಜನೆ: ಅಕ್ಷರ ಚಪ್ಪರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 9.30
'ಬೆಂಗಳೂರು ಕಾವ್ಯ ಉತ್ಸವ': ಗುರುಪ್ರಿಯ ಅತ್ರೇಯ, ವೇದಾಂತ್ ಭಾರದ್ವಾಜ್, ಅಖಿಲ ಕೃಷ್ಣಮೂರ್ತಿ, ಜಾದುನಾಮಾ: ಜಾವೇದ್ ಅಖ್ತರ್, ಹುಮಾ ಖುರೇಷಿ, ಸ್ಥಳ: ಗೋಪಾಲನ್ ಮಾಲ್, ಬೆಳಿಗ್ಗೆ 10

ಸ್ವರಚಿತ ಚುಟುಕು ವಾಚನ ಸ್ಪರ್ಧೆ, ವಿದ್ಯಾವಾಚಸ್ಪತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಜರಗನಹಳ್ಳಿ ಸದಾಶಿವಯ್ಯ, ಉಪಸ್ಥಿತಿ: ಬಿ. ಶೃಂಗೇಶ್ವರ, ಪತ್ತಂಗಿ ಎಸ್. ಮುರುಳಿ, ಮುರುಳಿಕೃಷ್ಣ ಬೆಳಾಲು, ಅಧ್ಯಕ್ಷತೆ: ಬಿ.ಜಿ. ಭಾಸ್ಕರ, ಪ್ರಶಸ್ತಿ ಪ್ರದಾನ: ಎಂ.ಜಿ. ಆರ್. ಅರಸ್, ಬಹುಮಾನ ವಿತರಣೆ: ಮಹೇಂದ್ರ ಕುರ್ಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು, ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

'ತುಘಲಕ್' ನಾಟಕ ಪ್ರದರ್ಶನ: ರಚನೆ: ಗಿರೀಶ್ ಕಾರ್ನಾಡ್, ನಿರ್ದೇಶನ: ಸಾಮ ಕುಟ್ಟಿ ಪಟ್ಟಂಕರಿ, ಸಹನಿರ್ದೇಶನ: ಶ್ರೀಪಾದ್ ಭಟ್, ಆಯೋಜನೆ: ಸಮುದಾಯ, ಸ್ಥಳ: ರಂಗಶಂಕರ, ಮಧ್ಯಾಹ್ನ 3.30


ತುಘಲಕ್ ನಾಟಕದ ದೃಶ್ಯ

ಭರತನಾಟ್ಯ ರಂಗನಮನ: ಭಾರ್ಗವಿ ಪಿ., ಕೃತಿಕಾ ಆರ್., ವೈಷ್ಣವಿ ಆರ್. ವೈಷ್ಣವಿ ಶಾಸ್ತ್ರಿ, ಮಾನ್ಯಾ ಎಸ್., ತನ್ವಿ ಎಂ.ಎಲ್., ಆಯೋಜನೆ: ರಿದಮ್ಸ್ ಲಲಿತ ಕಲಾ ಮಹಾವಿದ್ಯಾಲಯ, ಸ್ಥಳ: ರಮಣ ಮಹರ್ಷಿ ಹೆರಿಟೇಜ್ ಸಭಾಂಗಣ, ಸಂಜಯನಗರ, ಬೆಳಿಗ್ಗೆ 10ರಿಂದ
ಭಾವಸಾರ ಕ್ಷತ್ರಿಯ ಮುಖಂಡರ ಸಮಾವೇಶ: ಅತಿಥಿಗಳು: ಸಿದ್ದರಾಮಯ್ಯ, ದಿನೇಶ್ ಗುಂಡೂರಾವ್, ರುದ್ರಪ್ಪ ಲಮಾಣಿ, ರಾಜು ಜಾವಳ್ಕರ್, ಆಯೋಜನೆ: ಅಖಿಲ ಭಾರತೀಯ ಭಾವಸಾರ ಕ್ಷತ್ರಿಯ ಮಹಾಸಭಾ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10
ಜಿಲ್ಲಾ ಸಮ್ಮೇಳನದ ಉದ್ಘಾಟನೆ: ಅಧ್ಯಕ್ಷತೆ: ಎ. ಜ್ಯೋತಿ, ಅತಿಥಿಗಳು: ಎನ್. ಗಾಯತ್ರಿ, ಎಂ. ಸತ್ಯಾನಂದ, ಆಯೋಜನೆ: ಭಾರತೀಯ ಮಹಿಳಾ ಒಕ್ಕೂಟ, ಸ್ಥಳ: ಎ.ಐ.ಟಿ.ಯು.ಸಿ. ಕಚೇರಿ, ಶೇಷಾದ್ರಿಪುರ, ಬೆಳಿಗ್ಗೆ 10.30
ಮೀಸಲಾತಿ ಸಂರಕ್ಷಣಾ ರಾಜ್ಯ ಸಮಾವೇಶ: ಅತಿಥಿಗಳು: ರುದ್ರಪ್ಪ ಲಮಾಣಿ, ಶಿವರಾಜ ತಂಗಡಗಿ, ಜಮೀರ್ ಅಹಮದ್ ಖಾನ್, ಅಧ್ಯಕ್ಷತೆ: ಅರವಿಂದ ಲಿಂಬಾವಳಿ, ಉಪಸ್ಥಿತಿ: ರವಿ ಮಾಕಳಿ, ಉಮೇಶ್ ಜಾಧವ್, ಸುನಿಲ್ ವಲ್ಯಾಪುರೆ, ಪ್ರಕಾಶ್ ರಾಠೋಡ, ಬಿ.ಟಿ. ಲಲಿತಾ ನಾಯಕ್, ಅನಂತ ನಾಯಕ್, ಆಯೋಜನೆ: ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟ, ಸ್ಥಳ: ವೈಟ್ ಪೆಟಲ್ಸ್ ಗಾರ್ಡೇನಿಯ ಸಭಾಂಗಣ, ಅರಮನೆ ಮೈದಾನ, ಬೆಳಿಗ್ಗೆ 10.30
ಕಾರ್ಗಿಲ್ ವಿಜಯ್ ದಿವಸ, ನಿರಂತರ: ಅತಿಥಿಗಳು: ನವೀನ್ ನಾಗಪ್ಪ, ರೋಹಿತ್ ಚಕ್ರತೀರ್ಥ, ಆಯೋಜನೆ: ಉತ್ತಿಷ್ಠ ಭಾರತ, ಸ್ಥಳ: ವಿವೇಕ ಮಂಟಪ, ಸ್ವಾಮಿ ವಿವೇಕಾನಂದ ಪುತ್ಥಳಿ ಆವರಣ, ವಿಜಯನಗರ, ಬೆಳಿಗ್ಗೆ 10.30
ಮಹಾಗಣಪತಿ ದೇವಸ್ಥಾನದ ವಾರ್ಷಿಕೋತ್ಸವ, ಪ್ರತಿಭಾ ಪುರಸ್ಕಾರ: ಆಯೋಜನೆ: ಕರ್ನಾಟಕ ಭೋವಿ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಜಸ್ಮಾದೇವಿ ಮಂದಿರ ಕಲ್ಯಾಣ ಮಂಟಪ, ಅಸ್ಟಿನ್ ಟೌನ್ ಲೇಔಟ್, ಬೆಳಿಗ್ಗೆ 11
ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ನಿರಂಜನ ವಾನಳ್ಳಿ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಬಿ. ವೀರಪ್ಪ, ಉಪಸ್ಥಿತಿ: ಎ. ಪುಷ್ಪಾ ಅಯ್ಯಂಗಾರ್, ಎನ್.ಕೆ. ರಮೇಶ್, ಪಿ. ಮಹೇಶ್, ಪ್ರಶಸ್ತಿ ಪುರಸ್ಕೃತರು: ಸುದರ್ಶನ ಚನ್ನಂಗಿಹಳ್ಳಿ, ಶೋಭಾ ಎಚ್.ಜಿ., ವಿಜಯಮಾಲಾ ರಂಗನಾಥ್, ಭೇರ್ಯ ರಾಮಕುಮಾರ್, ಭೀಮಪ್ಪ ಗುಂಡಪ್ಪ ಗಡಾದ, ಆಯೋಜನೆ ಮತ್ತು ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11
ವಾರ್ಷಿಕ ಹಳೆಯ ವಿದ್ಯಾರ್ಥಿಗಳ ಸಭೆ: ಅತಿಥಿಗಳು: ಕಿರಣ್ ಪಿ.ಕೆ., ಕೆ.ಸಿ. ರಾಮಮೂರ್ತಿ, ಅಧ್ಯಕ್ಷತೆ: ಸಬಿತಾ ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಆಲುಮ್ನಿ ಅಸೋಸಿಯೇಷನ್, ಸಿಎಂಆರ್ ವಿಶ್ವವಿದ್ಯಾಲಯ, ಎಚ್‌ಬಿಆರ್ ಲೇಔಟ್, ಬೆಳಿಗ್ಗೆ 11ರಿಂದ
'ಸಾಮಂತರಾದರೂ ಶ್ರೀಮಂತ ಸಾಧನೆಯ ಸೋದೆಯ ಅರಸರು' ಕುರಿತು ಉಪನ್ಯಾಸ: ಲಕ್ಷ್ಮೀಶ್ ಹೆಗಡೆ ಸೋಂದಾ, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ: ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸಭಾಂಗಣ, ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ನಾಲ್ಕು ಪುಸ್ತಕಗಳ ಬಿಡುಗಡೆ: ಅತಿಥಿಗಳು: ಎಸ್.ಎನ್. ಸೇತೂರಾಮ್, ಕೆ. ಸುಚೇಂದ್ರ ಪ್ರಸಾದ್, ಹರಿಪ್ರಕಾಶ್ ಕೋಣೆಮನೆ, ಸದ್ಯೋಜಾತ ಭಟ್, ಎನ್. ರಾಮಚಂದ್ರಯ್ಯ, ಉಪಸ್ಥಿತಿ: ಬಿ.ಎಸ್. ಸುದರ್ಶನ್, ಗಣಪತಿ ಹೆಗಡೆ, ಆಯೋಜನೆ: ವಿಕ್ರಮ್ ಪ್ರಕಾಶನ, ಸಮನ್ವಿತಾ, ಸ್ಥಳ: ನ್ಯಾಷನಲ್ ಕಾಲೇಜು ಸಭಾಂಗಣ, ಬಸವನಗುಡಿ, ಬೆಳಿಗ್ಗೆ 11

ವಿಶೇಷ ರಾಜ್ಯ ಪರಿಷತ್: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ಮಧು ಬಂಗಾರಪ್ಪ, ಪಿ.ಜಿ. ಆರ್ ಸಿಂಧ್ಯ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11
'ಮಾಸದ ಮಂಥನ–53': ವಿನಾಯಕ ಜೋಶಿ, ಸ್ಥಳ: ನಂ. 17, ಸಾನಿಧ್ಯ, 1ನೇ ಅಡ್ಡರಸ್ತೆ, ದೊಡ್ಡಕನ್ನೆಲಿ, ಬೆಳಿಗ್ಗೆ 11
ತೆರಿಗೆ ಸಲಹೆಗಾರರ ದಿನ, ರಾಷ್ಟ್ರೀಯ ತೆರಿಗೆ ಸಮ್ಮೇಳನ: ಅತಿಥಿಗಳು: ಡಿ.ಕೆ. ಶಿವಕುಮಾರ್, ಎಚ್.ಕೆ. ಪಾಟೀಲ, ಆಯೋಜನೆ: ಕರ್ನಾಟಕ ರಾಜ್ಯ ತೆರಿಗೆ ಸಲಹೆಗಾರರ ಸಂಘ, ಸ್ಥಳ: ಪ್ರಿನ್ಸಸ್ ಗ್ರೀನ್, ಗೇಟ್ ನಂ 9, ಅರಮನೆ ಮೈದಾನ, ಮಧ್ಯಾಹ್ನ 12
ಮಧುರಮ್ ಮನೋಹರಂ ವಾರ್ಷಿಕ ನೃತ್ಯೋತ್ಸವ: ಅತಿಥಿ: ರೇಖಾ ಜಗದೀಶ್, ವಿದ್ಯಾ ಮುರಳಿ, ಆಯೋಜನೆ: ಶ್ರೀಕೃಷ್ಣ ಕಲಾಲಯ, ಸ್ಥಳ: ತೆಲುಗು ವಿಜ್ಞಾನ ಸಮಿತಿ, ಮಲ್ಲೇಶ್ವರ, ಮಧ್ಯಾಹ್ನ 12
ಯಕ್ಷಗಾನ ವೀರ ಅಭಿಮನ್ಯು, ರಜತ ಮಹೋತ್ಸವ, ಲಾಂಛನ ಬಿಡುಗಡೆ: ಅಧ್ಯಕ್ಷತೆ: ಸಹನಾ ಎಂ., ಅತಿಥಿಗಳು: ಅಶೋಕ್ ಎನ್., ಪಿ.ಸಿ. ಮುಕುಂದ ರಾವ್, ರೇವತಿ ಸುರೇಶ್, ಯಕ್ಷ ಉತ್ಸವ: 'ಪೂರ್ವರಂಗ', 'ವೀರ ಅಭಿಮನ್ಯು', 'ಭಕ್ತ ಚಂದ್ರ ಹಾಸ' ಯಕ್ಷಗಾನ, ಆಯೋಜನೆ: ಕರ್ನಾಟಕ ಮಹಿಳಾ ಯಕ್ಷಗಾನ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಮಧ್ಯಾಹ್ನ 2.30

ರಾಷ್ಟ್ರೀಯ ಕೈಮಗ್ಗ ದಿನದ ಅಂಗವಾಗಿ 'ಮಹಿಳೆಯರು ಮತ್ತು ನೇಯ್ಗೆ': ಅತಿಥಿಗಳು: ಸ್ಮಿತಾ ಶ್ರೀನಾಥ್, ಚಿತ್ರಾ ಮಾಧವನ್, ಆಯೋಜನೆ: ಮಾಯಾ ಉತ್ಸವ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10

'ಬಿ.ಎಂ. ಶ್ರೀನಿವಾಸಯ್ಯ ಸ್ಮಾರಕ' ರಾಷ್ಟ್ರೀಯ ಅಣುಕು ನ್ಯಾಯಾಲಯ ಸ್ಪರ್ಧೆಯ ಸಮಾರೋಪ: ಅತಿಥಿಗಳು: ಎಚ್. ಪಿ. ಸಂದೇಶ್, ಎಂ.ಕೆ. ರಮೇಶ್, ಜಿ.ಎಲ್. ವಿಶ್ವನಾಥ್, ಬ್ರಿಜೇಶ್ ಎಂ. ಸಿಂಗ್, ಸಿದ್ಧಲಿಂಗಪ್ಪ ಬಿ. ಪೂಜಾರಿ, ಅಧ್ಯಕ್ಷತೆ: ಅವಿರಾಮ್ ಶರ್ಮಾ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಎಸ್. ಕಾನೂನು ಕಾಲೇಜು, ಬಸವನಗುಡಿ, ಸಂಜೆ 4.30
ನೃತ್ಯಾರ್ಪಣೆ: ಅತಿಥಿಗಳು: ಅಪ್ಪಗೆರೆ ತಿಮ್ಮರಾಜು, ಸುಪ್ರಿಯಾ ಕೋಮಂದೂರ್, ಆಯೋಜನೆ: ನರ್ತಿತಂ ಟ್ರಸ್ಟ್, ಸ್ಥಳ: ಪರಂಪರೆ ಸಭಾಂಗಣ, ಕತ್ರಿಗುಪ್ಪೆ, ಸಂಜೆ 5
ಅರವಿಂದ ಕಲಾವೃಂದದ ವಾರ್ಷಿಕೋತ್ಸವ–2023: ಗೌರವಾಧ್ಯಕ್ಷ: ಬಿ.ಎನ್. ಬಚ್ಚೇಗೌಡ, ಅತಿಥಿಗಳು: ವಿ. ಮನೋಹರ್, ಬಲವಂತರಾವ್ ಪಾಟೀಲ್, ಭಾ.ಮಾ. ಹರೀಶ್, ಮಾಲತಿ ಸುಧೀರ್, ನಾರಾಯಣ ಸ್ವಾಮಿ ಜಿ., ರಘುನಂದನ್, ಸ್ಥಳ: ಕೃಷ್ಣರಾಜ ಪರಿಷನ್ಮಂದಿರ್, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5
ಶಾಸ್ತ್ರೀಯ ಸಂಗೀತ ಕಾರ್ಯಕ್ರಮ: ಗಾಯನ: ಅದಿತಿ ಪ್ರಹ್ಲಾದ್, ಪಿಟೀಲು: ವೈಭವ್ ರಮಿಣಿ, ಮೃದಂಗ: ವಿನೋದ್ ಶ್ಯಾಮ್ ಆನೂರ್, ಘಟ: ಶಮಿತ್ ಎಸ್. ಗೌಡ, ಆಯೋಜನೆ ಮತ್ತು ಸ್ಥಳ: ಶ್ರೀರಾಮ ಲಲಿತ ಕಲಾ ಮಂದಿರ, ಬನಶಂಕರಿ, ಸಂಜೆ 5.30


ಸ್ತುತಿಶ್ರೀ ತಿರುಮಲೆ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸ್ತುತಿಶ್ರೀ ತಿರುಮಲೆ, ಆಯೋಜನೆ: ನಟನ ತರಂಗಿಣಿ ಸ್ಕೂಲ್ ಆಫ್ ಮ್ಯೂಸಿಕ್ ಆ್ಯಂಡ್ ಡ್ಯಾನ್ಸ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 5.30
'ಯಥಾ ಪ್ರಕಾರ' ನಾಟಕ ಪ್ರದರ್ಶನ: ನಿರ್ದೇಶನ: ಭೀಷ್ಮ ರಾಮಯ್ಯ, ಅತಿಥಿಗಳು: ರಮೇಶ್ ಪಂಡಿತ್, ಸುನೇತ್ರ ಪಂಡಿತ್, ಆಯೋಜನೆ: ಕಲಾಪ್ರೇಮಿ ಫೌಂಡೇಷನ್, ಅಂತರಂಗ ಬಹಿರಂಗ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ರಾಗಿಗುಡ್ಡ–ಸೆಂಟ್ರಲ್ ಸಿಲ್ಕ್ ಬೋರ್ಡ್ ನಡುವೆ 3.3 ಕಿ.ಮೀ ಉದ್ದದ 'ಡಬಲ್ ಡೆಕ್ಕರ್' ಸೇತುವೆ

ವರ್ಷಾಂತ್ಯಕ್ಕೆ ಹಳದಿ ಮಾರ್ಗದಲ್ಲೂ 'ಮೆಟ್ರೊ'

• ಆದಿತ್ಯ ಕೆ.ಎ.

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದ ಹಳದಿ ಮಾರ್ಗದ ಕಾಮಗಾರಿಯು ಬಹುತೇಕ ಪೂರ್ಣಗೊಂಡಿದೆ. ವರ್ಷಾಂತ್ಯಕ್ಕೆ ಹಳದಿ ಮಾರ್ಗದಲ್ಲಿ ಮೆಟ್ರೊ ರೈಲಿನ ವಾಣಿಜ್ಯ ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಗುರಿ ಹೊಂದಿದೆ.

ಕೆಲವು ವರ್ಷದಿಂದ ನೇರಳೆ ಹಾಗೂ ಹಸಿರು ಮಾರ್ಗದಲ್ಲಿ ಮೆಟ್ರೊ ರೈಲುಗಳು ಮಾತ್ರ ಓಡಾಟ ನಡೆಸುತ್ತಿದ್ದವು. ಈಗ ಹಳದಿ ಮಾರ್ಗದಲ್ಲೂ ರೈಲುಗಳ ಸಂಚಾರಕ್ಕೆ ಕೆಲವೇ ತಿಂಗಳು ಬಾಕಿಯಿದೆ.

ನಿರೀಕ್ಷೆಯಂತೆ ಡಿಸೆಂಬರ್ ಮೊದಲ ವಾರದಲ್ಲಿ ಆರ್‌.ವಿ.ರಸ್ತೆಯಿಂದ ಬೊಮ್ಮಸಂದ್ರದವರೆಗೆ ಮೆಟ್ರೊ ರೈಲುಗಳು ವಾಣಿಜ್ಯ ಸಂಚಾರ ನಡೆಸಲಿವೆ. ಎರಡನೇ ಹಂತದಲ್ಲಿ ಒಟ್ಟು 19.15 ಕಿ.ಮೀ ಮಾರ್ಗದಲ್ಲಿ ಅಂತಿಮ ಹಂತದ ಕಾಮಗಾರಿಗಳು ನಡೆಯುತ್ತಿವೆ. ದಿನ ಕಳೆದಂತೆ ಮೆಟ್ರೊ ಪ್ರಯಾಣಿಕರ ಸಂಖ್ಯೆಯಲ್ಲಿ ಏರಿಕೆಯಾಗುತ್ತಿದ್ದು, ಮಾರ್ಗಗಳನ್ನೂ ವಿಸ್ತರಣೆ ಮಾಡಲಾಗುತ್ತಿದೆ.

ಹಸಿರು ಮಾರ್ಗದಲ್ಲಿ ವಿಸ್ತರಿತ ನಾಗಸಂದ್ರದಿಂದ ಮಾದಾವರಕ್ಕೆ ಸಂಪರ್ಕಿಸುವ ಮೆಟ್ರೊ ಮಾರ್ಗದ ಕಾಮಗಾರಿಯು ಶೇ 95ರಷ್ಟು ಪೂರ್ಣಗೊಂಡಿದೆ. ಈ ಮಾರ್ಗದಲ್ಲಿ ಡಿಸೆಂಬರ್‌ಗೂ ಮೊದಲೇ ವಾಣಿಜ್ಯ ಸಂಚಾರ ಆರಂಭಗೊಳ್ಳುವ ಸಾಧ್ಯತೆಯಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರದ ಹಳದಿ ಮಾರ್ಗದ ಕಾಮಗಾರಿಯು 2017ರಲ್ಲಿ ಆರಂಭಗೊಂಡಿತ್ತು. ಮಾರ್ಗ ಹಾಗೂ ನಿಲ್ದಾಣಗಳಲ್ಲಿ ಅಂತಿಮ ಹಂತದ ಕೆಲಸಗಳು ನಡೆಯುತ್ತಿದ್ದು ನೇರಳೆ ಹಾಗೂ ಹಸಿರು ಮಾರ್ಗಕ್ಕಿಂತ ಹಲವು ವಿಶೇಷತೆಗಳನ್ನು ಈ ಮಾರ್ಗ ಒಳಗೊಂಡಿದೆ. ಹಸಿರು–ಹಳದಿ, ಹಸಿರು–ಗುಲಾಬಿ ಹಾಗೂ ಹಳದಿ–ನೀಲಿ ಮಾರ್ಗಗಳ ನಡುವೆ ಸಂಪರ್ಕದ ಸೇತುವೆ ಆಗಲಿದೆ. ಅಲ್ಲದೇ ಡಬಲ್ ಡೆಕ್ಕರ್ ಸಹ ವಿಶೇಷತೆಯಿಂದ ಕೂಡಿದೆ. ಮಾರ್ಗದಲ್ಲಿ ಮೆಟ್ರೊ ಪ್ರಯಾಣಿಕರಿಗೆ ವಿಶೇಷ ಅನುಭೂತಿ ನೀಡಲಿದೆ ಎಂದು ಸಿಬ್ಬಂದಿ ಹೇಳುತ್ತಾರೆ.


ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ 3.3 ಕಿ.ಮೀ ಉದ್ದ ಒಂದೇ ಪಿಲ್ಲರ್‌ಗೆ ರೋಡ್ ಕಂ ರೇಲ್ (ಡಬಲ್ ಡೆಕ್ಕರ್) ಸೇತುವೆ ನಿರ್ಮಿಸಲಾಗಿದೆ. ಅದರ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ.

ಮೊದಲ ಮಟ್ಟದಲ್ಲಿ ರಸ್ತೆಯಿದ್ದು, ಎರಡು ರಸ್ತೆ ಮಾರ್ಗಗಳನ್ನು ಒಳಗೊಂಡಿದೆ. ಆ ಮಾರ್ಗದಲ್ಲಿ ಬಸ್, ಕಾರು, ದ್ವಿಚಕ್ರ ವಾಹನ ಸಂಚಾರಕ್ಕೆ ಅನುಕೂಲವಾಗುವಂತೆ ಈ ಮಾರ್ಗ ನಿರ್ಮಿಸಲಾಗಿದೆ. ಎರಡನೇ ಮಟ್ಟದಲ್ಲಿ ಹಳದಿ ಮಾರ್ಗದ ಮೆಟ್ರೊ ರೈಲು ಸಂಚಾರ ನಡೆಸಲಿದೆ. ನೆಲದಲ್ಲಿರುವ ರಸ್ತೆಯಲ್ಲಿ ಸದ್ಯ ಇರುವ ತ್ರಿಪಥ ರಸ್ತೆ ಮಾರ್ಗವೂ ಇರಲಿದೆ. ಮೆಟ್ರೊ ಕಂಬಕ್ಕೆ ಎರಡೂ ಬದಿಯಲ್ಲಿ ರೆಕ್ಕೆಗಳ ರೀತಿಯಲ್ಲಿ ಸೇತುವೆಗಳನ್ನು ಅಳವಡಿಸಲಾಗಿದೆ. ಇಷ್ಟು ಉದ್ದದ ಡಬಲ್ ಡೆಕ್ಕರ್ ಮಾರ್ಗದ ಮೇಲೆ ಬಸ್‌ಗಳು ಅಥವಾ ಬೇರೆ ವಾಹನಗಳು ಸಂಚಾರ ಆರಂಭಿಸಿದರೆ ಮಧ್ಯದಲ್ಲಿ ಇಳಿಯಲು ಅವಕಾಶ ಇರುವುದಿಲ್ಲ. ವಾಹನಗಳ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ. ವಾಹನ ದಟ್ಟಣೆ ನಿಯಂತ್ರಣಕ್ಕೆ ಬರಲಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಇನ್ನೂ ಬೇಕು ಎರಡು ವರ್ಷ: ಕಾಳೇನ ಅಗ್ರಹಾರದಿಂದ ನಾಗವಾರದವರೆಗೆ ಗುಲಾಬಿ ಮಾರ್ಗದ ಕಾಮಗಾರಿಯು ಮಂದಗತಿಯಲ್ಲಿ ಸಾಗುತ್ತಿದ್ದು, ಮುಕ್ತಾಯಗೊಳ್ಳಲು ಇನ್ನೂ ಎರಡು ವರ್ಷ ಬೇಕಿದೆ. 2025ರ ಮಾರ್ಚ್‌ಗೆ ವಾಣಿಜ್ಯ ಸಂಚಾರ ಆರಂಭಗೊಳ್ಳುವ ಸಾಧ್ಯತೆಯಿದೆ.



ಜಯದೇವ ಜಂಕ್ಷನ್‌ನಲ್ಲಿ ಮೆಟ್ರೊ ರೈಲು ಮಾರ್ಗದ ಇಂಟರ್‌ಚೇಂಜ್ ನಿಲ್ದಾಣದ ಕಾಮಗಾರಿ ಅಂತಿಮ ಹಂತದಲ್ಲಿರುವ ದೃಶ್ಯ





ಒಟ್ಟು 16 ನಿಲ್ದಾಣಗಳು

- ಆರ್‌ವಿ ರಸ್ತೆ
- ರಾಗಿಗುಡ್ಡ
- ಜಯದೇವ ಆಸ್ಪತ್ರೆ
- ಬಿಟಿಎಂ ಲೇಔಟ್
- ಸೆಂಟ್ರಲ್ ಸಿಲ್ಕ್ ಬೋರ್ಡ್
- ಬೊಮ್ಮನಹಳ್ಳಿ
- ಹೊಂಗಸಂದ್ರ
- ಕೂಡ್ಲುಗೇಟ್
- ಸಿಂಗಸಂದ್ರ
- ಹೊಸರೋಡ್
- ಬಿ.ಅಗ್ರಹಾರ
- ಎಲೆಕ್ಟ್ರಾನಿಕ್ ಸಿಟಿ
- ಇನ್ಫೊಸಿಸ್ ಫೌಂಡೇಶನ್ ಕೊಣಪ್ಪನ ಅಗ್ರಹಾರ
- ಹುಸ್ಕೂರ್ ರೋಡ್
- ಹೆಬ್ಬಗೋಡಿ
- ಬೊಮ್ಮಸಂದ್ರ

ಒಂದೇ ಮಾರ್ಗ: ಮೂರು ಇಂಟರ್‌ಲಿಂಕ್

- **ಆರ್‌ವಿ ರಸ್ತೆ ನಿಲ್ದಾಣ:** ಹಸಿರು ಹಾಗೂ ಹಳದಿ ಮಾರ್ಗಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.
- **ಜಯದೇವ ನಿಲ್ದಾಣ:** ಹಸಿರು ಮತ್ತು ಗುಲಾಬಿ ಮಾರ್ಗಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.
- **ಸೆಂಟ್ರಲ್ ಸಿಲ್ಕ್ ಬೋರ್ಡ್:** ನಿಲ್ದಾಣವು ಹಳದಿ ಮತ್ತು ನೀಲಿ ಮಾರ್ಗಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.



ಹಸಿರು ಮತ್ತು ಹಳದಿ ಮಾರ್ಗಕ್ಕೆ ಇಂಟರ್‌ಚೇಂಜ್ ನಿಲ್ದಾಣವಾಗಲಿರುವ ಆರ್‌ವಿ.ರಸ್ತೆ ನಿಲ್ದಾಣ

ಜಯದೇವ: ಅತಿ ಎತ್ತರದ ನಿಲ್ದಾಣ

'ಜಯದೇವದಲ್ಲಿ ಇಂಟರ್‌ಚೇಂಜ್ ನಿಲ್ದಾಣವು 6 ಹಂತದಲ್ಲಿ ನಿರ್ಮಾಣಗೊಂಡಿದ್ದು ನಿಲ್ದಾಣದ ಕಾಮಗಾರಿ ಶೇ 90ರಷ್ಟು ಪೂರ್ಣಗೊಂಡಿದೆ. ಬಿಎಂಆರ್‌ಸಿಎಲ್‌ನ 2ನೇ ಇಂಟರ್‌ಚೇಂಜ್ ನಿಲ್ದಾಣ ಎಂಬ ಹೆಗ್ಗಳಿಕೆಗೂ ಇದು ಪಾತ್ರವಾಗಲಿದೆ. ಏಷ್ಯಾದ ಅತಿ ಎತ್ತರದ ಇಂಟರ್‌ಚೇಂಜ್ ನಿಲ್ದಾಣಗಳಲ್ಲಿ ಒಂದಾಗಲಿದ್ದು, ಈ ನಿಲ್ದಾಣದ ಸಾಮರ್ಥ್ಯ 25 ಸಾವಿರ ಇರಲಿದೆ' ಎಂದು ಅಧಿಕಾರಿಗಳು ಹೇಳುತ್ತಾರೆ.

'ಈ ನಿಲ್ದಾಣದಲ್ಲಿ ನೆಲದ ಅಡಿಯಲ್ಲಿ ಸುರಂಗದಲ್ಲಿ ಗುಲಾಬಿ ಮೆಟ್ರೊ ರೈಲು ಮಾರ್ಗ (ನಾಗವಾರ), ಅದರ ಮೇಲೆ ರಸ್ತೆ ಮತ್ತು ಹಳದಿ ಮೆಟ್ರೊ ರೈಲು ಮಾರ್ಗ ಹಾದು ಹೋಗಲಿದೆ. ರಸ್ತೆ, ಮೆಟ್ರೊ ನಿಲ್ದಾಣಗಳನ್ನು ಒಳಗೊಂಡಿರುವ ಮೊದಲ ನಿಲ್ದಾಣ ಇದಾಗಲಿದೆ. 'ನಮ್ಮ ಮೆಟ್ರೊ'ದ ಬೇರೆಲ್ಲೂ ಈ ವ್ಯವಸ್ಥೆ ಇಲ್ಲ' ಎಂದು ಅಧಿಕಾರಿಗಳು ಹೇಳಿದರು.



ಹಳದಿ ಮಾರ್ಗದಲ್ಲಿರುವ ಮೆಟ್ರೊ ಕಂ ವಾಹನ ಚಲಿಸುವ ಡಬಲ್ ಡೆಕ್ಕರ್ ಮೇಲ್ಸೇತುವೆ ಕಾಮಗಾರಿ ಭರದಿಂದ ಸಾಗುತ್ತಿದೆ. – ಪ್ರಜಾವಾಣಿ ಚಿತ್ರ/ರಂಜು ಪಿ.

ವರ್ಷಾಂತ್ಯಕ್ಕೆ ಹಳದಿ ಮಾರ್ಗದಲ್ಲಿ ವಾಣಿಜ್ಯ ಸಂಚಾರ ಆರಂಭಿಸುತ್ತೇವೆ. ಈ ಮಾರ್ಗದಲ್ಲಿ ನಿತ್ಯ 3 ಲಕ್ಷ ಪ್ರಯಾಣಿಕರು ಸಂಚಾರ ನಡೆಸುವ ಸಾಧ್ಯತೆಯಿದೆ

ಅಂಜುಂ ಪರ್ವೇಜ್, ವ್ಯವಸ್ಥಾಪಕ ನಿರ್ದೇಶಕ, 'ನಮ್ಮ ಮೆಟ್ರೊ'

ತಮಿಳುನಾಡಿಗೆ ನೀರು ಬಿಡುಗಡೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಕಾವೇರಿ ಮೇಲುಸ್ತುವಾರಿ ಸಮಿತಿ ನಿರ್ದೇಶನದಂತೆ ಕಾವೇರಿ ನೀರಾವರಿ ನಿಗಮವು ತಮಿಳುನಾಡಿಗೆ ನೀರು ಹರಿಸಿದ್ದು, 5 ಸಾವಿರ ಕ್ಯುಸೆಕ್‌ಗೂ ಹೆಚ್ಚು ನೀರನ್ನು ನದಿಗೆ ಬಿಡಲಾಗುತ್ತಿದೆ.

'ಕಾವೇರಿ ನ್ಯಾಯಮಂಡಳಿ ತೀರ್ಪಿನ ಅನ್ವಯ ತಿಂಗಳ ಪಾಲು ನೀಡಬೇಕೆಂಬ ತಮಿಳುನಾಡು ಸರ್ಕಾರದ ಮನವಿಗೆ ಸ್ಪಂದಿಸಿರುವ ಮೇಲುಸ್ತುವಾರಿ ಸಮಿತಿಯು, ನೀರು ಹರಿಸಲು ಸೂಚಿಸಿದೆ' ಎಂದು ನಿಗಮದ ಮೂಲಗಳು ತಿಳಿಸಿವೆ. ಶನಿವಾರ ಬೆಳಿಗ್ಗೆ 6 ಗಂಟೆ ವೇಳೆಗೆ 5,358 ಕ್ಯುಸೆಕ್ ಹೊರಹರಿವು ದಾಖಲಾಗಿತ್ತು. 10 ದಿನಗಳಿಂದ ನಾಲೆಗಳಿಗೆ ನೀರು ನಿಲ್ಲಿಸಲಾಗಿದೆ.

ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ರೈತಸಂಘದ ಸದಸ್ಯರು ಶನಿವಾರ ಪ್ರತಿಭಟಿಸಿದರು.

ಬಿಬಿಎಂಪಿ ಕಡತ ಪರಿಶೀಲನೆ ಶುರು

ಪ್ರಾಥಮಿಕ ವರದಿ ಸಲ್ಲಿಸಲು ಸಿದ್ಧತೆ ನಡೆಸಿದ ತನಿಖಾ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 45 ಕಚೇರಿಗಳಿಂದ ವಶಕ್ಕೆ ಪಡೆದಿರುವ ಕಡತಗಳ ಪರಿಶೀಲನೆಯನ್ನು ಲೋಕಾಯುಕ್ತದ ಅಧಿಕಾರಿಗಳು ಶನಿವಾರದಿಂದ ಆರಂಭಿಸಿದ್ದಾರೆ. ಮುಂದಿನ ವಾರದಲ್ಲಿ ಪ್ರಾಥಮಿಕ ವರದಿ ಸಲ್ಲಿಸಲು ಸಿದ್ಧತೆ ನಡೆದಿದೆ.

ಬೆಂಗಳೂರಿನ 20ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪಾಲಿಕೆಯ 45 ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸರು ಮತ್ತು ನ್ಯಾಯಾಂಗ ವಿಭಾಗದ ಅಧಿಕಾರಿಗಳು ಗುರುವಾರ ಏಕಕಾಲಕ್ಕೆ ದಾಳಿ ನಡೆಸಿದ್ದರು. ಎರಡು ದಿನಗಳ ನಿರಂತರ ಶೋಧ ನಡೆಸಲಾಗಿತ್ತು. ಶುಕ್ರವಾರ ಸಂಜೆ ಕಾರ್ಯಾಚರಣೆ ಅಂತ್ಯಗೊಂಡಿದ್ದು, ನೂರಾರು ಕಡತಗಳನ್ನು ವಶಕ್ಕೆ ಪಡೆಯಲಾಗಿತ್ತು.



'ಬಿಬಿಎಂಪಿ ಕಚೇರಿಗಳಿಂದ ವಶಕ್ಕೆ ಪಡೆದ ಕಡತಗಳನ್ನು ಲೋಕಾಯುಕ್ತ ಕಚೇರಿಯಲ್ಲಿ ಸಂಗ್ರಹಿಸಿ ಇಡಲಾಗಿದೆ. ತನಿಖಾ ತಂಡಗಳು ಪ್ರತ್ಯೇಕವಾಗಿ ತಾವು ನಡೆಸಿದ ಶೋಧ ಕಾರ್ಯಾಚರಣೆಯ ವರದಿಯನ್ನು ತಯಾರಿಸುತ್ತಿವೆ. ಎಲ್ಲ ಕಡತಗಳನ್ನೂ ಪರಿಶೀಲಿಸಿ ಪ್ರಾಥಮಿಕ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ' ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ವಿಳಂಬವೇ ಹೆಚ್ಚು: ಖಾತೆ ಬದಲಾವಣೆ, ಕಟ್ಟಡ ನಕ್ಷೆ ಮಂಜೂರಾತಿ ಸೇರಿದಂತೆ ವಿವಿಧ ವಿಷಯಗಳಲ್ಲಿ ಸಾರ್ವಜನಿಕರು ಸಲ್ಲಿಸಿದ್ದ ಅರ್ಜಿಗಳ ವಿಲೇವಾರಿಯಲ್ಲಿ ಭಾರಿ ವಿಳಂಬ ಆಗುತ್ತಿರುವುದಕ್ಕೆ ತನಿಖಾ ತಂಡಗಳಿಗೆ ಸಾಕ್ಷ್ಯ ಸಿಕ್ಕಿದೆ. ಕೆಲವು ಕಚೇರಿಗಳಲ್ಲಿ ಎರಡು ವರ್ಷಗಳಿಗೂ ಹೆಚ್ಚು ಕಾಲದಿಂದ ಇಂತಹ ಕಡತಗಳನ್ನು ಬಾಕಿ ಇರಿಸಿಕೊಂಡಿರುವುದು ಪತ್ತೆಯಾಗಿದೆ ಎಂದು ಮೂಲಗಳು ಹೇಳಿವೆ.

ದುರಾಡಳಿತ, ಕಾನೂನು ಉಲ್ಲಂಘನೆ, ಉದ್ದೇಶ ಪೂರ್ವಕ ವಿಳಂಬ, ಸ್ವಜನ ಪಕ್ಷಪಾತ ದಂತಹ ಕೃತ್ಯಗಳು ಕಂಡುಬಂದಲ್ಲಿ ಆ ಕುರಿತು ತನಿಖಾ ತಂಡಗಳು ವರದಿ ಸಲ್ಲಿಸಲಿವೆ. 45 ತಂಡಗಳೂ ಪ್ರತ್ಯೇಕವಾಗಿ ಲೋಕಾಯುಕ್ತರಿಗೆ ವರದಿ ಸಲ್ಲಿಸಲಿವೆ. ಆ ವರದಿಗಳನ್ನು ಆಧರಿಸಿ ಲೋಕಾಯುಕ್ತರು ಮುಂದಿನ ಕ್ರಮ ಜರುಗಿಸಲಿದ್ದಾರೆ ಎಂದು ಸಂಸ್ಥೆಯ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರೀಯ ತೆರಿಗೆ ಸಲಹೆಗಾರರ ಸಮ್ಮೇಳನದಲ್ಲಿ ಬಸವರಾಜ ಬೊಮ್ಮಾಯಿ

'ಹೆಚ್ಚು ತೆರಿಗೆ ಅಭಿವೃದ್ಧಿಯ ಸಂಕೇತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚು ತೆರಿಗೆ ಸಂಗ್ರಹವಾಗುತ್ತಿದ್ದರೆ, ದೇಶ ಅಭಿವೃದ್ಧಿಯಾಗುತ್ತಿದೆ ಎಂದರ್ಥ ಎಂದು ಶಾಸಕ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟರು.

ನಗರದಲ್ಲಿ ಶನಿವಾರ ನಡೆದ ರಾಷ್ಟ್ರೀಯ ತೆರಿಗೆ ಸಲಹೆಗಾರರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ನಾನು ಹಣಕಾಸು ಸಚಿವನಾಗಿ ಅಧಿಕಾರ ಸ್ವೀಕರಿಸಿದಾಗ ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲ. ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ ಮನಸು ಮಾಡಿದರೆ ಯಾವುದೂ ಕಷ್ಟವಲ್ಲ ಎಂದು ಯೋಚಿಸಿ ಕಾರ್ಯ ಪ್ರವೃತ್ತನಾದೆ. ಮೂರು ತಿಂಗಳಲ್ಲಿ ಶೇ 70 ಆದಾಯ ಹೆಚ್ಚಳ ಮಾಡಿದೆ. ರಾಜ್ಯದ ಆದಾಯ ಹೆಚ್ಚಿಸಿ ಎರಡು ವರ್ಷಗಳ ಅವಧಿಯಲ್ಲಿ ಉಳಿತಾಯ ಬಜೆಟ್ ಮಂಡನೆ ಮಾಡಿದೆ. ಈಗಿನ ಸರ್ಕಾರ ಉಚಿತ ಯೋಜನೆಗಳಿಗೆ ಹೆಚ್ಚಿನ ಹಣ ವೆಚ್ಚ ಮಾಡುತ್ತಿದ್ದು, ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತಿದೆ' ಎಂದು ವಿಶ್ಲೇಷಿಸಿದರು.



ಸಮ್ಮೇಳನದಲ್ಲಿ ಶಾಸಕ ಬಸವರಾಜ ಬೊಮ್ಮಾಯಿ ಅವರನ್ನು ಅಖಿಲ ಭಾರತ ತೆರಿಗೆ ಸಲಹೆಗಾರರ ಒಕ್ಕೂಟದ ಅಧ್ಯಕ್ಷ ಪಂಕಜ್ ಘಿಯಾ ಮತ್ತು ರಾಜ್ಯ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷ ಎಸ್‌. ನಂಜುಂಡ ಪ್ರಸಾದ್ ಅವರು ಸನ್ಮಾನಿಸಿದರು

ಆರ್ಥಿಕತೆ ಯಾವುದೇ ಒತ್ತಡವಿಲ್ಲದೇ ಬೆಳೆಯುವಂತಾಗಬೇಕು. ಆರಂಭದ ದಿನಗಳಲ್ಲಿ ಬಹುತೇಕರು ಜಿಎಸ್‌ಟಿ ವಿರೋಧಿಸಿದ್ದರು. ಈಗ ಎಲ್ಲರು ಒಪ್ಪಿಕೊಂಡಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗುತ್ತಿದೆ ಎಂದು ತಿಳಿಸಿದರು.

ಆರ್ಥಿಕ ತಜ್ಞರು ಜಿಡಿಪಿಯನ್ನು ಕ್ಲಿಷ್ಟಮಯಗೊಳಿಸುತ್ತಾರೆ. ಕೆಲವರು ಕಾನೂನಿನ ಅರಿವಿಲ್ಲದೆ ತೆರಿಗೆ ಕಟ್ಟದೇ ಉಳಿಯುತ್ತಾರೆ. ಕೆಲವರು ಕಾನೂನಿನ ಮಾಹಿತಿ ಇದ್ದರೂ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ತೆರಿಗೆ ಕಾನೂನುಗಳು ಸರಳವಾಗಬೇಕು ಎಂದರು.

'ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್' ಸಂಗೀತೋತ್ಸವ



'ಇನ್ಫೊಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಸ್ಮಾರಕ ಪ್ರಶಸ್ತಿ ಸ್ವೀಕರಿಸಿದ ಆಶಿಶ್ ಖಾನ್ ಹಾಗೂ ಸಿತಾರ್ ನವಾಜ್ ಉಸ್ತಾದ ಬಾಲೇಖಾನ್ ಸಹ ಕಲಾವಿದ' ಪ್ರಶಸ್ತಿಯನ್ನು ಸತೀಶ್ ಹಂಪಿಹೊಳಿ ಅವರಿಗೆ ಪ್ರದಾನ ಮಾಡಲಾಯಿತು. ರಫೀಕ್ ಖಾನ್, ಶಫೀಕ್ ಖಾನ್ , ಪಂಡಿತ್ ವಿನಾಯಕ್ ತೊರ್ವಿ, ರಾಯೀಸ್ ಖಾನ್ ಹಾಗೂ ಉಸ್ತಾದ್ ಹಫೀಜ್ ಬಾಲೇಖಾನ್ ಇದ್ದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೊರಿಯಲ್ ಫೌಂಡೇಷನ್ ಟ್ರಸ್ಟ್ ವತಿಯಿಂದ 'ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್' ಸಂಗೀತೋತ್ಸವ ಜಯನಗರದಲ್ಲಿರುವ ಯುವಪಥದ ವಿವೇಕ ಸಭಾಂಗಣದಲ್ಲಿ ಶನಿವಾರ ನಡೆಯಿತು.

ಟ್ರಸ್ಟ್ ವತಿಯಿಂದ 2022ನೇ ಸಾಲಿನ 'ಇನ್ಫೊಸಿಸ್– ಸಿತಾರ್ ನವಾಜ್ ಬಾಲೇಖಾನ್ ಸ್ಮರಣಾರ್ಥ ಪ್ರಶಸ್ತಿ'ಯನ್ನು ಸರೋದ್ ವಾದಕ ಉಸ್ತಾದ್ ಆಶೀಶ್ ಖಾನ್ ಅವರಿಗೆ ನೀಡಿ ಗೌರವಿಸಲಾಯಿತು. 'ಸಿತಾರ್ ನವಾಜ್ ಉಸ್ತಾದ ಬಾಲೇಖಾನ್ ಸ್ಮರಣಾರ್ಥ ಸಹ ಕಲಾವಿದ ಪ್ರಶಸ್ತಿ'ಯನ್ನು ತಬಲಾ ವಾದಕ ಸತೀಶ್ ಹಂಪಿಹೊಳಿ ಅವರಿಗೆ ನೀಡಿ ಸನ್ಮಾನಿಸಲಾಯಿತು.

ಕಿರಣ–ಘರಣ ಗಾಯಕ ಪಂಡಿತ್ ವಿನಾಯಕ ತೊರ್ವಿ ಪ್ರಶಸ್ತಿ ಪ್ರದಾನ ಮಾಡಿದರು. ಕಲಾವಿದ ರಫೀಕ್ ಖಾನ್ , ಶಫಿಕ್ ಖಾನ್, ರಾಯೀಸ್ ಖಾನ್, ಉಸ್ತಾದ್ ಹಫೀಜ್ ಬಾಲೇಖಾನ್ ಹಾಜರಿದ್ದರು.

ಪ್ರವೀಣ್ ಜೆ. ಶೈಖ್, ಅನೀಸ ಖಾನ್ ಸೌದಾಗರ್, ದತ್ತಾತ್ರೇಯ ಜೋಶಿ, ಶಿವಕುಮಾರ್ ಮಹಾಂತ್‌ರಿಂದ ಸಂಗೀತ ಕಚೇರಿ ನಡೆಯಿತು. ಶ್ರೇಯಾ ವಿ. ಮೂರ್ತಿ, ಸತೀಶ್ ಹಂಪಿಹೊಳಿ, ಗೌರವ್ ಗಡಿಯಾರ್ ತಂಡದಿಂದ ಹಿಂದುಸ್ಥಾನಿ ಸಂಗೀತ ಕಾರ್ಯಕ್ರಮ ನಡೆಯಿತು. ಉಸ್ತಾದ್ ಆಶೀಸ್‌ಖಾನ್ ಅವರ ಸರೋದ್ ಕಾರ್ಯಕ್ರಮಕ್ಕೆ ರಾಜೇಂದ್ರ ನಾಕೋಡ್ ತಬಲದಲ್ಲಿ ಸಾಥ್ ನೀಡಿದರು.

ಪುಲಕೇಶಿನಗರ ಶಾಸಕರ ಕಚೇರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಪುಲಕೇಶಿನಗರ ವಿಧಾನಸಭಾ ಕ್ಷೇತ್ರದ ಶಾಸಕರ ಕಚೇರಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಕ್ರವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಶಾಸಕ ಶ್ರೀನಿವಾಸ್ ಅವರು ಕ್ಷೇತ್ರದ ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಅನುಕೂಲವಾಗುವಂತೆ ಶಾಸಕರ ಕಚೇರಿ ಆರಂಭಿಸಿದ್ದಾರೆ. ಒಳ್ಳೆಯ ಕೆಲಸ ಮಾಡಿದ್ದಾರೆ. ಕ್ಷೇತ್ರದಲ್ಲಿರುವ ಸಮಸ್ಯೆಗಳ ಕುರಿತು ಶೀಘ್ರದಲ್ಲೇ ಚರ್ಚಿಸಲಾಗುವುದು. ಮುಖ್ಯವಾಗಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾವನೆ ಮಾಡಿದ್ದಾರೆ. ಈ ಬಗ್ಗೆ ಪರಿಶೀಲಿಸಿ, ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

ಶಾಸಕ ಎ.ಸಿ.ಶ್ರೀನಿವಾಸ್ ಮಾತನಾಡಿ, ಕ್ಷೇತ್ರದ ಜನರ ಕುಂದುಕೊರತೆ ಆಲಿಸಿ, ಅಧಿಕಾರಿಗಳೊಂದಿಗೆ ಚರ್ಚಿಸಿ, ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕಚೇರಿ ಆರಂಭಿಸಲಾಗಿದೆ ಎಂದರು.




ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಶಾಸಕರ ಕಚೇರಿಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಕ್ರವಾರ ಉದ್ಘಾಟಿಸಿದರು. ಶಾಸಕ ಎ.ಸಿ.ಶ್ರೀನಿವಾಸ್ ಇದ್ದರು

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ವಸತಿ ಸಚಿವ ಜಮೀರ್ ಅಹಮದ್ ಖಾನ್, ಶಾಸಕರಾದ ರಿಜ್ವಾನ್ ಅರ್ಷದ್, ಎನ್‌.ಎ.ಹ್ಯಾರಿಸ್, ನಾಗರಾಜ ಯಾದವ್, ಮಾಜಿ ಶಾಸಕರಾದ ಬಿ.ಪ್ರಸನ್ನಕುಮಾರ್, ಆರ್‌.ವಿ.ವೆಂಕಟೇಶ್, ಪಾಲಿಕೆ ಮಾಜಿ ಸದಸ್ಯರಾದ ಎ.ಸಿ. ಹರಿಪ್ರಸಾದ್, ಸಂಪತ್ ರಾಜ್, ಎ.ಆರ್‌. ಜಾಕೀರ್, ಜಮೀರ್ ಶಾ ಉಪಸ್ಥಿತರಿದ್ದರು.

ನಾಗಾಭರಣಗೆ ಗೌರವ ಡಾಕ್ಟರೇಟ್

ತುಮಕೂರು: ಚಲನಚಿತ್ರ ನಿರ್ದೇಶಕ ಟಿ.ಎಸ್.ನಾಗಾಭರಣ ಹಾಗೂ ಸಮಾಜ ಸೇವಕ ನಗರದ ಆರ್‌.ಎಲ್.ರಮೇಶ್ ಬಾಬು ಅವರಿಗೆ ತುಮಕೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಲಿದೆ.



ಟಿ.ಎಸ್‌. ನಾಗಾಭರಣ

ಕನ್ನಡ ಚಲನ ಚಿತ್ರ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆ ಗುರುತಿಸಿ ನಾಗಾಭರಣಗೆ ಹಾಗೂ ತುಮಕೂರು ವಿಶ್ವವಿದ್ಯಾಲಯದ ಕಲಾ ಕಾಲೇಜಿನಲ್ಲಿ ಮಧ್ಯಾಹ್ನದ ಬಿಸಿ ಊಟಕ್ಕೆ ನೆರವು ನೀಡುತ್ತಿರುವ ಆರ್‌. ಎಲ್.ರಮೇಶ್ ಬಾಬು ಅವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ ಎಂದು ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ತಿಳಿಸಿದರು.

ಆ. 7 ರಂದು ನಡೆಯಲಿರುವ 16ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ.

ಹೊಸಕೋಟೆ ಏತ ನೀರಾವರಿ ಯೋಜನೆ

ಕಾಮಗಾರಿ ಪೂರ್ಣ: ಅ.31ರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 43 ಕೆರೆಗಳಿಗೆ ಸಂಸ್ಕರಿಸಿದ ನೀರನ್ನು ಹರಿಸುವ ಹೊಸಕೋಟೆ ಏತ ನೀರಾವರಿ ಯೋಜನೆ ಕಾಮಗಾರಿಯನ್ನು ಅಕ್ಟೋಬರ್ 31ರ ಒಳಗೆ ಪೂರ್ಣಗೊಳಿಸುವಂತೆ ಸಣ್ಣ ನೀರಾವರಿ ಸಚಿವ ಎನ್.ಎಸ್. ಬೋಸರಾಜು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಗಡುವು ನೀಡಿದರು.

ಈ ಯೋಜನೆಯ ಕಾಮಗಾರಿ ವಿಳಂಬವಾಗಿರುವ ಕುರಿತು ಅಧಿಕಾರಿಗಳ ಜತೆ ಶನಿವಾರ ಸಭೆ ನಡೆಸಿದ ಅವರು, 'ಟೆಂಡರ್ ಷರತ್ತಿನ ಪ್ರಕಾರ, 2022ರ ಸೆಪ್ಟೆಂಬರ್ 28ರಂದು ಕಾಮಗಾರಿ ಪೂರ್ಣಗೊಳಿಸಬೇಕಿತ್ತು. ಹತ್ತು ತಿಂಗಳಷ್ಟು ವಿಳಂಬವಾದರೂ ಕಾಮಗಾರಿ ಮುಗಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- 43 ಕೆರೆಗಳಿಗೆ ಸಂಸ್ಕರಿಸಿದ ನೀರು
- ಕಾಮಗಾರಿ ವಿಳಂಬಕ್ಕೆ ಸಚಿವರ ಆಕ್ರೋಶ
- ಅಧಿಕಾರಿಗಳಿಗೆ ತಾಕೀತು

ಗುತ್ತಿಗೆದಾರರು ನಿಗದಿತ ಯೋಜನೆಯಂತೆ ಕಾಮಗಾರಿಯ ವೇಗ ಕಾಯ್ದುಕೊಂಡಿರುವುದನ್ನು ಅಧಿಕಾರಿಗಳು ಪರಿಶೀಲಿಸಿ, ಖಾತರಿಪಡಿಸಿಕೊಳ್ಳಬೇಕು. ಕಾಮಗಾರಿಯ ವೇಗ ತಗ್ಗಿದರೆ ಎಚ್ಚರಿಕೆ ನೀಡಿ, ಗಡುವಿನೊಳಗೆ ಪೂರ್ಣಗೊಳಿಸುವಂತೆ ನಿಗಾ ವಹಿಸಬೇಕು. ಅ.31ಕ್ಕೂ ಮೊದಲು ಕಾಮಗಾರಿ ಪೂರ್ಣಗೊಳಿಸಲೇಬೇಕು. ಆ ನಂತರ ಯಾವುದೇ ಕಾರಣ ನೀಡಲು ಅವಕಾಶ ನೀಡುವುದಿಲ್ಲ ಎಂದರು.

ಈ ಯೋಜನೆ ಅಡಿ 2 ಕಿ.ಮೀ. ಉದ್ದ ಕೊಳವೆ ಮಾರ್ಗದ ಕಾಮಗಾರಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅನುಮತಿ ದೊರಕಿರಲಿಲ್ಲ. ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಾಧಿಕಾರದ ಅಧಿಕಾರಿಗಳು, 'ಕೊಳವೆ ಮಾರ್ಗ ಅಳವಡಿಕೆಗೆ ಅನುಮತಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಸೋಮವಾರದಿಂದಲೇ ಕಾಮಗಾರಿ ಆರಂಭಿಸಬಹುದು' ಎಂದರು.

ಹೆಬ್ಬಾಳ – ನಾಗವಾರ ಕಣಿವೆ ಯೋಜನೆಯ ಬಾಕಿ ಕಾಮಗಾರಿಗಳ ವೇಗವನ್ನೂ ಹೆಚ್ಚಿಸಬೇಕು. ಸೆಪ್ಟೆಂಬರ್ 15ರಂದು ಕಾಮಗಾರಿ ಪರಿಶೀಲನೆ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ಚಿತ್ರಾವಳಿ



ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರ ಖಂಡಿಸಿ ಹಾಗೂ ಪ್ರಾದೇಶಿಕ ಸಮಗ್ರತೆ ಉಳಿಸುವಂತೆ ಕೋರಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಣಿಪುರದ ಯುವಕ – ಯುವತಿಯರು ಪ್ರತಿಭಟನೆ ನಡೆಸಿದರು



ಅರಬಿಂದೋ ಕಾಲೇಜಿನಲ್ಲಿ ಶುಕ್ರವಾರ ನಡೆದ ವಾರ್ಷಿಕೋತ್ಸವವನ್ನು ಜಾನಪದ ಕಲಾವಿದ ಕಡಬಗೆರೆ ಮುನಿರಾಜು ಉದ್ಘಾಟಿಸಿದರು. ರಾಜಾಜಿನಗರದ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಸುಹಾಸ್ ಬಾಗಲ್‌ಕೋಟ್ಕರ್, ಕಾರ್ಯದರ್ಶಿ ರಮೇಶ್ ಹೊಂಗಲ್, ಖಜಾಂಚಿ ಗುರುರಾಜ ದೇಶಪಾಂಡೆ, ಪ್ರಾಂಶುಪಾಲರಾದ ಶೈಲಜಾ ಇದ್ದರು



ಎಲೆಕ್ಟ್ರಾನಿಕ್ಸ್ ಮತ್ತು ಇತರ ಗೃಹೋಪಯೋಗಿ ಉಪಕರಣಗಳ ಮಾರಾಟ ಸಂಸ್ಥೆ ಗಿರಿಯಾಸ್‌ನ 133ನೇ ಮಳಿಗೆಯನ್ನು ಮದನಾಯಕನಹಳ್ಳಿಯಲ್ಲಿ ಆರಂಭಿಸಲಾಯಿತು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪಿ.ಎಲ್‌. ಗಿರಿಯಾ, ನಿರ್ದೇಶಕ ಮನೀಶ್ ಗಿರಿಯಾ ಮತ್ತು ಹರೀಶ್ ಇದ್ದರು

ಸಮಿತಿ, ಕಾರ್ಯಪಡೆ ವರದಿ ಕಡೆಗಣನೆ; ಸರ್ಕಾರಿ ಭೂಮಿಗಳಲ್ಲಿ ಬೃಹತ್ ಕಟ್ಟಡ

ವರದಿ ಮಾಹಿತಿ 'ಮೀರಿದ' ಭೂಮಿ ಒತ್ತುವರಿ

1,22,918 ಎಕರೆ	38,946 ಎಕರೆ	12,179 ಎಕರೆ	2,139 ಎಕರೆ	7,881 ಎಕರೆ	16,747 ಎಕರೆ	269 ಎಕರೆ
ಒಟ್ಟು ಸರ್ಕಾರಿ ಜಮೀನಿನ ವಿಸ್ತೀರ್ಣ	ಒತ್ತುವರಿ ಗುರುತಿಸಿರುವುದು	ಸಾಗುವಳಿ ಸಕ್ರಮ (ನಮೂನೆ 50/53)	ನ್ಯಾಯಾಲಯ ಪ್ರಕರಣ	ಸಾರ್ವಜನಿಕ ಉದ್ದೇಶಕ್ಕೆ ಬಳಕೆ	ತೆರವುಗೊಳಿಸಬೇಕಾದ ಒತ್ತುವರಿ	ಒತ್ತುವರಿ ಬಾಕಿ (2023ರ ಏ.30ರಂತೆ)

ಕಂದಾಯ ಇಲಾಖೆ ಅಂಕಿ–ಅಂಶ (30 ಏಪ್ರಿಲ್ 2023)

• ಆರ್. ಮಂಜುನಾಥ್

ಬೆಂಗಳೂರು: ನಗರ ಜಿಲ್ಲೆಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ಬಗ್ಗೆ ಪ್ರಮುಖ ಸಮಿತಿಗಳು ಹಾಗೂ ಈಗ ಸರ್ಕಾರದ ಮುಂದಿರುವ ಒತ್ತುವರಿ ಅಂಕಿ ಅಂಶದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಕಂದಾಯ ಇಲಾಖೆ ಮಾಹಿತಿ ಪ್ರಕಾರ, ನಗರ ಜಿಲ್ಲೆಯಲ್ಲಿ 269 ಎಕರೆ ಒತ್ತುವರಿ ಭೂಮಿಯನ್ನು ಮಾತ್ರ ತೆರವು ಮಾಡಬೇಕಿದೆ.

ಬೆಂಗಳೂರು ನಗರ ಜಿಲ್ಲೆ ಸರ್ಕಾರಿ ಜಮೀನು ಒತ್ತುವರಿ ಕುರಿತು ಎ.ಟಿ. ರಾಮಸ್ವಾಮಿ ನೇತೃತ್ವದ ವಿಧಾನಮಂಡಲ ಜಂಟಿ ಸಮಿತಿ 2007ರ ಜುಲೈನಲ್ಲಿ ವರದಿ ನೀಡಿತ್ತು. ಸರ್ಕಾರಿ ಜಮೀನುಗಳ ಸಂರಕ್ಷಣೆ ಕಾರ್ಯಪಡೆ ಅಧ್ಯಕ್ಷ ವಿ. ಬಾಲಸುಬ್ರಮಣಿಯನ್ 2011ರ ಜುಲೈನಲ್ಲಿ 'ದುರಾಸೆ ಮತ್ತು ಶಾಮೀಲು' ಶೀರ್ಷಿಕೆಯಡಿ ವರದಿ ನೀಡಿದ್ದರು. ಕೆ.ಬಿ. ಕೋಳಿವಾಡ ಅಧ್ಯಕ್ಷತೆಯಲ್ಲಿ 2017ರಲ್ಲಿ ನಗರ ಹಾಗೂ ಗ್ರಾಮಾಂತರ ಜಿಲ್ಲೆಯ ಕೆರೆಗಳ ಒತ್ತುವರಿ ಮತ್ತು ಸಂರಕ್ಷಣೆ ಸದನ ಸಮಿತಿ ವರದಿ ನೀಡಿದೆ.

ಈ ಮೂರು ವರದಿಗಳ ಅಂಕಿ–ಅಂಶಗಳಲ್ಲಿ ಸಾಕಷ್ಟು ವ್ಯತ್ಯಾಸವಿದ್ದು, ಕೊನೆಗೆ 269 ಎಕರೆ ಮಾತ್ರ ಒತ್ತುವರಿ ಬಾಕಿ ಉಳಿದಿದೆ ಎಂದಿರುವುದರಲ್ಲಿ ನಿಜಾಂಶವಿಲ್ಲ ಎಂದು ಸಮಿತಿ, ಕಾರ್ಯಪಡೆ ಅಧ್ಯಕ್ಷರು ಹೇಳಿದ್ದು, ಹಲವು ಅನುಮಾನಗಳಿಗೆ ಎಡೆಮಾಡಿದೆ.

'ಸಾರ್ವಜನಿಕ ಜಮೀನುಗಳ ನಿಗಮ, ಕಂದಾಯ ಇಲಾಖೆಯ ಅಂಕಿ ಅಂಶದಂತೆ ವರದಿ ನೀಡಿದೆ. ಇದರಲ್ಲಿ ಅರಣ್ಯ ಭೂಮಿ ಒತ್ತುವರಿ ಸೇರಿಲ್ಲ. ಅಲ್ಲದೆ ಕಂದಾಯ ಇಲಾಖೆಗೆ ಸೇರಿದ ಕೆರೆಗಳ ಒತ್ತುವರಿ ವಿವರವನ್ನೂ ಒಳಗೊಂಡಿಲ್ಲ. ಹೀಗಾಗಿ, ಸಾಕಷ್ಟು ಒತ್ತುವರಿಯನ್ನು ಈ ಮಾಹಿತಿ ಒಳಗೊಂಡಿಲ್ಲ. ವಾಸ್ತವ ವರದಿಯನ್ನು ಅಧಿಕಾರಿಗಳು ಮುಚ್ಚಿಟ್ಟಿದ್ದು ಅದನ್ನು ಹೊರಗೆ ತೆಗೆದು ತನಿಖೆ ಮಾಡಿದರೆ ಒತ್ತುವರಿ ಸಾವಿರಾರು ಎಕರೆಯಲ್ಲಿರುವುದು ಹೊರ ಬರುತ್ತದೆ' ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ವಿ. ಬಾಲಸುಬ್ರಮಣಿಯನ್ ಹೇಳಿದರು.

ಬೆಂಗಳೂರು ನಗರ ಜಿಲ್ಲೆಯಲ್ಲಿ ಒತ್ತುವರಿ

ಎ.ಟಿ. ರಾಮಸ್ವಾಮಿ ವರದಿ (ಜುಲೈ 2007– 2ನೇ ವರದಿ)	ವಿ. ಬಾಲಸುಬ್ರಮಣಿಯನ್ ವರದಿ (ಜೂನ್ 2011)	ಕೋಳಿವಾಡ ಕೆರೆ ಒತ್ತುವರಿ ವರದಿ (2014–2017)
27,336 ಎಕರೆ 9 ಗುಂಟೆ ಒಟ್ಟು ಸರ್ಕಾರಿ ಭೂಮಿ ಒತ್ತುವರಿ	1,22,918 ಎಕರೆ ಒಟ್ಟು ಕಂದಾಯ ಭೂಮಿ	4,277 ಎಕರೆ 25 ಗುಂಟೆ ಕೆರೆಗಳಲ್ಲಿನ ಒಟ್ಟು ಒತ್ತುವರಿ
21,706 ಎಕರೆ ಕಂದಾಯ ಭೂಮಿ ಒತ್ತುವರಿ	33,874 ಎಕರೆ ಒಟ್ಟು ಅರಣ್ಯ ಭೂಮಿ	2,254 ಎಕರೆ 21 ಗುಂಟೆ ಸರ್ಕಾರಿ ಒತ್ತುವರಿ
41,315 ಎಕರೆ ಒಟ್ಟು ಒತ್ತುವರಿ (3ನೇ ವರದಿಯಲ್ಲಿ)	25,994 ಎಕರೆ ಕಂದಾಯ ಭೂಮಿ ಒತ್ತುವರಿ	2,023 ಎಕರೆ 4 ಗುಂಟೆ ಖಾಸಗಿ ಒತ್ತುವರಿ

14,62,639 ಎಕರೆ	1,26,247 ಎಕರೆ
ರಾಜ್ಯದಲ್ಲಿ ಒಟ್ಟು ಸರ್ಕಾರಿ ಭೂಮಿ ಒತ್ತುವರಿ	ಒತ್ತುವರಿ ಬಾಕಿ (2023ರ ಏ.30ರಂತೆ)

'ಬೆಂಗಳೂರಿನಲ್ಲಿ 12 ಸಾವಿರ ಎಕರೆಗೂ ಹೆಚ್ಚು ಭೂಮಿಯನ್ನು ಸಾಗುವಳಿ ಆಧಾರದ ಮೇಲೆ ಸಕ್ರಮ ಮಾಡಲು ಮುಂದಾಗಿದೆ. ಆದರೆ ನಮೂನೆ 50/53ರಲ್ಲಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಸ್ಥಳೀಯ ಶಾಸಕರ ಸಮಿತಿ ಮಂಜೂರು ಮಾಡಬೇಕು. ಆದರೆ, ಕಾಯ್ದೆ ಪ್ರಕಾರ ಅವುಗಳನ್ನು ಮಂಜೂರು ಮಾಡಲು ಸಾಧ್ಯವಿಲ್ಲ. ಅರ್ಜಿಗಳನ್ನು ತಿರಸ್ಕರಿಸದೆ ಹಾಗೇ ಇಟ್ಟುಕೊಂಡಿದ್ದಾರೆ' ಎಂದರು.

'ಕಾಯ್ದೆ ಪ್ರಕಾರ, ಬಿಬಿಎಂಪಿ ಗಡಿ ಸುತ್ತಮುತ್ತಲಿನ 18 ಕಿ.ಮೀ ಅಂತರದಲ್ಲಿ ಸಾಗುವಳಿಗಾಗಿ ಭೂಮಿಯನ್ನು ಮಂಜೂರು ಮಾಡಲು ಬರುವುದಿಲ್ಲ. ಇಲ್ಲಲ್ಲೂ ಒಕ್ಕಲುತನ ಮಾಡುವಂತಿಲ್ಲ. ಇಂತಹ ಭೂಮಿಗಳ ಅರ್ಜಿ ಸಮಿತಿ ಮುಂದೆ ಬಾಕಿ ಇದ್ದು, ಆ ಪ್ರದೇಶದಲ್ಲಿ ರಿಯಲ್ ಎಸ್ಟೇಟ್ ತಲೆ ಎತ್ತಿದೆ. ಬೃಹತ್ ಕಟ್ಟಡಗಳು ನಿರ್ಮಾಣವಾಗಿವೆ. ಅವುಗಳನ್ನೆಲ್ಲ ಇವರು ತೆರವು ಮಾಡುತ್ತಾರೆಯೇ' ಎಂದು ಪ್ರಶ್ನಿಸಿದರು.

ಪ್ರಜಾವಾಣಿ ವಿಶೇಷ

'ರಿಯಲ್ ಎಸ್ಟೇಟ್ ಮಾಫಿಯಾ ಬಿಡುವುದಿಲ್ಲ '


ವಿ. ಬಾಲ ಸುಬ್ರಮಣಿಯನ್

'ಸಚಿವ ಕೃಷ್ಣಬೈರೇಗೌಡ ಅವರು ಕಾಲಮಿತಿಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ತೆರವು ಮಾಡುವುದಾಗಿ ಹೇಳುತ್ತಿದ್ದಾರೆ. ಆದರೆ, ಎಲ್ಲ ಪಕ್ಷಗಳಲ್ಲೂ ಇರುವ ರಿಯಲ್ ಎಸ್ಟೇಟ್ ಮಾಫಿಯಾ ಇದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಬೆಂಗಳೂರು ನಗರದಲ್ಲಿ ಪ್ರತಿ ಎಕರೆಗೆ ಇದೀಗ ಕನಿಷ್ಠ ₹15 ಕೋಟಿಯಿಂದ ₹20 ಕೋಟಿ ಮೌಲ್ಯವಿದೆ. ಅದನ್ನೆಲ್ಲ ತೆರವು ಮಾಡಿ ಉಳಿಸಿಕೊಳ್ಳಲು ಸಾಧ್ಯವಿಲ್ಲ. ರಾಜಕಾಲುವೆ ಒತ್ತುವರಿ ತೆರವು ಮಾಡುತ್ತೇವೆ ಎಂದು ವರ್ಷಗಳಿಂದ ಹೇಳುತ್ತಿರುವ ಹಾಗೆ ಇದೂ ಆಗುತ್ತದೆ' ಎಂದು ಸರ್ಕಾರಿ ಜಮೀನುಗಳ ಸಂರಕ್ಷಣೆ ಕಾರ್ಯಪಡೆ ಅಧ್ಯಕ್ಷರಾಗಿದ್ದ ವಿ. ಬಾಲಸುಬ್ರಮಣಿಯನ್ ಹೇಳಿದರು.

'ಕೋಳಿವಾಡ ಅವರ ವರದಿ ಪ್ರಕಾರ ನಗರದ ಕೆರೆಗಳ ಒತ್ತುವರಿಯೇ ನಾಲ್ಕು ಸಾವಿರ ಎಕರೆ ಮೀರುತ್ತದೆ. ಬಹುತೇಕ ಕೆರೆಗಳು ಕಂದಾಯ ಇಲಾಖೆ ವ್ಯಾಪ್ತಿಗೇ ಬರುತ್ತವೆ. ಆದರೆ, 269 ಎಕರೆ ಒತ್ತುವರಿ ಮಾತ್ರ ಇದೆ ಎಂಬುದನ್ನು ನಂಬಲು ಸಾಧ್ಯವೇ? ವಾಸ್ತವದ ಅರಿವು ಕಂದಾಯದ ಸಚಿವರು ಅರಿತರೆ ಅವರೂ ಸುಮ್ಮನಾಗುತ್ತಾರೆ ಅಷ್ಟೇ' ಎಂದು ಅಭಿಪ್ರಾಯಪಟ್ಟರು.

'ಸರ್ಕಾರಿ ಜಮೀನು ಒತ್ತುವರಿ ತೆರವು ಮಾಡುತ್ತೇವೆ ಎಂದು 2013ರಲ್ಲೂ ಹೇಳಿದ್ದರು. ವರದಿಯಲ್ಲಿ ರಾಜಕಾರಣಿಗಳ ಹೆಸರಿತ್ತು. ಈ ಬಗ್ಗೆ ವರದಿಯಾದಾಗ ನನ್ನ ಮೇಲೆ ಹಕ್ಕುಚ್ಯುತಿಯ ಪ್ರಸ್ತಾಪವನ್ನೂ ಮಾಡಿದ್ದರು. ಒತ್ತುವರಿ ಮಾತ್ರ ಹಾಗೆಯೇ ಉಳಿದಿದೆ. 10 ವರ್ಷದಿಂದ ಏನೂ ಆಗಿಲ್ಲ' ಎಂದರು.

ನಕಲಿ ದಾಖಲೆಯೇ ಹೆಚ್ಚು: ರಾಮಸ್ವಾಮಿ


ಎ.ಟಿ. ರಾಮಸ್ವಾಮಿ

'ಸರ್ಕಾರಿ ಭೂಮಿ ಒತ್ತುವರಿ ತೆರವು ಎನ್ನುವುದು ಒಂದು ನಾಟಕ. ಈವರೆಗೆ ಸಾವಿರಾರು ಎಕರೆ ತೆರವು ಮಾಡಿದ್ದೇವೆ ಎನ್ನುತ್ತಾರೆ. ಎಲ್ಲಿ ತೆರವಾಗಿದೆ ಎಂಬುದರ ಬಗ್ಗೆ ಫಲಕ ಹಾಕಲಿ. ಅದನ್ನೂ ಕಿತ್ತು ಬಿಸಾಡಿರುತ್ತಾರೆ. ಸಮಿತಿ ವರದಿ ನೀಡುತ್ತದೆ, ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿ ಆಗಾಗ್ಗೆ ಕಣ್ಣೀರು ಒರೆಸುವ ತಂತ್ರ ಮಾಡುತ್ತಾರೆ ಅಷ್ಟೇ. ಸಮಿತಿ, ಕಾರ್ಯಪಡೆಗಳು ನೀಡಿದ ವರದಿ ಮೇಲೆ ಕ್ರಮವಾಗಿರುವ ಬಗ್ಗೆ ಬಹಿರಂಗವಾಗಿ ತಿಳಿಸಲಿ. ಸಾವಿರಾರು ಎಕರೆ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ, ಪರಭಾರೆ ಮಾಡಿಕೊಂಡಿದ್ದಾರೆ. ಅವರ ಮೇಲೆ ಇವರಿಗೆ ಕ್ರಮ ತೆಗೆದುಕೊಳ್ಳಲು ಸಾಧ್ಯವೇ?. ಬಲಾಢ್ಯರಿಗೆ ಮಣೆ ಹಾಕುತ್ತಾರೆ. ಬೇರೆಯವರಿಗೆ ಕಿರುಕುಳ ನೀಡುತ್ತಾರೆ' ಎಂದು ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯೋತ್ಸವ: ಪುಸ್ತಕಗಳಿಗೆ ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಸ್ವಾತಂತ್ರ್ಯೋತ್ಸವ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಪ್ರಾಧಿಕಾರ ಹಾಗೂ ಅಕಾಡೆಮಿಗಳು ಆಗಸ್ಟ್ ತಿಂಗಳು ಪೂರ್ತಿ ಪುಸ್ತಕಗಳ ಖರೀದಿ ಮೇಲೆ ಶೇ 50 ರಷ್ಟು ರಿಯಾಯಿತಿ ಘೋಷಿಸಿವೆ.

ಕನ್ನಡ ಪುಸ್ತಕ ಪ್ರಾಧಿಕಾರವು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ 704 ಶೀರ್ಷಿಕೆಗಳನ್ನು ಹೊರತಂದಿದೆ. ಅತ್ಯಂತ ಮೌಲಿಕವಾದ, ಪ್ರಾಜ್ಞರಿಂದ ರಚಿತವಾದ ಈ ಕೃತಿಗಳನ್ನು ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಪ್ರಾಧಿಕಾರದ್ದಾಗಿದ್ದು, ಎಲ್ಲಾ ಪುಸ್ತಕಗಳ ಮೇಲೆ ಶೇ 50 ರಷ್ಟು ರಿಯಾಯಿತಿ ಇರಲಿದೆ.

ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲಾ ಜಿಲ್ಲೆಗಳ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಪ್ರಾಧಿಕಾರದಿಂದ ತೆರೆಯಲಾದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಇರಲಿದೆ. ಪ್ರಾಧಿಕಾರದ ಜಾಲತಾಣ www.kannadapustakapradhikara.com ಮೂಲಕವೂ ಖರೀದಿಸಬಹುದು ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವೂ ತನ್ನ ಎಲ್ಲಾ ಪ್ರಕಟಣೆಗಳಿಗೆ ಶೇ 50 ರಷ್ಟು ರಿಯಾಯಿತಿ ಘೋಷಿಸಿದೆ. ಪುಸ್ತಕಗಳನ್ನು ಪ್ರಾಧಿಕಾರದ ಜಾಲತಾಣ www.kuvempubhashabharathi.karnataka.gov.in ಮೂಲಕ ಪಡೆಯಬಹುದು ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಹೇಳಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳಿಗೂ ಶೇ 50 ರಷ್ಟು ರಿಯಾಯಿತಿ ನೀಡಲಾಗಿದೆ. ಅಕಾಡೆಮಿ ಕಚೇರಿಗೆ ಬರಲು ಸಾಧ್ಯ ಆಗದವರು ತಮಗೆ ಬೇಕಾದ ಪುಸ್ತಕಗಳನ್ನು ಇ ಮೇಲ್ ಮೂಲಕ ತಿಳಿಸಿದಲ್ಲಿ ಕೋರಿಯರ್ ಮಾಡಲಾಗುತ್ತದೆ. ಆ ವೆಚ್ಚವನ್ನೂ ಮುಂಚಿತವಾಗಿ ತಿಳಿಸಲಾಗುತ್ತದೆ. ಪುಸ್ತಗಳನ್ನು sahithyaacademy.karnataka.gov.in ಮೂಲಕ ಆಯ್ಕೆ ಮಾಡಿಕೊಳ್ಳಬಹುದು. ವಿವರಕ್ಕೆ ಇ ಮೇಲ್ ವಿಳಾಸ sahithya.academy@gmail.com ಅಥವಾ 080 22211730ಕ್ಕೆ ಸಂಪರ್ಕಿಸಬಹುದು ಎಂದು ಅಕಾಡೆಮಿ ತಿಳಿಸಿದೆ.

ಮೂರು ಸುತ್ತಿನಲ್ಲಿ 'ಮಿಷನ್ ಇಂದ್ರಧನುಷ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದೇ 7ರಿಂದ ಮೂರು ಸುತ್ತುಗಳಲ್ಲಿ ರಾಜ್ಯದಾದ್ಯಂತ 'ಮಿಷನ್ ಇಂದ್ರಧನುಷ್ 5.0' ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮವನ್ನು ಬಲಪಡಿಸಲು ಜಿಲ್ಲೆಗಳನ್ನು ವರ್ಗೀಕರಣ ಮಾಡಲಾಗಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಅಭಿಯಾನದಡಿ 5 ವರ್ಷದೊಳಗಿನ ಮಕ್ಕಳು ಮತ್ತು ಗರ್ಭಿಣಿಯರಿಗೆ ದಡಾರ, ರುಬೆಲ್ಲಾ ಲಸಿಕೆ ಸೇರಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ವೇಳಾಪಟ್ಟಿಯಲ್ಲಿನ ಎಲ್ಲಾ ಲಸಿಕೆಗಳನ್ನು ನೀಡಲಾಗುತ್ತದೆ. 5 ವರ್ಷದೊಳಗಿನ 1.65 ಲಕ್ಷ ಮಕ್ಕಳು ಹಾಗೂ 32,917 ಗರ್ಭಿಣಿಯರು ಫಲಾನುಭವಿಗಳಾಗಿದ್ದಾರೆ. ಹೆಚ್ಚಿನ ಅಪಾಯ, ಮಧ್ಯಮ ಅಪಾಯ ಹಾಗೂ ಕಡಿಮೆ ಅಪಾಯ ಎಂದು ಜಿಲ್ಲೆಗಳನ್ನು ವಿಂಗಡಿಸಲಾಗಿದೆ. ಒಟ್ಟು ಫಲಾನುಭವಿಗಳಲ್ಲಿ 1.03 ಲಕ್ಷ ಮಕ್ಕಳು ಹಾಗೂ 19,797 ಗರ್ಭಿಣಿಯರು ಹೆಚ್ಚಿನ ಅಪಾಯದ ಜಿಲ್ಲೆಗಳಲ್ಲಿ ನೆಲೆಸಿದ್ದಾರೆ' ಎಂದು ಹೇಳಿದರು.

'ಆ.7ರಿಂದ 12, ಸೆ.11ರಿಂದ 16 ಹಾಗೂ ಅ.9ರಿಂದ 14ರವರೆಗೆ ಈ ಲಸಿಕಾ ಅಭಿಯಾನ ನಡೆಯಲಿದೆ. ಫಲಾನುಭವಿಗಳು 'U-WIN' ಪೋರ್ಟಲ್ ಮೂಲಕ ಲಸಿಕಾಕರಣಕ್ಕೆ ನೋಂದಣಿ ಮಾಡಿಕೊಳ್ಳಬಹುದು. ಲಸಿಕೆ ಪಡೆದ ಬಳಿಕ 'ಇ ಪ್ರಮಾಣ ಪತ್ರ'ವನ್ನೂ ನೀಡಲಾಗುತ್ತದೆ. ಅಭಿಯಾನದಲ್ಲಿ ಸಾರ್ವತ್ರಿಕ ಲಸಿಕಾ ಅಭಿಯಾನ ನಡೆಯದ ಹಳ್ಳಿಗಳು, ವಲಸಿಗರು ಇರುವ ನಗರ ಪ್ರದೇಶ, ಅಲೆಮಾರಿಗಳು ವಾಸಿಸುವ ಪ್ರದೇಶಗಳು, ಮೀನುಗಾರರು ವಾಸಿಸುವ ಪ್ರದೇಶಗಳು, ಗುಡ್ಡಗಾಡು ಪ್ರದೇಶಗಳು, ಸಾಂಕ್ರಾಮಿಕ ರೋಗಗಳು ವರದಿಯಾದ ಪ್ರದೇಶ ಸೇರಿ ಹೆಚ್ಚಿನ ಅಪಾಯದಲ್ಲಿರುವ ಪ್ರದೇಶಗಳನ್ನು ಕೇಂದ್ರೀಕರಿಸಲಾಗುತ್ತದೆ' ಎಂದು ಹೇಳಿದರು.

ಔಷಧ ಪೂರೈಕೆ ಸಮಸ್ಯೆ ನಿವಾರಣೆ: ಗುಂಡೂರಾವ್


ದಿನೇಶ್ ಗುಂಡೂರಾವ್

'ಸರ್ಕಾರಿ ಆಸ್ಪತ್ರೆಗಳಲ್ಲಿ ಪದೇ ಪದೇ ಔಷಧಗಳ ಕೊರತೆ ಆಗುತ್ತಿರುವುದು ಗಮನಕ್ಕೆ ಬಂದಿದೆ. ಔಷಧ ಪೂರೈಕೆಯ ನಿರ್ವಹಣೆ ಸಮರ್ಪಕವಾಗಿ ನಡೆಯುತ್ತಿಲ್ಲ. ಆದ್ದರಿಂದ ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮಕ್ಕೆ (ಕೆಎಸ್‌ಎಂಎಸ್‌ಸಿಎಲ್) ಪುನಃಶ್ಚೇತನ ನೀಡಲಾಗುವುದು. ಮುಂದಿನ ದಿನಗಳಲ್ಲಿ ವಾರ್ಷಿಕ ಟೆಂಡರ್ ಬದಲಿಗೆ, ಎರಡು ವರ್ಷಕ್ಕೊಮ್ಮೆ ಟೆಂಡರ್ ಕರೆಯಲಾಗುವುದು. ಔಷಧ ಪೂರೈಕೆ ಪ್ರಕ್ರಿಯೆಯಲ್ಲಿ ಕೆಲ ಹೊಸ ನಿಯಮಗಳನ್ನು ಜಾರಿಗೆ ತರಲಾಗುವುದು' ಎಂದು ದಿನೇಶ್ ಗುಂಡೂರಾವ್ ಹೇಳಿದರು.

'ಆಂಬುಲೆನ್ಸ್ ವ್ಯವಸ್ಥೆ ಸರಿಪಡಿಸಲು ಅಗತ್ಯ ಸಲಹೆ ಕೋರಿ ತಾಂತ್ರಿಕ ಸಮಿತಿ ರಚಿಸಲಾಗಿದ್ದು, ಸಮಿತಿ ವರದಿ ಆಧರಿಸಿ ಇನ್ನೆರಡು ತಿಂಗಳಲ್ಲಿ ಆಂಬುಲೆನ್ಸ್ ಟೆಂಡರ್ ಕರೆಯಲಾಗುತ್ತದೆ. ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಸಂಭವಿಸಿದ ಆಮ್ಲಜನಕದ ದುರಂತದ ಬಗ್ಗೆ ನ್ಯಾಯಾಂಗ ದ್ವಿಸದಸ್ಯ ಪೀಠದ ಅಡಿಯಲ್ಲಿ ಮರುತನಿಖೆ ನಡೆಸಲಾಗುವುದು' ಎಂದು ತಿಳಿಸಿದರು.

ನಿರ್ಮಾಪಕ ಉಮೇಶ್ ಬಣಕಾರ ಅಭಿಮತ

ಸೋಲು ಅಭಿರುಚಿಯ ಪ್ರತಿಬಿಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತಮ ಕಥೆಯಾಧಾರಿತ ಕನ್ನಡ ಚಿತ್ರಗಳ ಸೋಲು ಈಗಿನ ಜನರ ಅಭಿರುಚಿ, ಮನಸ್ಥಿತಿಯ ಪ್ರತಿಬಿಂಬ ಎಂದು ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ ಬಣಕಾರ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಇತ್ತೀಚೆಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕದ ಸಹಯೋಗದಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ 119ನೇ ಜನದಿನೋತ್ಸವದ ಪ್ರಯುಕ್ತ ಆಯೋಜಿಸಿದ್ದ ಗೊರೂರು ಚಲನಚಿತ್ರೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಗೊರೂರು ಅವರ ಹಲವು ಕತೆಗಳು ಚಲನಚಿತ್ರಗಳಾಗಿವೆ. ಗಟ್ಟಿ ಕತೆಗಳನ್ನು ಹೊಂದಿದ್ದ ಉತ್ತಮ ಸಂದೇಶ ಸಾರುವ ಚಿತ್ರಗಳು ಸಾಕಷ್ಟು ಯಶಸ್ಸು ಕಂಡಿದ್ದವು. ಇಂದು ಅಂತಹ ಕತೆಗಳನ್ನು ಚಿತ್ರ ಮಾಡುವುದು ದೊಡ್ಡ ಸವಾಲಿನ ಕೆಲಸ. ಸದಭಿರುಚಿಯ ಚಿತ್ರಗಳು ಗೆಲ್ಲುತ್ತಿಲ್ಲ. ಕಲಾತ್ಮಕ ಚಿತ್ರಗಳನ್ನು ನಿರ್ಮಿಸಿದ ಎಷ್ಟೋ ನಿರ್ಮಾಪಕರು ಬಡ್ಡಿ ಕಟ್ಟಲೂ ಆಗದೆ ಆರ್ಥಿಕ ಸಂಕಷ್ಟದಿಂದ ಬೀದಿಗೆ ಬಿದ್ದಿದ್ದಾರೆ ಎಂದರು.

ಗೊರೂರು ಅವರ ಕುರಿತು ಬಾಲ್ಯದಲ್ಲೇ ಪಾಠದಲ್ಲಿ ಓದಿದ್ದೆವು. ನಂತರ ತಮ್ಮ ತಂದೆ ಮಹದೇವ ಬಣಕಾರ ಅವರ ಒಡನಾಟದಿಂದ ಇನ್ನಷ್ಟು ಹತ್ತಿರವಾದರು. ತಂದೆಗೆ ಗೊರೂರು ಅವರು ಬರೆದ ಪತ್ರ ಈಗಲೂ ಜೋಪಾನವಾಗಿ ಇದೆ. ಅವರ ಕತೆಗಳನ್ನು ಇಂದಿನ ಯುವಪೀಳಿಗೆಗೆ ತಲುಪಿಸಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ, ಗಾಂಧಿ ಅವರ ಕುರಿತು ಭಾರತೀಯ ಚಿತ್ರರಂಗದಲ್ಲಿ ನೂರಾರು ಚಿತ್ರಗಳು ಮೂಡಿಬಂದಿವೆ. ನಾಟಕ, ಹಾಡುಗಳ ಮೂಲಕವೂ ಗಾಂಧಿಯನ್ನು ಸದಾ ಜೀವಂತವಾಗಿಡುವ ಪ್ರಯತ್ನ ನಡೆದೇ ಇದೆ ಎಂದರು. ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎನ್.ಎಸ್.ಮಹೇಶ್, ಗೊರೂರು ಪುತ್ರಿ ವಸಂತಿ ಮೂರ್ತಿ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎಚ್.ಜಿ.ಗೋವಿಂದೇ ಗೌಡ ಉಪಸ್ಥಿತರಿದ್ದರು.

ಅದಾನಿ ಕಂಪನಿಗೆ ಪೈಪೋಟಿ ನೀಡುವವರ ವಿರುದ್ಧ ಸಿಬಿಐ, ಇ.ಡಿ ದಾಳಿ: ಕಾಂಗ್ರೆಸ್ ಕಿಡಿ

ನವದೆಹಲಿ (ಪಿಟಿಐ): ಬಿಜೆಪಿ ಸರ್ಕಾರವು ಆಯ್ದ ಕೆಲ ಆಪ್ತ ಬಂಡವಾಳಶಾಹಿಗಳನ್ನು ಶ್ರೀಮಂತರನ್ನಾಗಿಸಲು ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ದೂರಿದೆ. ಅದಾನಿ ಕಂಪನಿಯು ಸಿಮೆಂಟ್ ಕಂಪನಿಯೊಂದನ್ನು ಸ್ವಾಧೀನಪಡಿಸಿಕೊಂಡ ವಿಚಾರವನ್ನು ಅದು ಉಲ್ಲೇಖಿಸಿದೆ.

ವಿಮಾನ ನಿಲ್ದಾಣಗಳು, ಬಂದರುಗಳು ಮತ್ತು ಸಿಮೆಂಟ್ ಕೈಗಾರಿಕಾ ಕ್ಷೇತ್ರಗಳಲ್ಲಿ ಅದಾನಿ ಗ್ರೂಪ್‌ನೊಂದಿಗೆ ಪೈಪೋಟಿ ನಡೆಸುತ್ತಿರುವ ಕಂಪನಿಗಳು ಸಿಬಿಐ, ಇ.ಡಿ ಮತ್ತು ಆದಾಯ ತೆರಿಗೆ ಇಲಾಖೆಯ ದಾಳಿಗಳನ್ನು ಎದುರಿಸಿವೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶನಿವಾರ ಹೇಳಿದ್ದಾರೆ.

'ಹಮ್ ಅದಾನಿ ಕೆ ಹೇ ಕೌನ್' (ಎಚ್‌ಎಎಚ್‌ಕೆ) ಸರಣಿಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಕೇಳಲಾಗಿರುವ 100 ಪ್ರಶ್ನೆಗಳಲ್ಲಿ, ತನಿಖಾ ಸಂಸ್ಥೆಗಳಿಂದ ಅದಾನಿ ಗ್ರೂಪ್ ಪದೇ ಪದೇ ಹೇಗೆ ಲಾಭ ಗಳಿಸಿದೆ ಎಂಬುದನ್ನು ಕಾಂಗ್ರೆಸ್ ಎತ್ತಿ ತೋರಿಸಿದೆ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಸಂಘಿ ಇಂಡಸ್ಟ್ರೀಸ್' ಅನ್ನು ಅದಾನಿ ಒಡೆತನದ 'ಅಂಬುಜಾ ಸಿಮೆಂಟ್ಸ್' ಸ್ವಾಧೀನಪಡಿಸಿಕೊಂಡಿರುವುದು ಹೊಸ ಬೆಳವಣಿಗೆಯಾಗಿದೆ ಎಂದು ರಮೇಶ್ ತಿಳಿಸಿದ್ದಾರೆ.

2023ರ ಏಪ್ರಿಲ್ 28ರಂದು ಭಾರತದ ಮೂರನೇ ಅತಿದೊಡ್ಡ ಸಿಮೆಂಟ್ ಉತ್ಪಾದಕ ಕೈಗಾರಿಕೆಯಾದ 'ಶ್ರೀ ಸಿಮೆಂಟ್' ಕಾರ್ಖಾನೆಯು 'ಸಂಘಿ ಇಂಡಸ್ಟ್ರೀಸ್' ಅನ್ನು ಸ್ವಾಧೀನಪಡಿಸಿಕೊಳ್ಳಲು ಮಾತುಕತೆ ನಡೆಸಿತ್ತು ಎಂದು ವರದಿಯಾಗಿತ್ತು. 2023ರ ಜೂನ್ 21ರಂದು ಆದಾಯ ತೆರಿಗೆ ಇಲಾಖೆಯು ಶ್ರೀ ಸಿಮೆಂಟ್‌ಗೆ ಸಂಬಂಧಿಸಿದ ವಿವಿಧ ಸ್ಥಳಗಳ ಮೇಲೆ ದಾಳಿ ನಡೆಸಿತು.

ಕ್ರಮೇಣ 2023ರ ಜುಲೈ 19ರಂದು ಶ್ರೀ ಸಿಮೆಂಟ್ ಕಾರ್ಖಾನೆಯು 'ಸಂಘಿ ಇಂಡಸ್ಟ್ರೀಸ್' ಅನ್ನು ಸ್ವಾಧೀನಪಡಿಸಿಕೊಳ್ಳುವ ವಿಚಾರದಿಂದ ಹಿಂದೆ ಸರಿಯಿತು. ಇದರ ಬೆನ್ನಲ್ಲೇ, ಅಂದರೆ 2023ರ ಆಗಸ್ಟ್ 3ರಂದು ಅದಾನಿ ಒಡೆತನದ ಅಂಬುಜಾ ಸಿಮೆಂಟ್ಸ್ ತಾನು 'ಸಂಘಿ ಇಂಡಸ್ಟ್ರೀಸ್' ಅನ್ನು ಸ್ವಾಧೀನ ಮಾಡಿಕೊಂಡಿರುವುದಾಗಿ ಘೋಷಿಸಿತು ಎದು ಜೈರಾಮ್ ರಮೇಶ್ ದೂರಿದ್ದಾರೆ.

ಸಂಘಿ ಇಂಡಸ್ಟ್ರೀಸ್‌ನ ಘಟಕವು ಗುಜರಾತಿನ ಸಂಘಿಪುರಂನಲ್ಲಿದೆ. ಇದೀಗ ಸಂಘಿಪುರಂ ಬಂದರು, ಅದಾನಿ ಬಂದರಿನ ಏಕಸ್ವಾಮ್ಯವನ್ನು ಇನ್ನಷ್ಟು ಬಲಗೊಳಿಸುತ್ತದೆ ಎಂದು ಅವರು ಆರೋಪಿಸಿದ್ದಾರೆ.

ಮಹಿಳೆಯರನ್ನು ಕಾಡುತ್ತಿದೆ ಮೂಳೆ ರಂಧ್ರತೆ; ಡಾ.ರಮೇಶ್

ಬೆಂಗಳೂರು: 'ಪ್ರತಿ ಐವರಲ್ಲಿ ಒಬ್ಬರನ್ನು ಕಾಡುತ್ತಿರುವ ಮೂಳೆ ರಂಧ್ರತೆ ಸಮಸ್ಯೆಯು, ಅಂಗವಿಕಲತೆಗೆ ಕಾರಣವಾಗುತ್ತಿದೆ. ಈ ಸಮಸ್ಯೆ ಋತುಚಕ್ರ ನಿಂತ ಮಹಿಳೆಯರನ್ನು ಹೆಚ್ಚಾಗಿ ಕಾಡಲಾರಂಭಿಸಿದೆ' ಎಂದು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಡೀನ್ ಡಾ. ರಮೇಶ್ ಕೃಷ್ಣ ಕೆ. ಕಳವಳ ವ್ಯಕ್ತಪಡಿಸಿದರು.

ವಿಕ್ಟೋರಿಯಾ ಆಸ್ಪತ್ರೆಯ ಅಸ್ಥಿಚಿಕಿತ್ಸಾ ಶಾಸ್ತ್ರ ವಿಭಾಗವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ರಾಷ್ಟ್ರೀಯ ಮೂಳೆ ಮತ್ತು ಕೀಲು ಪಾಕ್ಷಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

'ಮೂಳೆ ಸಾಂದ್ರತೆಯು ಕಡಿಮೆಯಾಗಿ, ಮೂಳೆಗಳು ದುರ್ಬಲವಾಗುವುದನ್ನೇ ಮೂಳೆ ರಂಧ್ರತೆ ಎನ್ನುತ್ತಾರೆ. ಈ ಸಮಸ್ಯೆಯು ವೃದ್ಧಾಪ್ಯದಲ್ಲಿ ಮಾಂಸ ಖಂಡದ ಶಕ್ತಿಯನ್ನು ಕುಂದಿಸಲಿದೆ. ಇದರಿಂದ ದೈನಂದಿನ ಚಟುವಟಿಕೆಗಳಿಗೆ ಸಮಸ್ಯೆಯಾಗುತ್ತದೆ. ಆದ್ದರಿಂದ ಮೂಳೆ ಸಾಂದ್ರತೆಯ ಬಗ್ಗೆ ನಿಯಮಿತವಾಗಿ ಪರೀಕ್ಷಿಸಿಕೊಂಡು, ಪ್ರಾರಂಭಿಕ ಹಂತದಲ್ಲಿಯೇ ಸಮಸ್ಯೆಯನ್ನು ಗುರುತಿಸಬೇಕು. ಮೂಳೆ ಆರೋಗ್ಯ ಕಾಪಾಡಿಕೊಳ್ಳಲು ಪೋಷಕಾಂಶಯುಕ್ತ ಆಹಾರ ಸೇವನೆ ಜತೆಗೆ ನಿಯಮಿತ ವ್ಯಾಯಾಮ ರೂಢಿಸಿಕೊಳ್ಳಬೇಕು' ಎಂದು ಹೇಳಿದರು.

'ಮೊಣಕಾಲು ಹಾಗೂ ಕೀಲು ನೋವು, ನಿರಂತರ ಸೊಂಟ ನೋವು, ನಡೆಯಲು ಸಾಧ್ಯವಾಗದಿರುವುದು ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಂಡಾಗ ವೈದ್ಯಕೀಯ ಸಹಾಯ ಪಡೆಯಬೇಕು. ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ವಿಭಾಗವು ಸುಮಾರು 60 ಸಾವಿರ ಹೊರರೋಗಿಗಳಿಗೆ ವೈದ್ಯಕೀಯ ಸೇವೆ ಒದಗಿಸಿದೆ. 2,500 ಮಂದಿಗೆ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗಿದೆ. 250 ಪ್ರಕರಣಗಳಲ್ಲಿ ಕೀಲುಗಳ ಮರುಜೋಡಣೆ ಮಾಡಲಾಗಿದೆ. ಆಸ್ಪತ್ರೆಯಲ್ಲಿರುವ ಈ ವಿಭಾಗವು ಅತ್ಯಾಧುನಿಕ ವೈದ್ಯಕೀಯ ಸಾಧನಗಳನ್ನು ಹೊಂದಿದ್ದು, ಎಲ್ಲ ವಯೋಮಾನದವರಿಗೂ ಚಿಕಿತ್ಸೆ ಒದಗಿಸಲಾಗುತ್ತದೆ' ಎಂದರು. ವಿದ್ಯಾರ್ಥಿಗಳು, ಶುಶ್ರೂಷಕರು, ವೈದ್ಯಕೀಯ ಸಿಬ್ಬಂದಿ ಹಾಗೂ ಸ್ವಚ್ಛತಾ ಸಿಬ್ಬಂದಿಗೆ ಜೀವ ರಕ್ಷಕ ತರಬೇತಿ ನೀಡಲಾಯಿತು.

ರಾಹುಲ್ ವಿರುದ್ಧದ ಅರ್ಜಿ ವಿಚಾರಣೆ ಮುಂದಕ್ಕೆ

ಠಾಣೆ(ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಆರ್‌ಎಸ್‌ಎಸ್ ಕಾರ್ಯಕರ್ತ ರಾಜೇಶ್ ಕುಂಟೆ ಎಂಬುವರು ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಪ್ರಕರಣದ ವಿಚಾರಣೆಯನ್ನು ಭಿವಂಡಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಮುಂದೂಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಂಬೆ ಹೈಕೋರ್ಟ್‌ನಲ್ಲಿ ರಾಹುಲ್ ದಾಖಲಿಸಿರುವ ಅರ್ಜಿಯೊಂದು ಬಾಕಿ ಇದೆ. ಹೀಗಾಗಿ ವಿಚಾರಣೆಯನ್ನು ನ್ಯಾಯಾಧೀಶ ಎಲ್.ಸಿ ವಾಡಿಕರ್ ಮುಂದೂಡಿದರು. ಮುಂದಿನ ವಿಚಾರಣೆ ಸೆ.16ಕ್ಕೆ ನಿಗದಿಯಾಗಿದೆ

'ಆರ್‌ಎಸ್‌ಎಸ್‌ನವರು ಮಹಾತ್ಮ ಗಾಂಧಿಯನ್ನು ಕೊಂದರು' ಎಂದು 2014ರ ಮಾರ್ಚ್ 6ರಂದು ಭಿವಂಡಿಯಲ್ಲಿ ನಡೆದಿದ್ದ ಚುನಾವಣಾ ರ‍್ಯಾಲಿಯಲ್ಲಿ ರಾಹುಲ್ ಹೇಳಿದ್ದರು ಎಂದು ಆರೋಪಿಸಲಾಗಿದೆ. 'ಸುಳ್ಳು ಹೇಳುವ ಮೂಲಕ ರಾಹುಲ್ ಆರ್‌ಎಸ್‌ಎಸ್‌ನ ಅಪಮಾನ ಮಾಡಿದ್ದಾರೆ' ಎಂದು ಆರ್‌ಎಸ್‌ಎಸ್ ಕಾರ್ಯಕರ್ತ ಕುಂಟೆ ಪ್ರಕರಣ ದಾಖಲಿಸಿದ್ದರು.



ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದಲ್ಲಿ ಶಿವಪುರದ ಸತ್ಯಾಗ್ರಹದ ಸೌಧವನ್ನು ವೀಕ್ಷಿಸಿದ ಸಾರ್ವಜನಿಕರು (ಎಡಚಿತ್ರ) ಜಾನೂರ್ ಕಲೆಯ ಮೂಲಕ ಕಪ್ಪು ಸುಂದರಿ ಪ್ರತಿಮೆಗೆ ಎಳೆ ತೆಂಗಿನ ಗರಿಗಳಿಂದ ತೊಡಿಸಿದ್ದ ಉಡುಗೆಯನ್ನು ಮಹಿಳೆಯರು ಕುತೂಹಲದಿಂದ ವೀಕ್ಷಿಸಿದರು –ಪ್ರಜಾವಾಣಿ ಚಿತ್ರಗಳು: ಎಂ.ಎಸ್.ಮಂಜುನಾಥ್

ಲಾಲ್‌ಬಾಗ್‌ನ ಗಾಜಿನ ಮನೆಗೆ ಅಸಂಖ್ಯಾತ ಪುಷ್ಪಪ್ರಿಯರ ಭೇಟಿ • ₹20 ಲಕ್ಷ ಸಂಗ್ರಹ

ಹೂ ರಾಶಿಯಲ್ಲಿ ಕೆಂಗಲ್ ನೆನಪಿನ ಚಿತ್ತಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತ ನೋಡಿದರತ್ತ ಬಣ್ಣ ಬಣ್ಣದ ವೈವಿಧ್ಯಮಯ ಪುಷ್ಪಗಳು, ಹೂವಿನ ರಾಶಿಯಲ್ಲಿ ಅರಳಿರುವ ವಿಧಾನಸೌಧ, ಶಿವಪುರದ ಸತ್ಯಾಗ್ರಹ ಸೌಧದ ಮಾದರಿಯನ್ನು ವೀಕ್ಷಿಸಲು ಲಾಲ್‌ಬಾಗ್‌ನಲ್ಲಿರುವ ಗಾಜಿನ ಮನೆಗೆ ಸಾವಿರಾರು ಪುಷ್ಪಪ್ರಿಯರು ಶನಿವಾರ ಆಗಮಿಸಿದ್ದರು.

ತೋಟಗಾರಿಕೆ ಇಲಾಖೆ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದಲ್ಲಿ ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಅವರ ಜೀವನದ ಐತಿಹಾಸಿಕ ಕ್ಷಣಗಳನ್ನು ಹೂ ರಾಶಿಯಲ್ಲಿ ಅನಾವರಣಗೊಳಿಸಲಾಗಿದೆ.

ಬೆಳಿಗ್ಗೆಯಿಂದಲೇ ಸಾರ್ವಜನಿಕರು ತಂಡೋಪತಂಡವಾಗಿ ಲಾಲ್‌ಬಾಗ್‌ನತ್ತ ಬರುತ್ತಿದ್ದರು. ಸಂಜೆ ವೇಳೆ ಎತ್ತ ನೋಡಿದರೂ ಜನಜಾತ್ರೆ. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಹೆಚ್ಚಿತ್ತು. ಇದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು.

'ದೇಶದಲ್ಲಿ ಇಷ್ಟೊಂದು ವೈವಿಧ್ಯಮಯ ಪುಷ್ಪಗಳನ್ನು ಬೆಳೆಯಲಾಗುತ್ತದೆ ಎನ್ನುವ ಮಾಹಿತಿಯನ್ನು ಮಕ್ಕಳಿಗೆ ತಿಳಿಸಲು ಇದು ಸಹಾಯಕವಾಗಲಿದೆ' ಎಂದು ಕಾಮಾಕ್ಷಿಪಾಳ್ಯದ ಚೇತನಾ ಹೇಳಿದರು. ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಕೆಂಗಲ್ ಹನುಮಂತಯ್ಯ ಅವರ ಸಾಧನೆ ಕಣ್ತುಂಬಿಕೊಳ್ಳಬಹುದು ಎಂದು ರಾಮಮೂರ್ತಿನಗರದ ಶ್ವೇತಾ ತಿಳಿಸಿದರು.

ಲಾಲ್‌ಬಾಗ್ ಉದ್ಯಾನದ ವಿಸ್ತರಣೆ, ಕೋಲಾರ ಚಿನ್ನದ ಗಣಿ ರಾಷ್ಟ್ರೀಕರಣದ ಮಾದರಿ, ಸೇರಿ ಎಲ್ಲ ಕಲಾಕೃತಿಗಳ ಮುಂಭಾಗದಲ್ಲಿ ಹಿರಿಯರು–ಕಿರಿಯರು ಎನ್ನದೇ ಎಲ್ಲರೂ ಮೊಬೈಲ್‌ನಲ್ಲಿ ಫೋಟೊ ಕ್ಲಿಕ್ಕಿಸಿಕೊಳ್ಳುತ್ತಿದ್ದರು.

ವಿವಿಧ ತಳಿಯ ಸಾವಿರಾರು ಹೂಗಳಲ್ಲಿ ಅರಳಿದ ಕರ್ನಾಟಕ ಏಕೀಕರಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸ್ಥಾಪನೆಯ ಕಲಾಕೃತಿಗಳನ್ನು ಶಾಲಾ ಮಕ್ಕಳು ಕುತೂಹಲದಿಂದ ವೀಕ್ಷಿಸಿದರು. ಲಾಲ್‌ಬಾಗ್‌ಗೆ 25,000 ವಯಸ್ಕರು, 2,600 ಮಕ್ಕಳು ಭೇಟಿನೀಡಿದ್ದು, ₹20 ಲಕ್ಷ ಹಣ ಸಂಗ್ರಹವಾಗಿದೆ.

ವೈವಿಧ್ಯಮಯ ಪುಷ್ಪಗಳು

ಈ ಬಾರಿ ಫಲಪುಷ್ಪ ಪ್ರದರ್ಶನಕ್ಕೆ ಕುಂಡದಲ್ಲಿ ಬೆಳೆದ ಚಿತ್ತಾಕರ್ಷಕ ಬಣ್ಣಗಳಿಂದ ಕೂಡಿದ 68ಕ್ಕೂ ಹೆಚ್ಚು ವಿವಿಧ ವಾರ್ಷಿಕ ಹೂಗಳಾದ ಸೇವಂತಿಗೆ, ಗುಲಾಬಿ, ಪಾಯಿನ್ಸಿಟಿಯಾ, ಡ್ವಾರ್ಫ್‌ಇಕ್ಸೂರಾ, ಪೆಂಟಾಸ್‌ಕಾರ್ನಿಯಾ, ಬ್ರೋಮಿಲಿಯಾಯ್ಡ್, ಜರ್ಬೆರಾ, ಸಿಲೋಷಿಯಾ, ಮೇರಿಗೋಲ್ಡ್, ಡೇಲಿಯಾ, ಶೀತವಲಯದಲ್ಲಿ ಬೆಳೆಯುವ ಸೈಕ್ಲೊಮನ್, ಫ್ಯೂಷಿಯಾ, ಆಜೇಲಿಯಾ, ರೆಡ್ ಹಾಟ್ ಪೋಕರ್ ಹೂಗಳನ್ನು ಸಾರ್ವಜನಿಕರನ್ನು ಕಣ್ತುಂಬಿಕೊಂಡರು.

ಸಾರ್ವಜನಿಕರ ಪ್ರತಿಕ್ರಿಯೆಗಳು


ಶಕ್ತಿಕೇಂದ್ರ ವಿಧಾನಸೌಧ, ಇತಿಹಾಸ ಸಾರುತ್ತಿರುವ ಕೆಂಗಲ್ ಹನುಮಂತಯ್ಯ ಅವರು ಪ್ರತಿಮೆ, ಸತ್ಯಾಗ್ರಹ ಸೌಧದ ಪರಿಕಲ್ಪನೆಯನ್ನು ಪುಷ್ಪಗಳಲ್ಲಿ ಅನಾವರಣಗೊಳಿಸಿದ್ದಾರೆ. ಮೂರು ಪ್ರತಿಕೃತಿಗಳನ್ನು ಒಂದೇ ವೇದಿಕೆಯಲ್ಲಿ ನೋಡುತ್ತಿರುವುದು ಬಹಳ ಖುಷಿ ನೀಡಿದೆ.

ಕೀರ್ತಿ, ವಿದ್ಯಾರ್ಥಿನಿ


ಫಲಪುಷ್ಪ ಪ್ರದರ್ಶನವನ್ನು ಮೊದಲ ಬಾರಿಗೆ ವೀಕ್ಷಿಸುತ್ತಿದ್ದೇನೆ. ಕೆಂಗಲ್ ಹನುಮಂತಯ್ಯ ಅವರ ಜೀವನವನ್ನು ಪುಷ್ಪಗಳಲ್ಲಿ ಅದ್ಭುತವಾಗಿ ಕಟ್ಟಿ ಕೊಟ್ಟಿದ್ದಾರೆ.

ಯಶವಂತ್, ಪೀಣ್ಯ


ಫಲಪುಷ್ಪ ಪ್ರದರ್ಶನವನ್ನು ನೋಡಲು ಕೇರಳದಿಂದ ಬಂದಿದ್ದೇನೆ. ಇಲ್ಲಿ ನಿರ್ಮಿಸಿರುವ ಪ್ರತಿಯೊಂದು ಕಲಾಕೃತಿಗಳ ಹಿಂದೆ ಕೆಲಸ ಮಾಡಿರುವ ಕಲಾವಿದರು, ನಿರ್ವಹಣೆ ಮಾಡುವ ಸಿಬ್ಬಂದಿಯ ಕೆಲಸ ಶ್ಲಾಘನೀಯ.

ಜೇಮ್ಸ್ ಥಾಮಸ್, ಕೇರಳ


ಫಲಪುಷ್ಪ ಪ್ರದರ್ಶನ ಮೊದಲ ಬಾರಿಗೆ ವೀಕ್ಷಣೆಗೆ ಬಂದಿದ್ದೇನೆ. ಕೆಂಗಲ್ ಹನುಮಂತಯ್ಯ ಅವರು ಮಂಡಿಸಿದ ರೈಲ್ವೆ ಬಜೆಟ್ ಅಂಗವಾಗಿ ರೈಲ್ವೆ ಪ್ರತಿಕೃತಿ, ಸತ್ಯಾಗ್ರಹಸೌಧ ಮತ್ತು ವಿಧಾನಸೌಧ ಎಲ್ಲರ ಗಮನ ಸೆಳೆಯುತ್ತಿವೆ.

ರೆಂಗಶ್ರೀ, ವಿದ್ಯಾರ್ಥಿನಿ

ಆತ್ಮಹತ್ಯೆಗೆ ಯತ್ನ

ಕೋಲಾರ: ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಕಾರಿಡಾರ್‌ಗೆ ಹೆದ್ದಾರಿ ಪ್ರಾಧಿಕಾರವು ಜಮೀನು ವಶಪಡಿಸಿಕೊಂಡು ಪರಿಹಾರ ನೀಡಿಲ್ಲವೆಂದು ತಂದೆ ಹಾಗೂ ಮಗ ಶನಿವಾರ ಕೀಟನಾಶಕ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಕೋಲಾರದ ಹಾರೋಹಳ್ಳಿ ಬಡಾವಣೆಯ ರೈತ ಕೃಷ್ಣಮೂರ್ತಿ (39) ಮತ್ತು ಇವರ ತಂದೆ ವೆಂಕಟೇಶಪ್ಪ(55) ಆತ್ಮಹತ್ಯೆಗೆ ಯತ್ನಿಸಿದವರು. ಇವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಜಮೀನಿಗೆ ಪರಿಹಾರ ಸಿಗದೆ ಲಕ್ಷ್ಮಿಸಾಗರ ಗ್ರಾಮದ ಅಭಿಗೌಡ ಎಂಬ ಮತ್ತೊಬ್ಬ ರೈತ ವಿಷ ಕುಡಿದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೆಜೆಸ್ಟಿಕ್, ಚಿಕ್ಕಪೇಟೆ, ಕೆ.ಆರ್. ಮಾರುಕಟ್ಟೆಯಲ್ಲಿ ವಾಹನಗಳ ಸಾಲು

ವಾರಾಂತ್ಯ ಖರೀದಿ: ಸಂಚಾರ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗತ್ಯ ವಸ್ತುಗಳ ಖರೀದಿ, ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನದ ವೀಕ್ಷಣೆ ಹಾಗೂ ವಾರಾಂತ್ಯದ ಸುತ್ತಾಟಕ್ಕೆಂದು ಶನಿವಾರ ಜನರು ಮನೆಯಿಂದ ಹೊರಬಂದಿದ್ದರಿಂದ ನಗರದ ಬಹುತೇಕ ಕಡೆಗಳಲ್ಲಿ ದಟ್ಟಣೆ ಕಂಡುಬಂತು.

ಪ್ರಮುಖ ರಸ್ತೆಗಳಲ್ಲಿ ವಾಹನ ದಟ್ಟಣೆ ಇತ್ತು. ಸಿಗ್ನಲ್‌ಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬಿಎಂಟಿಸಿ ಬಸ್ ಹಾಗೂ ಮೆಟ್ರೊ ರೈಲುಗಳು ಪ್ರಯಾಣಿಕರಿಂದ ತುಂಬಿದ್ದವು. ಮಳೆ ಬಿಡುವು ನೀಡಿದ್ದು ಹೊರಗೆ ಓಡಾಟ ನಡೆಸಲು ಅನುಕೂಲಕರ ವಾತಾವರಣವಿದೆ. ಅದೇ ಕಾರಣದಿಂದ ಹೆಚ್ಚಿನ ಜನರು ಮನೆಯಿಂದ ಹೊರಬಂದಿದ್ದಾರೆ. ಇದು ದಟ್ಟಣೆಗೆ ಕಾರಣವಾಗಿದೆ ಎಂದು ವ್ಯಾಪಾರಸ್ಥರು ಹೇಳಿದರು.

ಲಾಲ್‌ಬಾಗ್‌ನಲ್ಲಿ ಇದೇ 15ರ ತನಕ ಫಲಪುಷ್ಪ ಪ್ರದರ್ಶನ ನಡೆಯಲಿದೆ. ಇದರ ವೀಕ್ಷಣೆಗೆ ಶನಿವಾರ ಸಾವಿರಾರು ಸಂಖ್ಯೆಯಲ್ಲಿ ಜನರು ಬಂದಿದ್ದರು. ಲಾಲ್‌ಬಾಗ್ ಸುತ್ತಮುತ್ತ ದಟ್ಟಣೆ ಕಂಡುಬಂತು. ಸಂಚಾರ ಪೊಲೀಸರು ದಟ್ಟಣೆ ನಿಯಂತ್ರಣಕ್ಕೆ ಹೈರಾಣುಗೊಂಡರು. ಜೆ.ಸಿ. ರಸ್ತೆ, ಪುರಭವನ ಎದುರಿನ ವೃತ್ತ, ಕೆ.ಆರ್. ಮಾರುಕಟ್ಟೆ, ಚಾಮರಾಜಪೇಟೆ, ಶಿವಾಜಿನಗರದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕಂಡು ಬಂದರು. ಬಳ್ಳಾರಿ, ತುಮಕೂರು ರಸ್ತೆ, ಮೈಸೂರು ರಸ್ತೆಯಲ್ಲೂ ವಾಹನಗಳು ಸಾಲುಗಟ್ಟಿದ್ದವು.



ನಗರದ ಹಡ್ಸನ್ ವೃತ್ತದಿಂದ ಟೌನ್ ಹಾಲ್ ವರೆಗಿನ ರಸ್ತೆಯಲ್ಲಿ ಶನಿವಾರ ವಾಹನಗಳು ತುಂಬಿದ್ದವು – ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಚಿಕ್ಕಪೇಟೆಯಲ್ಲಿ ಕಾಲಿಡಲು ಸ್ಥಳದ ಕೊರತೆಯಿತ್ತು. ವಾರಾಂತ್ಯದಲ್ಲಿ ಜವಳಿ ವ್ಯಾಪಾರವು ಭರ್ಜರಿಯಾಗಿ ನಡೆಯಿತು. ಎಂ.ಜಿ ರಸ್ತೆ, ಚರ್ಚ್ ರಸ್ತೆ, ರೆಸಿಡೆನ್ಸಿ ರಸ್ತೆಗಳಿಗೂ ಯುವಕ–ಯುವತಿಯರು ಬಂದಿದ್ದರು. ಇದರಿಂದ ಪಬ್‌ಗಳಲ್ಲಿ ಹೆಚ್ಚಿನ ವ್ಯಾಪಾರ ನಡೆಯಿತು.

ಯುವಕರ ಹೊಡೆದಾಟ

ಎಂ.ಜಿ ರಸ್ತೆಯ ಮೆಟ್ರೊ ನಿಲ್ದಾಣದ ಬಳಿ ಶನಿವಾರ ಸಂಜೆ ಯುವಕರ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದೆ. ಸ್ಥಳದಲ್ಲಿದ್ದ ಪೊಲೀಸರು, ಆಟೊ ಚಾಲಕರು ಹಾಗೂ ಸ್ಥಳೀಯರು ಜಗಳ ಬಿಡಿಸಿ ಕಳುಹಿಸಿದರು. ಒಂದು ಗುಂಪಿನ ಯುವಕರು, ಯುವಕನೊಬ್ಬನಿಗೆ ಥಳಿಸಿದ್ದಾರೆ. ಕಾರಣ ತಿಳಿದುಬಂದಿಲ್ಲ.

ಖರಗ್‌ಪುರ ಐಐಟಿ: ಎಐ ಸರ್ಟಿಫಿಕೇಟ್ ಕೋರ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಯುವ ಪೀಳಿಗೆಗೆ ತಾಂತ್ರಿಕ ಶಿಕ್ಷಣ ಒದಗಿಸುವ ದೂರದೃಷ್ಟಿಯೊಂದಿಗೆ ಖರಗ್‌ಪುರದ ಭಾರತೀಯ ತಂತ್ರಜ್ಞಾನ ಸಂಸ್ಥೆ(ಐಐಟಿ) ಕೃತಕ ಬುದ್ಧಿಮತ್ತೆ (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ಸರ್ಟಿಫಿಕೇಟ್ ಕೋರ್ಸ್ ಆರಂಭಿಸಿದೆ.

ಐಐಟಿಯ ‘ಎಐ ಹಬ್’ ಆಗಿರುವ 'ಎಐ ಫಾರ್ ಇಂಟರ್ ಡಿಸಿಪ್ಲಿನರಿ ಸೈಬರ್ ಫಿಸಿಕಲ್ ಸಿಸ್ಟಮ್ಸ್ (ಎಐ4ಐ-ಸಿಪಿಎಸ್)’ ವಿಭಾಗವು ‘ಟಿಸಿಎಸ್ ಐಯಾನ್’ ಸಹಯೋಗದಲ್ಲಿ ‘ಹ್ಯಾಂಡ್ಸ್ ಆನ್ ಎಐ ಫಾರ್ ದ ರಿಯಲ್–ವರ್ಲ್ಡ್ ಅಪ್ಲಿಕೇಷನ್ಸ್’ ಎಂಬ ಹೆಸರಿನ ಕೋರ್ಸ್ ಹಮ್ಮಿಕೊಂಡಿದೆ.

‘ಬೆಳೆಯುತ್ತಿರುವ ಎಐ ಉದ್ಯಮದ ಬೇಡಿಕೆಯನ್ನು ಈ ಕೋರ್ಸ್ ಪೂರೈಸಲಿದೆ’ ಎಂದು ಐಐಟಿ ಹೇಳಿದೆ.

ಸೆಪ್ಟೆಂಬರ್ 2ರಿಂದ ಕೋರ್ಸ್ ಆರಂಭವಾಗಲಿದೆ. ಮೂರು ತಿಂಗಳು ವಾರಾಂತ್ಯದಲ್ಲಿ ಮಾತ್ರ ನಡೆಯುವ ತರಗತಿಗಳು, ಪಠ್ಯ ಮತ್ತು ಪ್ರಾಯೋಗಿಕ ಕಲಿಕೆಯ ಸಮ್ಮಿಶ್ರಣವಾಗಿರಲಿವೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರಶ್ನೋತ್ತರ, ಕಾರ್ಯಯೋಜನೆ, ಚರ್ಚೆ, ಸಮಾಲೋಚನೆ ಸೇರಿದಂತೆ ಹಲವು ರೀತಿಯಲ್ಲಿ ವಿಷಯ ಕಲಿಕೆಯಲ್ಲಿ ತೊಡಗಲಿದ್ದಾರೆ. ನಂತರ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ದೊರೆಯಲಿದೆ. ಔದ್ಯಮಿಕ ರಂಗದ ಪರಿಣತರೊಂದಿಗೆ ಸಮಾಲೋಚನೆ ನಡೆಸುವ ಅವಕಾಶವೂ ಅವರಿಗೆ ಸಿಗಲಿದೆ.


ತಾಂತ್ರಿಕ ರಂಗದ ಹೊಸಬರು, ಪದವಿ ಮತ್ತು ಸ್ನಾತಕೋತ್ತರ ಪದವಿ ಶಿಕ್ಷಣ ಪಡೆಯುತ್ತಿರುವವರು, ಎಐ/ಎಂಎಲ್ (ಮಷಿನ್ ಲರ್ನಿಂಗ್) ಇಂಜಿನಿಯರ್ ಆಗಲು ಬಯಸುತ್ತಿರುವವರು, ಪ್ರೋಗ್ರಾಮಿಂಗ್ ಬಗ್ಗೆ ಜ್ಞಾನ ಹೊಂದಿರುವವರು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು.

ಆಸಕ್ತರು learning.tcsionhub.in/hub/iit-kgp-certificate-program/hands-on-approach-to-ai/ಗೆ ಭೇಟಿ ನೀಡಿ.

ಗ್ರಾ.ಪಂ ನೌಕರ ಆತ್ಮಹತ್ಯೆ

ಹೊಸದುರ್ಗ: ಗ್ರಾಮ ಪಂಚಾಯಿತಿ ಸದಸ್ಯರ ಕಿರುಕುಳದಿಂದ ನೌಕರರೊಬ್ಬರು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ದೂರು ದಾಖಲಾಗಿದೆ. ಹೊಳಲ್ಕೆರೆ ತಾಲ್ಲೂಕಿನ ಉಪ್ಪರಿಗೇನ ಹಳ್ಳಿ ಪಂಚಾಯಿತಿಯಲ್ಲಿ ಎಸ್‌ಡಿಎ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅದೇ ತಾಲ್ಲೂಕಿನ ಸೊಂಡೆಕೊಳ ಗ್ರಾಮದ ಎಂ.ತಿಪ್ಪೇಸ್ವಾಮಿ (58) ಆತ್ಮಹತ್ಯೆ ಮಾಡಿಕೊಂಡವರು.

ಹಳಿಗೆ ಬಾರದ ಬದುಕು



ಒಂದನೇ ಪುಟದಿಂದ..

ಉಪ ಆರೋಗ್ಯ ಕೇಂದ್ರವಿದ್ದರೂ ವೈದ್ಯ ರಿಲ್ಲ. ಒಂದರಿಂದ ಐದನೇ ತರಗತಿವರೆಗೆ ಸರ್ಕಾರಿ ಶಾಲೆ ಇದೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪರ ಊರಿಗೆ ಹೋಗಬೇಕಾದ ಅನಿವಾರ್ಯತೆ ಇದೆ. ಬಹುತೇಕ ಮನೆಗಳ ಗೋಡೆಗಳಲ್ಲಿ ಬಿರುಕು ಬಿಟ್ಟರೂ ಅವುಗಳ ದುರಸ್ತಿಯಾಗಲಿ ಅಥವಾ ಹೊಸ ಮನೆ ಕಟ್ಟಿಸಿಕೊಡುವ ಕೆಲಸಗಳಾಗಿಲ್ಲ. ಗ್ರಾಮದಲ್ಲಿ ಹೆಚ್ಚಿನವರು ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು. 'ಗಣಿಗಳಲ್ಲಿ ಬಿಟ್ಟರೆ ಬೇರೆಡೆ ಕೆಲಸ ಮಾಡುವುದಕ್ಕೆ ಅವಕಾಶಗಳೇ ಇಲ್ಲ. ಗಣಿಗಾರಿಕೆಯಿಂದ ನಮ್ಮ ಬದುಕಿಗೆ ದೊಡ್ಡ ಪೆಟ್ಟು ಬಿದ್ದಿದೆ. ಆದರೆ, ಅದಕ್ಕೆ ಮುಲಾಮು ಹಚ್ಚುವ ಕೆಲಸ ಮಾಡುತ್ತಿಲ್ಲ' ಎಂದು ಆರೋಪಿಸುತ್ತಾರೆ ಕಮತೂರಿನ ಯುವಕ ಮಂಜುನಾಥ.

ಇದು ಕಮತೂರು ಗ್ರಾಮದ ಕಥೆಯಲ್ಲ. ಸಂಡೂರು ತಾಲ್ಲೂಕಿನ ನಂದಿಹಳ್ಳಿ, ಭುಜಂಗನಗರ, ನಾರಾಯಣಪುರ, ಸುಶೀಲಾನಗರ, ಸಿದ್ದಾಪುರ, ಸೇನಿ ಬಸಪ್ಪ ಕ್ಯಾಂಪ್ ಕಥೆಯೂ ಹೆಚ್ಚು ಕಮ್ಮಿ ಹೀಗೇ ಇದೆ. ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ ಗಣಿಬಾಧಿತ ಗ್ರಾಮಗಳ ಕಥೆಯೂ ಹೌದು. ಆ ಗ್ರಾಮಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಸತತ ಗಣಿಗಾರಿಕೆಯಿಂದ ನಾಲ್ಕು ಜಿಲ್ಲೆಗಳಲ್ಲಿ ಸಾಂಪ್ರದಾಯಿಕ ನೀರಿನ ಝರಿಗಳು ನಾಶವಾಗಿವೆ. ಅಂತರ್ಜಲ ಕುಸಿದಿದೆ. ವನ್ಯಮೃಗಗಳು ಆವಾಸ ಸ್ಥಾನ ಕಳೆದುಕೊಂಡಿವೆ. ವಿಪರೀತ ದೂಳಿನಿಂದ ಬೆಳೆಗಳ ಇಳುವರಿ ಕುಸಿದಿದೆ. ಜನ ಉಸಿರಾಟದ ಸಮಸ್ಯೆ, ಕ್ಷಯರೋಗ, ಚರ್ಮ ರೋಗ, ಕ್ಯಾನ್ಸರ್ ಮತ್ತಿತರ ಕಾಯಿಲೆಗಳಿಂದ ನರಳುತ್ತಿದ್ದಾರೆ. ಲಾರಿ, ಟಿಪ್ಪರ್‌ಗಳ ಎರ್ರಾಬಿರ್ರಿ ಸಂಚಾರದಿಂದ ನಿತ್ಯ ಅಪಘಾತಗಳು ಸಂಭವಿಸುತ್ತಿವೆ.

'ಸಮಾಜ ಪರಿವರ್ತನಾ ಸಮುದಾಯ' (ಎಸ್‌ಪಿಎಸ್) ಅದರಲ್ಲೂ ಎಸ್.ಆರ್. ಹಿರೇಮಠ ಅವರ ಹೋರಾಟದಿಂದ ಅಕ್ರಮ ಗಣಿಗಾರಿಕೆ ಕೊನೆಗೊಂಡಿತು. 2008ರಲ್ಲಿ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದ ಜನಾರ್ದನ ರೆಡ್ಡಿ ಮತ್ತು ಅವರ ಆಪ್ತರೇ ಅಕ್ರಮ ಗಣಿಗಾರಿಕೆ ಆರೋಪಕ್ಕೆ ಒಳಗಾಗಿದ್ದು ಬೇಲಿಯೇ ಎದ್ದು ಹೊಲ ಮೇದಂತಿತ್ತು. ಇಲ್ಲಿ ರೆಡ್ಡಿ ಮಾಡಿದ್ದೇ ಕಾನೂನು, ಹೇಳಿದ್ದೇ ಆದೇಶ ಎಂಬ ಪರಿಸ್ಥಿತಿ ಇತ್ತು. ಇದರಿಂದಾಗಿಯೇ ಅಂದಿನ ಲೋಕಾಯುಕ್ತ ನ್ಯಾ. ಸಂತೋಷ್ ಹೆಗಡೆ ಇದನ್ನು 'ರಿಪಬ್ಲಿಕ್ ಆಫ್ ಬಳ್ಳಾರಿ' ಎಂದು ಕರೆದಿದ್ದು. ಅಕ್ರಮ ಗಣಿಗಾರಿಕೆ ಆರೋಪದ ಮೇಲೆ ರೆಡ್ಡಿ ಜೈಲಿಗೆ ಹೋಗಿ ಹೊರಬಂದಿದ್ದಾಯಿತು. ಆನಂತರ, ಮತ್ತೊಂದು ಅಧ್ಯಾಯ ಆರಂಭವಾಯಿತು.

ಅಕ್ರಮ ಗಣಿಗಾರಿಕೆ ಪ್ರಕರಣವನ್ನು ಸುಪ್ರೀಂ ಕೋರ್ಟ್ ಇಂಚಿಂಚೂ ಬಿಡದೆ ಪರಿಶೀಲಿಸಿತು. 'ಗಣಿಬಾಧಿತ ಪ್ರದೇಶಗಳ ಪರಿಸರ ಪುನಶ್ಚೇತನ ಯೋಜನೆ' (ಸಿಇಪಿಎಂಐಝಡ್) 'ವಿಶೇಷ ಉದ್ದೇಶದ ನಿಧಿ' (ಎಸ್‌ಪಿವಿ) ಸ್ಥಾಪಿಸಬೇಕು ಎಂದು ಸಿಇಸಿ ಶಿಫಾರಸ್ಸು ಮಾಡಿತು. ಇದನ್ನು ಕೋರ್ಟ್ 2013ರ ಏಪ್ರಿಲ್ 18ರಂದು ನೀಡಿದ ತೀರ್ಪಿನಲ್ಲಿ, ಒಪ್ಪಿಕೊಂಡಿತು. ಪರಿಣಾಮವಾಗಿ 2014ರ ಜೂನ್ 30ರಂದು 'ಕರ್ನಾಟಕ ಗಣಿ ಪರಿಸರ ಪುನರುಜ್ಜೀವನ ನಿಗಮ' (ಕೆಎಂಇಆರ್‌ಸಿ) ಅಸ್ತಿತ್ವಕ್ಕೆ ಬಂತು.

'ಅವಿಭಜಿತ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಸುವ ಮೂಲಕ ಪರಿಸರವನ್ನು ಕಂಡರಿಯದ ಪ್ರಮಾಣದಲ್ಲಿ ನಾಶ ಮಾಡಲಾಗಿದೆ. ಹೀಗಾಗಿ, ಪರಿಸರ ಪುನರುಜ್ಜೀವನದ ಕೆಲಸವೂ ಅಸಾಧಾರಣವಾಗಿರಬೇಕು' ಎಂದು ಕೋರ್ಟ್ ತಾಕೀತು ಮಾಡಿತು.

ಕೋರ್ಟ್ ಆದೇಶದ ಪ್ರಕಾರ, 'ಎಸ್‌ಪಿವಿ'ಗೆ ಗಣಿ ಗುತ್ತಿಗೆದಾರರು ಅದಿರು ಮಾರಾಟದ ಹಣದಲ್ಲಿ ಶೇ 10ರಷ್ಟು ಪಾವತಿಸಬೇಕು. ಮನಸ್ಸಿಗೆ ಬಂದಂತೆ ಅಕ್ರಮ ನಡೆಸಿದ ಆರೋಪಕ್ಕೊಳಗಾಗಿರುವ 'ಸಿ' ಕೆಟಗರಿ ಗಣಿಗಳ ಅದಿರು ಹರಾಜಿನ ಸಂಪೂರ್ಣ ಹಣ ಇದಕ್ಕೆ ಸಂದಾಯವಾಗಬೇಕಾಗಿದೆ.

'ಸಮಗ್ರ ಪರಿಸರ ಪುನಶ್ಚೇತನ ಕಾರ್ಯಕ್ರಮ'ಗಳ (ಸಿಇಪಿಎಂಐಝಡ್) ಅನುಷ್ಠಾನದ ಮೇಲ್ವಿಚಾರಣೆ ಹಾಗೂ ಪ್ರಗತಿ ಪರಿಶೀಲನೆಗೆ ಒಡಿಶಾ ಮಾದರಿಯಲ್ಲಿ, ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ. ಸುದರ್ಶನ ರೆಡ್ಡಿ ಅಧ್ಯಕ್ಷತೆಯಲ್ಲಿ 'ಕಣ್ಗಾವಲು ಪ್ರಾಧಿಕಾರ' (ಓವರ್‌ಸೈಟ್ ಅಥಾರಿಟಿ) ನೇಮಿಸಿತು. ಎಸ್‌ಪಿವಿಯಲ್ಲಿ ಈಗ ₹25 ಸಾವಿರ ಕೋಟಿ ಸಂಗ್ರಹವಾಗಿದೆ. ಈ ಹಣದ ಮೇಲೆ ಜನಪ್ರತಿನಿಧಿಗಳ ಕಣ್ಣಿದೆ. ಹಿಂದೆ ಇದೇ ಕಾರಣಕ್ಕೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆ ಜಟಾಪಟಿ ನಡೆದಿತ್ತು. ಈಗ ಕಣ್ಗಾವಲು ಪ್ರಾಧಿಕಾರ ಇರುವುದರಿಂದ ಹಣವನ್ನು ಮನಸ್ಸಿಗೆ ಬಂದಂತೆ ಬಳಸಲು ಅವಕಾಶವಿಲ್ಲ.

ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮದಲ್ಲಿರುವ ಹಣದಲ್ಲಿ ಗಣಿಬಾಧಿತ ಪ್ರದೇಶಗಳಿಗೆ ಯೋಜನೆ ರೂಪಿಸಲಾಗುತ್ತಿದೆ. ರಾಜ್ಯ ಸರ್ಕಾರ 2016ರ ಏಪ್ರಿಲ್ 29ರಂದು ₹15,742 ಕೋಟಿ ಮೊತ್ತದ ಯೋಜನೆ ರೂಪಿಸಿತ್ತು. ಆದರೆ, ಸಿಇಸಿ ಸಮ್ಮುಖದಲ್ಲಿ ಕೆಎಂಇಆರ್‌ಸಿ ಸಂಬಂಧಪಟ್ಟ ಎಲ್ಲರ ಜತೆ ಸಮಾಲೋಚಿಸಿ 2018ರ ಫೆಬ್ರುವರಿ 11ರಂದು ₹24,996 ಸಾವಿರ ಕೋಟಿ ವೆಚ್ಚದ ಪರಿಷ್ಕೃತ ಪ್ರಸ್ತಾವನೆಯನ್ನು ಕೋರ್ಟ್‌ಗೆ ಸಲ್ಲಿಸಿತು.

> ಗಣಿಬಾಧಿತ ಪ್ರದೇಶಗಳ ಪರಿಸರ ಪುನಶ್ಚೇತನ ಯೋಜನೆಗೆ ಸಂಗ್ರಹವಾಗಿರುವ ನಿಧಿ
> **₹25 ಸಾವಿರ ಕೋಟಿ**
> ವಿಶೇಷ ಉದ್ದೇಶದ ನಿಧಿ

ಈ ಮಧ್ಯೆ, ಗಣಿ ಗುತ್ತಿಗೆದಾರರು ಎಸ್‌ಪಿವಿಗೆ ಪಾವತಿಸುತ್ತಿರುವ ಶೇ 10 ವಂತಿಗೆಯನ್ನು ಸ್ಥಗಿತಗೊಳಿಸುವಂತೆ 'ಭಾರತೀಯ ಗಣಿ ಉದ್ಯಮಿಗಳ ಒಕ್ಕೂಟ'ವು (ಫಿಮಿ) ಸುಪ್ರೀಂ ಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿತ್ತು. ಗಣಿ ಮತ್ತು ಖನಿಜ ಅಭಿವೃದ್ಧಿ ನಿಯಂತ್ರಣ (ಎಂಎಂಡಿಆರ್) ಕಾಯ್ದೆಯಡಿ ಗಣಿ ಗುತ್ತಿಗೆದಾರರು ಜಿಲ್ಲಾ ಖನಿಜ ನಿಧಿಗೂ (ಡಿಎಂಎಫ್) ರಾಜಧನದ 1/3 ಭಾಗಕ್ಕಿಂತ ಹೆಚ್ಚು ಪಾವತಿಸಬೇಕಿರುವುದರಿಂದ ಎಸ್‌ಪಿವಿಯಿಂದ ವಿನಾಯ್ತಿ ನೀಡುವಂತೆ ಕೇಳಿದ್ದರು. ಅದನ್ನು ಕೋರ್ಟ್ ತಿರಸ್ಕರಿಸಿದೆ. ಆದರೆ, 'ಪರಿಸರ ಪುನರುಜ್ಜೀವನ ಯೋಜನೆ' ಪೂರ್ಣವಾಗಿ ಮತ್ತು ಸ್ಪಷ್ಟವಾಗಿ ರೂಪುಗೊಳ್ಳಬೇಕಿದ್ದು, ಅದಕ್ಕೆ ಭಾರಿ ಹಣದ ಅಗತ್ಯವಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

'ಕೇಂದ್ರ ಉನ್ನತಾಧಿಕಾರ ಸಮಿತಿ' (ಸಿಇಸಿ) ಈ ಸಂಬಂಧ ಕೋರ್ಟ್‌ಗೆ ಸಲ್ಲಿಸಿದ ವರದಿಯಲ್ಲಿ, 'ರಾಜ್ಯ ಸರ್ಕಾರದ ಪ್ರಸ್ತಾವನೆಯನ್ನು ಸಂಪೂರ್ಣ ಅನುಷ್ಠಾನಗೊಳಿಸಲು ಎಸ್‌ಪಿವಿಯಲ್ಲಿ ಸಂಗ್ರಹವಾಗಿರುವ ಹಣ ಸಾಕಾಗದು. ಸಮಗ್ರ ಪರಿಸರ ಪುನರುಜ್ಜೀವನ ಯೋಜನೆ ಮತ್ತು ಅದಕ್ಕೆ ಬೇಕಾಗುವ ಹಣದ ಅಂದಾಜನ್ನು ಅಂತಿಮಗೊಳಿಸಿದ ಬಳಿಕ ಈ ಬಗ್ಗೆ ಮರು ಪರಿಶೀಲನೆ ನಡೆಸಬಹುದು. ಅಲ್ಲಿವರೆಗೂ ಶೇ 10 ವಂತಿಗೆ ಪಾವತಿ ಅನಿವಾರ್ಯ' ಎಂದು ಹೇಳಿದೆ.

ಅತಿ ಹೆಚ್ಚು ಸಮಸ್ಯೆ ಬಳ್ಳಾರಿಯಲ್ಲಿ: ಗಣಿಗಾರಿಕೆಯಿಂದ ಅತಿ ಹೆಚ್ಚು ಸಮಸ್ಯೆಗೀಡಾಗಿದ್ದು ಬಳ್ಳಾರಿ ಜಿಲ್ಲೆ. ಜಿಲ್ಲೆಯ ಈ 125 ಗ್ರಾಮಗಳು ಪುನರ್ವಸತಿ ನಿರೀಕ್ಷೆಯಲ್ಲಿವೆ. ನಂತರದ ಸ್ಥಾನದಲ್ಲಿ ವಿಜಯನಗರ ಜಿಲ್ಲೆಯಿದೆ. ಜಿಲ್ಲೆಯ 66 ಗ್ರಾಮಗಳು ಗಣಿಗಾರಿಕೆ, ಅದಿರು ಸಾಗಾಟದಿಂದ ನಲುಗಿವೆ. ಚಿತ್ರದುರ್ಗ ಜಿಲ್ಲೆಯ 60 ಹಾಗೂ ತುಮಕೂರಿನ 59 ಹಳ್ಳಿಗಳ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದರೆ, ಅವರ ನೋವಿಗೆ ಮಿಡಿಯುವ ಕೆಲಸದ ಪ್ರಗತಿ ನೋಡಿದರೆ ಬಹಳ ನಿರಾಸೆ ಮೂಡಿಸುತ್ತದೆ.

ಗಣಿ ಬಾಧಿತ ಪ್ರದೇಶದ ಜನರಿಗೆ ವಾಸಕ್ಕೆ ಯೋಗ್ಯವಾದ ಮನೆಗಳಿಲ್ಲ. ಗಣಿಗಳಲ್ಲಿ ನಡೆಯುವ ಸ್ಫೋಟದ ಸದ್ದಿಗೆ ಇರುವ ಸೂರು ಕಳೆದುಕೊಳ್ಳುವ ಆತಂಕ ಇನ್ನೊಂದೆಡೆ. ಮಕ್ಕಳು ಆಟವಾಡುವುದಕ್ಕೆ ಮೈದಾನದಂತಹ ಮುಕ್ತವಾದ ಪ್ರದೇಶ, ಚೆಂದದ ವಾತಾವರಣ ಇಲ್ಲ. ಮಕ್ಕಳಿಗೆ ಮನೆಯ ಅಂಗಳವೇ ಎಲ್ಲ. ಆದರೆ, ಅಲ್ಲಿಗೂ ದೂಳು ಬಂದು ಬೀಳುತ್ತದೆ. ಸಂಚಾರಕ್ಕೆ ಸೂಕ್ತ ರಸ್ತೆಗಳಿಲ್ಲ. ಶಾಲೆ, ಆಸ್ಪತ್ರೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸುವ ಕೆಲಸದ ವೇಗ ಆಮೆಗತಿಯಲ್ಲಿದೆ.

ನಿಯಮಕ್ಕಿದೆಯೇ ಬೆಲೆ?: ಗಣಿಗಳಲ್ಲಿ ಕನ್ವೆಯರ್ ಬೆಲ್ಟ್, ಕನ್ವೆಯರ್ ಪೈಪ್ ಅಳವಡಿಸಿ, ಅದರ ಮೂಲಕ ಉಕ್ಕಿನ ಕೈಗಾರಿಕೆಗಳಿರುವ ಜಾಗಕ್ಕೆ ಅದಿರು ಸಾಗಿಸಬೇಕು. ಲಾರಿಗಳ ಸಂಚಾರ ಗಣನೀಯವಾಗಿ ತಗ್ಗಿಸಬೇಕು. ಅನಿವಾರ್ಯ ಇರುವ ಕಡೆಗಳಲ್ಲಿ ಬಟ್ಟೆ ಹೊದಿಕೆ ಹಾಕಿ ಲಾರಿಗಳಲ್ಲಿ ಅದಿರು ಸಾಗಿಸಬೇಕೆಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ. ಆದರೆ, ಈ ನಿಯಮದ ಪಾಲನೆ ಆಗುತ್ತಿಲ್ಲ ಎನ್ನುವುದು ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಗಳಲ್ಲಿ ಒಮ್ಮೆ ಓಡಾಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಜೆಎಸ್‌ಡಬ್ಲ್ಯು, ಸ್ಮಯೋರ್ ಸೇರಿದಂತೆ ಕೆಲವೇ ಗಣಿ ಕಂಪನಿಗಳು ಮಾತ್ರ ಕನ್ವೇಯರ್ ಬೆಲ್ಟ್ ಬಳಸುತ್ತಿವೆ.

'ಬೃಹತ್ ಕೈಗಾರಿಕೆಗಳಿಂದ ಜನರ ನೆಮ್ಮದಿ ಹಾಳಾಗಿದೆ. ಉಕ್ಕಿನ ಕೈಗಾರಿಕೆಗಳಿರುವ ಪ್ರದೇಶದಲ್ಲಿ ಮಿತಿ ಮೀರಿದ ದೂಳು ವ್ಯಾಪಿಸಿರುತ್ತದೆ. ಅದರಲ್ಲೂ ರಾತ್ರಿ ವೇಳೆ ಇದರ ಪ್ರಮಾಣ ಹೆಚ್ಚಾಗುತ್ತದೆ. ಇದರಿಂದ ಜನ ನಾನಾ ರೀತಿಯ ಆರೋಗ್ಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳು ಕೇವಲ ಹೆಸರಿಗಷ್ಟೇ. ಯಾರೊಬ್ಬರೂ ಅದನ್ನು ಪಾಲಿಸುತ್ತಿಲ್ಲ' ಎಂದು ಆರೋಪಿಸುತ್ತಾರೆ ಗಣಿಬಾಧಿತ ಹೊಸಪೇಟೆ ತಾಲ್ಲೂಕಿನ ಮರಿಯಮ್ಮನ ಹಳ್ಳಿಯ ಗ್ರಾಮಸ್ಥ ಕೊಟ್ರೇಶ್.

ಕಮಿಷನ್ ಕೈಸೇರದಿದ್ದರೆ ಭೂಮಿಪೂಜೆಗೆ ಗೈರು!: ಕೆಎಂಇಆರ್‌ಸಿ ಜತೆ ಗಣಿ ಬಾಧಿತ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 'ಜಿಲ್ಲಾ ಖನಿಜ ನಿಧಿ' (ಡಿಎಂಎಫ್) ಕೂಡಾ ಸ್ಥಾಪಿಸಲಾಗಿದೆ. ಗಣಿ ಉದ್ಯಮಿಗಳಿಂದ ಈ ನಿಧಿಗೂ ಹಣ ಸಂಗ್ರಹಿಸಲಾಗುತ್ತಿದೆ. ಈ ಅನುದಾನದ ಅಡಿಯಲ್ಲಿ ನಾಲ್ಕೂ ಜಿಲ್ಲೆಗಳಿಗೆ ಕೋಟ್ಯಂತರ ರೂಪಾಯಿ ಹಂಚಿಕೆ ಮಾಡಲಾಗಿದೆ. ಆದರೆ, ಜನಪ್ರತಿನಿಧಿಗಳ ಮಾತೇ ಇದರಲ್ಲಿ ನಡೆಯುತ್ತಿರುವುದರಿಂದ ವಿವಿಧ ಕಾಮಗಾರಿಗಳಲ್ಲಿ ಅಕ್ರಮ ನಡೆಸಿದ ಆರೋಪಗಳಿವೆ.

'ಗಣಿ ಬಾಧಿತ ಜಿಲ್ಲೆಗಳ ಉಸ್ತುವಾರಿ ಸಚಿವರು ಡಿಎಂಎಫ್ ಅಧ್ಯಕ್ಷರಾಗಿರುತ್ತಾರೆ. ಶಾಸಕರು, ಅಧಿಕಾರಿಗಳು ಅದರ ಸದಸ್ಯರಾಗಿರುತ್ತಾರೆ. ಆಡಳಿತರೂಢ ಪಕ್ಷದ ಸಚಿವರ ಮಾತೇ ಅಲ್ಲಿ ನಡೆಯುತ್ತದೆ. ಹೆಚ್ಚು ಕಮಿಷನ್ ಸಿಗುವ ಕಾಮಗಾರಿಗಳಿಗೆ ಒತ್ತು ಕೊಟ್ಟು, ಅನುದಾನ ಮಂಜೂರು ಮಾಡಿಸಿಕೊಳ್ಳುತ್ತಾರೆ. ಕಾಮಗಾರಿಗಳ ಭೂಮಿ ಪೂಜೆಗೂ ಮುನ್ನ ಗುತ್ತಿಗೆದಾರರಿಂದ ಕಮಿಷನ್ ಕೈಸೇರಬೇಕು. ಇಲ್ಲವಾದರೆ ಭೂಮಿಪೂಜೆಗೆ ಜನಪ್ರತಿನಿಧಿಗಳು ಬರುವುದಿಲ್ಲ. ಕಮಿಷನ್ ಕೈಸೇರದಕ್ಕೆ ಅನೇಕ ಸಲ ಕೊನೆಯ ಕ್ಷಣದಲ್ಲಿ ಭೂಮಿಪೂಜೆ ಮುಂದೂಡಿದ ಅನೇಕ ನಿದರ್ಶನಗಳಿವೆ' ಎಂದು ಹೆಸರು ಹೇಳಲಿಚ್ಛಿಸದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ಸಂಡೂರು ತಾಲ್ಲೂಕಿನ ಕಮತೂರಿನಲ್ಲಿ ಚರಂಡಿ ನಿರ್ಮಾಣಕ್ಕಾಗಿ ಹಣ ಬಿಡುಗಡೆಗೊಳಿಸಲಾಗಿದೆ. ಆದರೆ, ಆ ಕೆಲಸವಾಗಿಲ್ಲ. ಗ್ರಾಮದ ತುಂಬೆಲ್ಲಾ ಚರಂಡಿ ನೀರು ರಸ್ತೆಯ ಮಧ್ಯದಲ್ಲಿಯೇ ಹರಿಯುತ್ತದೆ. ಇನ್ನು, ಹೊಸಪೇಟೆಯ ಒಳಾಂಗಣ ಕ್ರೀಡಾಂಗಣದಲ್ಲಿ ಸ್ಕೇಟಿಂಗ್ ಟ್ರ್ಯಾಕ್ ಕೂಡ ಡಿಎಂಎಫ್ ಅನುದಾನದಲ್ಲಿಯೇ ನಿರ್ಮಿಸಲಾಗಿದೆ. ಆದರೆ, ನಿರ್ಮಿಸಿದ ಕೆಲವೇ ದಿನಗಳಲ್ಲಿ ಅದರಲ್ಲಿ ಬಿರುಕುಗಳು ಮೂಡಿವೆ. ಇದು ಕಳಪೆ ಕಾಮಗಾರಿಗೆ ಜ್ವಲಂತ ಸಾಕ್ಷಿ. ಈ ಹಿಂದಿನ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ. ಅವರು, ಅಧಿಕಾರಿಗಳಿಂದ ವಿವರಣೆ ಕೇಳಿದ್ದರು. ಅಷ್ಟರಲ್ಲೇ ಅವರನ್ನೇ ಎತ್ತಂಗಡಿಗೊಳಿಸಿ, ತನಿಖೆಯನ್ನು ಅಲ್ಲಿಗೆ ಕೊನೆಗೊಳಿಸಲಾಯಿತು ಎನ್ನುವ ಆರೋಪವಿದೆ. ಯಾರ ವಿರುದ್ಧವೂ ಕ್ರಮ ಜರುಗಿಸಲಿಲ್ಲ. ಇನ್ನು, ಸಂಡೂರಿನ ನಾರಾಯಣಪುರ, ಭುಜಂಗನಗರ, ಹೊಸಪೇಟೆಯ ವ್ಯಾಸನಕೆರೆ, ಪಿ.ಕೆ.ಹಳ್ಳಿಯಲ್ಲಿ ಕಳಪೆ ಗುಣಮಟ್ಟದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಿಸಿ ಹಣ ಎತ್ತಲಾಗಿದೆ ಎಂಬ ಆರೋಪಗಳಿವೆ.

ಬಳ್ಳಾರಿ ಜಿಲ್ಲೆಗೆ ಅತಿ ಹೆಚ್ಚು ಅನುದಾನ ಹಂಚಿಕೆಯಾಗಿದೆ. ಒಟ್ಟು ₹1,593 ಕೋಟಿ ಮೀಸಲಿಟ್ಟಿದ್ದು, ಅದರಲ್ಲಿ ₹542 ಕೋಟಿ ವಿವಿಧ ಕಾಮಗಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ. ವಿಜಯನಗರ ಜಿಲ್ಲೆಗೆ ಒಟ್ಟು ₹751 ಕೋಟಿ ಹಂಚಿಕೆಯಾಗಿದ್ದು, ₹308 ಕೋಟಿ ಬಿಡುಗಡೆ ಮಾಡಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ₹319.39 ಕೋಟಿ ಪೈಕಿ ₹214.18 ಕೋಟಿ ಹಾಗೂ ತುಮಕೂರು ಜಿಲ್ಲೆಗೆ ₹47.38 ಕೋಟಿಯಲ್ಲಿ ₹33.58 ಕೋಟಿ ಅನುದಾನ ಬಿಡುಗಡೆಗೊಳಿಸಲಾಗಿದೆ. ಕುಡಿಯುವ ನೀರು, ಮಾಲಿನ್ಯ ನಿಯಂತ್ರಣ, ಪರಿಸರ ಸಂರಕ್ಷಣೆ, ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಅಂಗವಿಕಲರಿಗೆ ನೆರವು, ಕೌಶಲ ಅಭಿವೃದ್ಧಿ, ಸ್ವಚ್ಛತೆ ಸೇರಿದಂತೆ ಇತರೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಯೋಜನೆ ರೂಪಿಸಲಾಗಿದೆ. ಇದರಲ್ಲಿ ಕೆಲವು ಯೋಜನೆಗಳು ಪ್ರಗತಿಯಲ್ಲಿವೆ.

ಗಣಿಬಾಧಿತ ಗ್ರಾಮಸ್ಥರ ನಿರೀಕ್ಷೆಗಳೇನು?: 'ಡಿಎಂಎಫ್ ಅಥವಾ ಕೆಎಂಇಆರ್‌ಸಿ ಅನುದಾನ ಯಾವುದಕ್ಕೆ ಬಳಕೆಯಾಗಬೇಕು ಎನ್ನುವುದರ ಕುರಿತು ಗ್ರಾಮ ಸಭೆಗಳಲ್ಲಿ ತೀರ್ಮಾನಿಸಬೇಕು. ಒಂದೊಂದು ಗ್ರಾಮದ ಸಮಸ್ಯೆ ಒಂದೊಂದು ರೀತಿಯಲ್ಲಿರುತ್ತದೆ. ಬೇಕು ಬೇಡಿಕೆಗಳು ಭಿನ್ನವಾಗಿರುತ್ತವೆ. ಸ್ಥಳೀಯರೊಂದಿಗೆ ಕುಳಿತು ಚರ್ಚಿಸಿ, ಯೋಜನೆ ರೂಪಿಸಿದರೆ ಉತ್ತಮ. ಯಾವ್ಯಾವ ಕೆಲಸ ಕೈಗೆತ್ತಿಕೊಳ್ಳಲಾಗುತ್ತದೆ. ಅದಕ್ಕೆ ನಿಗದಿಯಾದ ಹಣವೆಷ್ಟು ಎನ್ನುವುದು ಗೊತ್ತಾದರೆ ಕಾಮಗಾರಿ ಕಳಪೆಯಾಗದಂತೆ ಗ್ರಾಮಸ್ಥರು ತಡೆಯಲು ಸಾಧ್ಯವಾಗುತ್ತದೆ. ಕಾಮಗಾರಿಗಳು ಸಮರ್ಪಕವಾಗಿ ಅನುಷ್ಠಾನಕ್ಕೆ ಬರುತ್ತವೆ' ಎನ್ನುತ್ತಾರೆ ಕಮತೂರಿನ ಗ್ರಾಮಸ್ಥರಾದ ಮಂಜುನಾಥ, ಹುಲುಗಪ್ಪ ಹಾಗೂ ನಾರಾಯಣಪುರದ ಮೌನೇಶ್, ವಿನೋದ್ ಕುಮಾರ್, ಸಂಡೂರಿನ ಪರಿಸರ ಹೋರಾಟಗಾರ ಶ್ರೀಶೈಲ ಆಲ್ದಳ್ಳಿ.

'ಛತ್ತೀಸಗಡ, ಒಡಿಶಾ ರಾಜ್ಯಗಳಲ್ಲಿ ಗ್ರಾಮ ಸಭೆ ನಡೆಸಿ, ಯೋಜನೆಗಳನ್ನು ತೀರ್ಮಾನಿಸಲಾಗುತ್ತದೆ. ಇಲ್ಲೂ ಅದೇ ರೀತಿ ಆಗಬೇಕು. ಆರೋಗ್ಯ, ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಗ್ರಾಮಸ್ಥರನ್ನು ಆರ್ಥಿಕವಾಗಿ ಸ್ವಾವಲಂಬಿಗೊಳಿಸಬೇಕು. ಕಟ್ಟಡ ಕಾಮಗಾರಿಗಳಿಗೆ ಆದ್ಯತೆ ಸಿಗುವುದರ ಜೊತೆಗೆ ಬದುಕು ಕಟ್ಟಿಕೊಡುವ ಕೆಲಸವಾಗಬೇಕು. ಆಸ್ಪತ್ರೆ ಕಟ್ಟಿದರೆ ಪ್ರಯೋಜನ ವಿಲ್ಲ. ಅದಕ್ಕೆ ಅಗತ್ಯ ವೈದ್ಯರು, ಸಿಬ್ಬಂದಿ ನೇಮಿಸಬೇಕು. ಈ ಸಂಬಂಧ ಈಗಾಗಲೇ ಸರ್ಕಾರಕ್ಕೆ ಮನವಿ ಕೂಡ ಸಲ್ಲಿಸಲಾಗಿದೆ' ಎಂದು ಶ್ರೀಶೈಲ ಆಲ್ದಳ್ಳಿ ತಿಳಿಸಿದರು.

ಪೂರಕ ಮಾಹಿತಿ: ಹೊನಕೆರೆ ನಂಜುಂಡೇಗೌಡ (ಬಳ್ಳಾರಿ), **ಜಿ.ಬಿ. ನಾಗರಾಜ್** (ಚಿತ್ರದುರ್ಗ), **ಮೈಲಾರಿ ಲಿಂಗಪ್ಪ** (ತುಮಕೂರು)



ಸಂಡೂರು ತಾಲ್ಲೂಕಿನ ಕಮತೂರು ಗ್ರಾಮದ ಮಧ್ಯದಿಂದ ದೂಳೆಬ್ಬಿಸಿಕೊಂಡು ಅದಿರು ಸಾಗಿಸುತ್ತಿರುವ ಟಿಪ್ಪರ್‌ಗಳು
ಪ್ರಜಾವಾಣಿ ಚಿತ್ರಗಳು: ಲವ



ಹಗಲು-ರಾತ್ರಿಯೆನ್ನದೆ ಲಾರಿ, ಟಿಪ್ಪರ್‌ಗಳು ಸಾಲು ಸಾಲಾಗಿ ಸಂಚರಿಸುತ್ತವೆ. ಮನೆಯಿಂದ ಹೊರಗೆ ಬರಲು ಭಯವಾಗುತ್ತದೆ.
–ಮಂಜಪ್ಪ, ಸೇನಿ ಬಸಪ್ಪ ಕ್ಯಾಂಪ್ ನಿವಾಸಿ

ದಿನವಿಡೀ ಸ್ಫೋಟದ ಸದ್ದು, ವಿಪರೀತ ದೂಳಿನಿಂದ ನಮ್ಮ ನೆಮ್ಮದಿ ಹಾಳಾಗಿದೆ. ನಮ್ಮ ಪಾಡಿಗೆ ನಮಗೆ ಬದುಕಲು ಬಿಡುತ್ತಿಲ್ಲ.
–ಮಂಜುನಾಥ, ಕಮತೂರು ನಿವಾಸಿ

ಬೇಡಿಕೆಯುಳ್ಳ ಯೋಜನೆ ತನ್ನಿ: ಎಸ್. ಆರ್. ಹಿರೇಮಠ

'ಕೆಎಂಇಆರ್‌ಸಿ ಅನುದಾನ ವೆಚ್ಚ ಮಾಡುವುದಕ್ಕೂ ಮುನ್ನ ಎಲ್ಲ ಗಣಿಬಾಧಿತ ಪ್ರದೇಶಗಳಿಗೆ ಭೇಟಿ ಕೊಡಬೇಕು. ಅನಂತರ ಅಲ್ಲಿನ ಜನರ ಸಾಮಾಜಿಕ-ಆರ್ಥಿಕ ಸ್ಥಿತಿಗತಿಯ ಅಧ್ಯಯನ ನಡೆಸಬೇಕು. ಬಳಿಕ ಗ್ರಾಮ ಸಭೆಗಳನ್ನು ನಡೆಸಿ, ಗ್ರಾಮಸ್ಥರ ಅಭಿಪ್ರಾಯ ಆಲಿಸಿ ಯೋಜನೆಗಳನ್ನು ರೂಪಿಸಬೇಕು' ಎನ್ನುತ್ತಾರೆ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಅಧ್ಯಕ್ಷರೂ ಆದ ಪರಿಸರ ಹೋರಾಟಗಾರ ಎಸ್.ಆರ್. ಹಿರೇಮಠ.

ಅಂಗನವಾಡಿ, ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಒತ್ತು ಕೊಡಲಾಗುತ್ತಿದೆ. ಅದರೊಂದಿಗೆ ನುರಿತ ಶಿಕ್ಷಕರನ್ನು ನೇಮಿಸಬೇಕು. ಮಕ್ಕಳ ಗುಣಮಟ್ಟದ ಕಲಿಕೆಗೆ ಪೂರಕವಾದ ಎಲ್ಲ ವ್ಯವಸ್ಥೆ ಕಲ್ಪಿಸಬೇಕು. ಉದಾಹರಣೆಗೆ ಕಂಪ್ಯೂಟರ್‌ಗಳ ಮೂಲಕ ಆಧುನಿಕ ಜ್ಞಾನ ಕೊಡಬೇಕು. ಅಂಗನವಾಡಿ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡಬೇಕು. ಆಸ್ಪತ್ರೆಗಳಲ್ಲಿ ಎಲ್ಲ ರೀತಿಯ ಚಿಕಿತ್ಸೆ ಸಿಗುವಂತಾಗಬೇಕು.

ಇನ್ನು, ಪರಿಸರ ಪುನರುಜ್ಜೀವನ ಕೆಲಸ ನೈಸರ್ಗಿಕವಾಗಿ ಮಾಡಬೇಕು. ಯಾವ ಪ್ರದೇಶವನ್ನು ಪುನರುಜ್ಜೀವನಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತದೆಯೋ ಆ ಪ್ರದೇಶದಲ್ಲಿ ಬೀಜದುಂಡೆಗಳನ್ನು ಹಾಕಿ, ಕನಿಷ್ಠ ನಾಲ್ಕೈದು ವರ್ಷ ಜನ-ಜಾನುವಾರುಗಳು ಅಲ್ಲಿ ಓಡಾಡದಂತೆ ಮಾಡಬೇಕು. ಹೀಗೆ ಮಾಡುವುದರಿಂದ ಬೇಗ ಹಸಿರು ಕಾಣಬಹುದು. ಖರ್ಚಿನಲ್ಲಿ ಪಾರದರ್ಶಕತೆಗೆ ಒತ್ತು ಕೊಡಬೇಕು ಎಂದು ಹೇಳಿದರು.

ಮಾಹಿತಿ ಕೇಳಿದ ಸಿಇಸಿ

ಗಣಿಗಾರಿಕೆ ಚಟುವಟಿಕೆ ನಡೆದಿರುವ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ 2012ರ ಬಳಿಕ ಕೈಗೊಂಡಿರುವ ಮೂಲಸೌಲಭ್ಯ ಅಭಿವೃದ್ಧಿಗೆ ಸಂಬಂಧಿಸಿದ ಮಾಹಿತಿ ನೀಡುವಂತೆ ರಾಜ್ಯದ ಮುಖ್ಯ ಕಾರ್ಯದರ್ಶಿ ಅವರಿಗೆ ಸಿಇಸಿ ಈಚೆಗೆ ಪತ್ರ ಬರೆದಿದೆ.

ಜೂನ್ 26ರಂದು ಬರೆದಿರುವ ಪತ್ರದಲ್ಲಿ, ಜೂನ್ 6ರಂದು ನಡೆದ ಸಭೆಯಲ್ಲಿ ರಾಜ್ಯ ಸರ್ಕಾರ, ಫಿಮಿ ಹಾಗೂ ಕಿಸ್ಮಾ ಮಾಹಿತಿ ಒದಗಿಸಲು ಒಪ್ಪಿದ್ದು, ವಿಳಂಬ ಮಾಡದೆ ಮಾಹಿತಿ ಕೊಡುವಂತೆ ಪತ್ರದಲ್ಲಿ ಕೇಳಲಾಗಿದೆ.

ಇದಲ್ಲದೆ, ಮೂರೂ ಜಿಲ್ಲೆಗಳಲ್ಲಿ ವಿಶೇಷ ಉದ್ದೇಶದ ನಿಧಿಯಲ್ಲದೆ ಬೇರೆ ಅನುದಾನದಿಂದ ಕೈಗೆತ್ತಿಕೊಂಡಿರುವ ಯೋಜನೆಗಳು, ಸಿಇಪಿಎಂಐಝಡ್ ಉದ್ದೇಶಿತ ಯೋಜನೆಗಳ ಪಟ್ಟಿ ಕೊಡುವಂತೆ ಹೇಳಲಾಗಿದೆ.



ಗಣಿಗಾರಿಕೆಯಿಂದ ಬೋಳಾದ ಕಮತೂರಿನ ಗುಡ್ಡ



ಗಣಿ ಸ್ಫೋಟದ ಸದ್ದಿಗೆ ಸಂಡೂರು ತಾಲ್ಲೂಕಿನ ಕಮತೂರಿನಲ್ಲಿ ಮನೆ ಗೋಡೆ ಕುಸಿದು ಬಿದ್ದಿದೆ



ಸಂಡೂರು ತಾಲ್ಲೂಕಿನ ಕಮತೂರು ಗ್ರಾಮದ ಮಗ್ಗುಲಲ್ಲೇ ನಡೆಯುತ್ತಿರುವ ಗಣಿಗಾರಿಕೆ ಚಟುವಟಿಕೆಗಳು

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 6-8-1998

● **ಕ್ವಟ್ರೋಚಿ ಬಂಧನ ವಾರಂಟ್‌ಗೆ ದೆಹಲಿ ಹೈಕೋರ್ಟ್ ಅಸ್ತು**

ನವದೆಹಲಿ, ಆ. 5 (ಯುಎನ್‌ಐ)– ಇಟಲಿಯ ಉದ್ಯಮಿ ಒಟಾವಿಯೋ ಕ್ವಟ್ರೋಚಿ ಅವರ ಮೇಲಿನ ಆರೋಪವನ್ನು ಮೇಲ್ನೋಟದಲ್ಲೇ ಸಾಬೀತುಪಡಿಸಲು ಸಾಕಷ್ಟು ಸಾಕ್ಷ್ಯಾಧಾರಗಳಿವೆ ಎಂಬ ಸಿಬಿಐ ವಾದವನ್ನು ದೆಹಲಿ ಹೈಕೋರ್ಟ್ ಪುರಸ್ಕರಿಸುವುದರೊಂದಿಗೆ ಅವರ ಬಂಧನಕ್ಕಿದ್ದ ಎಲ್ಲ ಎಲ್ಲ ಅಡೆ– ತಡೆಗಳು ನಿವಾರಣೆ ಆದಂತಾಗಿದೆ.

ಬೋಫೋರ್ಸ್ ಫಿರಂಗಿ ವ್ಯವಹಾರದಲ್ಲಿ ಕ್ವಟ್ರೋಚಿ 7.34 ದಶಲಕ್ಷ ಡಾಲರ್ ಕಮಿಷನ್ ಪಡೆದಿದ್ದಾರೆ ಎಂಬುದು ಆರೋಪ. ಈ ಕುರಿತು ತಮ್ಮ ವಿರುದ್ಧ ಹೊರಡಿಸಲಾಗಿರುವ ಬಂಧನದ ವಾರಂಟ್ ಅನ್ನು ರದ್ದುಪಡಿಸುವಂತೆ ಕೋರಿ ಕ್ವಟ್ರೋಚಿ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ಇಂದು ವಜಾ ಮಾಡಿತು.

50 ವರ್ಷಗಳ ಹಿಂದೆ

ಸೋಮವಾರ, 6-8-1973

● **ಅಥೆನ್ಸ್ ವಿಮಾನ ನಿಲ್ದಾಣದ ಆರಾಮ ಶಾಲೆ ಮೇಲೆ ಕೈಬಾಂಬ್: 3 ಸಾವು, ಅನೇಕ ಜನರಿಗೆ ಗಾಯ**

ಅಥೆನ್ಸ್, ಆ. 5– ಪ್ಯಾಲೆಸ್ಟೈನ್ ಭಯೋತ್ಪಾದಕರೆನ್ನಲಾದ ಕೆಲವು ಮಂದಿ ಇಂದು ಅಥೆನ್ಸ್ ವಿಮಾನ ನಿಲ್ದಾಣದ ಪ್ರಯಾಣಿಕರ ಆರಾಮ ಶಾಲೆಯ ಮೇಲೆ ಕೈಬಾಂಬ್‌ಗಳನ್ನು ಎಸೆದ ಪರಿಣಾಮವಾಗಿ ಮೂವರು ಸತ್ತಿದ್ದು, ಅನೇಕ ಜನರಿಗೆ ಗಾಯಗಳಾಗಿವೆ ಎಂದು ಪೊಲೀಸ್ ವಕ್ತಾರರು ತಿಳಿಸಿದರು. ಕೈಬಾಂಬ್‌ಗಳನ್ನು ಸ್ಫೋಟಿಸಿದ ಕೂಡಲೇ ಪ್ರಯಾಣಿಕರು ದಿಕ್ಕಾಪಾಲಾಗಿ ಓಡಲಾರಂಭಿಸಿದರೆಂದು ವಿಮಾನ ನಿಲ್ದಾಣದ ವಕ್ತಾರರು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಆಗಸ್ಟ್ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಪಂಚಮಿ ಗಂ. 07-10 ನಂತರ ಷಷ್ಠಿ ಗಂ. 29-21 ನಕ್ಷತ್ರ: ರೇವತಿ ಗಂ. 25-44
ಯೋಗ: ಧೃತಿ ಗಂ. 20-27 ಕರಣ: ತೈತಿಲ ಗಂ. 07-10, ಕರ್ಕಾಟಕ ಮಾಸದ 20 ನೇ ದಿನ,
ಮಳೆನಕ್ಷತ್ರ: ಆಶ್ಲೇಷ 1, ರಾಹುಕಾಲ: ಸಾಯಂಕಾಲ 04-30 - 06-00
ಸೂರ್ಯೋದಯ: 06-20 ಸೂರ್ಯಾಸ್ತ: 06-53
ಮುಸ್ಲಿಂ ದಿನಾಂಕ: 18 ಮೊಹರಮ್
ಅದೃಷ್ಟ ಸಂಖ್ಯೆ: 1, 2

ಮೇಷ: ನಿಮ್ಮ ಸಂಸ್ಥೆಯ ಹೊಸ ಆರ್ಥಿಕ ನೀತಿಯಿಂದ ನಿಮಗೆ ಹಣಕಾಸಿನ ವಿಷಯದಲ್ಲಿ ಹೆಚ್ಚಿನ ಲಾಭ ಸಂಭವಿಸುವುದು. ಕುಟುಂಬದ ಜವಾಬ್ದಾರಿ ವಹಿಸಿಕೊಳ್ಳಬೇಕಾಗುವುದು. ಆಂಜನೇಯನ ಆರಾಧನೆ ಶುಭಫಲ ನೀಡುತ್ತದೆ.

ವೃಷಭ: ಜನರ ಭಾವನೆಗಳಿಗೆ ಯಾವ ರೀತಿ ಪ್ರತಿಕ್ರಿಯಿಸಬೇಕೆಂಬುದು ನಿಮಗೆ ಚೆನ್ನಾಗಿ ತಿಳಿದಿದೆ. ನೂತನ ಗೃಹ ನಿರ್ಮಾಣದ ಯೋಜನೆಗೆ ಯೋಚಿಸಬಹುದು. ಸಂಬಂಧಗಳನ್ನು ಉಳಿಸಿ ಕಾಪಾಡುವುದರಲ್ಲಿ ಜಯವಿರುತ್ತದೆ.

ಮಿಥುನ: ವೃತ್ತಿರಂಗದಲ್ಲಿ ನಿಮ್ಮ ತಿಳುವಳಿಕೆಯಂತೆಯೇ ನಡೆಯಿರಿ, ಅನ್ಯರ ಮಾತಿಗೆ ಕಿವಿ ಒಡ್ಡಬೇಡಿ. ಐಷಾರಾಮಿ ಖರ್ಚು ವೆಚ್ಚಗಳ ಬಗ್ಗೆ ಜಾಗ್ರತೆಯನ್ನು ವಹಿಸುವುದು ಅನಿವಾರ್ಯ. ಋಣ ಪರಿಹಾರವಾಗಿ ನೆಮ್ಮದಿ ಮೂಡುವುದು.

ಕರ್ಕಾಟಕ: ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವಿರಿ. ಸಂಸಾರದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಪರಿಶ್ರಮವಿದ್ದರೂ ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ಸಿಂಹ: ನೀವು ಪ್ರಸ್ತುತ ಯಶಸ್ಸಿನ ಅಲೆಯಲ್ಲಿ ತೇಲುತ್ತಿರುವುದರಿಂದ ಅತಿಯಾಗಿ ಬೀಗದಿರುವುದು ಒಳ್ಳೆಯದು. ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ. ತೀರ್ಥಕ್ಷೇತ್ರಗಳ ದರ್ಶನಕ್ಕೆ ಹೋಗುವ ಮನಸ್ಸಾಗಲಿದೆ.

ಕನ್ಯಾ: ಅನಗತ್ಯ ಖರ್ಚಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಕುಟುಂಬದವರೊಡನೆ ಮನೋರಂಜನೆಗಾಗಿ ಅಲ್ಪ ಕಾಲ ಮೀಸಲಿಡಲು ಪ್ರಯತ್ನಿಸಿ. ವಿಶೇಷ ಉಡುಗೊರೆ ದೊರಕಬಹುದು.

ತುಲಾ: ನೆಂಟರಿಷ್ಟರ ಸಲಹೆಸೂಚನೆಗಳನ್ನು ಆಲಿಸಿ, ಸನ್ಮಾರ್ಗದಲ್ಲಿ ನಡೆಯಿರಿ. ದೈವಬಲ ನಿಮಗೆ ಒದಗಿ ಬಂದು ಅಭಿವೃದ್ಧಿಗೊಳ್ಳುವಿರಿ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ವೃಶ್ಚಿಕ: ಅಕ್ಕ-ಪಕ್ಕದವರನ್ನು ತಾತ್ಸಾರವಾಗಿ ಭಾವಿಸಬೇಡಿ. ಏಕೆಂದರೆ ನಿಮ್ಮ ಮೇಲಿರುವ ನಂಬುಗೆ ಮತ್ತು ವಿಶ್ವಾಸದಿಂದಾಗಿ ಹಲವಾರು ಅವಕಾಶಗಳು ನಿಮ್ಮದಾಗಲಿದೆ. ವಿದೇಶ ಅಥವಾ ದೂರ ಸಂಚಾರದ ಯೋಗವಿದೆ.

ಧನು: ಗೃಹ ನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಮಾನಸಿಕ ಒತ್ತಡ ಹೆಚ್ಚಾಗಿರುವುದು. ದಾಕ್ಷಿಣ್ಯ ಪ್ರವೃತ್ತಿಗೆ ಒಳಗಾಗದಂತೆ ನಿಸ್ಸಂಕೋಚತೆಯಿಂದ ಇರಬೇಕಾಗುತ್ತದೆ. ಹೊಸ ಜನರ ಸಂಪರ್ಕದಿಂದ ಉತ್ತಮ ಧನಲಾಭ.

ಮಕರ: ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರಿಂದ ಕರ್ತವ್ಯ ಲೋಪ ಸಂಭವಿಸಬಹುದು. ಕಾರ್ಯದೊತ್ತಡದ ನಡುವೆ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ಶೀತದ ಸಮಸ್ಯೆ ಎದುರಾಗಬಹುದು.

ಕುಂಭ: ಧರ್ಮ ಕಾರ್ಯಗಳಿಗಾಗಿ ಧನ ವಿನಿಯೋಗಿಸುವ ಬಗ್ಗೆ ಯೋಚಿಸಿ. ಚರ್ಮದ ವಸ್ತು ವ್ಯಾಪಾರಿಗಳಿಗೆ ಲಾಭದಾಯಕ ದಿನ. ಶಿಕ್ಷಕ ವರ್ಗದವರಿಗೆ ಹೆಚ್ಚಿನ ಜವಾಬ್ದಾರಿಯುತ ಕೆಲಸ ಬರಲಿವೆ. ಸ್ನೇಹಿತರ ಸಹಾಯ ಇರುವುದು.


ಮೀನ: ವ್ಯವಹಾರ ರಂಗದಲ್ಲಿ ಆತ್ಮೀಯರ ಸಲಹೆ ಸ್ವೀಕರಿಸಿದ ಪರಿಣಾಮ ನಷ್ಟ ತೋರಿಬರುವುದು. ದೇವರ ಕೃಪೆ ಹಾಗೂ ಹಿರಿಯರ ಆಶೀರ್ವಾದದಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೂ ಸುಲಭವಾಗಿ ಪರಿಹಾರ ಸಿಗಲಿದೆ.

ಪದಬಂಧ 5402

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗುರಿಯನ್ನು ಮುಟ್ಟಲು ಸಂಕಲ್ಪ ಮಾಡಿದವನು (5)
3.ಸುಮ್ಮನಿರಿ! ಹಿಗ್ಗು ಹೀಗೆ ಬಂದಿದೆ (3)
5.ಆಸನ ಅಥವಾ ಗದ್ದುಗೆ (2)
6.ಇಹದ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (2)
8.ನಿಧಾನವಾಗಿ ನೋಡಿ! ಇದು ಮುಖ್ಯವಾದುದು (3)
9.ಪದದೊಳಗಿನ ಅತ್ಯುತ್ತಮ ಸ್ಥಾನ! (5)
12.ಇದು ಉತ್ತರದವರ ಮಂಚ (3)
13.ಸರಕ್ಕನೆ ಧರಿಸಿದ ಮಾಲೆ (2)
15.ಕೃಷ್ಣನ ಸೋದರಮಾವ ಹಾಕಿದ ಆವರಣ ಚಿಹ್ನೆ (2)
16.ಯಾರಿಗೂ ಗೊತ್ತಾಗದ ಗುಟ್ಟು (3)
17.ಇದು ಕನ್ನಡಿಗನ ಲೈಬ್ರರಿ (5)

ಮೇಲಿಂದ ಕೆಳಕ್ಕೆ
1.ಆಹುತಿ ಕೊಡುವ ಜಾಗ (4)
2.ಈತ ಕಬ್ಬಿಣದ ಕೆಲಸಗಾರ (3)
4.ತುಸುವೇ ಬೀರಿದ ಮಂದಹಾಸ (4)
7.ಶ್ರೇಷ್ಠ ವರ್ಗದ ಸನ್ಯಾಸಿ (7)
8.ದೇವರಿಗೆ ಅರ್ಪಿಸಿ ಪಡೆದುದು (3)
9.ಹೂವಿನಲ್ಲಿರುವ ಹುಡಿ (3)
10.ಶ್ರುತಿಗೆ ಹೊಂದದ ಸ್ವರ (4)
11.ಒಳ್ಳೆಯ ಕಾಲವಿದು (4)
14.ಜಾಣನಿಲ್ಲಿ ತಿರುಗಿದ್ದಾನಲ್ಲಾ (3)



5401ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮನ್ವಂತರ 3.ಪಾರಂಗತ
5.ತಿಕ್ಕಲು 6.ನಿಯೋಗ
8.ಬಾವಲಿ 9.ನಯನ
10.ತ್ರಿಶಂಕು 12.ಚಾಳೀಸು
14.ಕಳೇಬರ 15.ಮನೋಹರ.

ಮೇಲಿಂದ ಕೆಳಕ್ಕೆ:
1.ಮಯನಿ 2.ರತಿ
3.ಪಾಲು 4.ತಕಲಿ
7.ಗಜಗಮನ
8.ಬಾಜಾಬಜಂತ್ರಿ
9.ನರ್ತಕ 11.ಕುಬೇರ
12.ಚಾರ 13.ಸುಮ

ಸುಡೊಕು 5788

				8			6	
			1		6		2	3
3		5		2		9		
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5787 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ವರ್ಗಾವಣೆ ದಂಧೆ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಆರೋಪ

‘₹1 ಸಾವಿರ ಕೋಟಿ ವ್ಯವಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಅಧಿಕಾರಕ್ಕೆ ಬಂದ ಎರಡೇ ತಿಂಗಳಿಗೆ ವರ್ಗಾವಣೆ ದಂಧೆಯಲ್ಲೇ ₹1 ಸಾವಿರ ಕೋಟಿ ವ್ಯವಹಾರ ನಡೆಸಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಅವರು ಆರೋಪಿಸಿದರು.

‘ಹಣ ಪಡೆದು ಸ್ಥಳ ನಿಯೋಜನೆ ಮಾಡುವ ಕುರಿತು ಅಧಿಕಾರಿಗಳೇ ಮಾತನಾಡುತ್ತಿದ್ದಾರೆ. ನಾನು ಪೆನ್‌ಡ್ರೈವ್ ಸೇರಿದಂತೆ ಅಗತ್ಯ ಸಾಕ್ಷ್ಯ ಒದಗಿಸಲು ಸಿದ್ಧ. ತನಿಖೆ ನಡೆಸಿ, ಸತ್ಯ ಬಹಿರಂಗಪಡಿಸಲು ಸರ್ಕಾರಕ್ಕೆ ದಮ್ಮು, ತಾಕತ್ತು ಇದೆಯಾ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನಿಸಿದರು.

‘ಒಂದು ಹುದ್ದೆಗೆ ಮೂವರನ್ನು ನಿಯೋಜಿಸುತ್ತಿದ್ದಾರೆ. ಮುಖ್ಯಮಂತ್ರಿ, ಸಚಿವರ ಟಿಪ್ಪಣಿಗಳು ಹಾದಿಬೀದಿಯಲ್ಲಿ ಬಿಕರಿಯಾಗುತ್ತಿವೆ. ಸಚಿವರು ತಮ್ಮ ಇಲಾಖೆಯ ಸಣ್ಣಪುಟ್ಟ ಹುದ್ದೆಗಳಿಗೂ ₹15 ಲಕ್ಷದವರೆಗೆ ಕೇಳುತ್ತಾರೆ. ಕೆಂಪಣ್ಣನವರ ದೂರು ಇಟ್ಟುಕೊಂಡು ಪೇಸಿಎಂ ಅಭಿಯಾನವನ್ನೇ ಮಾಡಿದ್ದ ಕಾಂಗ್ರೆಸ್‌ಗೆ ಅವರದೇ ಸರ್ಕಾರ ಬಂದ ಮೇಲೆ ಏಕೆ ಸಾಕ್ಷ್ಯ ಬಿಡುಗಡೆ ಮಾಡಲಿಲ್ಲ. ನಾನು ಪೆನ್‌ಡ್ರೈವ್ ತೋರಿಸಿದ ತಕ್ಷಣ ಬಹಳಷ್ಟು ಸಚಿವರು ಏಕೆ ನನ್ನನ್ನು ಸಂಪರ್ಕಿಸಿದರು. ನಾನು ಇಂತಹ ಆರೋಪಗಳನ್ನು ಹುಡುಗಾಟಿಕೆಗೆ ಮಾಡುತ್ತಿಲ್ಲ. ಹಿಟ್ ಆ್ಯಂಡ್ ರನ್ ಜಾಯಮಾನದ ವ್ಯಕ್ತಿ ನಾನಲ್ಲ. ಅದು ಕಾಂಗ್ರೆಸ್ ಗುಣ’ ಎಂದು ಟೀಕಿಸಿದರು.

‘ಅಂದು ಬಿಜೆಪಿ ವಿರುದ್ಧ ಆರೋಪ ಮಾಡಿದ್ದ ಕೆಂಪಣ್ಣ ಈಗ ಎಲ್ಲಿದ್ದಾರೆ? ಈಗ ಗುತ್ತಿಗೆದಾರರಿಂದ ಎಷ್ಟು ಪರ್ಸಂಟೇಜ್ ಬೇಡಿಕೆ ಇದೆ ಎಂದು ಅವರೇ ಹೇಳಬೇಕು. ಬಿಬಿಎಂಪಿ ವ್ಯಾಪ್ತಿಯಲ್ಲಿ ಹಿಂದೆ ನಡೆದಿರುವ ₹ 710 ಕೋಟಿ ಕಾಮಗಾರಿಗಳಿಗೆ ಎಲ್‌ಒಸಿ ನೀಡಲು ಶೇ 15ರಷ್ಟು ಕಮಿಷನ್ ಕೇಳುತ್ತಿದ್ದಾರೆ. ನಗರದ ಉಸ್ತುವಾರಿ ಸಚಿವರೊಬ್ಬರು ನನ್ನನ್ನು ಅಣ್ಣಾ ಎಂದಿದ್ದಾರೆ. ಈ ಜೀವನದಲ್ಲಿ ಅಂಥವರಿಗೆ ಅಣ್ಣನಾಗಲು ಬಯಸುವುದಿಲ್ಲ’ ಎಂದರು.

‘ಹಿಂದೆ ಮೈತ್ರಿ ಸರ್ಕಾರದಲ್ಲಿ ಗೃಹ ಸಚಿವರಾಗಿದ್ದ ಪರಮೇಶ್ವರ ಅವರಿಗೆ ವರ್ಗಾವಣೆ ವಿಷಯದಲ್ಲಿ ಸಲಹೆ ಕೊಟ್ಟಿದ್ದೆ ಎಂದಿದ್ದಾರೆ. ಪೊಲೀಸ್ ವರ್ಗಾವಣೆಯಲ್ಲಿ ನಾನು ಹಸ್ತಕ್ಷೇಪ ಮಾಡಿರಲಿಲ್ಲ. ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ಗೃಹ ಸಚಿವರೇ ಸೇರಿ ವರ್ಗಾವಣೆ ಮಾಡಿದ್ದರು. ಅವಾಂತರಕ್ಕೆ ಯಾರು ಕಾರಣ ಎನ್ನುವುದನ್ನು ಪರಮೇಶ್ವರ ಅವರೇ ಬಹಿರಂಗಪಡಿಸಬೇಕು’ ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ, ಪಕ್ಷದ ನಗರ ಘಟಕದ ಅಧ್ಯಕ್ಷ ಎಚ್‌.ಎಂ.ರಮೇಶ್ ಗೌಡ ಇದ್ದರು.

‘ನೈಸ್’ ವಿರುದ್ಧ ಶೀಘ್ರ ಪ್ರಧಾನಿಗೆ ದೂರು

ಬೆಂಗಳೂರು-ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆ (ನೈಸ್) ಅಕ್ರಮಗಳ ಕುರಿತ ಎಲ್ಲಾ ದಾಖಲೆಗಳನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸಲ್ಲಿಸುವೆ ಎಂದು ಕುಮಾರಸ್ವಾಮಿ ಅವರು ಹೇಳಿದರು.

‘ಅವರನ್ನು ಭೇಟಿಯಾದ ದಿನ ದೆಹಲಿಯಲ್ಲಿ ಅಕ್ರಮಗಳ ಎಲ್ಲಾ ದಾಖಲೆಗಳನ್ನು ಮಾಧ್ಯಮಗಳ ಮುಂದೆಯೂ ಬಿಡುಗಡೆ ಮಾಡಿ, ಸಿಬಿಐ ತನಿಖೆಗೆ ಒತ್ತಾಯ ಮಾಡುತ್ತೇನೆ’ ಎಂದರು.

ಸರ್ಕಾರದ ಪ್ರಭಾವಿ ಸಚಿವರೊಬ್ಬರು ನೈಸ್ ಜತೆ ಸೇರಿಕೊಂಡು ಹೊರವರ್ತುಲ ರಸ್ತೆ ಹೆಸರಲ್ಲಿ ಅವ್ಯವಹಾರ ನಡೆಸಿದ್ದಾರೆ. ಸಣ್ಣಪುಟ್ಟ ಮನೆಗಳನ್ನು ಕಟ್ಟಿಕೊಂಡಿದ್ದ ಬಡವರನ್ನು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ಆ ಮಹಾನುಭಾವರು ‘ನನಗೂ ಒಮ್ಮೆ ಪೆನ್ ಹಿಡಿಯುವ ಅವಕಾಶ (ಮುಖ್ಯಮಂತ್ರಿ ಸ್ಥಾನ) ಕೊಡಿ’ ಎಂದು ಕೇಳಿದ್ದು ಇದಕ್ಕೇನಾ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಸರ್ಕಾರದಲ್ಲಿ ಹಿಂದೆ ಕಾನೂನು ಸಚಿವರಾಗಿದ್ದ ಟಿ.ಬಿ.ಜಯಚಂದ್ರ ಅವರು ನೈಸ್ ಅಕ್ರಮವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದಕ್ಕೆ ಅವರಿಗೆ ಜೀವ ಬೆದರಿಕೆ ಹಾಕಿದ್ದರು. ಈ ಬೆದರಿಕೆ ಹಿಂದೆ ಯಾರಿದ್ದಾರೆ ಎನ್ನುವ ಬಗ್ಗೆಯೂ ತನಿಖೆಯಾಗಬೇಕು. ಜಯಚಂದ್ರ ಮೌನ ಮುರಿಯಬೇಕು ಎಂದು ಕೋರಿದರು.

ಎಚ್‌.ಡಿ.ಕುಮಾರಸ್ವಾಮಿ ಬಿಜೆಪಿಯ ವಕ್ತಾರರಾಗಿ ನೇಮಕವಾಗಿರಬೇಕು. ಹೀಗಾಗಿಯೇ ಆ ಪಕ್ಷದ ಮುಖಂಡರು ಏನೂ ಮಾತನಾಡುತ್ತಿಲ್ಲ, ಎಲ್ಲವನ್ನೂ ಕುಮಾರಸ್ವಾಮಿಯವರೇ ಹೇಳುತ್ತಿದ್ದಾರೆ

ಎನ್‌.ಚಲುವರಾಯಸ್ವಾಮಿ, ಕೃಷಿ ಸಚಿವ

ವರ್ಗಾವಣೆಯಲ್ಲಿ ಅವ್ಯವಹಾರ ನಡೆಯುತ್ತಿದೆ. ಹೆಚ್ಚು ಹಣ ನೀಡಿದವರಿಗೆ ಹುದ್ದೆ ನೀಡಲಾಗುತ್ತಿದೆ. ವರ್ಗಾವಣೆ ಆಗಿರುವ ಅಧಿಕಾರಿಗಳನ್ನು ಕೇಳಿದರೆ ಸತ್ಯ ತಿಳಿಯುತ್ತದೆ

ಪ್ರಲ್ಹಾದ ಜೋಶಿ
ಕೇಂದ್ರ ಸಚಿವ

ಎಚ್‌ಡಿಕೆ, ಬೊಮ್ಮಾಯಿ ಸಿ.ಎಂ ಆಗಿದ್ದಾಗ ಮಾಡಿದ ಅಧ್ವಾನಗಳನ್ನು ಜನ ಈಗಲೂ ಅನುಭವಿಸುತ್ತಿದ್ದಾರೆ. ಆರೋಪ ಮಾಡುವುದನ್ನು ಬಿಟ್ಟು, ದಾಖಲೆ ಕೊಡಲಿ

ಎಚ್‌. ವಿಶ್ವನಾಥ್, ಎಂಎಲ್‌ಸಿ

‘ತಪ್ಪು ಮುಚ್ಚಿಕೊಳ್ಳಲು ಆರೋಪ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಕೇಂದ್ರ ಹಾಗೂ ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಆರಂಭದಿಂದಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡುತ್ತಿರುವ ಆರೋಪ ಸಂಪೂರ್ಣ ಸುಳ್ಳಿನ ಕಂತೆ’ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆರೋಪಿಸಿದರು.

‘ಪ್ರಧಾನಿ ಮೋದಿಯವರು ಆರ್ಥಿಕತೆ ಹಾಳು ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಆರೋಪ ಮಾಡಿದ್ದಾರೆ. ಆದರೆ, ಯುಪಿಎ ಸರ್ಕಾರದ ಅವಧಿಯಲ್ಲಿ ಆರ್ಥಿಕತೆ ಸಂಪೂರ್ಣ ಹದಗೆಟ್ಟಿತ್ತು. ಅತಿ ಹೆಚ್ಚು ಭ್ರಷ್ಟಾಚಾರ ಮಾಡಿರುವ ಆರೋಪ ಯುಪಿಎ ಸರ್ಕಾರದ ಮೇಲೆ ಇತ್ತು’ ಎಂದರು.

‘ಅವಕಾಶ ವಂಚಿತರಾದರೂ ದುಃಖಿತರಾಗಲಿಲ್ಲ’

ಸುಧಾ, ಮಯೂರ ಓದಿರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟನೆ, ಸೇವೆಗಾಗಿಯೇ ತಮ್ಮ ಬದುಕು ಮೀಸಲಿಟ್ಟ ಪ್ರೊ.ಪಿ.ವಿ.ಕೃಷ್ಣಭಟ್ಟರು ಜೀವನದಲ್ಲಿ ಹಲವು ಅವಕಾಶಗಳಿಂದ ವಂಚಿತರಾದರೂ ಎಂದೂ ದುಃಖಿತರಾಗಲಿಲ್ಲ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ, ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ವಿ.ಕೃಷ್ಣಭಟ್ಟರ ಕುರಿತ ಲೇಖನಗಳ ಸಂಗ್ರಹ ‘ಪಥದರ್ಶಿ’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಬರದ ಭೂಮಿಗಳಲ್ಲಿ ಮಳೆ ಇಲ್ಲದೆ ಕಣ್ಣೀರು ಹಾಕಿದ ರೈತರಿಗೆ ನೀರುಣಿಸಲು ಶ್ರಮಿಸಿದರು. ಆದರೆ, ಅವರಿಗೆ ಯಾರೂ ನೀರುಣಿಸಲಿಲ್ಲ. ಕಾರಣ ಅವರದು ಯಾರಿಗೂ ಬಗ್ಗುವ ಸ್ವಭಾವವಲ್ಲ. ಮರಗಳನ್ನು ಸತ್ಪುರುಷರಿಗೆ ಹೋಲಿಸುತ್ತಾರೆ. ಏಕೆಂದರೆ ಅವು ತನ್ನಲ್ಲಿಗೆ ಬಂದವರಿಗೆ ನೆರಳು, ಫಲ ನೀಡುತ್ತವೆ. ಕೃಷ್ಣಭಟ್ಟರು ನಡೆದಾಡುವ ಮರ. ಅವರು ಬೇರು ಗಟ್ಟಿಯಾಗಿಟ್ಟುಕೊಂಡೇ ಜನರ ಬಳಿಗೇ ತೆರಳಿ ಪ್ರತಿಫಲಾಪೇಕ್ಷೆ ಇಲ್ಲದೆ ಫಲ ಕೊಟ್ಟಿದ್ದಾರೆ. ಅವರು ಮಾಡಿದ ಸೇವಾ ಕಾರ್ಯಗಳದ್ದೇ ಒಂದು ಗ್ರಂಥ ತರಬಹುದು’ ಎಂದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ ಮಾತನಾಡಿ, ‘ಕೃಷ್ಣಭಟ್ಟರ ಮಾರ್ಗದರ್ಶನದ ಬೆಳಕಲ್ಲಿ ಬೆಳೆದಿದ್ದೇನೆ. ಅವರದು ಗುರು ಸಮಾನ ವ್ಯಕ್ತಿತ್ವ. ಎಬಿವಿಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಇಡೀ ದೇಶವೇ ಗುರುತಿಸುವ ಕೆಲಸ ಮಾಡಿದ್ದರು. ಸಂತನಂತೆ ದೇಶ ಸುತ್ತಿ ಸಂಘಟಿಸಿದ್ದರು. ಶಿಕ್ಷಣ ಕ್ಷೇತ್ರದ ಸಮಸ್ಯೆಗಳಿಗೆ ಧ್ವನಿಯಾಗಿದ್ದರು. ಶಾಸನ ಸಭೆಯಲ್ಲಿ ಅವರು ಮಾಡಿದ ಭಾಷಣ ಮುಂದಿನ ಶಾಸಕರಿಗೆ ದಾರಿದೀಪ’ ಎಂದು ಬಣ್ಣಿಸಿದರು.



ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಪಿ.ವಿ.ಕೃಷ್ಣಭಟ್ ಅವರ ‘ಪಥದರ್ಶಿ’ ಪುಸ್ತಕವನ್ನು ಆರ್‌ಎಸ್‌ಎಸ್ ಸಹ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಬಿಡುಗಡೆ ಮಾಡಿದರು. ದು.ಗು. ಲಕ್ಷ್ಮಣ, ಸಿ.ಎಸ್‌ ವಿಷ್ಣುಕಾಂತ್, ರಾಜ್‌ಕುಮಾರ್ ಭಾಟಿಯಾ, ಎ.ಡಿ.ಎನ್‌.ವಾಜಪೇಯಿ, ಬಿ.ಎಸ್‌.ಯಡಿಯೂರಪ್ಪ, ವಿ.ಮುರಳೀಧರನ್, ಪಿ.ವಿ. ಕೃಷ್ಣ ಭಟ್, ಕಮಲಾ ದೇವಿ ಕೃಷ್ಣ ಭಟ್, ತೇಜಸ್ವಿನಿ ಅನಂತಕುಮಾರ್, ಪಿ.ಜಿ.ಆರ್‌.ಸಿಂಧ್ಯ ಇದ್ದಾರೆ –ಪ್ರಜಾವಾಣಿ ಚಿತ್ರ

ಪುಸ್ತಕ ಕುರಿತು

ಪುಸ್ತಕ: ಪಥದರ್ಶಿ
ಸಂಪಾದಕ: ದು.ಗು.ಲಕ್ಷ್ಮಣ
ಪ್ರಕಾಶನ: ರಾಷ್ಟ್ರೋತ್ಥಾನ ಮುದ್ರಣಾಲಯ
ಪುಟಗಳು: 338
ಬೆಲೆ: 200

‘ಆರ್‌ಎಸ್‌ಎಸ್, ಎಬಿವಿಪಿ ಪ್ರೇರಣೆ’

ಆರ್‌ಎಸ್‌ಎಸ್, ಎಬಿವಿಪಿ ಪ್ರೇರಣೆಯಿಂದ ಎಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿದೆ. ಅಂದಿನ ನೆನಪುಗಳು ಇಂದಿಗೂ ಸ್ವರ್ಗದಲ್ಲಿ ಇದ್ದ ಅನುಭವ ನೀಡುತ್ತವೆ. ನಂತರ ದಾರಿ ಕವಲಾಯಿತು ಎಂದು ಪಿಜಿಆರ್ ಸಿಂಧ್ಯ ಅವರು ಹೇಳಿದರು.

ಸಂಘಪರಿವಾರ ತೊರೆದು ಬೇರೆ ಹೆಜ್ಜೆ ಇಟ್ಟಾಗ ಕೃಷ್ಣಭಟ್ಟರು ಟೀಕಿಸಲಿಲ್ಲ. ಆದರೆ, ಮುಖದಲ್ಲೇ ಬೇಸರ ಕಾಣುತ್ತಿತ್ತು. 60, 70ರ ದಶಕದಲ್ಲಿ ಎಬಿವಿಪಿಯಲ್ಲಿ ದುಡಿದವರ ಕೈಯಲ್ಲಿ ಈಗ ದೇಶದ ಆಡಳಿತವಿದೆ. ಎಬಿವಿಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಕೃಷ್ಣಭಟ್ ಅವರಿಗೆ ವಿಧಾನ ಪರಿಷತ್ತು ಸದಸ್ಯತ್ವ ದೊರಕಿದರೂ, ಅದು ತೃಪ್ತಿ ತಂದಿಲ್ಲ ಎಂದು ಅವರು ಹೇಳಿದರು.

ಮೂವರ ಯೋಧರ ಹತ್ಯೆ

ಶ್ರೀನಗರ(ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ಶುಕ್ರವಾರ ನಸುಕಿನಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಸೇನಾ ಸಿಬ್ಬಂದಿ ಹುತಾತ್ಮರಾದ ಬೆನ್ನಲ್ಲೇ, ಸ್ಥಳದಲ್ಲಿ ಅವಿತಿರುವ ಉಗ್ರರನ್ನು ಹತ್ತಿಕ್ಕಲು ಭದ್ರತಾ ಪಡೆಗಳು ಭಾರಿ ಶೋಧ ಕಾರ್ಯಾಚರಣೆ ನಡೆಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೂವರು ಉಗ್ರರು ಈ ಪ್ರದೇಶದಲ್ಲಿ ಅವಿತಿರುವ ಶಂಕೆ ಇದ್ದು, ಶುಕ್ರವಾರ ರಾತ್ರಿಯಿಡೀ ತೀವ್ರ ಕಟ್ಟೆಚ್ಚರ ವಹಿಸಲಾಗಿತ್ತು. ಸ್ಥಳಕ್ಕೆ ಹೆಚ್ಚುವರಿ ಪಡೆಗಳು ದೌಡಾಯಿಸಿದ್ದು, ಶನಿವಾರ ಬೆಳಿಗ್ಗೆಯಿಂದಲೇ ತೀವ್ರ ಶೋಧ ಕಾರ್ಯಾಚರಣೆ ಆರಂಭಿಸಲಾಗಿದೆ. ಈ ಉಗ್ರರ ಗುಂಪು ಪಿರ್ ಪಂಜಾಲ್ ಶ್ರೇಣಿಯ ಮೂಲಕ ಕುಲ್ಗಾಮ್ ಜಿಲ್ಲೆ ತಲುಪಿರಬಹುದೆಂದು ನಂಬಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ಕುಂಡ್ ಪ್ರದೇಶದಲ್ಲಿ ಸ್ಫೋಟದ ಶಬ್ದ ಕೇಳಿಸಿದ ನಂತರ ಮತ್ತೊಂದು ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಸ್ಫೋಟದ ಶಬ್ದ ಕೇಳಿಸಿದಾಗ ಸೇನೆಯ ಕೆಲವು ವಾಹನಗಳು ಆ ಪ್ರದೇಶದ ಮೂಲಕ ಹಾದು ಹೋಗುತ್ತಿದ್ದವು. ಸ್ಥಳಕ್ಕೆ ಪೊಲೀಸರು ದೌಡಾಯಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಕುಲ್ಗಾಮ್ ಹಾಲನ್ ಅರಣ್ಯ ಪ್ರದೇಶದ ಎತ್ತರದ ಸ್ಥಳದಲ್ಲಿ ಶುಕ್ರವಾರ ಸೈನಿಕರ ಬಿಡಾರಗಳ ಮೇಲೆ ಉಗ್ರರು ಗುಂಡು ಹಾರಿಸಿದ ನಂತರ, ಉಗ್ರರು ಮತ್ತು ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದಿತ್ತು. ದಾಳಿಯ ನಂತರ ಉಗ್ರರು ಶಸ್ತ್ರಾಸ್ತ್ರಗಳೊಂದಿಗೆ ಪರಾರಿಯಾಗಿದ್ದರು.

ಮುಸ್ಲಿಮರಿಗೆ ಅಧ್ಯಕ್ಷ ಸ್ಥಾನ: 19 ಸದಸ್ಯರ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಸಿಂಧನೂರು: ತಾಲ್ಲೂಕಿನ ಆರ್‌.ಎಚ್‌. ನಂ–1 ಕ್ಯಾಂಪ್ ಗ್ರಾ.ಪಂ 2ನೇ ಅವಧಿಗೆ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದು, ಕಾಂಗ್ರೆಸ್ ಬೆಂಬಲಿತ, ಮುಸ್ಲಿಂ ಸಮುದಾಯದವರಾದ ಎ. ರಹೆಮದ್ ಪಾಷಾ ಅಧ್ಯಕ್ಷರಾಗಿರುವುದನ್ನು ವಿರೋಧಿಸಿ 19 ಸದಸ್ಯರು ರಾಜೀನಾಮೆ ನೀಡಿದ್ದಾರೆ.

ಗ್ರಾ.ಪಂನಲ್ಲಿ ಒಟ್ಟು 38 ಸದಸ್ಯರಿದ್ದಾರೆ. ಆ ಪೈಕಿ 19 ಸದಸ್ಯರು ಅಧ್ಯಕ್ಷರ ಆಯ್ಕೆ ವಿರೋಧಿಸಿ ರಾಜೀನಾಮೆ ನೀಡಲು ಗ್ರಾ.ಪಂ ಕಚೇರಿಗೆ ಶುಕ್ರವಾರ ಬಂದಿದ್ದರು. ಅಧ್ಯಕ್ಷರು ಇಲ್ಲದಿರುವುದರಿಂದ ಪಂಚಾಯಿತಿಯ ಆವಕ–ಜಾವಕ ಶಾಖೆಯಲ್ಲಿ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದರು. ಅಧ್ಯಕ್ಷ–ಉಪಾಧ್ಯಕ್ಷರ ಚುನಾವಣೆ ಪ್ರಕ್ರಿಯೆಯಿಂದ ಈ 19 ಸದಸ್ಯರೂ ದೂರ ಉಳಿದಿದ್ದರು.

ಉತ್ತರ ಕರ್ನಾಟಕ ಲೇಖಕಿಯರ ಸಂಘ

6 ಲೇಖಕಿಯರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಧಾರವಾಡ: ಉತ್ತರ ಕರ್ನಾಟಕ ಲೇಖಕಿಯರ ಸಂಘವು 2021 ಹಾಗೂ 2022ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳಿಗೆ ಆರು ಲೇಖಕಿಯರನ್ನು ಆಯ್ಕೆ ಮಾಡಿದೆ.

ಸಾಹಿತ್ಯ ಸರಸ್ವತಿ ಪ್ರಶಸ್ತಿಗೆ ಜಯಾ ರಾಜಶೇಖರ್ (2021), ಶಾಂತಲಾ ಯಡ್ರಾವಿ (2022) ಹಾಗೂ ಶಾಂತಾದೇವಿ ಕಣವಿ ಕಥಾ ಪ್ರಶಸ್ತಿಗೆ ಬಾನು ಮುಷ್ತಾಕ್ (2021), ಮಧುರಾ ಕರ್ಣಂ (2022) ಅವರನ್ನು ಆಯ್ಕೆ ಮಾಡಲಾಗಿದೆ. ಲತಾ ರಾಜಶೇಖರ್ ಕಾವ್ಯ ಪ್ರಶಸ್ತಿಗೆ ಸವಿತಾ ನಾಗಭೂಷಣ್ (2021), ವಿನಯಾ ಒಕ್ಕುಂದ (2022) ಅವರನ್ನು ಆಯ್ಕೆ ಮಾಡಲಾಗಿದೆ.

ಸಾಹಿತ್ಯ ಸರಸ್ವತಿ ಹಾಗೂ ಕಥಾ ಪ್ರಶಸ್ತಿಗಳು ತಲಾ ₹5 ಸಾವಿರ ನಗದು ಹಾಗೂ ಕಾವ್ಯ ಪ್ರಶಸ್ತಿ ತಲಾ ₹10 ಸಾವಿರ, ಪ್ರಶಸ್ತಿಪತ್ರ ಒಳಗೊಂಡಿದೆ. ಆಗಸ್ಟ್ ಕೊನೆ ವಾರದಲ್ಲಿ ಜರುಗುವ ವಾರ್ಷಿಕೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷೆ ರಾಜೇಶ್ವರಿ ಮಹೇಶ್ವರಯ್ಯ ತಿಳಿಸಿದ್ದಾರೆ.


ಜಯಾ ರಾಜಶೇಖರ್


ಬಾನು ಮುಷ್ತಾಕ್


ಸವಿತಾ ನಾಗಭೂಷಣ್


ಶಾಂತಲಾ ಯಡ್ರಾವಿ


ಮಧುರಾ ಕರ್ಣಂ


ವಿನಯಾ ಒಕ್ಕುಂದ

ಸಂಕ್ಷಿಪ್ತ ಸುದ್ದಿ

ಗೌರಿಕುಂಡ ಬಳಿ ಭೂಕುಸಿತ: 20 ಮಂದಿಗೆ ಶೋಧ

ರುದ್ರಪ್ರಯಾಗ (ಉತ್ತರಾಖಂಡ) (ಪಿಟಿಐ): ಗೌರಿಕುಂಡದ ಸಮೀಪ ಎರಡು ದಿನಗಳ ಹಿಂದೆ ಪ್ರವಾಹದಿಂದ ಉಂಟಾದ ಭೂಕುಸಿತ ದಲ್ಲಿ ನಾಪತ್ತೆಯಾಗಿದ್ದ 20 ಜನರ ಪತ್ತೆಗೆ ಶನಿವಾರವೂ ಶೋಧ ಕಾರ್ಯಾಚರಣೆ ಮುಂದುವರಿಯಿತು.

ಶುಕ್ರವಾರ ಮೂವರು ನೇಪಾಳ ಪ್ರಜೆಗಳ ಶವಗಳನ್ನು ಹೊರತೆಗೆಯಲಾಗಿದ್ದು, ಉಳಿದ 20 ಜನರಿಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ನಂದನ್ ಸಿಂಗ್ ರಾಜ್ವರ್ ಮಾಹಿತಿ ನೀಡಿದ್ದಾರೆ.

'ಸ್ಥಳೀಯ ಆಡಳಿತ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಜಂಟಿ ಶೋಧ ಕಾರ್ಯ ಕೈಗೊಂಡಿವೆ. ಜತೆಗೆ ಡ್ರೋನ್‌ಗಳನ್ನೂ ಬಳಸಲಾಗುತ್ತಿದೆ' ಎಂದು ಅವರು ತಿಳಿಸಿದ್ದಾರೆ.

ಗೌರಿಕುಂಡದ ಸಮೀಪ, ಕೇದಾರನಾಥ ಮಾರ್ಗದಲ್ಲಿ ಗುರುವಾರ ರಾತ್ರಿ ಹಾಗೂ ಶುಕ್ರವಾರ ಭಾರಿ ಮಳೆಯಿಂದ ಪ್ರವಾಹ ಉಂಟಾಗಿ ಭೂಕುಸಿತವಾಗಿತ್ತು. ಮೂರು ಅಂಗಡಿಗಳು ಕೊಚ್ಚಿ ಹೋಗಿದ್ದವು.

ಬಿಜೆಪಿ ಹುದ್ದೆ ತೊರೆದ ವಾಘೇಲಾ

ಅಹಮದಾಬಾದ್: ಗುಜರಾತ್‌ನ ಬಿಜೆಪಿ ಘಟಕದಲ್ಲಿ ಗುಂಪುಗಾರಿಕೆ ಕಂಡುಬಂದಿದ್ದು ಉದಯೋನ್ಮುಖ ನಾಯಕ, ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಸಿಂಹ ವಾಘೇಲಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ವಾಘೇಲಾ ಅವರ ಹಠಾತ್ ನಡೆಯ ಕುರಿತು ಬಿಜೆಪಿ ಮೌನ ವಹಿಸಿದೆ. ಈ ಮಧ್ಯೆ 'ಪಕ್ಷವೇ ವಾಘೇಲಾ ಅವರಿಗೆ ರಾಜೀನಾಮೆ ನೀಡುವಂತೆ ಸೂಚಿಸಿತ್ತು' ಎಂದು ಮೂಲಗಳು ತಿಳಿಸಿವೆ.

'ರಾಜೀನಾಮೆ ವಿಷಯವಾಗಿ ಸುದ್ದಿಗೋಷ್ಠಿ ಕರೆಯಲಾಗುವುದು' ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್. ಪಾಟೀಲ್ ಹೇಳಿದ್ದಾರೆ. ಆದರೆ, ಈ ಕುರಿತ ಪ್ರತಿಕ್ರಿಯೆಗೆ ವಾಘೇಲಾ ಅವರು ಲಭ್ಯರಾಗಲಿಲ್ಲ.

'ರಾಜೀನಾಮೆ ನೀಡುವಂತೆ ವಾಘೇಲಾ ಅವರಿಗೆ ಕಳೆದ ತಿಂಗಳೇ ಪಕ್ಷ ಸೂಚಿಸಿತ್ತು. ಗಾಂಧಿನಗರದಲ್ಲಿರುವ ಪಕ್ಷದ ಪ್ರಧಾನ ಕಚೇರಿಗೂ ಭೇಟಿ ನೀಡದಂತೆ ತಿಳಿಸಲಾಗಿತ್ತು. ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅವರು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ವಾಘೇಲಾ ಅವರು ಜುಲೈ 31ರಂದೇ ರಾಜೀನಾಮೆ ಸಲ್ಲಿಸಿದ್ದಾರೆ' ಎಂದು ಬಿಜೆಪಿಯ ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಯುವ ಮೋರ್ಚಾ ಮುಖ್ಯಸ್ಥರಾಗಿದ್ದ ವಾಘೇಲಾ ಅವರನ್ನು 2016ರಲ್ಲಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ನೇಮಕ ಮಾಡಲಾಗಿತ್ತು.

ಸಾಕ್ಷ್ಯ ತಿರುಚಿದ ಪ್ರಕರಣ: ಮಾಜಿ ಡಿಜಿಪಿಗೆ ಜಾಮೀನು

ಅಹಮದಾಬಾದ್ (ಪಿಟಿಐ): 2002ರಲ್ಲಿ ನಡೆದ ಗೋಧ್ರೋತ್ತರ ಗಲಭೆಗಳಿಗೆ ಸಂಬಂಧಿಸಿ ಸಾಕ್ಷ್ಯಗಳನ್ನು ತಿರುಚಿದ ಪ್ರಕರಣದಲ್ಲಿ ಗುಜರಾತ್‌ನ ಮಾಜಿ ಡಿಜಿಪಿ ಆರ್.ಬಿ. ಶ್ರೀಕುಮಾರ್ ಅವರಿಗೆ ಗುಜರಾತ್ ಹೈಕೋರ್ಟ್ ಶುಕ್ರವಾರ ಜಾಮೀನು ನೀಡಿದೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ವಾಡ್ ಅವರಿಗೆ ಕೆಲವು ವಾರಗಳ ಹಿಂದೆ ಸುಪ್ರೀಂ ಕೋರ್ಟ್ ಜಾಮೀನು ನೀಡಿತ್ತು.

ಹೈಕೋರ್ಟ್ ನ್ಯಾಯಮೂರ್ತಿ ಇಲೇಶ್ ವೋರಾ ಅವರು ₹ 25 ಸಾವಿರದ ವೈಯಕ್ತಿಕ ಬಾಂಡ್ ಆಧಾರದ ಮೇಲೆ ಜಾಮೀನು ನೀಡಿದ್ದು, ಪ್ರಸ್ತುತ ಮಧ್ಯಂತರ ಜಾಮೀನಿನ ಮೇಲೆ ಹೊರಗಡೆ ಇರುವ ಶ್ರೀಕುಮಾರ್ ಅವರಿಗೆ ನಿರಾಳತೆ ದೊರೆತಂತಾಗಿದೆ. ತಮ್ಮ ಪಾಸ್‌ಪೋರ್ಟ್ ಅನ್ನು ನ್ಯಾಯಾಲಯಕ್ಕೆ ಒಪ್ಪಿಸಲು ಶ್ರೀಕುಮಾರ್ ಅವರಿಗೆ ವೋರಾ ಸೂಚಿಸಿದ್ದಾರೆ.

'ತನಿಖಾ ಸಂಸ್ಥೆಯ ವಶದಲ್ಲಿರುವ ಸಾಕ್ಷ್ಯಗಳ ಆಧಾರದ ಮೇಲೆ ಈ ಪ್ರಕರಣ ನಿಂತಿದೆ ಎಂಬುದನ್ನು ನ್ಯಾಯಾಲಯ ಮನಗಂಡಿದೆ. ಅರ್ಜಿದಾರರಿಗೆ (ಶ್ರೀಕುಮಾರ್) 75 ವರ್ಷ ವಯಸ್ಸಾಗಿದ್ದು, ಅವರು ವಯೋಸಹಜ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಅಲ್ಲದೇ ತಮಗೆ ನೀಡಲಾದ ಮಧ್ಯಂತರ ಜಾಮೀನನ್ನು ಅರ್ಜಿದಾರರು ಯಾವುದೇ ರೀತಿಯಿಂದಲೂ ದುರುಪಯೋಗಪಡಿಸಿಕೊಂಡಿಲ್ಲ' ಎಂದು ವೋರಾ ಅವರು ತಮ್ಮ ತೀರ್ಪಿನಲ್ಲಿ ತಿಳಿಸಿದ್ದಾರೆ.

'ಪ್ರಕರಣದ ಸಹ ಆರೋಪಿಗಳ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಈಗಾಗಲೇ ಪರಿಗಣಿಸಿದೆ. ಈಗ ಇಲ್ಲಿರುವ ಅರ್ಜಿದಾರರ ನಡುವಳಿಕೆ ಪರಿಗಣಿಸಿ, ಅವರಿಗೆ ಜಾಮೀನು ನೀಡಲಾಗಿದೆ' ಎಂದು ಅವರು ಹೇಳಿದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಹುಲ್ ಗಾಂಧಿ ಕಂಡರೆ ಪ್ರಧಾನಿ ಮೋದಿಗೆ ಭಯ: ಕಾಂಗ್ರೆಸ್ ವ್ಯಂಗ್ಯ

ಸದಸ್ಯತ್ವ ಮರುಸ್ಥಾಪನೆಗೆ ವಿಳಂಬ

ಪ್ರಜಾವಾಣಿ ವಾರ್ತೆ


ರಾಹುಲ್ ಗಾಂಧಿ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಂಸತ್ ಸದಸ್ಯತ್ವದ ಮರು ಸ್ಥಾಪನೆಗೆ ಸಂಬಂಧಿಸಿದಂತೆ ಲೋಕಸಭೆಯ ಸ್ಪೀಕರ್ ಕಚೇರಿಯಿಂದ ಅಧಿಕೃತ ಆದೇಶ ಹೊರಬೀಳಲು ವಿಳಂಬವಾಗಿರುವುದಕ್ಕೆ, 'ಕೈ' ಪಾಳಯದ ವರಿಷ್ಠರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೂರತ್‌ನ ವಿಚಾರಣಾ ಕೋರ್ಟ್ ವಿಧಿಸಿದ್ದ ಶಿಕ್ಷೆಗೆ ಶುಕ್ರವಾರ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿತ್ತು. ಅಂದು ರಾತ್ರಿಯೇ ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರು, ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ ರಾಹುಲ್ ಅವರ ಸದಸ್ಯತ್ವ ಮರು ಸ್ಥಾಪಿಸುವಂತೆ ಮನವಿ ಸಲ್ಲಿಸಿದ್ದರು. ಈ ವೇಳೆ ಸ್ಪೀಕರ್ ಅವರು, ಶನಿವಾರ ಭೇಟಿಯಾಗುವಂತೆ ಸೂಚಿಸಿದ್ದರು.

> **ಸೋಮವಾರ ಲೋಕಸಭೆಯ ಕಲಾಪ ಶುರುವಾಗುವುದಕ್ಕೂ ಮೊದಲು ರಾಹುಲ್ ಅವರ ಸದಸ್ಯತ್ವವನ್ನು ಮರು ಸ್ಥಾಪಿಸುವ ನಿರೀಕ್ಷೆಯಿದೆ**
> **ಅಧೀರ್ ರಂಜನ್ ಚೌಧರಿ**
> ಕಾಂಗ್ರೆಸ್ ನಾಯಕ

ಬೆಳಿಗ್ಗೆ ಚೌಧರಿ ಅವರು, ಸ್ಪೀಕರ್ ಅವರನ್ನು ಭೇಟಿ ಮಾಡಿದ್ದರು. ಆ ವೇಳೆ ಲೋಕಸಭೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಸುಪ್ರೀಂ ಕೋರ್ಟ್‌ನ ಆದೇಶದ ಪ್ರತಿ ಸಲ್ಲಿಸುವಂತೆ ಸೂಚಿಸಿದರು. ಬಳಿಕ ಕಾರ್ಯದರ್ಶಿ ಅವರನ್ನು ಸಂಪರ್ಕಿಸಿದಾಗ, ಕಚೇರಿಗೆ ಇಂದು ರಜೆ ಇದ್ದು, ಪತ್ರವನ್ನು ಅಂಚೆ ಮೂಲಕ ಕಳುಹಿಸುವಂತೆ ತಿಳಿಸಿದ್ದಾರೆ.

ಕೊನೆಗೆ ಕಾಂಗ್ರೆಸ್ ನಾಯಕರು, ಸುಪ್ರೀಂ ಕೋರ್ಟ್‌ನ ಆದೇಶ ಪ್ರತಿ ಸೇರಿದಂತೆ ಅಗತ್ಯ ದಾಖಲೆಗಳನ್ನು ಸ್ಪೀಕರ್ ಕಚೇರಿಗೆ ಸಲ್ಲಿಸಿದ್ದಾರೆ. ಆದರೆ, ಅಧಿಕಾರಿಗಳು ಸ್ವೀಕೃತಿ ನೀಡಿಲ್ಲ ಎಂದು ದೂರಿದ್ದಾರೆ.

ಈ ನಡುವೆಯೇ ರಾಹುಲ್ ವಿಷಯಕ್ಕೆ ಸಂಬಂಧಿಸಿದಂತೆ ಸ್ಪೀಕರ್ ಅವರೇ ನಿರ್ಧಾರ ಕೈಗೊಳ್ಳುತ್ತಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

'ಸ್ಪೀಕರ್ ಅವರು ಅನಗತ್ಯವಾಗಿ ವಿಳಂಬ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ವಿರುದ್ಧ ಮಂಡಿಸಿರುವ ಅವಿಶ್ವಾಸ ನಿರ್ಣಯ ಸಭೆಯಲ್ಲಿ ರಾಹುಲ್ ಪಾಲ್ಗೊಳ್ಳುತ್ತಾರೆ ಎಂಬ ಭಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಡುತ್ತಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ವ್ಯಂಗ್ಯವಾಡಿದ್ದಾರೆ.

'ವಿಚಾರಣಾ ನ್ಯಾಯಾಲಯವು ಶಿಕ್ಷೆ ಪ್ರಕಟಿಸಿದ 26 ಗಂಟೆಗಳ ಒಳಗೆ ರಾಹುಲ್ ಅವರನ್ನು ಸಂಸತ್ ಸದಸ್ಯತ್ವದಿಂದ ಅನರ್ಹಗೊಳಿಸಿದ್ದರು. ಇದಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿ ಅಷ್ಟೇ ಸಮಯ ಉರುಳಿ ಹೋಗಿದೆ. ಹಾಗಿದ್ದರೂ, ಬಿರ್ಲಾ ಅವರು ವಿಳಂಬ ಧೋರಣೆ ತಳೆದಿರುವುದು ಏಕೆ? ಎಂದು ಪ್ರಶ್ನಿಸಿದ್ದಾರೆ.

ರಾಹುಲ್ ಅವರನ್ನು ಅನರ್ಹಗೊಳಿಸುವಾಗ ತಳೆದ ವೇಗವನ್ನೇ ಸದಸ್ಯತ್ವ ಮರುಸ್ಥಾಪನೆಯಲ್ಲೂ ಅನುಸರಿಸಬೇಕು. ಆದಷ್ಟು ಬೇಗ ಅವರು ಲೋಕಸಭೆಗೆ ಮರಳಬೇಕಿದೆ. ಕೋರ್ಟ್ ತೀರ್ಪು ಹೊರಬಿದ್ದ ತಕ್ಷಣವೇ ಈ ಕುರಿತು ಸ್ಪೀಕರ್‌ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಆದರೂ, ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಟೀಕಿಸಿದ್ದಾರೆ.

ಮಣಿಪುರ: ಮತ್ತೆ ಮೂವರ ಹತ್ಯೆ

ಒಂದನೇ ಪುಟದಿಂದ...

ಗಾಯಗೊಂಡವರನ್ನು ಚಿಕಿತ್ಸೆಗಾಗಿ ಇಂಫಾಲ್‌ನ ಆಸ್ಪತ್ರೆಯೊಂದಕ್ಕೆ ಕರೆದೊಯ್ಯಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ವೇಳೆ, ಇಂಫಾಲ್ ಅವಳಿ ಜಿಲ್ಲೆಗಳಲ್ಲಿ ಕರ್ಫ್ಯೂ ಅವಧಿಯನ್ನು ಜಿಲ್ಲಾಡಳಿತವು ಕಡಿತಗೊಳಿಸಿದೆ. ಬೆಳಿಗ್ಗೆ 5 ಗಂಟೆಯಿಂದ ಸಂಜೆ 6 ಗಂಟೆವರೆಗೆ ಇದ್ದ ಕರ್ಫ್ಯೂ ಅವಧಿಯನ್ನು, ಬೆಳಿಗ್ಗೆ 5ರಿಂದ ಬೆಳಿಗ್ಗೆ 10.30ಕ್ಕೆ ಇಳಿಸಲಾಗಿದೆ.

ಕೌಟ್ರಕ್ ಪರ್ವತ ಶ್ರೇಣಿಯಲ್ಲಿ ಜಂಟಿ ಭದ್ರತಾ ಪಡೆ ಶುಕ್ರವಾರ ದಾಳಿ ನಡೆಸಿ ಸುಮಾರು ಏಳು ಅಕ್ರಮ ಅಡಗುತಾಣಗಳನ್ನು ಧ್ವಂಸಗೊಳಿಸಿದೆ.

ಮಣಿಪುರದ 27 ವಿಧಾನ ಸಭೆ ಕ್ಷೇತ್ರಗಳ ಸಂಘಟನಾ ಸಮಿತಿಯು ಕರೆ ನೀಡಿದ್ದ 24 ಗಂಟೆಗಳ ಮುಷ್ಕರದ ಕಾರಣದಿಂದ ಇಂಫಾಲ್ ಕಣಿವೆಯಲ್ಲಿ ಸಹಜ ಜೀವನಕ್ಕೆ ತೊಂದರೆಯಾಗಿತ್ತು.

ಐಟಿಎಲ್‌ಎಫ್ ಕಳವಳ

ಭದ್ರತಾ ಪಡೆಗಳ ಬಳಿಯಿರುವ ಶಸ್ತ್ರಾಸ್ತ್ರಗಳನ್ನು ಮೈತೇಯಿ ಸಮುದಾಯದ ಬಂಡುಕೋರರು ಮೇಲಿಂದ ಮೇಲೆ ಲೂಟಿ ಮಾಡುತ್ತಿರುವ ಕುರಿತು ಕುಕಿ ಬುಡಕಟ್ಟು ಸಮುದಾಯದ ಸಂಘಟನೆ 'ಸ್ಥಳೀಯ ಬುಡಕಟ್ಟು ನಾಯಕರ ವೇದಿಕೆ' (ಐಟಿಎಲ್‌ಎಫ್) ಕಳವಳ ವ್ಯಕ್ತಪಡಿಸಿದೆ. ಮೈತೇಯಿ ಬಂಡುಕೋರರು ಕದ್ದಿರುವ ಶಸ್ತ್ರಾಸ್ತ್ರಗಳನ್ನು ವಶಕ್ಕೆ ತೆಗೆದುಕೊಳ್ಳುವ ದಿಸೆಯಲ್ಲಿ ಕ್ರಮ ಕೈಗೊಳ್ಳದಿದ್ದರೆ ಮಣಿಪುರವು ಮತ್ತಷ್ಟು ರಕ್ತಪಾತ ನೋಡುತ್ತದೆ ಎಂದು ಐಟಿಎಲ್‌ಎಫ್ ಎಚ್ಚರಿಸಿದೆ.

4,000ಕ್ಕೂ ಹೆಚ್ಚು ಶಸ್ತ್ರಾಸ್ತ್ರಗಳು ಮತ್ತು ಲಕ್ಷಕ್ಕೂ ಹೆಚ್ಚು ಮದ್ದುಗುಂಡುಗಳನ್ನು ಮೈತೇಯಿ ಬಂಡುಕೋರರು ರಾಜ್ಯದ ಹಲವು ಪೊಲೀಸ್ ಠಾಣೆಗಳು ಮತ್ತು ಭದ್ರತಾ ಪಡೆಗಳ ಶಿಬಿರಗಳಿಂದ ಮೇ ತಿಂಗಳಲ್ಲಿ ಲೂಟಿ ಮಾಡಿದ್ದಾರೆ. ವಿಷ್ಣುಪುರ ಜಿಲ್ಲೆಯಲ್ಲಿ ಗುರುವಾರ ಗಲಭೆ ನಡೆದ ವೇಳೆ ಸುಮಾರು 300 ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಶಸ್ತ್ರಗಳನ್ನು ಕುಕಿ– ಜೊ ಸಮುದಾಯದ ಮೇಲೆ ದಾಳಿ ನಡೆಸಲು ಮೈತೇಯಿ ಬಂಡುಕೋರರು ಬಳಸುತ್ತಾರೆ ಎನ್ನುವುದು ಹಗಲಿನಷ್ಟೇ ಸ್ಪಷ್ಟವಾಗಿದೆ ಎಂದು ಸಂಘಟನೆ ಹೇಳಿದೆ. ಮೈತೇಯಿ ಬಳಿ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಇರುವುದು ದೇಶದ ಭದ್ರತೆ ದೃಷ್ಟಿಯಿಂದಲೂ ಒಳಿತಲ್ಲ ಎಂದು ಎಚ್ಚರಿಕೆ ನೀಡಿದೆ.

ಭದ್ರತಾ ಪಡೆಯ ವೈಫಲ್ಯ: ಬಿಜೆಪಿ ಶಾಸಕ

ಹಿಂಸಾಚಾರದ ಕುರಿತು ಆಕ್ರೋಶ ವ್ಯಕ್ತಪಡಿಸಿರುವ ಮಣಿಪುರದ ಬಿಜೆಪಿ ಶಾಸಕ ಕುಮಾರ್ ಇಮೊ ಸಿಂಗ್, ಕೇಂದ್ರೀಯ ಭದ್ರತಾ ಪಡೆಗಳ ಉಪಸ್ಥಿತಿಯಲ್ಲೇ ಬಂಡುಕೋರರು ಮೂವರನ್ನು ಹತ್ಯೆ ಮಾಡಿದ್ದು ಹೇಗೆ ಎಂದು ಪ್ರಶ್ನಿಸಿದ್ದಾರೆ. ಜೊತೆಗೆ, ಭದ್ರತಾ ಪಡೆಗಳು ಇದಕ್ಕೆ ಉತ್ತರಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಕುರಿತು ವಿಡಿಯೊ ಸಂದೇಶ ಹರಿಬಿಟ್ಟಿರುವ ಅವರು, 'ಹತ್ಯೆ ನಡೆದ ಪ್ರದೇಶದಲ್ಲಿ ನಿಯೋಜನೆಗೊಂಡಿದ್ದ ಭದ್ರತಾ ಪಡೆಯ ವಿರುದ್ಧ ಕ್ರಮ ಕೈಗೊಳ್ಳಬೇಕು. ಈ ರೀತಿಯ ವಿಫಲತೆಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ರಾಜ್ಯದಲ್ಲಿ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ. ನಿಶ್ಶಸ್ತ್ರೀಕರಣವು ಈ ಕ್ಷಣದ ಅಗತ್ಯ' ಎಂದು ಪ್ರತಿಪಾದಿಸಿದ್ದಾರೆ. ಆದರೆ, ಹಿಂಸಾಚಾರ ತಡೆಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂಬ ಆರೋಪದ ಕುರಿತು ಅವರು ಮೌನ ಕಾಯ್ದುಕೊಂಡಿದ್ದಾರೆ.

ನಾಮನಿರ್ದೇಶನ: ವಿವರ ಕೇಳಿದ ರಾಜ್ಯಪಾಲರು

ಒಂದನೇ ಪುಟದಿಂದ...

ಮನ್ಸೂರ್ ಬದಲು ಉಮಾಶ್ರೀ?: ಈ ಮಧ್ಯೆ, ಮನ್ಸೂರ್ ಅಲಿ ಖಾನ್ ಬದಲು ಉಮಾಶ್ರೀ ಅವರನ್ನು ನಾಮನಿರ್ದೇಶನ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಲವು ಹೊಂದಿದ್ದಾರೆ ಎಂದು ಗೊತ್ತಾಗಿದೆ.

ತೇರದಾಳ ಕ್ಷೇತ್ರದಿಂದ 2013ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿದ್ದ ಉಮಾಶ್ರೀ, 2018ರಲ್ಲಿ ಸೋಲು ಕಂಡಿದ್ದರು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿರಲಿಲ್ಲ. ವಿಧಾನ ಪರಿಷತ್ ಸದಸ್ಯರಾಗಿ ನೇಮಕ ಮಾಡುವ ಬಗ್ಗೆ ಅವರಿಗೆ ಭರವಸೆ ನೀಡಲಾಗಿತ್ತು. ಉಮಾಶ್ರೀ ಬದಲು ಸಿದ್ದು ರಾಮಪ್ಪ ಕೊಣ್ಣೂರು ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿತ್ತು. ಆದರೆ, ಬಿಜೆಪಿಯ ಸಿದ್ದು ಸವದಿ ವಿರುದ್ಧ ಕೊಣ್ಣೂರು ಸೋಲು ಕಂಡಿದ್ದರು.

'ಪರಿಷತ್‌ಗೆ ನಾಮ ನಿರ್ದೇಶನ ಮಾಡುವಂತೆ ಪಕ್ಷದ ವರಿಷ್ಠರ ಮೇಲೆ ಸಿದ್ದರಾಮಯ್ಯ ಒತ್ತಡ ಹೇರಿದ್ದರು. ಹೀಗಾಗಿ, ಮನ್ಸೂರ್ ಅಲಿ ಖಾನ್ ಬದಲು ಉಮಾಶ್ರೀ ಹೆಸರು ಶಿಫಾರಸು ಮಾಡುವ ಸಾಧ್ಯತೆಯಿದೆ' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕೆಲವು ತಿಂಗಳ ಹಿಂದೆಯೇ ಹಿಂದುಳಿದ ವರ್ಗಗಳ ಕೋಟಾದಿಂದ ಎಂ.ಆರ್. ಸೀತಾರಾಮ್, ಅಲ್ಪಸಂಖ್ಯಾತ ಕೋಟಾದಿಂದ ಮನ್ಸೂರ್ ಅಲಿ ಖಾನ್, ಪರಿಶಿಷ್ಟ ಜಾತಿ ಎಡಗೈ ಬಣದಿಂದ ಸುಧಾಮ್ ದಾಸ್ ಹೆಸರನ್ನು ಪರಿಷತ್‌ಗೆ ನಾಮ ನಿರ್ದೇಶನ ಮಾಡಲು ಕಾಂಗ್ರೆಸ್ ನಾಯಕರು ಚರ್ಚೆ ನಡೆಸಿದ್ದರು. ಆದರೆ, ಸುಧಾಮ್ ದಾಸ್ ಅವರ ನಾಮ ನಿರ್ದೇಶನಕ್ಕೆ ಕಾಂಗ್ರೆಸ್‌ನ ಪರಿಶಿಷ್ಟ ಜಾತಿ ಎಡಗೈ ಬಣದ ಪ್ರಮುಖ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು.

ಸೆಂಥಿಲ್ ಬಾಲಾಜಿ ಆಪ್ತನ ಮನೆಯಲ್ಲಿ ₹22 ಲಕ್ಷ ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳುನಾಡಿನ ಸಚಿವ ವಿ.ಸೆಂಥಿಲ್ ಬಾಲಾಜಿ ಅವರಿಗೆ ಸೇರಿದ ಒಂಬತ್ತು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಶೋಧ ಕಾರ್ಯಾಚರಣೆ ನಡೆಸಿದೆ. ಈ ವೇಳೆ ಚಾಲಕರೊಬ್ಬರ ಮನೆಯಲ್ಲಿ ದಾಖಲೆ ರಹಿತ ₹16 ಲಕ್ಷ ಮೌಲ್ಯದ ಬೆಲೆಬಾಳುವ ವಸ್ತುಗಳು ಮತ್ತು ₹22 ಲಕ್ಷ ನಗದು ಪತ್ತೆಯಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಬಾಲಾಜಿ ಅವರ ಆಪ್ತ ಎಸ್.ಟಿ. ಸ್ವಾಮಿನಾಥನ್ ಅವರ ಬಳಿ ಮೊಕದ್ದಮೆಗೆ ಸಂಬಂಧಿಸಿದ ದಾಖಲೆಗಳಿವೆ. ಅವನ್ನು ಮುಚ್ಚಿಡಲು ಅಥವಾ ವರ್ಗಾಯಿಸಲು ಪ್ರಯತ್ನಿಸಲಾಗುತ್ತಿದೆ ಎಂಬ ಗುಪ್ತಚರ ದಳದ ಮಾಹಿತಿ ಆಧರಿಸಿ ಇ.ಡಿ ದಾಳಿ ನಡೆಸಿದೆ. 'ದಾಳಿ ವೇಳೆ ಸ್ವಾಮಿನಾಥನ್ ಬಳಿಯಿದ್ದ ಸ್ವತ್ತಿಗೆ ಬೇನಾಮಿ ಎಂಬಂತೆ ಅವರ ಸಂಬಂಧಿ ಶಾಂತಿ ವರ್ತಿಸಿದರು. ಜೊತೆಗೆ, ಬೆಲೆಬಾಳುವ ವಸ್ತುಗಳು ಮತ್ತು ದಾಖಲೆಗಳಿದ್ದ ಚೀಲಗಳನ್ನು ಬೇರೆಡೆಗೆ ಸಾಗಿಸಲು ಪ್ರಯತ್ನಿಸಿದರು. ಶಿವ ಎಂಬ ಚಾಲಕನಿಗೆ ಅವರು ಚೀಲಗಳನ್ನು ಹಸ್ತಾಂತರಿಸಿದ್ದರು ಎಂದು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಯನ್ನು ಪರಿಶೀಲಿಸಿದ ಬಳಿಕ ತಿಳಿಯಿತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶಿವ ಅವರ ಮನೆಯಲ್ಲಿ ಶೋಧ ನಡೆಸಿದ ವೇಳೆ ₹22 ಲಕ್ಷ ನಗದು, ₹16.6 ಲಕ್ಷ ಮೌಲ್ಯದ ಬೆಲೆಬಾಳುವ ವಸ್ತುಗಳು ಮತ್ತು ಸುಮಾರು 60 ಭೂ ದಾಖಲೆಗಳು ಪತ್ತೆಯಾಗಿವೆ. ಶಾಂತಿ ಅವರೇ ಚೀಲಗಳನ್ನು ನೀಡಿದ್ದು ಎಂದು ವಿಚಾರಣೆ ವೇಳೆ ಶಿವ ಒಪ್ಪಿಕೊಂಡಿದ್ದಾರೆ ಎಂದು ಇ.ಡಿ ಹೇಳಿದೆ.

ಉದ್ಯೋಗಕ್ಕಾಗಿ ಲಂಚ ಪ್ರಕರಣ ಸಂಬಂಧ ಜೂನ್ 14 ರಂದು ಬಾಲಾಜಿ ಅವರನ್ನು ಬಂಧಿಸಲಾಗಿದ್ದು, ಸದ್ಯ ಪುಳಾಳ್ ಕಾರಾಗೃಹದಲ್ಲಿ ಇರಿಸಲಾಗಿದೆ.



ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,300
ಒಡವೆ ಚಿನ್ನ 1ಗ್ರಾಂ	₹5,670
ಬೆಳ್ಳಿ ಕೆ.ಜಿಗೆ	₹74,400



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹485



ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹147
ಆರ್‌ಎಸ್‌ಎಸ್-5	₹141
ಗುಡ್ ಲಾಟ್	₹1240



ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1860)
ಸೋಯಾ (ರಿಫೈನ್ಡ್)	₹965 (960)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹870 (868)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹344-521
ದ್ವಿತಳಿ (ಬಿ.ವಿ)	₹300-610

ಮುಂಬೈ ಧಾರಣೆ

ಶೇಂಗಾ

5-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1870)
ಒಂದು ವಾರದ ಡೆಲಿವರಿ	1865(1865)
ಸೋಯಾ ಕಚ್ಚಾ	915(915)
ಪಾಮ್ ವಾರದ ಡೆಲಿವರಿ	868(866)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,250 (59,200)
ಬೆಳ್ಳಿ ಕೆ.ಜಿ 72,250 (72,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬಿಒಬಿ ಲಾಭ ಶೇ 88ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಬ್ಯಾಂಕ್ ಆಫ್ ಬರೋಡ (ಬಿಒಬಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 87.7ರಷ್ಟು ಹೆಚ್ಚಾಗಿದ್ದು, ₹4,070 ಕೋಟಿಗೆ ತಲುಪಿದೆ.

ಬಡ್ಡಿ ವರಮಾನ ಹೆಚ್ಚಾಗಿರುವುದು ಮತ್ತು ಸಾಲ ನೀಡಿಕೆಯಲ್ಲಿ ಉತ್ತಮ ಬೆಳವಣಿಗೆ ಕಂಡಿರುವುದೇ ಈ ಪ್ರಮಾಣದಲ್ಲಿ ಲಾಭ ಗಳಿಸಲು ಕಾರಣ ಎಂದು ಬ್ಯಾಂಕ್ ಹೇಳಿದೆ.

ಕಾರ್ಯಾಚರಣಾ ವರಮಾನ ಶೇ 42.9ರಷ್ಟು ಹೆಚ್ಚಾಗಿದ್ದು ₹14,319 ಕೋಟಿಗೆ ತಲುಪಿದೆ. ನಿವ್ವಳ ಬಡ್ಡಿ ವರಮಾನ ಶೇ 24ರಷ್ಟು ಹೆಚ್ಚಾಗಿ ₹10,997 ಕೋಟಿಗೆ ತಲುಪಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 6.26 ರಿಂದ ಶೇ 3.51ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 1.58ರಿಂದ ಶೇ 0.78ಕ್ಕೆ ತಗ್ಗಿದೆ.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1400
ಸಣ್ಣ	₹800-1200

ಲ್ಯಾಪ್‌ಟಾಪ್ ಆಮದು ನಿರ್ಬಂಧ ಜಾರಿ ಮುಂದೂಡಿಕೆ

ನವದೆಹಲಿ (ಪಿಟಿಐ): ಲ್ಯಾಪ್‌ಟಾಪ್, ಟ್ಯಾಬ್ ಮತ್ತು ಪರ್ಸನಲ್ ಕಂಪ್ಯೂಟರ್‌ಗಳ ಆಮದು ಮೇಲಿನ ನಿರ್ಬಂಧ ಜಾರಿಗೊಳಿಸುವುದನ್ನು ಅಕ್ಟೋಬರ್ 31ರವರೆಗೆ ಮುಂದೂಡಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ಇದರಿಂದಾಗಿ ಕಂಪನಿಗಳು ಪರವಾನಗಿ ಇಲ್ಲದೇ ಆಮದು ಮಾಡಿಕೊಳ್ಳಲು ಹೆಚ್ಚಿನ ಸಮಯ ದೊರೆತಂತಾಗಿದೆ.

ನವೆಂಬರ್ 1ರಿಂದ ಈ ಸಾಧನಗಳನ್ನು ಆಮದು ಮಾಡಿಕೊಳ್ಳಲು ಕಂಪನಿಗಳು ಸರ್ಕಾರದಿಂದ ಪರವಾನಗಿ ಪಡೆದುಕೊಂಡಿರಬೇಕು.

ವಿದೇಶಿ ವ್ಯಾಪಾರಗಳ ಮಹಾನಿರ್ದೇಶನಾಲಯವು (ಡಿಜಿಎಫ್‌ಟಿ) ಶುಕ್ರವಾರ ತಡರಾತ್ರಿ ಹೊರಡಿಸಿರುವ ಆದೇಶದ ಪ್ರಕಾರ, ನಿರ್ಬಂಧವು ನವೆಂಬರ್ 1ರಿಂದ ಜಾರಿಗೆ ಬರಲಿದೆ. ಲೈಸೆನ್ಸ್ ಇಲ್ಲದೇ ಅಕ್ಟೋಬರ್ 31ರವರೆಗೆ ಆಮದು ಮಾಡಿಕೊಳ್ಳಬಹುದು. ನವೆಂಬರ್ 1 ರಿಂದ ಲೈಸೆನ್ಸ್ ಅಗತ್ಯ ಎಂದು ತಿಳಿಸಿದೆ.


ಕೇಂದ್ರ ಸರ್ಕಾರವು ಆಗಸ್ಟ್ 3ರಂದು ಈ ಸಾಧನಗಳ ಆಮದು ಮೇಲೆ ತಕ್ಷಣದಿಂದ ಜಾರಿಗೆ ಬರುವಂತೆ ನಿರ್ಬಂಧ ಹೇರಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1000 - 1050
ಹೆರಕಿದ್ದು	1300-1400
ಹಸಿರು ಸಾಧಾರಣ	1000-1100
ಹಸಿರು ಉತ್ತಮ	1250-1350
ಹಸಿರು ಅತಿ ಉತ್ತಮ	1600-1800
ಕಾಳುಮೆಣಸು	610



ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13800	13900	13850	161.35ಸೆಂಟ್ಸ್
ಎಸಿ	7140	7000	6900	
ಆರ್‌ಪಿ	10200	10200	10200	ಲಂಡನ್
ಆರ್‌ಸಿ	6230	250	6000	2612ಡಾಲರ್ಸ್

ಭಾರತಕ್ಕೆ ಬರಲಿದೆ 17 ಸಾವಿರ ಟನ್: ಸಚಿವೆ ಅನುಪ್ರಿಯಾ ಮಾಹಿತಿ
ಭೂತಾನ್ ಅಡಿಕೆ ಆಮದಿಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಭೂತಾನ್‌ನಿಂದ ಪ್ರತಿವರ್ಷ 17 ಸಾವಿರ ಟನ್ ತಾಜಾ ಅಡಿಕೆ ಆಮದು ಮಾಡಿಕೊಳ್ಳಲು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವಾಲಯ ಒಪ್ಪಿಗೆ ನೀಡಿದೆ.

ಲೋಕಸಭೆಯಲ್ಲಿ ಸದಸ್ಯರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಇಲಾಖೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್, 'ಕಳೆದ ನಾಲ್ಕು ವರ್ಷಗಳಿಂದ ಭೂತಾನ್‌ನಿಂದ ಅಡಿಕೆ ಆಮದು ಆಗಿಲ್ಲ. ಕನಿಷ್ಠ ಬೆಂಬಲ ಬೆಲೆಯ ಯಾವುದೇ ಷರತ್ತುಗಳನ್ನು ವಿಧಿಸದೆ ಪ್ರತಿವರ್ಷ ತಾಜಾ ಅಡಿಕೆ ಆಮದು ಮಾಡಿಕೊಳ್ಳಲು ಜುಲೈ 3ರಂದು ಅಧಿಸೂಚನೆ ಹೊರಡಿಸಲಾಗಿದೆ. ಆಮದನ್ನು ಪಶ್ಚಿಮ ಬಂಗಾಳದ ಜೈಗಾನ್ ಬಂದರು ಹಾಗೂ ಚಾಮುರ್ಚಿ ಬಂದರು ಮೂಲಕವೇ ಮಾಡಬೇಕು ಎಂದು ಷರತ್ತು ವಿಧಿಸಲಾಗಿದೆ. ಅಂತಹ ಆಮದುಗಳು ಡೈರೆಕ್ಟರೇಟ್ ಜನರಲ್ ಆಫ್ ಫಾರಿನ್ ಟ್ರೇಡ್ ನೀಡಿದ ಬಂದರು ನೋಂದಣಿ ಪ್ರಮಾಣ ಪತ್ರಕ್ಕೆ ಒಳಪಟ್ಟಿರುತ್ತದೆ' ಎಂದು ತಿಳಿಸಿದ್ದಾರೆ.

ಕಳೆದ ಎರಡು ವರ್ಷಗಳಿಂದ ಮ್ಯಾನ್ಮಾರ್, ಶ್ರೀಲಂಕಾ ಹಾಗೂ ಇಂಡೊನೇಷ್ಯಾದಿಂದ ಅಡಿಕೆ ಆಮದು ಹೆಚ್ಚಾಗಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

'ಇತ್ತೀಚಿನ ವರ್ಷಗಳಲ್ಲಿ ಅಡಿಕೆ ಆಮದು ಪ್ರಮಾಣ ಹೆಚ್ಚಳ ಗಮನಿಸಿದ ಸಚಿವಾಲಯವು, ಅಡಿಕೆಯ ಆಮದಿನ ಕನಿಷ್ಠ ದರವನ್ನು ಪ್ರತಿ ಕೆ.ಜಿ.ಗೆ ₹251ರಿಂದ ₹351ಕ್ಕೆ ಹೆಚ್ಚಿಸಿ ಈ ವರ್ಷದ ಫೆಬ್ರುವರಿ 14ರಂದು ಅಧಿಸೂಚನೆ ಹೊರಡಿಸಿತ್ತು. ನಮ್ಮ ರೈತರ ಹಿತರಕ್ಷಣೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿತ್ತು. ಜತೆಗೆ, ಸುಪಾರಿಯ ಆಮದು ನೀತಿಯನ್ನು ಉಚಿತದಿಂದ ನಿಷೇಧಿತ ಎಂದು ಪರಿಷ್ಕರಿಸಲಾಗಿತ್ತು' ಎಂದು ಅವರು ಹೇಳಿದ್ದಾರೆ.

ಅಡಿಕೆಯ ಆಮದಿನಿಂದ ದೇಶೀಯ ಅಡಿಕೆಯ ಬೆಲೆ ಕುಸಿತವಾಗುತ್ತಿದ್ದು, ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ರೈತರು ಹಾಗೂ ರೈತ ಸಂಘಟನೆಗಳು ಇಲಾಖೆಗೆ ಮನವಿ ಸಲ್ಲಿಸಿದ್ದವು. ಅಡಿಕೆಯ ಅಗತ್ಯ ಇಲ್ಲದ ಆಮದು ನಿಯಂತ್ರಿಸಲು ಹಾಗೂ ಕಳಪೆ ಗುಣಮಟ್ಟದ ಅಡಿಕೆ ಮಾರುಕಟ್ಟೆಗೆ ಬರುವುದನ್ನು ತಪ್ಪಿಸಲು ಸಚಿವಾಲಯವು ಅನೇಕ ಉಪಕ್ರಮಗಳನ್ನು ಕೈಗೊಂಡಿದೆ ಎಂದೂ ಅವರು ತಿಳಿಸಿದ್ದಾರೆ.


ಎಫ್‌ಪಿಐ: ₹8,545 ಕೋಟಿ ಹಿಂತೆಗೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಮೂರು ತಿಂಗಳ ಬಳಿಕ ಭಾರತದ ಷೇರುಪೇಟೆಗಳಲ್ಲಿ ಬಂಡವಾಳ ಹಿಂತೆಗೆತಕ್ಕೆ ಗಮನ ಹರಿಸಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ತಿಳಿಸಿದ್ದಾರೆ.

ಕಳೆದ ಐದು ದಿನಗಳ ವಹಿವಾಟು ಅವಧಿಯಲ್ಲಿ ವಿದೇಶಿ ಹೂಡಿಕೆದಾರರು ₹8,545 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ವಿದೇಶಿ ಸಾಂಸ್ಥಿಕ ಬಂಡವಾಳ ಹೊರಹರಿವು (ಕೋಟಿಗಳಲ್ಲಿ)



ಮಾಹಿತಿ: ಪಿಟಿಐ

ಅಮೆರಿಕದ 10 ವರ್ಷಗಳ ಬಾಂಡ್ ಗಳಿಕೆಯು ಶೇ 4ನ್ನು ಮೀರಿದ್ದು, ಅಲ್ಪಾವಧಿಯಲ್ಲಿ ಭಾರತವನ್ನೂ ಒಳಗೊಂಡು ಪ್ರವರ್ಧಮಾನಕ್ಕೆ ಬರುತ್ತಿರುವ ಮಾರುಕಟ್ಟೆಗಳಲ್ಲಿ ಬಂಡವಾಳ ಹೂಡಿಕೆ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ವಿಜಯಕುಮಾರ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಅಮೆರಿಕದ ಬಾಂಡ್ ಗಳಿಕೆ ಪ್ರಮಾಣವು ಗರಿಷ್ಠ ಮಟ್ಟದಲ್ಲೇ ಇದ್ದಲ್ಲಿ ವಿದೇಶಿ ಹೂಡಿಕೆದಾರರು ಷೇರುಗಳನ್ನು ಮಾರಾಟ ಮಾಡುವುದನ್ನು ಮುಂದುವರಿಸುವ ಅಥವಾ ಖರೀದಿಯಿಂದ ದೂರ ಉಳಿಯುವ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ ಇರುವ ಮಾಹಿತಿಯ ಪ್ರಕಾರ, ಕಳೆದ ಮೂರು ತಿಂಗಳಲ್ಲಿ ವಿದೇಶಿ ಹೂಡಿಕೆದಾರರು ₹1.37 ಲಕ್ಷ ಕೋಟಿ ಬಂಡವಾಳ ಹೂಡಿಕೆ ಮಾಡಿದ್ದಾರೆ.

ವಾಹನ, ಬಂಡವಾಳ ಸರಕು ಮತ್ತು ಹಣಕಾಸು ವಲಯಗಳ ಷೇರುಗಳನ್ನು ಖರೀದಿಸುವುದು ಮುಂದುವರಿದಿದ್ದು, ಐ.ಟಿ. ಷೇರುಗಳನ್ನು ಮತ್ತೆ ಖರೀದಿಸಲು ಆರಂಭಿಸಿದ್ದಾರೆ. ಈ ಮೊದಲು ಐ.ಟಿ. ಷೇರುಗಳನ್ನು ಹೆಚ್ಚಾಗಿ ಮಾರಾಟ ಮಾಡಿದ್ದರು ಎಂದು ಅವರು ಹೇಳಿದ್ದಾರೆ.

ಇಮ್ರಾನ್ ಬಂಧನ, ಬೆಂಬಲಿಗರ ಪ್ರತಿಭಟನೆ

ಇಸ್ಲಾಮಾಬಾದ್ / ಲಾಹೋರ್ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ 3 ವರ್ಷ ಜೈಲುಶಿಕ್ಷೆ ವಿಧಿಸಿ ಇಸ್ಲಾಮಾಬಾದ್‌ನ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಆದೇಶ ನೀಡಿದ ಹಿಂದೆಯೇ, ಪೊಲೀಸರು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಲಾಹೋರ್ ನಿವಾಸದಲ್ಲಿ ಬಂಧಿಸಿದರು.

ಬಂಧನದ ಬಳಿಕ ಇಮ್ರಾನ್ ಖಾನ್ ಪೂರ್ವಮುದ್ರಿತ ವಿಡಿಯೊ ಸಂದೇಶ ಬಿಡುಗಡೆ ಮಾಡಿದ್ದು, 'ಕಾರ್ಯಕರ್ತರು ಈಗ 'ಮೌನವಾಗಿ ಕುಳಿತುಕೊಳ್ಳಬಾರದು. ತಮ್ಮ ಹಕ್ಕು, ಸ್ವಾತಂತ್ರ್ಯಕ್ಕಾಗಿ ಎದ್ದು ನಿಲ್ಲಬೇಕು. ಈಗ ಹೋರಾಟವನ್ನು ನಡೆಸದಿದ್ದರೆ ಗುಲಾಮಗಿರಿಯ ಬದುಕು ನಿಮ್ಮದಾಗುತ್ತದೆ. ನಿಮಗೆ ನೆನಪಿರಲಿ. ಗುಲಾಮರಿಗೆ ಜೀವನ ಇರುವುದಿಲ್ಲ' ಎಂದು ಹೇಳಿದ್ದಾರೆ.

ಸರ್ಕಾರದ ಮುಖ್ಯಸ್ಥರು, ಪ್ರಮುಖರಿಗೆ ಬರುವ ಉಡುಗೊರೆಗಳು ತೋಷಖಾನಾ ಇಲಾಖೆ ಸುಪರ್ದಿಗೆ ಹೋಗಲಿವೆ. ಇಂತಹ ದುಬಾರಿ ಮೌಲ್ಯದ ಗಡಿಯಾರವೊಂದನ್ನು ಇಮ್ರಾನ್ ಹೆಚ್ಚಿನ ಬೆಲೆಗೆ ಮಾರಿಕೊಂಡಿದ್ದು, ಲಾಭ ಗಳಿಸಿದ್ದರು ಎಂಬ ಪ್ರಕರಣ ಇದಾಗಿದೆ.

ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಅಧ್ಯಕ್ಷರು ಆದ 70 ವರ್ಷ ವಯಸ್ಸಿನ ಇಮ್ರಾನ್ ಖಾನ್ ಅವರು, ತಮ್ಮ ಒಟ್ಟು ಆಸ್ತಿಯನ್ನು ತಪ್ಪಾಗಿ ಘೋಷಿಸಿಕೊಂಡಿರುವುದು ಸಾಬೀತಾಗಿದೆ ಎಂದು ಸಜೆ ವಿಧಿಸಿ ಆದೇಶ ಹೊರಡಿಸಿದ ನ್ಯಾಯಾಧೀಶರು ತಿಳಿಸಿದರು.

ಇದರ ಹಿಂದೆಯೇ ಲಾಹೋರ್‌ನ ಅವರ ನಿವಾಸದಿಂದ ಪಂಜಾಬ್ ಪೊಲೀಸರ ನೆರವಿನಲ್ಲಿ ಇಸ್ಲಾಮಾಬಾದ್ ಪೊಲೀಸರು ಖಾನ್‌ರನ್ನು ಬಂಧಿಸಿದರು ಎಂದು ಕುಟುಂಬ ತಿಳಿಸಿದೆ. ಪ್ರಧಾನಿ ಶೆಹಬಾಜ್ ಷರೀಫ್ ಅವರ ವಿಶೇಷ ಸಲಹೆಗಾರ ಅತಾಉಲ್ಲಾ ತರಾರ್ ಅವರು, ಬಂಧನವನ್ನು ದೃಢಪಡಿಸಿದ್ದಾರೆ.

ಕಾನೂನು ಹೋರಾಟ –ಖುರೇಷಿ: ಪಿಟಿಐ ಅಧ್ಯಕ್ಷ ಇಮ್ರಾನ್ ಖಾನ್ ವಿರುದ್ಧದ ತೋಷಖಾನಾ ಭ್ರಷ್ಟಾಚಾರ ಪ್ರಕರಣವು ರಾಜಕೀಯ ಉದ್ದೇಶದ್ದಾಗಿದ್ದು, ಇದರ ವಿರುದ್ಧ ಕಾನೂನು ಹೋರಾಟ ನಡೆಯಲಿದೆ ಎಂದು ಮಾಜಿ ಸಚಿವ ಶಾ ಮೆಹಮೂದ್ ಖುರೇಷಿ ಹೇಳಿದ್ದಾರೆ.

ತೋಷಖಾನಾ ಪ್ರಕರಣ...

- **ಆಗಸ್ಟ್ 2022:** ಪ್ರಕರಣವನ್ನು ಚುನಾವಣಾ ಆಯೋಗದ ಪರಿಶೀಲನೆಗೆ ಒಪ್ಪಿಸಿದ ರಾಷ್ಟ್ರೀಯ ಅಸೆಂಬ್ಲಿ ಸ್ಪೀಕರ್ ರಾಜಾ ಪರ್ವೇಜ್.
- **ಅ.21, 22:** ಪ್ರಕರಣದ ತೀರ್ಪು ಕಾಯ್ದಿರಿಸಿದ್ದ ಆಯೋಗ.
- **ಅ. 21, 22:** ಇಮ್ರಾನ್‌ಖಾನ್‌ರಿಂದ ತಪ್ಪು ಹೇಳಿಕೆ, ಅಸಮರ್ಪಕ ಆಸ್ತಿ ಘೋಷಣೆ ಎಂದು ತೀರ್ಪು. ಸದಸ್ಯತ್ವ ರದ್ದು.
- **ನ 21, 22:** ಕ್ರಿಮಿನಲ್ ವಿಚಾರಣೆ ಕೋರಿ ಖಾನ್ ವಿರುದ್ಧ ಸೆಷನ್ ಕೋರ್ಟ್‌ಗೆ ಆಯೋಗದಿಂದ ದೂರು.
- **ಜು. 4, 23:** ಅರ್ಜಿದಾರರ ವಾದ ಮರು ಆಲಿಸುವಂತೆ ಕೆಳಹಂತದ ನ್ಯಾಯಾಲಯಕ್ಕೆ ಇಸ್ಲಾಮಾಬಾದ್ ಹೈಕೋರ್ಟ್ ಆದೇಶ.
- **ಜುಲೈ 8, 23:** ಪ್ರಕರಣ ವಿಚಾರಣೆಗೆ ಅರ್ಹ ಎಂದು ಸೆಷನ್ಸ್ ಕೋರ್ಟ್ ನ್ಯಾಯಾಧೀಶರ ಘೋಷಣೆ.
- **ಆ. 2, 2023:** ಇಮ್ರಾನ್ ಖಾನ್ ಸಲ್ಲಿಸಿದ್ದ ಸಾಕ್ಷಿಗಳ ಪಟ್ಟಿ ತಿರಸ್ಕರಿಸಿದ ಕೋರ್ಟ್.
- **ಆ. 5, 2023:** ಆರೋಪ ಸಾಬೀತು. 3 ವರ್ಷ ಶಿಕ್ಷೆ ವಿಧಿಸಿ ಆದೇಶ.

ಡಿಜಿಟಲ್ ಐಡೆಂಟಿಟಿ: ಲಂಕಾಗೆ ₹ 450 ಕೋಟಿ ನೆರವು

ಕೊಲಂಬೊ (ಪಿಟಿಐ): ಡಿಜಿಟಲ್ ಐಡೆಂಟಿಟಿ ಯೋಜನೆಯ ಅನುಷ್ಠಾನಕ್ಕಾಗಿ ಭಾರತವು ನೆರೆಯ ಶ್ರೀಲಂಕಾಗೆ ₹ 45 ಕೋಟಿ ಆರ್ಥಿಕ ನೆರವು ನೆರವು ನೀಡಿದೆ. ಭಾರತ ಸರ್ಕಾರದ ನೆರವಿನಲ್ಲಿ ಶ್ರಿಲಂಕಾದಲ್ಲಿ ಡಿಜಿಟಲೀಕರಣ ಕಾರ್ಯಕ್ರಮ ಕಾರ್ಯಗತಗೊಳ್ಳುತ್ತಿದೆ.

ಭಾರತವು ಶುಕ್ರವಾರ ನೆರವು ಒದಗಿಸಿದೆ ಎಂದು ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರ ಕಚೇರಿ ಹೇಳಿಕೆ ನೀಡಿದೆ. ಡಿಜಿಟಲೀಕರಣ ಯೋಜನೆ ಜಾರಿ ಕುರಿತು ಅಧ್ಯಕ್ಷರ ಸಚಿವಾಲಯದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ವಿವಿಧ ಸಚಿವರು, ರಾಯಭಾರಿಗಳು, ಅಧಿಕಾರಿಗಳು ಪಾಲ್ಗೊಂಡಿದ್ದರು.

ಈ ವೇಳೆ ಭಾರತೀಯ ಹೈಕಮಿಷನರ್ ಗೋಪಾಲ್ ಬಾಗ್ಲೆ ಅವರು, ಆರ್ಥಿಕ ನೆರವಿನ ಚೆಕ್ ಅನ್ನು ಶ್ರೀಲಂಕಾದ ತಂತ್ರಜ್ಞಾನ ಸಚಿವ ಕನಕ ಹೆರತ್ ಅವರಿಗೆ ಹಸ್ತಾಂತರಿಸಿದರು. ಇದು, ಯೋಜನಾ ವೆಚ್ಚದ ಶೇ 15ರಷ್ಟಾಗಿದೆ ಎಂದು ತಿಳಿಸಿದರು.

ಬೆರಳಚ್ಚು, ಅಕ್ಷಿಪಟಲ ಸೇರಿದಂತೆ ಕೇಂದ್ರೀಕೃತ ವ್ಯವಸ್ಥೆಯಡಿ ಶ್ರೀಲಂಕಾದಲ್ಲಿ ನಾಗರಿಕರ ಬಯೊಮೆಟ್ರಿಕ್ ಮಾಹಿತಿ ಸಂಗ್ರಹಿಸುವ ಯೋಜನೆ ಇದಾಗಿದೆ. ಅಂತರರಾಷ್ಟ್ರೀಯ ಸಂಸ್ಥೆ ಐಸಿಎಒ ಮಾನದಂಡಗಳಿಗೆ ಅನುಸಾರವಾಗಿ ಇದು ಜಾರಿಗೊಳ್ಳಲಿದೆ ಎಂದು ಅಧ್ಯಕ್ಷರ ಸಚಿವಾಲಯವು ಹೇಳಿಕೆ ನೀಡಿದೆ.

ಸಂಕ್ಷಿಪ್ತ ಸುದ್ದಿ

ಯಾತ್ರಿಗಳ ಪತ್ತೆಗೆ ನೆರವು: ನೇಪಾಳ ಸರ್ಕಾರ ಮನವಿ

ಕಠ್ಮಂಡು (ಪಿಟಿಐ): ದಿಢೀರ್ ಪ್ರವಾಹದ ಬಳಿಕ ನಾಪತ್ತೆಯಾಗಿರುವ ನೇಪಾಳದ ಯಾತ್ರಿಗಳ ಪತ್ತೆಗೆ ನೆರವು ನೀಡಬೇಕು ಎಂದು ನೇಪಾಳದ ವಿದೇಶಾಂಗ ಸಚಿವ ಎನ್. ಪಿ.ಸೌದ್ ಅವರು ಉತ್ತರಾಖಂಡದ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದಾರೆ.

ಕೇದಾರನಾಥ ದೇವಸ್ಥಾನದ ಪ್ರದೇಶದಲ್ಲಿ ಯಾತ್ರಿಗಳು ತಂಗಿದ್ದರು. ಪ್ರವಾಹದ ಬಳಿಕ ನಾಪತ್ತೆಯಾಗಿದ್ದಾರೆ. ಇವರ ಶೋಧ ಕಾರ್ಯಕ್ಕೆ ಸಹಕಾರ ಬೇಕಾಗಿದೆ ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರಿಗೆ ಕೋರಿದ್ದಾರೆ.

ಧಾರಾಕಾರ ಮಳೆಯಿಂದ ಪ್ರವಾಹ ಕಂಡುಬಂದಿದ್ದು, ರುದ್ರಪ್ರಯಾಗ ಜಿಲ್ಲೆಯ ಗೌರಿ ಕುಂಡ ಬಳಿ ಗುರುವಾರ ರಾತ್ರಿ ಭೂಕುಸಿದಿತ್ತು. 19 ಯಾತ್ರಿಗಳು ನಾಪತ್ತೆಯಾಗಿದ್ದು, ಇವರಲ್ಲಿ 11 ಮಂದಿ ನೇಪಾಳಿಗರು ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಅವಘಡದ ನಂತರ ಮೂವರು ನೇಪಾಳಿಗರದ್ದು ಸೇರಿ 7 ಶವ ಪತ್ತೆಯಾಗಿವೆ. 'ಶೋಧ ಕಾರ್ಯಕ್ಕಾಗಿ ರಕ್ಷಣಾ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಉತ್ತರಾಖಂಡ ಮುಖ್ಯಮಂತ್ರಿ ಹೇಳಿದ್ದಾರೆ.

ಪಾಕ್ ಜನಸಂಖ್ಯೆ 24.01 ಕೋಟಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಜನಸಂಖ್ಯೆಯು 24.01 ಕೋಟಿಗೆ ತಲುಪಿದೆ. ಜನಗಣತಿಯ ಹೊಸ ಅಂಕಿ ಅಂಶಗಳ ಕುರಿತ ವರದಿಯನ್ನು ಪ್ರಧಾನಿ ಅಧ್ಯಕ್ಷತೆಯ ಸಮಾನ ಆಸಕ್ತಿಯ ಮಂಡಳಿ (ಸಿಸಿಐ) ಅನುಮೋದಿಸಿದೆ. ಹೀಗಾಗಿ ಚುನಾವಣಾ ಆಯೋಗ ಜನಸಂಖ್ಯೆಗೆ ಅನುಗುಣವಾಗಿ ಕ್ಷೇತ್ರ ಪುನರ್ವಿಂಗಡಣೆ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಸಾರ್ವತ್ರಿಕ ಚುನಾವಣೆಯು ವಿಳಂಬವಾಗುವ ಸಂಭವವಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಕೃಪಾಣ' ನಿಷೇಧಿಸಿದ್ದ ಕಾಯ್ದೆ ರದ್ದು

ಮೆಲ್ಬರ್ನ್ (ಪಿಟಿಐ): ಸಿಖ್ ವಿದ್ಯಾರ್ಥಿಗಳು ಸಾಂಪ್ರದಾಯಿಕವಾದ ಚೂರಿ (ಕೃಪಾಣ) ಇಟ್ಟುಕೊಳ್ಳುವುದನ್ನು ನಿಷೇಧಿಸಿದ್ದ ಕಾಯ್ದೆಯನ್ನು ಆಸ್ಟ್ರೇಲಿಯದ ಕ್ವೀನ್ಸ್‌ಲ್ಯಾಂಡ್‌ನ ಕೋರ್ಟ್ ರದ್ದುಪಡಿಸಿದೆ. 'ಈ ಕಾಯ್ದೆಯು ಅಸಾಂವಿಧಾನಿಕವಾದುದು' ಎಂದು ಕೋರ್ಟ್ ಹೇಳಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕಮಲಜಿತ್ ಕೌರ್ ಅತ್ವಾಲ್ ಅವರು ಕಳೆದ ವರ್ಷ ಕೋರ್ಟ್ ಮೆಟ್ಟಿಲೇರಿದ್ದರು. 'ಸಿಖ್ ವಿದ್ಯಾರ್ಥಿಗಳ ಧಾರ್ಮಿಕ ಸಂಕೇತಗಳಲ್ಲಿ ಕೃಪಾಣ ಒಂದು. ನಂಬಿಕೆ ಅನುಸಾರ ಒಯ್ಯಬೇಕಾಗುತ್ತದೆ. ಈಗ ಕಾಯ್ದೆ ರೂಪಿಸಿರುವುದು ತಾರತಮ್ಯವಾಗಿದೆ' ಎಂದು ವಾದ ಮಂಡಿಸಿದ್ದರು.

ಜನಾಂಗೀಯ ತಾರತಮ್ಯ ತಡೆ ಕಾಯ್ದೆ (ಆರ್‌ಡಿಎ) ಅಸಾಂವಿಧಾನಿಕವಾದುದು ಎಂದು ಕ್ವೀನ್ಸ್ ಲ್ಯಾಂಡ್‌ನ ಸುಪ್ರೀಂ ಕೋರ್ಟ್ ಹೇಳಿತು. ಆದರೆ, ಈ ಆದೇಶವು ಮಕ್ಕಳು ಚೂಪಾದ ಆಯುಧ ಹೊಂದಿರುವುದನ್ನು ನಿಷೇಧಿಸಿರುವುದಕ್ಕೆ ಅನ್ವಯವಾಗುವುದಿಲ್ಲ ಎಂದು ತಿಳಿಸಿತು.

ಅರಳುವ ಹಾದಿಯಲ್ಲಿ ಪೋರನ ದುರಂತ ಅಂತ್ಯ

ಚೆನ್ನೈನಲ್ಲಿ ನಡೆದ ಬೈಕ್ ರೇಸ್ ವೇಳೆ ಅಪಘಾತ: ಬೆಂಗಳೂರಿನ 13ರ ಬಾಲಕ ಶ್ರೇಯಸ್ ಹರೀಶ್ ದುರ್ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಪ್ಪರಂ ಶ್ರೇಯಸ್ ಹರೀಶ್ ತನ್ನ ವಯಸ್ಸಿನ ಮಕ್ಕಳಿಗಿಂತ ಭಿನ್ನ ವ್ಯಕ್ತಿತ್ವದ ಹುಡುಗ. ಆತನ ಓರಗೆಯ ಹುಡುಗರೆಲ್ಲರೂ ಆಟಿಕೆಯ ವಾಹನಗಳಲ್ಲಿ ಆಡಿ ಸಂತಸಪಡುತ್ತಿದ್ದ ಹೊತ್ತಿನಲ್ಲಿಯೇ ರೇಸ್ ಟ್ರ್ಯಾಕ್‌ನಲ್ಲಿ ಬೈಕ್ ಓಡಿಸಿದ್ದ ಸಾಹಸಿ. ಆದರೆ, 13 ವರ್ಷದ ಶ್ರೇಯಸ್ ಸಾಹಸಯಾತ್ರೆಗೆ ಈಗ ತೆರೆಬಿದ್ದಿದೆ.

ಚೆನ್ನೈನ ಮದ್ರಾಸ್ ಅಂತರರಾಷ್ಟ್ರೀಯ ಸರ್ಕಿಟ್ (ಎಂಐಸಿ) ನಲ್ಲಿ ಆಯೋಜಿಸಲಾಗಿದ್ದ ಎಂಆರ್‌ಎಫ್ ಇಂಡಿಯನ್ ನ್ಯಾಷನಲ್ ಮೋಟರ್‌ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದ ಶ್ರೇಯಸ್, ಅಪಘಾತದಲ್ಲಿ ದುರಂತ ಸಾವಿಗೀಡಾಗಿದ್ದಾನೆ. ಶನಿವಾರ ನಡೆದ ಸ್ಪರ್ಧೆಯಲ್ಲಿ ಹರೀಶ್ ಮುಂಚೂಣಿಯಲ್ಲಿ ಸಾಗುತ್ತಿದ್ದನು. ಬೆಂಗಳೂರಿನ ಕೆನ್ಸರಿ ಶಾಲೆಯ ವಿದ್ಯಾರ್ಥಿ ಶ್ರೇಯಸ್, ಉದಯೋನ್ಮುಖ ಸ್ಪರ್ಧಿಗಳ ವಿಭಾಗದಲ್ಲಿ ಟಿವಿಎಸ್ ಒನ್ ಮೇಕ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದ.

‘ತಿರುವಿನಲ್ಲಿ ನಿಯಂತ್ರಣ ಕಳೆದುಕೊಂಡ ಬೈಕ್ ಉರುಳಿತು. ಅದೇ ಹೊತ್ತಿನಲ್ಲಿ ಶ್ರೇಯಸ್ ಧರಿಸಿದ್ದ ಹೆಲ್ಮೆಟ್ ಲಾಕ್ ಕಳಚಿತು. ಹಿಂದಿನಿಂದ ಬರುತ್ತಿದ್ದ ಇನ್ನೊಬ್ಬ ಸ್ಪರ್ಧಿಯ ಬೈಕ್ ಶ್ರೇಯಸ್ ಮೇಲೆ ಹರಿದು ಮುಂದೆ ಸಾಗಿತು’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.





ಶ್ರೇಯಸ್ ಹರೀಶ್ (ಎಡಚಿತ್ರ) ಕೆಲ ತಿಂಗಳುಗಳ ಹಿಂದೆ ನಡೆದ ರೇಸ್‌ನಲ್ಲಿ ಭಾಗವಹಿಸಿದ್ದ ದೃಶ್ಯ

ರೇಸ್ ಸ್ಥಗಿತಗೊಳಿಸಿದ ಆಯೋಜಕರು ಕೂಡಲೇ ಶ್ರೇಯಸ್‌ನನ್ನು ಅಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ದರು. ಶ್ರೇಯಸ್ ತಂದೆ ಹರೀಶ್ ಪರಂಧಾಮನ್ ಕೂಡ ಈ ಸಂದರ್ಭದಲ್ಲಿದ್ದರು. ಆದರೆ, ಆಸ್ಪತ್ರೆ ತಲುಪುವಷ್ಟರಲ್ಲಿಯೇ ಶ್ರೇಯಸ್ ಕೊನೆಯುಸಿರೆಳೆದಿದ್ದ.

ಮಗನಿಗಾಗಿ ನೌಕರಿ ಬಿಟ್ಟಿದ್ದ ಅಪ್ಪ: ಐದು ವರ್ಷದ ಬಾಲಕನಾಗಿದ್ದಾಗಿನಿಂದಲೇ ಶ್ರೇಯಸ್‌ಗೆ ಬೈಕ್ ಸವಾರಿಯ ಪ್ರೀತಿ ಶುರುವಾಗಿತ್ತು. ತಂದೆ ಹರೀಶ್ ಪರಂಧಾಮನ್ ಅವರ ಯಮಹಾ ಬೈಕ್‌ನಲ್ಲಿ ಓಡಾಡುವಾಗಲೇ ರೇಸ್ ಪಟುವಾಗುವ ಕನಸು ಗರಿಗೆದರಿತ್ತು.

ಮಗನ ಆಸೆಯನ್ನು ಆತಂಕದಿಂದಲೇ ಸ್ವೀಕರಿಸಿದ್ದ ಹರೀಶ್, ನಂತರ ತಾವೇ ಗುರುವಾಗಿದ್ದರು. ಮಗನಿಗೆ ಪ್ರತಿವಾರ ಕಬ್ಬನ್ ಪಾರ್ಕ್‌ಗೆ ಕರೆದುಕೊಂಡು ಹೋಗಿ ಬೈಕ್ ರೈಡಿಂಗ್ ಹೇಳಿಕೊಟ್ಟರು. ಹರೀಶ್ ತಮ್ಮ ಮಗನ ಕ್ರೀಡಾಭವಿಷ್ಯವನ್ನು ರೂಪಿಸುವ ಸಲುವಾಗಿ ಫಾರ್ಮಾಸ್ಯುಟಿಕಲ್ ಕಂಪೆನಿಯ ಉದ್ಯೋಗಕ್ಕೆ ರಾಜೀನಾಮೆ ನೀಡಿದ್ದರು.

11ನೇ ವಯಸ್ಸಿನಲ್ಲಿಯೇ ಭಾರತ ಮೋಟರ್‌ಸ್ಪೋರ್ಟ್ಸ್ ಕ್ಲಬ್‌ಗಳ ಫೆಡರೇಷನ್ (ಎಫ್‌ಎಂಎಸ್‌ಸಿಐ) ಮಾನ್ಯತೆ ಪಡೆದ ರೇಸ್‌ಗಳಲ್ಲಿ ಭಾಗವಹಿಸಲು ಶ್ರೇಯಸ್ ಲೈಸೆನ್ಸ್ ಪಡೆದಿದ್ದ. ಅದರಲ್ಲಿ ಕೆಲವು ನಿಯಮಗಳಿದ್ದವು. ರೇಸಿಂಗ್ ಟ್ರ್ಯಾಕ್‌ನಲ್ಲಿ ತಮಗಾಗಿ ಮರುವಿನ್ಯಾಸಗೊಳಿಸಿದ್ದ ಬೈಕ್ ಚಾಲನೆಗೆ ಮಾತ್ರ ಶ್ರೇಯಸ್‌ಗೆ ಅವಕಾಶ ಇತ್ತು. ಸಾರ್ವಜನಿಕ ಸ್ಥಳಗಳಲ್ಲಿ ಓಡಿಸುವಂತಿರಲಿಲ್ಲ. ಅಲ್ಲದೇ ಅಭ್ಯಾಸದ ಸಂದರ್ಭದಲ್ಲಿ ಜೊತೆಗೆ ಒಬ್ಬರು ಹಿರಿಯರು ಇರುವುದು ಕಡ್ಡಾಯವಾಗಿತ್ತು. ಆದ್ದರಿಂದಲೇ ತಂದೆ ಹರೀಶ್ ತಮ್ಮ ನೌಕರಿ ಬಿಟ್ಟಿದ್ದರು.

ಕೊಯಮತ್ತೂರಿನಲ್ಲಿ ನಡೆದ ಎಂಆರ್‌ಎಫ್ ಎಂಎಂಎಸ್‌ಸಿ ಎಫ್‌ಎಸ್‌ಸಿಐ ರಾಷ್ಟ್ರೀಯ ಮೋಟರ್ ಸೈಕಲ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿಯೂ ಶ್ರೇಯಸ್ ಸ್ಪರ್ಧಿಸಿದ್ದ. ಭಾರತದಲ್ಲಿ ನಡೆದಿದ್ದ ಮಿನಿ ಜಿಪಿ ಟೈಟಲ್ ಕೂಡ ಜಯಿಸಿದ್ದ. ಇದೇ ತಿಂಗಳು ಮಲೇಷ್ಯಾದಲ್ಲಿ ನಡೆಯಲಿರುವ ಎಂಬಿಸಿಕೆ ಚಾಂಪಿಯನ್‌ಷಿಪ್‌ನ ಮೋಟೊಸ್ಪೋರ್ಟ್ ರೇಸ್‌ನ 250 ಸಿಸಿಯ ಬಿ ಗುಂಪಿನಲ್ಲಿ ಸ್ಪರ್ಧಿಸಬೇಕಿತ್ತು.

’ಸ್ಪೇನ್‌ನ ಮಾರ್ಕ್ ಮಾರ್ಕೆಜ್ ನನಗೆ ಬಹಳ ಇಷ್ಟ. ಅವರ ರೇಸ್‌ಗಳನ್ನು ತುಂಬಾ ನೋಡುತ್ತೇನೆ. ಅವರೂ 15ನೇ ವಯಸ್ಸಿನಲ್ಲಿಯೇ ಟ್ರ್ಯಾಕ್‌ಗೆ ಇಳಿದವರು. ನಾನು ಅವರಂತೆಯೇ ಬೆಳೆಯಬೇಕು. ಅಂತರರಾಷ್ಟ್ರೀಯ ಮೋಟೊ ಜಿಪಿ ರೇಸ್‌ನಲ್ಲಿ ಭಾರತದ ರಾಷ್ಟ್ರಧ್ವಜ ಹಾರಿಸಬೇಕು ಮತ್ತು ರಾಷ್ಟ್ರಗೀತೆ ಮೊಳಗಿಸಬೇಕೆಂಬುದೇ ನನ್ನ ಗುರಿ’ ಎನ್ನುತ್ತಿದ್ದ ಈ ಪೋರ ಈಗ ನೆನಪು ಮಾತ್ರ.

ವರ್ಷದಲ್ಲಿ ಎರಡನೇ ಅವಘಡ

ಮದ್ರಾಸ್ ಇಂಟರ್‌ನ್ಯಾಷನಲ್ ಸರ್ಕಿಟ್ (ಎಂಐಸಿ)ನಲ್ಲಿ ಕಳೆದ ಒಂದು ವರ್ಷದಲ್ಲಿ ನಡೆದ ಎರಡನೇ ದುರಂತ ಇದಾಗಿದೆ.

ಹೋದ ಜನವರಿಯಲ್ಲಿ ಇಲ್ಲಿ ನಡೆದಿದ್ದ ಇಂಡಿಯನ್ ನ್ಯಾಷನಲ್ ಕಾರ್ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಅನುಭವಿ ರೇಸರ್ ಕೆ.ಇ. ಕುಮಾರ್ (59) ಸಾವನ್ನಪ್ಪಿದ್ದರು. ಇದೀಗ ಶ್ರೇಯಸ್ ಪ್ರಕರಣ ನಡೆದಿದೆ.

‘ಶ್ರೇಯಸ್ ಪ್ರತಿಭಾವನ್ವಿತ ರೇಸ್ ಪಟುವಾಗಿದ್ದ. ಆತನ ಸಾವು ಆಘಾತ ತಂದಿದೆ. ದುರ್ಘಟನೆ ನಡೆದ ಸ್ಥಳದಲ್ಲಿಯೇ ತುರ್ತು ಚಿಕಿತ್ಸೆ ನೀಡಲಾಗಿತ್ತು. ಆಸ್ಪತ್ರೆಗೂ ತುರ್ತಾಗಿ ರವಾನಿಸಲಾಯಿತು’ ಎಂದು ಎಂಎಂಎಸ್‌ಸಿ ಅಧ್ಯಕ್ಷ ಅಜಿತ್ ಥಾಮಸ್ ಹೇಳಿದ್ದಾರೆ.

‘ಈ ಪರಿಸ್ಥಿತಿಯಲ್ಲಿ ವಾರಾಂತ್ಯದ ಎಲ್ಲ ರೇಸ್‌ಗಳನ್ನೂ ರದ್ದುಪಡಿಸಲು ನಿರ್ಧರಿಸಲಾಗಿದೆ. ಶ್ರೇಯಸ್ ಕುಟುಂಬದೊಂದಿಗೆ ನಾವಿದ್ದೇವೆ’ ಎಂದೂ ತಿಳಿಸಿದರು.

ಆರ್ಚರಿ: ಅದಿತಿ ಸ್ವಾಮಿ ಐತಿಹಾಸಿಕ ಸಾಧನೆ



ಅದಿತಿ ಸ್ವಾಮಿ –ಟ್ವಿಟರ್ ಚಿತ್ರ

ಬರ್ಲಿನ್ (ಪಿಟಿಐ): ಭಾರತದ ಅದಿತಿ ಸ್ವಾಮಿ ಅವರು ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನ ಮಹಿಳೆಯರ ಕಾಂಪೌಂಡ್ ವಿಭಾಗದಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದರು. ವಿಶ್ವ ಚಾಂಪಿಯನ್ ಆದ ಅತಿಕಿರಿಯ ಸ್ಪರ್ಧಿ ಎಂಬ ಗೌರವ ಅವರಿಗೆ ಒಲಿಯಿತು.

17 ವರ್ಷದ ಅದಿತಿ ಎರಡು ತಿಂಗಳ ಹಿಂದೆ ಜೂನಿಯರ್ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿದ್ದರು. ಇದೀಗ ಸೀನಿಯರ್ ವಿಭಾಗದಲ್ಲೂ ವಿಶ್ವ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ಶನಿವಾರ ನಡೆದ ಫೈನಲ್‌ನಲ್ಲಿ ಅವರು ಮೆಕ್ಸಿಕೊದ ಆಂಡ್ರಿಯಾ ಬೆಸೆರಾ ವಿರುದ್ಧ ಗೆದ್ದರು. ನಿಖರ ಗುರಿ ಹಿಡಿಯುವಲ್ಲಿ ಯಶಸ್ವಿಯಾದ ಅದಿತಿ ಅವರು ಸಾಧ್ಯವಿರುವ 150 ಪಾಯಿಂಟ್‌ಗಳಲ್ಲಿ 149 ಪಾಯಿಂಟ್ ಗಳಿಸಿದರೆ, ಆಂಡ್ರಿಯಾ 147 ಪಾಯಿಂಟ್ ಕಲೆಹಾಕಿದರು.

ಅದಿತಿ ಅವರು ಶುಕ್ರವಾರ, ಜ್ಯೋತಿ ಸುರೇಖಾ ವೆನ್ನಂ ಮತ್ತು ಪ್ರಣೀತ್ ಕೌರ್ ಅವರೊಂದಿಗೆ ತಂಡ ವಿಭಾಗದಲ್ಲಿ ಚಿನ್ನ ಗೆದ್ದಿದ್ದರು.

ಜ್ಯೋತಿಗೆ ಕಂಚು: ಜ್ಯೋತಿ ಸುರೇಖಾ ಅವರು ಇದೇ ವಿಭಾಗದಲ್ಲಿ ಕಂಚು ಗೆದ್ದುಕೊಂಡರು. ಮೂರನೇ ಸ್ಥಾನಕ್ಕಾಗಿ ಪಡೆದ ಸ್ಪರ್ಧೆಯಲ್ಲಿ ಅವರು 150-146 ರಿಂದ ಟರ್ಕಿಯ ಇಪೆಕ್ ತೊಮ್ರುಕ್ ಅವರನ್ನು ಮಣಿಸಿದರು.

ಅದಿತಿ, ಸೆಮಿಫೈನಲ್‌ನಲ್ಲಿ 149-145 ರಿಂದ ಜ್ಯೋತಿ ಅವರನ್ನು ಸೋಲಿಸಿದ್ದರು.

ಓಜಸ್‌ಗೆ ಚಿನ್ನ: ಭಾರತದ ಓಜಸ್ ದೇವತಾಳೆ ಅವರು ಪುರುಷರ ಕಾಂಪೌಂಡ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಯುವ ಬ್ಯಾಟರ್‌ಗಳ ಮೇಲೆ ನಿರೀಕ್ಷೆ

ಟಿ20 ಕ್ರಿಕೆಟ್: ಭಾರತ– ವೆಸ್ಟ್ ಇಂಡೀಸ್ ಹಣಾಹಣಿ ಇಂದು; ಪೂರನ್, ಪೊವೆಲ್ ಮೇಲೆ ಭರವಸೆ

ಗಯಾನ (ಪಿಟಿಐ): ಯುವ ಆಟಗಾರರಿರುವ ಭಾರತ ತಂಡವು ಪ್ರಾವಿಡೆನ್ಸ್ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಎರಡನೇ ಟಿ20 ಪಂದ್ಯದಲ್ಲಿ ಆತಿಥೇಯ ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ.

ಈ ಸರಣಿಯ ಮೊದಲ ಟಿ20 ಪಂದ್ಯದಲ್ಲಿ ಬ್ಯಾಟರ್‌ಗಳ ವೈಫಲ್ಯದಿಂದಾಗಿ ಭಾರತ ತಂಡವು ಮುಗ್ಗರಿಸಿತ್ತು.

ಸಾಧಾರಣ ಮೊತ್ತದ ಗುರಿಯೊಡ್ಡಿದ್ದ ವೆಸ್ಟ್ ಇಂಡೀಸ್ ತಂಡವು ಬೌಲಿಂಗ್‌ನಲ್ಲಿ ಮಿಂಚಿತ್ತು. ರೋಚಕ ಜಯ ಸಾಧಿಸಿತ್ತು. ಅಗ್ರಕ್ರಮಾಂಕದ ಬ್ಯಾಟರ್‌ಗಳಾದ ಇಶಾನ್ ಕಿಶನ್, ಶುಭಮನ್ ಗಿಲ್, ಸಂಜು ಸ್ಯಾಮ್ಸನ್, ಸೂರ್ಯಕುಮಾರ್ ಯಾದವ್ ಹಾಗೂ ನಾಯಕ ಹಾರ್ದಿಕ್ ಪಾಂಡ್ಯ ಅವರು ತಂಡವನ್ನು ಗೆಲುವಿನತ್ತ ಮುನ್ನಡೆಸುವಲ್ಲಿ ವಿಫಲರಾದರು. ಪದಾರ್ಪಣೆ ಪಂದ್ಯ ಆಡಿದ ತಿಲಕ್ ವರ್ಮಾ ಮಾತ್ರ ಗಮನ ಸೆಳೆದರು.



ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ಅಭ್ಯಾಸ ಮಾಡಿದರು. ಈ ಸಂದರ್ಭದಲ್ಲಿ ಸಂಜು ಸ್ಯಾಮ್ಸನ್ ಇದ್ದರು –ಎಎಫ್‌ಪಿ ಚಿತ್ರ

‘ಇನಿಂಗ್ಸ್ ಕೊನೆ ಹಂತದ ಓವರ್‌ಗಳಲ್ಲಿ ‘ಫಿನಿಷರ್’ ಪಾತ್ರ ನಿಭಾಯಿಸುವ ಬ್ಯಾಟರ್ ಕೊರತೆ ಎದ್ದುಕಾಣುತ್ತಿದೆ. ಅನುಭವಿಗಳಾದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಹಾಗೂ ಆಲ್‌ರೌಂಡರ್ ರವೀಂದ್ರ ಜಡೇಜ ಈ ಸರಣಿಯಲ್ಲಿ ಆಡುತ್ತಿಲ್ಲ. ಅವರ ಗೈರುಹಾಜರಿಯಲ್ಲಿ ಯುವ ಆಟಗಾರರು ಅವಕಾಶ ಪಡೆದಿದ್ದಾರೆ.

ಐದು ಪಂದ್ಯಗಳ ಟಿ20 ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿರುವ ವಿಂಡೀಸ್ ಬಳಗಕ್ಕೆ ಎರಡನೇ ಪಂದ್ಯದಲ್ಲಿ ಕಠಿಣವಾದ ಸವಾಲು ಹಾಕುವ ಯುವಪಡೆಯ ಮುಂದಿದೆ.

ಟೆಸ್ಟ್ ಹಾಗೂ ಏಕದಿನ ಮಾದರಿಯಲ್ಲಿ ಸಾಧಾರಣ ಎನಿಸಿಕೊಂಡಿರುವ ಆತಿಥೇಯ ಬಳಗವು ಟಿ20 ಮಾದರಿಯಲ್ಲಿ ಬಲಿಷ್ಠವಾಗಿರುವುದರಲ್ಲಿ ಎಂಬುದರಲ್ಲಿ ಅನುಮಾನವಿಲ್ಲ. ತಂಡದ ನಾಯಕ ರೋವ್ಮನ್ ಪೊವೆಲ್ ಮತ್ತು ನಿಕೊಲಸ್ ಪೂರನ್ ಅವರು ಕಳೆದ ಪಂದ್ಯದಲ್ಲಿ ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದಿದ್ದರು. ಅಗ್ರಮಾಂಕದ ಬ್ಯಾಟರ್ ಕೈಲ್ ಮೇಯರ್ಸ್, ಚಾರ್ಲ್ಸ್, ಬ್ರೆಂಡನ್ ಕಿಂಗ್ ಮತ್ತು ಮಧ್ಯಮ ಕ್ರಮಾಂಕದಲ್ಲಿ ಶಿಮ್ರಾನ್ ಹೆಟ್ಮೆಯರ್ ಲಯಕ್ಕೆ ಮರಳಿದರೆ ತಂಡದ ಬಲ ಹೆಚ್ಚುವುದು ಖಚಿತ.

ಬೌಲಿಂಗ್ ವಿಭಾಗದಲ್ಲಿ ಅನುಭವಿ ಜೇಸನ್ ಹೋಲ್ಡರ್, ಒಬೆದ್ ಮೆಕಾಯ್ ಮತ್ತು ರೊಮಾರಿಯೊ ಶೆಫರ್ಡ್ ಅವರು ಭಾರತದ ಬ್ಯಾಟಿಂಗ್ ಪಡೆಗೆ ಮತ್ತೊಮ್ಮೆ ಕಠಿಣ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಭಾರತದ ಬೌಲರ್‌ಗಳಾದ ಅರ್ಷದೀಪ್ ಸಿಂಗ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಆದರೆ ಅರ್ಷದೀಪ್ ಕೊನೆಯ ಹಂತದ ಓವರ್‌ಗಳಲ್ಲಿ ವೈಡ್ ಎಸೆತಗಳನ್ನು ನಿಯಂತ್ರಿಸಿದರೆ ತಂಡಕ್ಕೆ ಮತ್ತಷ್ಟು ನೆರವು ಸಿಗಬಹುದು.

ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಡಿಡಿ ಸ್ಪೋರ್ಟ್ಸ್, ಜಿಯೊ ಸಿನಿಮಾ, ಫ್ಯಾನ್‌ಕೋಡ್


ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ

ಸಿಂಗಲ್ಸ್ ಫೈನಲ್‌ಗೆ ಪ್ರಣಯ್

ಸಿಡ್ನಿ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಎಚ್‌.ಎಸ್‌.ಪ್ರಣಯ್ ನೇರ ಆಟಗಳಿಂದ ಸ್ವದೇಶದ ಉದಯೋನ್ಮುಖ ಆಟಗಾರ ಪ್ರಿಯಾಂಶು ರಾಜಾವತ್ ಅವರನ್ನು ಸೋಲಿಸಿ ಆಸ್ಟ್ರೇಲಿಯಾ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ 31 ವರ್ಷದ ಪ್ರಣಯ್ 21-18, 21-12 ರಿಂದ 21 ವರ್ಷದ ರಾಜಾವತ್ ಅವರನ್ನು ಮಣಿಸಿದರು. ಪ್ರಬಲ ಮತ್ತು ಕರಾರುವಾಕ್ ಹೊಡೆತಗಳಿಂದ ಪ್ರಣಯ್ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. ಮಧ್ಯಪ್ರದೇಶದ ರಾಜಾವತ್ ಇದೇ ಮೊದಲ ಬಾರಿ ಸೂಪರ್ 500 ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿದ್ದರು.

‘ಗೆಲುವು ತೃಪ್ತಿ ತಂದಿದೆ. ಸತತವಾಗಿ ವಿಶ್ವದ ಟಾಪ್ 10 ಆಟಗಾರರ ವಿರುದ್ಧ ಆಡುವುದು ಮತ್ತು ಅವರನ್ನು ಸೋಲಿಸುವುದು ತುಂಬ ತ್ರಾಸದಾಯಕ. ಇತ್ತೀಚಿನ ದಿನಗಳಲ್ಲಿ 30 ವರ್ಷದ ಮತ್ತು 40ರ ಸಮೀಪ ಇರುವ ಆಟಗಾರರೂ ತುಂಬಾ ಹೋರಾಟ ನೀಡುತ್ತಾರೆ’ ಎಂದು ಪ್ರಣಯ್ ಪಂದ್ಯದ ನಂತರ ಪ್ರತಿಕ್ರಿಯಿಸಿದರು.



ಷಟಲ್ ಹಿಂತಿರುಗಿಸುತ್ತಿರುವ ಭಾರತದ ಪ್ರಣಯ್

ವಿಶ್ವ ಕ್ರಮಾಂಕದಲ್ಲಿ 9ನೇ ಸ್ಥಾನದಲ್ಲಿರುವ ಪ್ರಣಯ್, ಭಾನುವಾರ ನಡೆಯುವ ಫೈನಲ್‌ನಲ್ಲಿ ಚೀನಾದ ವೆಂಗ್ ಹಾಂಗ್ ಯಾಂಗ್ ಅವರನ್ನು ಎದುರಿಸಲಿದ್ದಾರೆ. ವೆಂಗ್ ಇನ್ನೊಂದು ಸೆಮಿಫೈನಲ್‌ನಲ್ಲಿ ಮಲೇಷ್ಯಾದ ಲೀ ಝಿಯಾ ಜಿಯಾ ಅವರನ್ನು 21-19, 13-21, 21-13 ರಿಂದ ಸೋಲಿಸಿದರು.

ಮಹಿಳಾ ವಿಶ್ವಕಪ್ ಫುಟ್‌ಬಾಲ್: ಹೊರಬಿದ್ದ ನಾರ್ವೆ

ಕ್ವಾರ್ಟರ್‌ಗೆ ಜಪಾನ್, ಸ್ಪೇನ್

ವೆಲಿಂಗ್ಟನ್ (ಎಎಫ್‌ಪಿ): ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಜಪಾನ್ ತಂಡದ ಅಜೇಯ ಓಟ ಮುಂದುವರಿದಿದ್ದು, ಕ್ವಾರ್ಟರ್ ಫೈನಲ್ ಪ್ರವೇಶಿಸಿದೆ. ಸ್ಪೇನ್ ಮಹಿಳೆಯರೂ ಎಂಟರಘಟ್ಟದಲ್ಲಿ ಸ್ಥಾನ ಪಡೆದರು.

ಶನಿವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್ 3-1 ಗೋಲುಗಳಿಂದ ನಾರ್ವೆ ತಂಡವನ್ನು ಮಣಿಸಿದರೆ, ಸ್ಪೇನ್ 5-1 ರಿಂದ ಸ್ವಿಟ್ಜರ್ಲೆಂಡ್ ವಿರುದ್ಧ ಸುಲಭ ಜಯ ಸಾಧಿಸಿತು. ವಿಶ್ವಕಪ್ ಇತಿಹಾಸದಲ್ಲಿ ಸ್ಪೇನ್, ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದು ಇದೇ ಮೊದಲು.

2011ರ ಚಾಂಪಿಯನ್ ಜಪಾನ್ ತಂಡ, ಎಂಟರಘಟ್ಟದಲ್ಲಿ ಕಳೆದ ಬಾರಿಯ ಪ್ರಶಸ್ತಿ ವಿಜೇತ ಅಮೆರಿಕ ಅಥವಾ ಸ್ವೀಡನ್ ತಂಡವನ್ನು ಎದುರಿಸಲಿದೆ.

15ನೇ ನಿಮಿಷದಲ್ಲಿ ಎದುರಾಳಿ ‘ಉಡುಗೊರೆ’ ಗೋಲು ನೀಡಿದ ನಾರ್ವೆ ತಂಡ, 20ನೇ ನಿಮಿಷದಲ್ಲಿ ಗ್ಯುರೊ ರೀಟನ್ ಅವರ ಗೋಲಿನ ನೆರವಿನಿಂದ ಪಂದ್ಯವನ್ನು ಸಮಸ್ಥಿತಿಗೆ ತಂದಿತು. ವಿರಾಮದವರೆಗೂ ಹೆಚ್ಚಿನ ಗೋಲುಗಳು ಬರಲಿಲ್ಲ.

ಆದರೆ ಎರಡನೇ ಅವಧಿಯಲ್ಲಿ ರಿಸಾ ಶಿಮಿಜು (50ನೇ ನಿ.) ಮತ್ತು ಹಿನಾಟ ಮಿಯಜಾವ (81ನೇ ನಿ.) ಅವರು ಗೋಲು ಗಳಿಸಿ ಜಪಾನ್ ತಂಡದ ಗೆಲುವಿಗೆ ಕಾರಣರಾದರು.

ಕೊನೆಯ ನಿಮಿಷಗಳಲ್ಲಿ ನಾರ್ವೆ ತಂಡ ನಡೆಸಿದ ಆಕ್ರಮಣವನ್ನು ಜಪಾನ್ ಗೋಲ್‌ಕೀಪರ್ ಅಯಾಕ ಯಮಶಿಟ ಹಾಗೂ ಡಿಫೆಂಡರ್‌ಗಳು ಸಮರ್ಥವಾಗಿ ತಡೆಯೊಡ್ಡಿದರು. ಇದುವರೆಗಿನ ಪಂದ್ಯಗಳಲ್ಲಿ ನಾರ್ವೆ ಆಟಗಾರ್ತಿ ಹೆಡರ್‌ಅನ್ನು ಯಮಶಿಟ ಅಮೋಘವಾಗಿ ತಡೆದರು.



ಸ್ವಿಟ್ಜರ್ಲೆಂಡ್ ವಿರುದ್ಧದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಗೋಲು ಗಳಿಸಿದ ಸ್ಪೇನ್ ಆಟಗಾರ್ತಿಯರ ಸಂಭ್ರಮ –ಎಎಫ್‌ಪಿ ಚಿತ್ರ

ಆಕ್ಲೆಂಡ್‌ನ ಈಡನ್ ಪಾರ್ಕ್ ಕ್ರೀಡಾಂಗಣದಲ್ಲಿ 43 ಸಾವಿರಕ್ಕೂ ಅಧಿಕ ಪ್ರೇಕ್ಷಕರ ಮುಂದೆ ನಡೆದ ಪಂದ್ಯದಲ್ಲಿ ಸ್ಪೇನ್‌ಗೆ ಸವಾಲು ಒಡ್ಡಲು ಸ್ವಿಟ್ಜರ್ಲೆಂಡ್ ವಿಫಲವಾಯಿತು. ಐತಾನಾ ಬೊನ್ಮತಿ (5 ಮತ್ತು 36ನೇ ನಿ.) ಅವರು ಎರಡು ಗೋಲುಗಳನ್ನು ಗಳಿಸಿ ಗಮನ ಸೆಳೆದರು. ಇತರ ಗೋಲುಗಳನ್ನು ಅಲ್ಬಾ ರೆಡೊಂಡೊ (17), ಲೈಲಾ ಕಾಡಿನಾ (45) ಮತ್ತು ಜೆನಿಫರ್ ಹೆರ್ಮೊಸೊ (70) ಅವರು ತಂದಿತ್ತರು.

ಸ್ಪೇನ್ ತಂಡ ಎಂಟರಘಟ್ಟದಲ್ಲಿ ನೆದರ್ಲೆಂಡ್ ಅಥವಾ ದಕ್ಷಿಣ ಆಫ್ರಿಕಾ ತಂಡದ ಸವಾಲು ಎದುರಿಸಲಿದೆ.

ಭಾನುವಾರ ನಡೆಯಲಿರುವ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಸ್ವೀಡನ್–ಅಮೆರಿಕ ಮತ್ತು ನೆದರ್ಲೆಂಡ್–ದಕ್ಷಿಣ ಆಫ್ರಿಕಾ ತಂಡಗಳು ಹಣಾಹಣಿ ನಡೆಸಲಿವೆ.

ಸಂಕ್ಷಿಪ್ತ ಸುದ್ದಿ

ಪಾಕ್ ಮುಖ್ಯ ಆಯ್ಕೆಗಾರ ಸ್ಥಾನಕ್ಕೆ ಇಂಜಮಾಮ್

ಕರಾಚಿ (ಪಿಟಿಐ): ಪಾಕ್ ತಂಡದ ಮಾಜಿ ನಾಯಕ ಇಂಜಮಾಮ್–ಉಲ್–ಹಕ್ ಅವರು ಪಾಕಿಸ್ತಾನ ತಂಡದ ಮುಖ್ಯ ಆಯ್ಕೆಗಾರನಾಗಿ ನೇಮಕಗೊಳ್ಳುವ ಸಾಧ್ಯತೆ ಇದೆ. ಕ್ರಿಕೆಟ್ ನಿರ್ದೇಶಕ ಮಿಕಿ ಆರ್ಥರ್ ಮತ್ತು ಹೆಡ್ ಕೋಚ್ ಗ್ರ್ಯಾಂಟ್ ಬ್ರಾಡ್‌ಬರ್ನ್ ಅವರು ರಾಷ್ಟ್ರೀಯ ಆಯ್ಕೆ ಸಮಿತಿಯ ಭಾಗವಾಗಿ ಮುಂದುವರಿಯುವವರೇ ಎಂಬುದು ಮುಂದಿನ ವಾರ ಗೊತ್ತಾಗಲಿದೆ.

‘ಇಂಜಮಾಮ್ ಅವರು ಆಯ್ಕೆ ಸಮಿತಿಯಲ್ಲಿ ಮತ್ತೊಮ್ಮೆ ವೇತನ ಸಹಿತ ಮುಖ್ಯ ಆಯ್ಕೆಗಾರರಾಗಲು ಒಪ್ಪಿಕೊಂಡಿದ್ದಾರೆ’ ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಮೂಲಗಳು ಖಚಿತಪಡಿಸಿವೆ. ಈ ಹಿಂದೆ 2016 ರಿಂದ 2019ರವರೆಗೆ ಅವರು ಈ ಹುದ್ದೆಯಲ್ಲಿದ್ದರು.

ಕ್ರಿಕೆಟ್ ಮಂಡಳಿ (ಪಿಸಿಬಿ) ಗಂಭೀರ ಚಿಂತನೆ ನಡೆಸುತ್ತಿದೆ.

ಪಿಸಿಬಿ ಅಧ್ಯಕ್ಷ ಝಕಾ ಅಶ್ರಫ್ ಅವರು ತಂಡದ ನಾಯಕ ಬಾಬರ್ ಆಜಂ ಜೊತೆ ಚರ್ಚಿಸಿದ ನಂತರವಷ್ಟೇ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಪಿಸಿಬಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಜಂ, ಈಗ ಲಂಕಾ ಪ್ರೀಮಿಯರ್ ಲೀಗ್‌ನಲ್ಲಿ ಕೊಲಂಬೊ ಸ್ಟ್ರೈಕರ್ಸ್ ಪರ ಆಡುತ್ತಿದ್ದಾರೆ.

‘ಆಟಗಾರರ ಸಂಗಡ ಮಾತುಕತೆ ಸ್ನೇಹ ಇದ್ದರೆ ಅನುಕೂಲವಾಗುತ್ತದೆ ಎಂಬುದು ಝಕಾ ಅವರ ದೃಢ ನಂಬಿಕೆ. ವಿಶೇಷವಾಗಿ, ಒಳ್ಳೆಯ ಆಟ ಬರದಿರುವ ಸಂದರ್ಭದಲ್ಲಿ ಅಥವಾ ಭಾರತ ಪ್ರವಾಸದ ವೇಳೆ ಅನುಭವಿಸುವ ಬಾಹ್ಯ ಒತ್ತಡಗಳನ್ನು ನಿವಾರಿಸಲು ಇಂಥ ತಜ್ಞರ ಅಗತ್ಯವಿದೆ ಎಂಬ ಯೋಜನೆ ಅವರದು’ ಪಿಸಿಬಿ ಅಧಿಕಾರಿ ತಿಳಿಸಿದರು.

ವಿಶ್ವಕಪ್: ಪಾಕ್ ತಂಡದ ಜತೆ ಮನಃಶಾಸ್ತ್ರಜ್ಞ?

ಕರಾಚಿ (ಪಿಟಿಐ): ಅತಿ ಮಹತ್ವದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವಾಗ ಇರುವ ಒತ್ತಡವನ್ನು ನಿಭಾಯಿಸಲು, ಭಾರತಕ್ಕೆ ತೆರಳುವ ಪಾಕ್ ತಂಡದ ಜೊತೆ ಮನಃಶಾಸ್ತ್ರಜ್ಞರೊಬ್ಬರನ್ನು ಕಳುಹಿಸುವ ಬಗ್ಗೆ ಪಾಕಿಸ್ತಾನ

ಜೆಸ್ವಿನ್‌ಗೆ ಚಿನ್ನ


ನವದೆಹಲಿ (ಪಿಟಿಐ): ಲಾಂಗ್‌ಜಂಪ್‌ನಲ್ಲಿ ಈ ಋತುವಿನ ಸರ್ವಶ್ರೇಷ್ಠ ಪ್ರದರ್ಶನ ನೀಡಿರುವ ಜೆಸ್ವಿನ್ ಅಲ್ಡ್ರಿನ್, ಸ್ವಿಟ್ಜರ್ಲೆಂಡ್‌ನ ಬರ್ನ್‌ನಲ್ಲಿ ನಡೆದ ಸಿಟಿಯಸ್ ಅಥ್ಲೆಟಿಕ್ ಕೂಟದಲ್ಲಿ ಶನಿವಾರ 8.22 ಮೀ. ದೂರ ಜಿಗಿದು ಚಿನ್ನ ಗೆದ್ದುಕೊಂಡರು.

ಇದು 21 ವರ್ಷದ ಭಾರತೀಯನ ನಾಲ್ಕನೇ ಜೀವನಶ್ರೇಷ್ಠ ಸಾಧನೆ. ಬಳ್ಳಾರಿಯಲ್ಲಿ ಮಾರ್ಚ್ 2ರಂದು 8.42 ಮೀ. ದೂರ ಜಿಗಿದಿದ್ದರು. ಮೇ ತಿಂಗಳಲ್ಲಿ ಗ್ರೀಸ್‌ನಲ್ಲಿ ನಡೆದ ಕೂಟದಲ್ಲಿ ಎರಡು ಬಾರಿ 8 ಪ್ಲಸ್ ಮೀ. ಸಾಧನೆ ಮಾಡಿದ್ದರು.

ಕಮಿನ್ಸ್ ಅಲಭ್ಯ ಸಾಧ್ಯತೆ

ಸಿಡ್ನಿ: ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರಿಗೆ ಮಣಿಕಟ್ಟಿನ ಮೂಳೆ ಮುರಿದಿರುವ ಶಂಕೆಯಿದ್ದು, ಅವರು ಭಾರತ ವಿರುದ್ಧ ಮುಂದಿನ ತಿಂಗಳು ಮೂರು ಪಂದ್ಯಗಳ ಏಕದಿನ ಸರಣಿಗೆ ಅಲಭ್ಯರಾಗುವ ಸಾಧ್ಯತೆಯಿದೆ.

ಅವರು ಆ್ಯಷಸ್ ಸರಣಿಯ ಅಂತಿಮ (ಐದನೇ) ಟೆಸ್ಟ್‌ನಲ್ಲಿ ಎಡ ಮಣಿಕಟ್ಟಿನ ನೋವಿನ ನಡುವೆಯೇ ಆಡಿದ್ದರು. ಕ್ರಿಕೆಟ್ ಆಸ್ಟ್ರೇಲಿಯಾ ಈ ಕುರಿತ ವಿವರಗಳನ್ನು ಬಿಡುಗಡೆ ಮಾಡಿಲ್ಲ. ಭಾರತ ಪ್ರವಾಸ ಮಾಡಲಿರುವ ಆಸ್ಟ್ರೇಲಿಯಾ ತಂಡ ಏಕದಿನ



ಪ್ಯಾಟ್ ಕಮಿನ್ಸ್

ಸರಣಿಯ ಮೊದಲ ಪಂದ್ಯ ಸೆಪ್ಟೆಂಬರ್ 22 ರಂದು ಮೊಹಾಲಿಯಲ್ಲಿ ಆಡಲಿದೆ.

ಮೂಳೆ ಮುರಿತದ ಸಾಧ್ಯತೆಯನ್ನು ವೈದ್ಯಕೀಯ ಸಿಬ್ಬಂದಿ ತಳ್ಳಿಹಾಕಿಲ್ಲ ಎಂದು ಈ ವಿಷಯದ ಬಗ್ಗೆ ಮಾಹಿತಿ ಇರುವ ಮೂಲಗಳು ತಿಳಿಸಿವೆ ಎಂದು ‘ಸಿಡ್ನಿ ಮಾರ್ನಿಂಗ್ ಹೆರಾಲ್ಡ್’ ವರದಿ ಮಾಡಿದೆ.

ಹೈದರಾಬಾದ್ ರೇಸ್

ಶೀ ಕ್ಯಾನ್ ಗೆಲ್ಲುವ ನಿರೀಕ್ಷೆ

ಕೆ.ಮಹಿಪತಿ ರಾವ್ ಮೆಮೋರಿಯಲ್ ಗೋಲ್ಡನ್ ಜುವೆನೈಲ್ ಮಿಲಿಯನ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶೀ ಕ್ಯಾನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1:25ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಶೀ ಮೈ ಸ್ಟಾರ್ 2, ಥ್ರಾಂಕ್ಸ್ 1, ವೈಂಡ್‌ಅಪ್ 4
2ನೇ ರೇಸ್: ಇಂಡಿಯನ್ ಸ್ಪಿರಿಟ್ 4, ಒಲ್ಡ್ ದಿ ಬ್ರೇವ್ 6, ಶಾಡೋ ಫ್ಯಾಕ್ಸ್ 8
3ನೇ ರೇಸ್: ದಿ ವಿಂಡ್ 7, ಡ್ರೀಮ್ ಸ್ಟೇಷನ್ 8, ಮಿಸ್ ಮಾರ್ವೆಲ್ 3
4ನೇ ರೇಸ್: ಮಿರಾಕಲ್ ಮೆಲಡಿ 3, ಸ್ಟೋಲ್ 6, ಎಕ್ಸ್‌ಕ್ಲೂಸಿವ್ ಸ್ಟಾರ್ 1
5ನೇ ರೇಸ್: ಕಮಾಂಡಿಂಗ್ ನೈಟ್ 3, ಟೆಂಪ್ಟೇಷನ್ 2, ಎಸ್‌.ಆರ್‌.ಎ ಫಾಂಟಸಿ 4
6ನೇ ರೇಸ್: ಇಟ್ಸ್‌ಆಲ್ 4, ರಾಯಲ್ ಸ್ಟ್ರಾಂಗ್ 2, ಗೋಲ್ಡನ್ ಪ್ರೋಜ್‌ 3
7ನೇ ರೇಸ್: ಶೀ ಕ್ಯಾನ್ 5, ಲಾಂಗ್ ಲೀಡ್ 3, ಸ್ಪೆಲ್ಲಿಂಗ್ ಬಾರ್ 2
8ನೇ ರೇಸ್: ಸೊಪ್ರಾನಾ 3, ಡೂ ಎ ಡೀರ್ 2, ಡಾರಿ ಡಾರ್ಲಿಂಗ್ 9

ಉತ್ತಮ ಬೆಟ್: ಇಂಡಿಯನ್ ಸ್ಪಿರಿಟ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಡಬ್ಲ್ಯುಎಫ್‌ಐ: ಸಂಜಯ್–ಅನಿತಾ ನೇರ ಪೈಪೋಟಿ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್‌ನ (ಡಬ್ಲ್ಯುಎಫ್‌ಐ) ಅಧ್ಯಕ್ಷ ಸ್ಥಾನಕ್ಕೆ ಉತ್ತರ ಪ್ರದೇಶ ಕುಸ್ತಿ ಸಂಸ್ಥೆಯ ಉಪಾಧ್ಯಕ್ಷ ಸಂಜಯ್ ಕುಮಾರ್ ಸಿಂಗ್ ಮತ್ತು 2010ರ ಕಾಮನ್‌ವೆಲ್ತ್ ಕೂಟದ ಚಿನ್ನದ ಪದಕ ವಿಜೇತೆ ಕುಸ್ತಿಪಟು ಅನಿತಾ ಶೆರಾಣ್ ನಡುವೆ ನೇರ ಪೈಪೋಟಿ ಏರ್ಪಟ್ಟಿದೆ.

ಕಣದಲ್ಲಿದ್ದ ಇತರ ಇಬ್ಬರು ಅಭ್ಯರ್ಥಿಗಳಾದ ದುಷ್ಯಂತ್ ಶರ್ಮಾ ಮತ್ತು ಜೈಪ್ರಕಾಶ್ ಅವರು ಶನಿವಾರ ತಮ್ಮ ನಾಮಪತ್ರಗಳನ್ನು ವಾಪಸ್ ಪಡೆದರು. ಡಬ್ಲ್ಯುಎಫ್‌ಐ ಚುನಾವಣೆ ಆ.12 ರಂದು ನಡೆಯಲಿದೆ.

ಸಂಜಯ್ ಕುಮಾರ್ ಅವರು ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಆಪ್ತರಾಗಿದ್ದಾರೆ.

ರೇಸ್‌ವಾಕ್: ಭಾರತ ಮಹಿಳಾ ತಂಡಕ್ಕೆ ಕಂಚು

ಚೆಂಗ್ಡು (ಚೀನಾ), (ಪಿಟಿಐ): ಭಾರತ ತಂಡ, ಇಲ್ಲಿ ನಡೆಯುತ್ತಿರುವ ವಿಶ್ವ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ 20 ಕಿ.ಮೀ ಮಹಿಳೆಯರ ರೇಸ್ ವಾಕ್ ಸ್ಪರ್ಧೆಯಲ್ಲಿ ಶನಿವಾರ ಕಂಚಿನ ಪದಕ ಗೆದ್ದುಕೊಂಡಿದೆ.

ಪೂಜಾ ಕುಮಾವತ್, ನಿಕಿತಾ ಲಂಬಾ, ಮಾನಸಿ ನೇಗಿ ಮತ್ತು ಪ್ರಿಯಾಂಕಾ ಅವರನ್ನೊಳಗೊಂಡ ತಂಡ ಒಟ್ಟು 5 ಗಂಟೆ, 12 ನಿಮಿಷ 13 ಸೆಕೆಂಡು ತೆಗೆದುಕೊಂಡಿತು. ಚೀನಾ (4:52:02) ಮತ್ತು ಸ್ಲೊವಾಕಿಯಾ (5:05:36) ತಂಡಗಳು ಕ್ರಮವಾಗಿ ಸ್ವರ್ಣ ಮತ್ತು ಬೆಳ್ಳಿಯ ಪದಕ ಪಡೆದವು.

ಭಾರತ ಮತ್ತು ಚೀನಾ ತಂಡಗಳು ನಾಲ್ಕು ಮಂದಿ ಅಥ್ಲೀಟುಗಳನ್ನು ಕಣಕ್ಕಿಳಿಸಿದ್ದವು. ಉತ್ತಮ ಅವಧಿಯಲ್ಲಿ ಈ ದೂರ ಪೂರೈಸಿದ ಮೂವರ ಕಾಲಾವಧಿ ಲೆಕ್ಕಹಾಕಿ ಅಂತಿಮ ಸಮಯ ನಿರ್ಣಯಿಸಲಾಯಿತು. ಭಾರತದ ಅಥ್ಲೀಟುಗಳ ಪೈಕಿ ಪ್ರಿಯಾಂಕಾ 1ಗಂಟೆ 40ನಿಮಿಷ 39 ಸೆಕೆಂಡುಗಳಲ್ಲಿ ದೂರ ಕ್ರಮಿಸಿದ್ದರು.

ತಂಡಗಳ ಪರ್ಸ್ ಮೊತ್ತದಲ್ಲಿ ಹೆಚ್ಚಳ; ಆಟಗಾರರಿಗೆ ಕನಿಷ್ಠ ಪ್ರೋತ್ಸಾಹಧನ

ಜಿಪಿಬಿಎಲ್: ಹರಾಜಿನಲ್ಲಿ 150 ಆಟಗಾರರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾನ್ಸ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ ಎರಡನೇ ಆವೃತ್ತಿಯಲ್ಲಿ ಆಟಗಾರರಿಗೆ ಹೆಚ್ಚು ಹಣ ದೊರೆಯುವಂತಾಗಲು ಬಿಡ್ ಪ್ರಕ್ರಿಯೆಯಲ್ಲಿ ಎರಡು ಹೊಸ ನಿಯಮ ಜಾರಿಗೊಳಿಸಲಾಗಿದೆ.

ಮೊದಲನೆಯದಾಗಿ; ಹೋದ ವರ್ಷ ನಡೆದಿದ್ದ ಮೊದಲ ಆವೃತ್ತಿಗಿಂತಲೂ ತಂಡಗಳ ಪರ್ಸ್ ಮೊತ್ತವನ್ನು ₹ 12 ಲಕ್ಷದಿಂದ 35 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಎರಡನೆಯದಾಗಿ; ಬಿಡ್ ಪ್ರಕ್ರಿಯೆಯಲ್ಲಿ ನೋಂದಾಯಿತರಾಗಿರುವ 150 ಆಟಗಾರರಿಗೂ ತಲಾ ₹ 25 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತದೆ.

ಶನಿವಾರ ನಡೆದ ಟೂರ್ನಿಯ ಟ್ರೋಫಿ ಅನಾವರಣ ಕಾರ್ಯಕ್ರಮದಲ್ಲಿ ಜಿಪಿಬಿಎಲ್ ಕಮಿಷನರ್ ಮತ್ತು ಬಿಟ್‌ಸ್ಪೋರ್ಟ್ಸ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ರೆಡ್ಡಿ ಈ ವಿಷಯ ತಿಳಿಸಿದರು. ಬ್ಯಾಡ್ಮಿಂಟನ್



ಬ್ಯಾಡ್ಮಿಂಟನ್ ಕ್ರೀಡೆಯ ದಿಗ್ಗಜ ಪ್ರಕಾಶ್ ಪಡುಕೋಣೆ ಅವರು ಬೆಂಗಳೂರಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಗ್ರಾನ್ಸ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ ಟ್ರೋಫಿ ಅನಾವರಣಗೊಳಿಸಿದರು. ರಾಷ್ಟ್ರೀಯ ಮಾಜಿ ಚಾಂಪಿಯನ್ ಅರವಿಂದ್ ಭಟ್ (ಎಡ) ಹಾಗೂ ಲೀಗ್ ಕಮಿಷನರ್ ಪ್ರಶಾಂತ್ ರೆಡ್ಡಿ ಇದ್ದಾರೆ

ದಿಗ್ಗಜ ಪ್ರಕಾಶ್ ಪಡುಕೋಣೆ ಅವರು ಟ್ರೋಫಿಯನ್ನು ಅನಾವರಣಗೊಳಿಸಿ ಆಟಗಾರರು ಮತ್ತು ಆಯೋಜಕರಿಗೆ ಶುಭ ಹಾರೈಸಿದರು.

‘ಹೋದ ವರ್ಷ ಉತ್ತಮ ಸ್ಪಂದನೆ ಗಳಿಸಿದ್ದ ಟೂರ್ನಿಯನ್ನು ಈ ಬಾರಿ ರಾಷ್ಟ್ರಮಟ್ಟಕ್ಕೆ ಕೊಂಡೊಯ್ಯಲು ಉತ್ಸುಕರಾಗಿದ್ದೇವೆ. ಅದಕ್ಕಾಗಿ ಏಳು ಆಟಗಾರರ ಉತ್ತೇಜನಕ್ಕಾಗಿ ಬಿಡ್ ಪ್ರಕ್ರಿಯೆಯಲ್ಲಿರುವ ಎಲ್ಲ ಆಟಗಾರರಿಗೂ ಕನಿಷ್ಠ ಮೊತ್ತದ ಪ್ರೋತ್ಸಾಹಧನ ನಿಗದಿಗೊಳಿಸಲಾಗಿದೆ. ಇದರಲ್ಲಿ 30 ಮಂದಿ ಅಂತರರಾಷ್ಟ್ರೀಯ ಆಟಗಾರರು ಇದ್ದಾರೆ. ಇಂತಹ ಯೋಜನೆ ತಂದಿರುವ ದೇಶದ ಮೊದಲ ಲೀಗ್ ಇದಾಗಿರುವುದು ಹೆಮ್ಮೆಯ ವಿಷಯ’ ಎಂದು ಪ್ರಶಾಂತ್ ರೆಡ್ಡಿ ತಿಳಿಸಿದರು.

ಆಯೋಜಕರು ಪ್ರಶಸ್ತಿ ಮೊತ್ತವನ್ನು ₹ 1 ಕೋಟಿಯಿಂದ ₹ 60 ಲಕ್ಷಕ್ಕೆ ಕಡಿತಗೊಳಿಸಿ, ತಂಡಗಳ ಪರ್ಸ್ ಮೊತ್ತವನ್ನು ಹೆಚ್ಚಿಸಲು ಅವಕಾಶ ನೀಡಲಾಗಿದೆ. ಪ್ರತಿ ತಂಡದ ಪರ್ಸ್ ಮೊತ್ತವು ಹೋದ ವರ್ಷಕ್ಕಿಂತ ₹ 23 ಲಕ್ಷಗಳ ಏರಿಕೆ ಕಂಡಿದೆ.

ಬೆಂಗಳೂರು, ದೆಹಲಿ, ಚೆನ್ನೈ, ಹೈದರಾಬಾದ್, ಲಖನೌ, ಪುಣೆ, ಪಾರ್ಟಿ ಈಸ್ಟ್, ಮುಂಬೈ, ರಾಯಪುರ ಮತ್ತು ಕೊಚ್ಚಿ ತಂಡಗಳು ಕಣಕ್ಕಿಳಿಯಲಿವೆ.

ಮೊದಲ ಆವೃತ್ತಿಯಲ್ಲಿ ಒಲಿಂಪಿಯನ್ ಆಟಗಾರರಾದ ಪಿ.ವಿ. ಸಿಂಧು, ಕೆ.ಶ್ರೀಕಾಂತ್, ಅಶ್ವಿನಿ ಪೊನ್ನಪ್ಪ, ಸಾಯಿಪ್ರಣೀತ್, ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ, ಚಿರಾಗ್ ಶೆಟ್ಟಿ, ಎಚ್‌.ಎಸ್. ಪ್ರಣಯ್ ಮತ್ತು ಜ್ವಾಲಾ ಗುಟ್ಟಾ ತಂಡಗಳ ಐಕಾನ್ ಆಗಿದ್ದರು.

ಏಷ್ಯಾ ಕಪ್ ಹಾಕಿ: ಭಾರತಕ್ಕೆ ಮಲೇಷ್ಯಾ ತಂಡದ ಸವಾಲು

ಚೆನ್ನೈ (ಪಿಟಿಐ): ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಭಾನುವಾರ ಮಲೇಷ್ಯಾ ತಂಡವನ್ನು ಎದುರಿಸಲಿರುವ ಭಾರತ ತಂಡ, ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲಾಗಿ ಪರಿವರ್ತಿಸುವತ್ತ ಚಿತ್ತ ಹರಿಸಬೇಕಿದೆ.

ಮೊದಲ ಪಂದ್ಯದಲ್ಲಿ ಚೀನಾ ಎದುರು 7–2 ಗೋಲುಗಳ ಭರ್ಜರಿ ಗೆಲುವು ಸಾಧಿಸಿದ್ದ ಭಾರತ, ಶುಕ್ರವಾರ ನಡೆದ ಎರಡನೇ ಪಂದ್ಯದಲ್ಲಿ ಜಪಾನ್ ವಿರುದ್ಧ 1–1 ಗೋಲುಗಳ ಡ್ರಾಕ್ಕೆ ತೃಪ್ತಿಪಟ್ಟುಕೊಂಡಿತ್ತು. ಈ ಪಂದ್ಯದಲ್ಲಿ ಆತಿಥೇಯ ತಂಡಕ್ಕೆ 15 ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದ್ದವು, ಒಂದನ್ನು ಮಾತ್ರ ಗೋಲಾಗಿ ಪರಿವರ್ತಿಸಿತ್ತು.

ಚೀನಾ ವಿರುದ್ಧ ಆರು ಗೋಲುಗಳನ್ನು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗಳಿಸಿದ್ದ ಹರ್ಮನ್‌ಪ್ರೀತ್ ಸಿಂಗ್ ಬಳಗ, ಜಪಾನ್ ಎದುರು ತಡಬಡಾಯಿಸಿತ್ತು. ಇದು ಮುಖ್ಯ ಕೋಚ್ ಕ್ರೆಗ್ ಫುಲ್ಟನ್ ಅವರ ಕಳವಳಕ್ಕೂ ಕಾರಣವಾಗಿದೆ.

‘ಪೆನಾಲ್ಟಿ ಕಾರ್ನರ್ ಸೇರಿದಂತೆ ನಿಮಗೆ ಲಭಿಸುವ ಅವಕಾಶಗಳಲ್ಲಿ ಗೋಲು ಗಳಿಸಬೇಕಿದ್ದರೆ, ಪ್ರತಿಯೊಬ್ಬ ಕೋಚ್‌ಗೂ ಕಳವಳ ಉಂಟಾಗುವುದು ಸಹಜ’ ಎಂದು ಫುಲ್ಟನ್ ಹೇಳಿದ್ದಾರೆ. ಅಗ್ರಸ್ಥಾನದಲ್ಲಿ ಭಾನುವಾರದ ಪಂದ್ಯದಲ್ಲಿ ಎಚ್ಚರಿಕೆಯಿಂದ ಆಡುವ ಸವಾಲು ಭಾರತದ ಮುಂದಿದೆ.

ಮೊದಲ ಎರಡು ಪಂದ್ಯಗಳಲ್ಲಿ ಪಾಕಿಸ್ತಾನ (3–1) ಮತ್ತು ಚೀನಾ (5–1) ತಂಡಗಳ ವಿರುದ್ಧ ದೊರೆತ ಗೆಲುವು ಮಲೇಷ್ಯಾ ತಂಡದ ಆಟಗಾರರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ.

ಇಂದಿನ ಪಂದ್ಯಗಳು: ಚೀನಾ–ಕೊರಿಯಾ (ಆರಂಭ: ಸಂಜೆ 4), ಪಾಕಿಸ್ತಾನ–ಜಪಾನ್ (ಸಂಜೆ 6.15), ಭಾರತ–ಮಲೇಷ್ಯಾ (ರಾತ್ರಿ 8.30)

ಪಾಕ್– ಇಂಗ್ಲೆಂಡ್ ಪಂದ್ಯ ಮರುನಿಗದಿಗೆ ಮನವಿ

ಕೋಲ್ಕತ್ತ (ಪಿಟಿಐ): ನವೆಂಬರ್ 12ರಂದು ಇಲ್ಲಿ ಪಾಕಿಸ್ತಾನ– ಇಂಗ್ಲೆಂಡ್ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯ ನಿಗದಿಯಾಗಿದೆ. ಅಂದೇ ನಗರದಲ್ಲಿ ಕಾಳಿ ಪೂಜೆಯೂ ನಡೆಯಲಿದ್ದು ಭದ್ರತಾ ಸಮಸ್ಯೆ ಎದುರಾಗುವ ಸಂಭವದ ಕಾರಣ ಈ ಪಂದ್ಯ ಮುಂದೂಡುವಂತೆ ಬಂಗಾಳ ಕ್ರಿಕೆಟ್ ಸಂಸ್ಥೆ ಶನಿವಾರ ಐಸಿಸಿ ತಂಡಕ್ಕೆ ಮನವಿ ಮಾಡಿದೆ.

ಬಿಸಿಸಿಐ ಮತ್ತು ಐಸಿಸಿ ಮತ್ತೊಂದು ದಿನಾಂಕ ಬದಲಾಯಿಸಿದರೆ, ಪಾಕಿಸ್ತಾನ ಒಳಗೊಳ್ಳುವ ಮೂರನೇ ಪಂದ್ಯದ ದಿನಾಂಕ ಬದಲಾವಣೆ ಆಗಲಿದೆ. ಇತ್ತೀಚೆಗಷ್ಟೇ ಭಾರತ– ಪಾಕಿಸ್ತಾನ (ಅಹಮದಾಬಾದ್) ಪಂದ್ಯವನ್ನು ಅ. 15ರ ಬದಲು 14ಕ್ಕೆ ಮರುನಿಗದಿ ಮಾಡಲಾಗಿತ್ತು. ಹಾಗೆಯೇ ಶ್ರೀಲಂಕಾ–ಪಾಕಿಸ್ತಾನ ಪಂದ್ಯವನ್ನು ಅ.12ರ ಬದಲು ಈಗ ಅ. 10ರಂದು ಆಡಿಸಲು ನಿರ್ಧರಿಸಲಾಗಿತ್ತು.



ಆಕರ್ಷಕ OFFERS ಮೇಳ
Upto 100%* CASHBACK
ಪೂರ್ವಿಕಾ
BUY ABOVE ₹5,000 PARTICIPATE IN FEEDBACK CONTEST &
GET A CHANCE TO WIN UPTO 100% CASHBACK
AAKARSHAKA DEALS
BUY ANY PRODUCT BRAND HEADPHONE ₹49* ONLY
BUY SMARTPHONE BETWEEN ₹10,000 TO ₹20,000 WIRELESS EARPHONE ₹1,499 ₹499* ONLY
BUY SMARTPHONE BETWEEN ₹21,000 TO ₹30,000 CALLING SMART WATCH ₹5,999 ₹999* ONLY
BUY SMARTPHONE ABOVE ₹30,000 NOISE CALLING SMART WATCH ₹4,999 ₹1499* ONLY
FREE ONE TIME SCREEN REPLACEMENT
BUY SMARTPHONE BELOW ₹10,000 EARBUDS ₹1,499 ₹200* Only
UPTO 10% INSTANT DISCOUNT
HDFC BANK YES BANK FEDERAL BANK
Bank of Baroda one card
₹1* DOWN PAYMENT
UPTO ₹10,000 EXCHANGE BONUS
UPTO ₹5,000 CASHBACK
Upto 100% CASHBACK CONTEST WINNER
SAMSUNG
Galaxy Z Fold5 | Z Flip5
Pre-book now and get Galaxy Z Flip5 at ₹49999*
Retail price ₹99999*
Exchange value of old device ₹30000*
Additional upgrade bonus ₹12000**
Additional bank cashback ₹8000*
Effective price ₹49999*
Storage Upgrade worth ₹10000* Buy 256GB get 512GB
Samsung Upgrade Benefits worth ₹5000*
Cashback worth ₹8000* HDFC BANK or 10% Extra Cashback* Samsung Axis Bank Credit Cards
APPLE DAYS | iPhone 13 128 GB | iPhone 14 128 GB
MRP | ₹ 69,900 | ₹ 79,900
Store Discount | ₹ 7,910 | ₹ 7,910
Old Devices Trade in Value | ₹ 15,000* | ₹ 15,000*
Exchange Bonus | ₹ 8,000* | ₹ 8,000*
HDFC Cashback | ₹ 2,000 | ₹ 4,000
Effective Price | ₹ 36,990* | ₹ 44,990*
EMI per day | ₹ 54* | ₹ 68*
Upto 50% Discount on OneAssist Protection pack
OnePlus Nord CE3 5G
Starting from ₹24,999*
*Incl. of bank discount
NEW ARRIVAL
₹2,000* Instant Discount
one card ICICI Bank
SAMSUNG Galaxy S23 Ultra ₹1,24,999 EFFECTIVE PRICE ₹59,999* EMI Per day ₹94*
OPPO Reno 10 GET 70%* DISCOUNT On Calling Smartwatch Worth ₹4,999 NEW ARRIVAL 10%* INSTANT DISCOUNT EMI @ ₹2,749
SAMSUNG Galaxy A54 UPGRADE BONUS ₹2,500 OR UPTO ₹3,000* CASHBACK
Redmi 12 Start @ ₹13,499 GET 65%* DISCOUNT On Neckband Worth ₹1,499 NEW ARRIVAL
NOKIA G11 Plus GET 85%* DISCOUNT On EARBUDS Worth ₹1,499 Now @ ₹ 8,199*
realme 11 PRO GET 80%* DISCOUNT On Calling Smartwatch Worth ₹5,999 UPTO 10%* INSTANT DISCOUNT
TECNO CAMON 20 Pro GET 65% DISCOUNT On Neckband Worth ₹1,499 JUST PAY ₹20* MONTHLY EMI START FROM ₹1000* Only
realme C53 108 MP UltraClear Camera GET 85%* DISCOUNT On EARBUDS Worth ₹1,499 NEW ARRIVAL NOW @ ₹ 10,199*
ONEPLUS Nord 3 FREE Neckband Worth ₹1,499 UPTO 10%* INSTANT DISCOUNT
SAMSUNG Galaxy A34 UPGRADE BONUS ₹2,500 OR UPTO ₹3,000* CASHBACK EMI START @ ₹ 2,067*
ONEPLUS 32" Y1S EDGE Upto ₹1000 INSTANT DISCOUNT EMI ₹1,833
Xiaomi Smart TV X43 Pro Upto 10% INSTANT DISCOUNT EMI ₹2,749
vivo Y27 GET 65%* DISCOUNT On Neckband Worth ₹1,499 NEW ARRIVAL EMI @ ₹1,666*
vivo Y100A EMI ₹1,600* or UPTO ₹2,000* CASHBACK
vivo V27 Series EMI ₹1,833* or UPTO ₹2,500* CASHBACK
vivo X90 Series EMI ₹2,500* or UPTO ₹8,500* INSTANT DISCOUNT
*On Selected Variant
LAPTOP
MACBOOK AIR M2 CHIP 8GB+256GB EMI ₹6,483 UPTO ₹5,000 CASHBACK
•Apple M2 chip with 8-core CPU •Liquid Retina LED-backlit display •MacOS Ventura •16-core Neural Engine
ASUS VIVOBOOK 8GB+512GB OFFER PRICE ₹29,990 UPTO 10% INSTANT DISCOUNT
•Intel Celeron N4020 Processor •HD Anti-glare display •Intel UHD Graphics 600 •Windows 11 Home
DELL GAMING G15 16GB+512GB EMI ₹3,647 FREE BAG + BOOM HEADSET
•Intel Core i5-12500H (12th Gen) •FHD, WVA Anti- Glare LED •Backlit Narrow Border Display •Windows 11 Home
hp 15S RYZEN R3 8GB+512GB EMI ₹1,738 UPTO 10% INSTANT DISCOUNT
•AMD Ryzen 3 5300U Processor •FHD with Micro-edge, Anti-glare Display •AMD Radeon Graphics •Windows 11 Home
Lenovo IDEAPAD GAMING 3 8GB+512GB EMI ₹2,668 UPTO 10% INSTANT DISCOUNT
•Intel Core i5-11320H (11th Gen) •NVIDIA GeForce GTX 1650 GDDR6 •Single Language, English •Windows 11 Home
BUY LAPTOP GET FREE WORTH ₹8,999 BACKPACK KEYBOARD & MOUSE BOOM HEADSET ON SELECTED MODELS*
AMAZON Echo Dot 3rd Generation ₹3,499 Now @ ₹1,949
AMAZON Fire TV Stick Lite ₹2,999 Now @ ₹2,399
conekt TWS CADENCE ANC UPTO 55% OFF Now @ ₹1,799
SONY WF C500 UPTO 50% OFF Now @ ₹4,490
FIRE-BOLTT FLAME UPTO 80% OFF Now @ ₹1,999
conekt INSANE 1220 160W SOUNDBAR UPTO 65% DISCOUNT Now @ ₹6,999*
ANKER SOUNDCORE R500 UPTO 55% DISCOUNT Now @ ₹1,299
OFFERS APPLICABLE SELECTED BRAND & MODELS ONLY* *T&C APPLY
BAJAJ FINSERV IDFC FIRST Bank HDB FINANCIAL SERVICES TVS CREDIT Pine Labs ICICI Bank HDFC BANK
*EMI OPTIONS AVAILABLE ON SELECTED SHOWROOM ONLY
Customer Helpline : 99406 88855
Shop online @ www.poorvika.com
POORVIKA

ಪ್ರಜಾವಾಣಿ

ಭಾನುವಾರದ ಪುರವಣಿ

ಭಾನುವಾರ, 6 ಆಗಸ್ಟ್ 2023

1



ಕಬೂತರ್ ಜಾ ಜಾ ಜಾ...

1



ಕೆರೆಯ ಹಾಡಿಗೆ ರಂಗದ ರೂಹು


A BRAND OF SSKL
SAI SILKS (KALAMANDIR) LIMITED
ಕಾಂಚೀಪುರಂ ®
ವರಮಹಾಲಕ್ಷ್ಮಿ ಸಿಲ್ಕ್‌ಸ್
ವರಗಳ ನೀಡುವ ಮಹಾತಾಯಿ
ಬರುವ ಸಂಭ್ರಮದ ಕ್ಷಣಗಳೆ
ವರಮಹಾಲಕ್ಷ್ಮಿ ವ್ರತ
ನೇಕಾರರ ದರದಲ್ಲಿ, ವರಮಹಾಲಕ್ಷ್ಮಿ ಸಿಲ್ಕ್ಸ್‌ನಲ್ಲಿ
ನಿಮ್ಮ ಶಾಪಿಂಗ್ ಆನಂದಮಯ
KANCHEEPURAM ORIGINAL BRAND
WE PROMISE PQR
PRICE • QUALITY • RANGE


A BRAND OF SSKL
SAI SILKS (KALAMANDIR) LIMITED
ಶ್ರಾವಣ ಮಾಸದ
ವಿವಾಹ ಮತ್ತು ಹಬ್ಬಗಳ
ವಿಶೇಷ ಸಂಗ್ರಹ
UP TO
30%
OFF
ರೇಷ್ಮೆ ಸೀರೆಗಳು, ಫ್ಯಾನ್ಸಿ ಸೀರೆಗಳು, ಡ್ರೆಸ್ ಮೆಟೀರಿಯಲ್ಸ್, ಮೆನ್ಸ್‌ವೇರ್
ಮತ್ತು ಕಿಡ್ಸ್‌ವೇರ್‌ಗಳ ಮೇಲೆ
SCAN AND VISIT OUR WEBSITE FOR STORE LOCATIONS.
ಕಮ್ಮನಹಳ್ಳಿ : 091089 36060, ಮಾರತ್‌ಹಳ್ಳಿ : 091489 46060
ಈ ಕೊಡುಗೆಗಳು ಮಾರತ್‌ಹಳ್ಳಿ ಮತ್ತು ಕಮ್ಮನಹಳ್ಳಿ ಸ್ಟೋರ್‌ನಲ್ಲಿ ಮಾತ್ರ
kalamandir Kalamandirfashions
ಕಳಾಮಂದಿರ್®
Symbol Of South

ಕಬೂತರ್ ಜಾ..ಜಾ ಜಾ...


ಬೆಂಗಳೂರಿನ ಸಜ್ಜನ್ ರಾವ್ ವೃತ್ತದ ಸಮೀಪ ಜನರು ಹಾಕುವ ಕಾಳುಗಳನ್ನರಸಿ ಬರುವ ಪಾರಿವಾಳದ ದಂಡು. ಚಿತ್ರಗಳು: ರಂಜು ಪಿ.

ಪಾರಿವಾಳಗಳಿಗೆ ಕಾಳು ಹಾಕುವವರು ಶಾಂತಿಮಂತ್ರ ಪಠಿಸುತ್ತಿರುವುದಾಗಿ ಭಾವಿಸಿದರೆ ಅದು ತಪ್ಪು. ಹೀಗೆ ಆಹಾರ ಕೊಡುತ್ತಿರುವುದರಿಂದಲೇ ನಗರ ನಾಗರಿಕತೆಯಲ್ಲಿ ಪಾರಿವಾಳಗಳು ತಲೆನೋವಾಗಿ ಪರಿಣಮಿಸುತ್ತಿವೆ.

ಎಚ್.ಎಸ್. ಸುಧೀಂದ್ರ

ನಗರಗಳಲ್ಲಿ ಪಾರಿವಾಳಗಳಿಗೆ ಆಹಾರವನ್ನು ನೀಡುವುದನ್ನು ಪ್ರಕೃತಿಯೊಂದಿಗಿನ ಸಂಪರ್ಕ ಸಾಧಿಸುವ ಸರಳ ಮತ್ತು ಆನಂದದಾಯಕ ಮಾರ್ಗವಾಗಿ ಬಹಳಷ್ಟು ಜನ ಪರಿಗಣಿಸುತ್ತಾರೆ. ಹೀಗಾಗಿ ಅವರು ನಿಯಮಿತವಾಗಿ ಅವುಗಳಿಗೆ ಆಹಾರ ನೀಡುತ್ತಾ ಬಂದಿದ್ದಾರೆ. ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಂತೂ ಮುಂಜಾನೆ ವ್ಯಾಯಾಮ ಮತ್ತು ವಿಹಾರಕ್ಕೆಂದು ಬರುವವರಿಗೆ ಇದು ಒಂದು ಪ್ರಮುಖ ಚಟುವಟಿಕೆಯಾಗಿದೆ. ಇದರಿಂದ ಪಾರಿವಾಳಗಳ ಸಂಖ್ಯೆ ಹೆಚ್ಚಾಗಿ ಕಬ್ಬನ್ ಪಾರ್ಕ್ ಪಕ್ಕದಲ್ಲೇ ಇರುವ ಕರ್ನಾಟಕ ಹೈಕೋರ್ಟ್ ಹಲವಾರು ಬಾರಿ ಈ ಚಟುವಟಿಕೆಗೆ ನಿರ್ಬಂಧವನ್ನು ಹೇರಿದೆ.

ಹೀಗೆ ಪ್ರಾಣಿ-ಪಕ್ಷಿಗಳಿಗೆ ಆಹಾರ ನೀಡುವುದು ಸರಿಯಲ್ಲ ಎಂದು ಪರಿಸರದ ಸಮತೋಲನದ ಬಗ್ಗೆ ಅಧ್ಯಯನ ಮಾಡುವ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಹಾಗಾದರೆ ಪಾರಿವಾಳಗಳಿಗೆ, ಕೋತಿಗಳಿಗೆ ಅಥವಾ ಬೀದಿ ನಾಯಿಗಳಿಗೆ ಆಹಾರ ನೀಡುವುದು ತಪ್ಪೇ? ಹೌದು ಎನ್ನುತ್ತಾರೆ ಕೆಲ ವಿಜ್ಞಾನಿಗಳು. ಹೀಗೆ ಪ್ರಾಣಿ ಪಕ್ಷಿಗಳಿಗೆ ನಾವು ಆಹಾರ ನೀಡುವುದರಿಂದ ಪರಿಸರದ ಸಮತೋಲನದಲ್ಲಿ ಏರುಪೇರು ಆಗುತ್ತದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ. ಇನ್ನು ನಗರಗಳಲ್ಲಿ ಹೀಗೆ ಪಾರಿವಾಳಗಳಿಗೆ ಆಹಾರ ನೀಡುವುದು ಆಗಲೇ ಹಲವೆಡೆ ಗುಬ್ಬಿಚ್ಚಿಗಳು–ಮೈನಾ ತರಹದ ಪಕ್ಷಿಗಳ ಮೇಲೆ ಪರಿಣಾಮ ಬೀರಿದೆ.

ಮೇಲ್ನೋಟಕ್ಕೆ ಇದು ಏನೂ ತೊಂದರೆ ಉಂಟುಮಾಡದ ಚಟುವಟಿಕೆ ಎನಿಸದರೂ, ಸ್ವಲ್ಪ ವಿಸ್ತೃತವಾಗಿ ಅವಲೋಕಿಸಿದರೆ ಇದು ಪರಿಸರ ಮತ್ತು ಮನುಷ್ಯನ ಯೋಗಕ್ಷೇಮಕ್ಕೆ ಹಾನಿಕರ ಎಂದು ತಿಳಿಯುತ್ತದೆ. ಈ ಚಟುವಟಿಕೆಯು ಪರಿಸರದಲ್ಲಿ ಗಮನಾರ್ಹ ಮತ್ತು ಇನ್ನಿತರ ಪರಿಣಾಮಗಳನ್ನು ಉಂಟುಮಾಡಬಹುದು. ಹೀಗೆ ಆಹಾರ ನೀಡುವುದರಿಂದ ಅವುಗಳ ಸಂತಾನೋತ್ಪತ್ತಿ ಹೆಚ್ಚಾಗುವುದಲ್ಲದೆ ಅವುಗಳಲ್ಲಿ ಆಕ್ರಮಣಕಾರಿ ನಡವಳಿಕೆ ಉಂಟಾಗುವುದು. ಅವುಗಳ ಹಿಕ್ಕೆ ಕಟ್ಟಡಗಳಿಗೆ-ಸ್ಮಾರಕಗಳಿಗೆ ಹಾಗೂ ಪ್ರತಿಮೆಗಳಿಗೂ ಹಾನಿಕರ. ಹೆಚ್ಚಿನ ಪಾರಿವಾಳಗಳಿಂದ ರೋಗ ಹರಡುವಿಕೆ ಸಾಧ್ಯತೆ ಇದೆ ಮತ್ತು ಇತರೆ ವನ್ಯಜೀವಿಗಳಿಗೂ ಸಮಸ್ಯೆಯಾಗಿದೆ.

ಪರಿಸರದ ವ್ಯವಸ್ಥೆಯಲ್ಲಿ ಅಡಚಣೆ

ಪಾರಿವಾಳಗಳು ಬಹು ಸುಲಭವಾಗಿ ಹೊಂದಿಕೊಳ್ಳುವ ಪಕ್ಷಿಗಳು. ಹಾಗಾಗಿ ನಗರ ಪರಿಸರದಲ್ಲಿ ಸಮೃದ್ಧಿಯಾಗಿ ಕಾಣುತ್ತೇವೆ. ನಾವು ನಿಯಮಿತವಾಗಿ ಆಹಾರವನ್ನು ಒದಗಿಸುವುದರಿಂದ, ಅದರ ಮೇಲೆಯೇ ಅವು ಅವಲಂಬಿತವಾಗುತ್ತವೆ. ಇದು ಪಾರಿವಾಳಗಳ ಸಂಖ್ಯಾಸಮೃದ್ಧಿಗೆ ಕಾರಣವಾಗುತ್ತದೆ. ಅವುಗಳ ಸಂಖ್ಯೆಯು ಹೆಚ್ಚಾದಂತೆ, ಪಾರಿವಾಳಗಳು ನಗರ ಪ್ರದೇಶಗಳಲ್ಲಿ ಪ್ರಾಬಲ್ಯ ಸಾಧಿಸುತ್ತವೆ.

ನಗರ ಪರಿಸರಗಳು ಈಗಾಗಲೇ ವನ್ಯಜೀವಿಗಳಿಗೆ ಹಲವಾರು ಸವಾಲುಗಳನ್ನು ಒಡ್ಡುತ್ತಿವೆ. ಹೀಗಿರುವಾಗ ಪಾರಿವಾಳಗಳಿಗೆ ಆಹಾರ ನೀಡುವುದು ಈ ಸಮಸ್ಯೆಗಳನ್ನು ಉಲ್ಬಣಗೊಳಿಸುತ್ತದೆ. ಇತರ ಪಕ್ಷಿ ಪ್ರಭೇದಗಳು, ಸಸ್ತನಿಗಳು ಮತ್ತು ಕೀಟಗಳ ನೈಸರ್ಗಿಕ ನಡವಳಿಕೆಗೆ ಸಾರ್ವಜನಿಕ ಸ್ಥಳಗಳಲ್ಲಿ ಪಾರಿವಾಳಗಳು ಅಡ್ಡಿಪಡಿಸಬಹುದು. ಇದು ಪಾರಿಸರಿಕ ಅಡಚಣೆಗಳನ್ನೂ ಉಂಟುಮಾಡುತ್ತದೆ. ಪಾರಿವಾಳಗಳು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ಸಂಪನ್ಮೂಲಗಳನ್ನು ಏಕಸ್ವಾಮ್ಯಗೊಳಿಸಿಕೊಂಡಾಗ, ಇತರ ಜೀವಿಗಳು ಆಹಾರ, ನೀರು ಮತ್ತು ಆಶ್ರಯವನ್ನು ಹುಡುಕಲು ಹೆಣಗಾಡುತ್ತವೆ. ಹೀಗಾಗಿ ಪಾರಿವಾಳಗಳಿಂದ ಬೇರೆ ಜೀವಿಗಳ ಉಳಿವು ಮತ್ತು ಸಂತಾನೋತ್ಪತ್ತಿಯ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ. ಇದು ಮೈನಾ, ಗುಬ್ಬಚ್ಚಿಯಂತಹ ಇತರ ಪಕ್ಷಿ ಪ್ರಭೇದಗಳನ್ನು ಹೊರಹಾಕುತ್ತವೆ. ಮೈನಾ-ಗುಬ್ಬಚ್ಚಿ ತರಹದ ಪಕ್ಷಿಗಳು ಹುಳ-ಹುಪ್ಪಟೆಗಳನ್ನೂ ಸೇವಿಸುತ್ತವೆ. ಆದರೆ ಅವುಗಳ ಇರುವಿಕೆ ಇಲ್ಲವಾದಾಗ ಸೊಳ್ಳೆ ಮತ್ತು ಇತರೆ ಕೀಟಗಳು ಹೆಚ್ಚಾಗುತ್ತವೆ ಮತ್ತು ಅದೇ ಸಂಪನ್ಮೂಲಗಳನ್ನು ಅವಲಂಬಿಸಿರುವ ಇತರ ಜೀವಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಹೀಗಾಗಿ ಪರಿಸರ ವ್ಯವಸ್ಥೆಯ ನೈಸರ್ಗಿಕ ಸಮತೋಲನವನ್ನು ಏರುಪೇರು ಮಾಡುತ್ತದೆ. ಇನ್ನು ಅಲ್ಲಿಯ ಜೀವವೈವಿಧ್ಯದಲ್ಲಿಯೂ ತೊಡಕು ಉಂಟಾಗುವುದು.

2ನೇ ಪುಟಕ್ಕೆ...

ಪಕ್ಷಿಗಳಿಗೆ ಆಹಾರ... ಸುಪ್ರೀಂ ಕೋರ್ಟ್ ನಕಾರ

ಪಕ್ಷಿಗಳಿಗೆ ಆಹಾರ ನೀಡುವುದು ಸಹಾನುಭೂತಿಯ ಕಾರ್ಯವಾಗಿದ್ದು, ಇದು ಅತ್ಯಂತ ಶ್ಲಾಘನೀಯವಾಗಿದೆ. ಆದರೆ, ಅಂತಹ ಕಾರ್ಯವು ಮನುಷ್ಯರಿಗೆ, ವಿಶೇಷವಾಗಿ ನೆರೆಹೊರೆಯವರಿಗೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಈ ಹಿಂದೆ, ಪ್ರಾಣಿ ಹಕ್ಕುಗಳ ಕಾರ್ಯಕರ್ತರ ಕುಟುಂಬದವರು ತಮ್ಮ ವಸತಿ ಸೊಸೈಟಿಯಲ್ಲಿನ ಅಪಾರ್ಟ್‌ಮೆಂಟ್‌ನ ಬಾಲ್ಕನಿಯಲ್ಲಿ ಪಕ್ಷಿಗಳಿಗೆ ಆಹಾರ ನೀಡುವುದರಿಂದ ನೆರೆಹೊರೆಯವರಿಗೆ ತೊಂದರೆ ಉಂಟುಮಾಡುತ್ತದೆ ಎಂದೂ, ಹೀಗೆ ಆಹಾರ ನೀಡಬಾರದು ಎಂದೂ ಬಾಂಬೆ ಹೈಕೋರ್ಟ್ ಆದೇಶಿಸಿತ್ತು.

ಈ ವಿಚಾರವಾಗಿ ಬಾಂಬೆ ಹೈಕೋರ್ಟ್‌ನ ಆದೇಶವನ್ನು ಮರುಪರಿಶೀಲನೆ ಮಾಡುವಂತೆ ಸುಪ್ರೀಂ ಕೋರ್ಟ್‌ಗೆ ಕೋರಲಾಗಿತ್ತು. ಮುಂಬೈನ ಬಹುಮಹಡಿ ಕಟ್ಟಡದಲ್ಲಿ ಈ ಕುಟುಂಬದವರು ತಮ್ಮ ಬಾಲ್ಕನಿಯಲ್ಲಿ ಪಕ್ಷಿಗಳಿಗೆ ಆಹಾರ ನೀಡುವುದನ್ನು ನಿರ್ಬಂಧಿಸುವ ಆದೇಶದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು. ಬಾಂಬೆ ಹೈಕೋರ್ಟ್‌ನ ಆದೇಶದಂತೆ ಪಕ್ಷಿಗಳಿಗೆ ಆಹಾರ ನೀಡದಂತೆ ನೀಡಿದ್ದ ಆದೇಶವನ್ನು ಸುಪ್ರಿಂ ಕೋರ್ಟ್ ಎತ್ತಿಹಿಡಿಯಿತು.

ಹಿನ್ನಲೆ: 2011 ರಲ್ಲಿ, ಮುಂಬೈನ ವರ್ಲಿಯಲ್ಲಿರುವ ಅಪಾರ್ಟ್‌ಮೆಂಟ್ ಒಂದರ 10 ನೇ ಮಹಡಿಯಲ್ಲಿ ವಾಸಿಸುತ್ತಿದ್ದ ದಿಲೀಪ್ ಸುಮನ್‌ಲಾಲ್ ಶಾ ಮತ್ತು ಮೀನಾ ಶಾ, 14 ನೇ ಮಹಡಿಯಲ್ಲಿ ವಾಸಿಸುವ ಠಾಕೋರ್ ಮತ್ತು ಅವರ ಕುಟುಂಬ ಸದಸ್ಯರ ವಿರುದ್ಧ ಸಿವಿಲ್ ನ್ಯಾಯಾಲಯದ ಮೊರೆಹೋಗಿದ್ದರು. ಶಾ ಕುಟುಂಬವು ಠಾಕೋರ್ ಕುಟುಂಬದ ವಿರುದ್ಧ ತಡೆಯಾಜ್ಞೆಯನ್ನು ಕೋರಿತು. ಶಾ ಕುಟುಂಬದವರಿಗೆ ಮತ್ತು ಕಟ್ಟಡದ ಇತರ ನಿವಾಸಿಗಳಿಗೆ ಅವರ ಬಾಲ್ಕನಿಯಲ್ಲಿ ಪಕ್ಷಿಗಳಿಗೆ ನೀರು ಮತ್ತು ಧಾನ್ಯಗಳನ್ನು ನೀಡುವುದರಿಂದ ತೊಂದರೆಯಾಗುತ್ತಿದೆ ಎನ್ನುವುದೇ ಇದಕ್ಕೆ ಕಾರಣ. 20 ಅಂತಸ್ತಿನ ಸಹಕಾರಿ ಹೌಸಿಂಗ್ ಸೊಸೈಟಿಯವರು ಕೂಡ ಠಾಕೋರ್ ಕುಟುಂಬದ ವಿರುದ್ಧ ನ್ಯಾಯಾಲಯದ ಮೊರೆಹೋಗಿದ್ದರು. ತಮ್ಮ ಫ್ಲಾಟ್‌ನ ಬಾಲ್ಕನಿಯಲ್ಲಿ ಪಕ್ಷಿಗಳಿಗೆ ಆಹಾರ ನೀಡದಂತೆ ನಿರ್ದೇಶನ ನೀಡುವಂತೆ ಕೋರಿದ್ದರು.

ನಂತರ 2013ರ ಸೆಪ್ಟೆಂಬರ್ 27ರಂದು ಬಾಂಬೆ ಸಿಟಿ ಸಿವಿಲ್ ಕೋರ್ಟ್ ಮಧ್ಯಂತರ ಇಂಜಂಕ್ಷನ್ (ತಡೆಯಾಜ್ಞೆ) ನೀಡಿತ್ತು. ಠಾಕೋರ್ ಅವರ ಫ್ಲ್ಯಾಟ್‌ನ ಬಾಲ್ಕನಿಯಲ್ಲಿ ಪಕ್ಷಿಗಳಿಗೆ ಆಹಾರವನ್ನು ನೀಡುವುದನ್ನು ನಿರ್ಬಂಧಿಸಿದೆ ಎಂದು ಪೀಠವು ತನ್ನ ಆದೇಶದಲ್ಲಿ ತಿಳಿಸಿತ್ತು. ಸಿವಿಲ್ ಕೋರ್ಟ್‌ನ ಈ ಆದೇಶವನ್ನು ಬಾಂಬೆ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದಾಗ, ಅದು ಮಧ್ಯ ಪ್ರವೇಶಿಸಲು ನಿರಾಕರಿಸಿತು ಮತ್ತು ಜುಲೈ 12, 2016ರಂದು ಮೇಲ್ಮನವಿಯನ್ನು ವಜಾಗೊಳಿಸುವ ಮೂಲಕ ಮಧ್ಯಂತರ ಇಂಜಂಕ್ಷನ್ ಅನ್ನು ಸಂಪೂರ್ಣ ತಡೆಯಾಜ್ಞೆಯನ್ನಾಗಿ ಮಾರ್ಪಡಿಸಿ (ಶಾಶ್ವತವಾಗಿ ನಿರ್ಬಂಧಿಸಿ), ಆದೇಶ ಹೊರಡಿಸಿತು.

ಪಾರಿವಾಳಗಳಿಗೆ ಆಹಾರ ನೀಡದಂತೆ ಇತ್ತೀಚೆಗೆ ಪುಣೆ ಮಹಾನಗರ ಪಾಲಿಕೆ ಕೂಡ ಆದೇಶ ಹೊರಡಿಸಿದೆ ಮತ್ತು ಹಾಗೆ ಆಹಾರ ನೀಡುವವರ ವಿರುದ್ಧ ದಂಡ ವಿಧಿಸಲು ಮುಂದಾಗಿದೆ. ಈಗಾಗಲೇ ಮುಂಬೈನ ಥಾಣೆ ಮುನಿಸಿಪಲ್ ಕಾರ್ಪೊರೇಷನ್ ಕೂಡ ಪಾರಿವಾಳಗಳಿಗೆ ಆಹಾರ ನೀಡುವವರಿಗೆ ₹500 ದಂಡ ವಿಧಿಸುವುದಾಗಿ ನೋಟಿಸ್ ಜಾರಿ ಮಾಡಿದೆ. ಪಾರಿವಾಳಗಳಿಂದ ಈ ಮಹಾನಗರಗಳಲ್ಲಿ ಆಗಲೇ ಸಮಸ್ಯೆ ತಾರಕಕ್ಕೆ ಏರಿರುವುದರಿಂದ, ನಮ್ಮ ನಗರಗಳಲ್ಲಿ ಇದನ್ನೇ ಈಗಲೇ ನಿರ್ವಹಿಸುವುದು ಸೂಕ್ತ.

ಕೇರಿಯ ಹಾಡಿಗೆ ರಂಗದ ರೂಹು

ಚಂದ್ರಶೇಖರ್ ಕೆ. ಹಾಸನದ ಚನ್ನರಾಯಪಟ್ಟಣದ ಕೋಡಿಹಳ್ಳಿಯವರು. 2010ರಲ್ಲಿ ನೀನಾಸಂನಲ್ಲಿ ತರಬೇತಿ ಪಡೆದ ಇವರು 30ಕ್ಕೂ ಹೆಚ್ಚು ನಾಟಕಗಳಲ್ಲಿ ನಟಿಸಿದ್ದಾರೆ. 9ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಸಿನಿಮಾಗಳಲ್ಲಿಯೂ ನಟಿಸಿದ್ದಾರೆ. ದಲಿತ ಹೋರಾಟದ ಕಥೆಗಳು, ಲೈಂಗಿಕ ಅಲ್ಪಸಂಖ್ಯಾತರ ಕಥೆಗಳನ್ನೇ ಇಟ್ಟುಕೊಂಡು ನಾಟಕ ಕಟ್ಟುವ ಇವರ ರಂಗಪಯಣದ ಕಥೆಯನ್ನು ಅಕ್ಷರವಾಗಿಸಿದ್ದಾರೆ **ಸುಕೃತ ಎಸ್.**


'ಕೇರಿ-ಹಾಡು' ನಾಟಕದ ದೃಶ್ಯ

2021ನೇ ಇಸವಿ. ಹಾಸನದ ದಿಂಡಗೂರು ಗ್ರಾಮದಲ್ಲಿ ಪರಿಶಿಷ್ಟರಿಗೆ ದೇವಸ್ಥಾನ ಪ್ರವೇಶ ನಿಷಿದ್ಧವಿತ್ತು. ಸಮಾನತೆಯ ಕನಸು ಹೊತ್ತಿದ್ದ ಯುವಕರೂ ಸೇರಿ ಊರಿನ ಇಡೀ ಪರಿಶಿಷ್ಟ ಸಮುದಾಯವು ದೇವಸ್ಥಾನವನ್ನು ಪ್ರವೇಶಿಸಿತ್ತು. ಇದಕ್ಕೆ ಪೊಲೀಸರ ಭದ್ರತೆಯೂ ಇತ್ತು. ಶಾಂತಿ ಸಭೆಯಲ್ಲಿ ದೇವಾಲಯ ಪ್ರವೇಶಕ್ಕೆ ತೊಂದರೆ ಇಲ್ಲ ಎಂದಿದ್ದ ಪ್ರಬಲ ಜಾತಿಯವರು, ದೇವಸ್ಥಾನ ಪ್ರವೇಶದ ಘಟನೆಯ ನಂತರ, ಪರಿಶಿಷ್ಟರಿಗೆ ಅಘೋಷಿತ ಬಹಿಷ್ಕಾರ ಹಾಕಿದ್ದರು. ಸಮಾನತೆಯ ಕನಸು ಹೊತ್ತಿದ್ದ ಯುವಕ, ರಂಗಭೂಮಿ ನಟ ಸಂತೋಷ್ ಇದರಿಂದ ಬೇಸರಗೊಂಡು, ದಿಕ್ಕೆಟ್ಟಿದ್ದರು. ಸ್ನೇಹಿತರೊಂದಿಗೆ ಸಂತೋಷ್ ಅವರು ಕೇರಿಯ ಪರಿಸ್ಥಿತಿ, ಜನರ ಮನಃಸ್ಥಿತಿಗಳ ಕುರಿತು ಹಂಚಿಕೊಂಡರು. ಆ ಸ್ನೇಹಿತರಲ್ಲಿ ನಾನೂ ಒಬ್ಬನಾಗಿದ್ದೆ.

ಅಸ್ಪೃಶ್ಯತೆಯ, ತಾರತಮ್ಯದ ಕೆಟ್ಟ ಅನುಭವ ಹೊಂದಿರುವ ನನಗೆ ಸಂತೋಷ್ ಅವರ ನೋವನ್ನು ಅರಿತುಕೊಳ್ಳಲು ಅನುಭಾವ ತತ್ವದ ಮೊರೆಹೋಗಬೇಕಾಗಿ ಬರಲಿಲ್ಲ. ದಿಂಡಗೂರಿನ ಪರಿಶಿಷ್ಟರ ಸಮುದಾಯದ ಜನರ ಕಷ್ಟ ನೀಗಿಸಲು ಆರ್ಥಿಕವಾಗಿ ಅವರಿಗೆ ಯಾವ ಸಹಾಯ ಮಾಡುವ ಶಕ್ತಿಯೂ ನನಗೆ ಇರಲಿಲ್ಲ. ನನಗೆ ಗೊತ್ತಿದ್ದುದು ರಂಗಭೂಮಿ. ಅದನ್ನು ಬಿಟ್ಟರೆ ಬೇರೆ ಏನೂ ಇರಲಿಲ್ಲ. ಅವರ ಕಷ್ಟಕಾಲದಲ್ಲಿ ನಾವು ಅವರೊಂದಿಗೆ ಇರಬೇಕು ಎಂದು ನಾನು, ನನ್ನ ಕೆಲವು ಸ್ನೇಹಿತರು ನಿರ್ಧರಿಸಿದೆವು. ರಂಗಭೂಮಿ ಮೂಲಕವೇ ಇದನ್ನು ಸಾಧಿಸಬೇಕು ಎಂದೂ ತೀರ್ಮಾನಿಸಿ, ದಿಂಡಗೂರಿಗೆ ಹೊರಟು ನಿಂತೆವು.

ಇದು ಯಾವುದೋ ಇಂಗ್ಲಿಷ್ ಲೇಖಕ ಬರೆದ ಕಥೆ ಆಗಿರಲಿಲ್ಲ. ಇದು ನಟರ ಬದುಕಿನ ಶತ ಶತಮಾನಗಳ ಅನುಭವಗಳಾಗಿದ್ದವು. ಶಾಸ್ತ್ರೀಯವಾಗಿ ಸಂಗೀತ ಕಲಿತವರು ಈ ಕಥೆಗೆ ಸಂಗೀತ ನೀಡಿರಲಿಲ್ಲ. ಇವು ನಟರ ಶತ ಶತಮಾನಗಳ ಅನುಭವಗಳಿಂದ ಹುಟ್ಟಿದ ಪ್ರತಿರೋಧದ ಹಾಡುಗಳಾಗಿದ್ದವು. ನಟರು ಶತಮಾನಗಳ ಕಾಲ ನಡೆಸಿದ ಜೀವನ, ಅವರು ಆಚರಿಸಿದ ಹಬ್ಬಗಳು, ಆಚರಣೆಗಳೇ ರಂಗ ಪರಿಕರಗಳಾಗಿದ್ದವು. ಇದೇ ದಿಂಡಗೂರು ಗ್ರಾಮದ ಪರಿಶಿಷ್ಟ ಜನರ 'ಕೇರಿ-ಹಾಡು'. ನಾನೇ ಈ ನಾಟಕವನ್ನು ನಿರ್ದೇಶಿಸಿದ – **ಚಂದ್ರಶೇಖರ್ ಕೆ.**

ರಂಗಭೂಮಿಯಿಂದ ಮಾತ್ರವೇ ಇವರ ಕಥೆಯನ್ನು ಹೇಳಲು ಸಾಧ್ಯವಿತ್ತು. ಯಾಕೆಂದರೆ, ಸಮಾಜದ ಕೆಳಸ್ತರದಲ್ಲಿ ಬದುಕುತ್ತಿರುವವರ ಕಥೆಯನ್ನು ಯಾರು ತಾನೆ ಹೇಳಿಯಾರು? ಇಂಥ ಜನರ ಕಥೆ ಯಾರಿಗೆ ತಾನೆ ಮೆಚ್ಚು? ನಿಮ್ಮ ಕಷ್ಟ ಹೇಳಿಕೊಳ್ಳಿ ಎಂದು ಯಾರು ಬಂದು ಇವರನ್ನು ಸಂದರ್ಶಿಸುತ್ತಿದ್ದರು... ಅಲ್ಲವೆ?

> **ಯಾವುದೇ ಸಿದ್ಧ ಚೌಕಟ್ಟಿಗೆ ಜೋತು ಬೀಳದೆಯೇ ಬೇರೆ ಬೇರೆ ಸಮುದಾಯಗಳ ಜೊತೆಯಲ್ಲಿ, ಅವರ ಬದುಕಿನ ಭಾಗವಾಗಿ ಅವರ ಕಥೆಗಳನ್ನು 'ಕೇರಿ-ಹಾಡು' ರೀತಿಯಲ್ಲಿಯೇ ರಂಗಭೂಮಿ ಮೇಲೆ ತರುವ ಕನಸಿದೆ. ರಂಗಭೂಮಿ ಈತನಕ ಇಂಥ ಕಥೆಗಳಿಗೆ ಸಾಕ್ಷಿಯಾಗಿಲ್ಲ.**


ಚಂದ್ರಶೇಖರ್ ಕೆ.

ನಾಟಕದ ಮೂಲಕ ನಾವು ಜನರಿಗೆ ಬುದ್ಧಿ ಹೇಳುತ್ತೇವೆ. ಶೇಕ್ಸ್‌ಪಿಯರ್‌ನ ನಾಟಕ ಆಡಿ ತೋರಿಸುತ್ತೇವೆ. ಒಂದು ಕಾಲದಲ್ಲಿ ಬೀದಿ ರಂಗಭೂಮಿಯು ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿತ್ತು; ಪ್ರತಿಭಟಿಸುತ್ತಿತ್ತು. ಈಗ ಸರ್ಕಾರದ ಯಾವುದೋ ಇಲಾಖೆಯ, ಅವರಿಗೆ ಬೇಕಾದ ವಿಷಯದ ಕುರಿತು ಈಗ ಬೀದಿ ನಾಟಕಗಳು ಪ್ರದರ್ಶನಗೊಳ್ಳುತ್ತಿವೆ. ರಂಗಭೂಮಿ ಹೀಗಾಗಬಾರದು. ದಿಂಡಗೂರಿನ ಪರಿಶಿಷ್ಟರ ನೋವು–ಸಂಕಟಗಳನ್ನು ಇಟ್ಟುಕೊಂಡು ನಾವೂ ಒಂದು ಪ್ರತಿಭಟನೆ ದಾಖಲಿಸಬೇಕು ಎಂದು ನಿರ್ಧರಿಸಿಯೇ 'ಕೇರಿ-ಹಾಡು' ಕಟ್ಟಿದೆವು.

'ಕೇರಿ–ಹಾಡು' ಹುಟ್ಟಿಕೊಂಡದ್ದು ಪೇಪರಿನಿಂದಲ್ಲ. ಹೆಸರೇ ಹೇಳುವಂತೆ ಕೇರಿಯ ಬೀದಿ ಬೀದಿಗಳಿಂದ. ಸಂಜೆ ಆರರ ನಂತರ ಅಲ್ಲಿನ ಅಂಬೇಡ್ಕರ್ ಭವನದಲ್ಲಿ ಒಂದು ಶಿಬಿರ ಆಯೋಜನೆ ಮಾಡಿದೆವು. ಮೊದ ಮೊದಲು ಜನ ಬರಲಿಲ್ಲ; ಕೆಲವರಷ್ಟೆ ಬಂದರು. ನಂತರ ಬರುವವರ ಸಂಖ್ಯೆ ಹೆಚ್ಚತೊಡಗಿತು. ಬಂದು ತಮ್ಮ ನೋವನ್ನು ಹೇಳಿಕೊಂಡು ಹಗುರಾದರು. ಅವರಿಗೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವ ವೇದಿಕೆ ಬೇಕಿತ್ತು. ಅವರ ಸಂಕಟಗಳನ್ನು ಕೇಳಿಸಿಕೊಳ್ಳುವ ಕಿವಿ ಬೇಕಿತ್ತು. ರಂಗಭೂಮಿ ಈ ಎರಡನ್ನೂ ಅವರಿಗೆ ಒದಗಿಸಿತು.

4ನೇ ಪುಟಕ್ಕೆ...


ತಾಯಿ ವನಜಾಕ್ಷಿ ಜೊತೆ ನೀತು

ಮಗಳಾದ ಮಗನ ಅಪ್ಪಿದ ಜನನಿ

ಗುರು ಪಿ.ಎಸ್.

ಅರ್ಪಿತ್ ಎಂಬ ಮಗ ಅರ್ಪಿತಾ ಆಗಿ ಎದುರು ಬಂದು ನಿಂತಾಗ, ತಂದೆ ಆ ಮಗಳಿಗೆ ಕಾಫಿ ಆರ್ಡರ್ ಮಾಡುತ್ತಾರೆ. 'ಪುಟ್ಟ, ನೀನೇನೇ ಆದರೂ ನನಗಿನ್ನೂ ಮಗುವೇ' ಎಂದು ಆತ್ಮೀಯವಾಗಿ ಅವಳ ಕೈಯನ್ನು ಸ್ಪರ್ಶಿಸುತ್ತಾರೆ. ಪಕ್ಕದಲ್ಲೇ ಇದ್ದ ತಾಯಿ ಕೂಡ ಹಿತವಾಗಿ ಮಗಳನ್ನು ಆಲಂಗಿಸುತ್ತಾರೆ.

'ಸ್ಟಾರ್‌ಬಕ್ಸ್‌'ನ ಈ ಜಾಹೀರಾತು ಕೆಲವು ತಿಂಗಳುಗಳ ಹಿಂದೆ ಗಮನ ಸೆಳೆದಿತ್ತು. ಜಾಹೀರಾತಿನಲ್ಲಿನ ಈ ಕ್ಷಣ ಯಾರದ್ದಾದರೂ ಜೀವನದಲ್ಲಿ ಘಟಿಸಲು ಸಾಧ್ಯವೇ ಎಂದುಕೊಳ್ಳುತ್ತಿರುವಾಗ ಕಣ್ಮುಂದೆ ಬಂದವರು ವನಜಾಕ್ಷಿ.

ವನಜಾಕ್ಷಿ ಗದುಗಿನವರು. ಮೂವರು ಮಕ್ಕಳ ತಾಯಿ. ಸದ್ಯ, ಬೆಂಗಳೂರಿನಲ್ಲಿ 'ಉತ್ತರ ಕರ್ನಾಟಕದ ಗಮಗಮ' ಎಂಬ ಹೋಟೆಲ್ ನಡೆಸುತ್ತಿದ್ದಾರೆ. ಅವರ ಈ ಹೋಟೆಲ್‌ಗೆ ಬೆನ್ನೆಲುಬಾಗಿ ನಿಂತವರು ಅವರ ಮಗ, ಅಲ್ಲಲ್ಲ ಮಗಳು!

ವನಜಾಕ್ಷಿಯವರು ಗದುಗಿನಲ್ಲಿದ್ದಾಗ ಮಕ್ಕಳ ಸಹಕಾರದೊಂದಿಗೆ, ಹೂವು ಕಟ್ಟುವುದು, ಉಪ್ಪಿನಕಾಯಿ ಮಾರಾಟ ಮಾಡುವುದು, ಪೆಟಿಕೋಟ್ ಹೊಲಿಯುವುದು... ಹೀಗೆ ಸಣ್ಣಪುಟ್ಟ ಕೆಲಸ ಮಾಡುತ್ತಲೇ ಕುಟುಂಬವನ್ನು ನಿರ್ವಹಿಸಿದವರು. ಮಕ್ಕಳ ಶಾಲಾ-ಕಾಲೇಜಿನ ಶುಲ್ಕ ಕಟ್ಟುವುದಕ್ಕೂ ಇದೇ ದುಡಿಮೆಯನ್ನು ನೆಚ್ಚಿಕೊಂಡವರು.

ನಂತರ, ಮನೆಯ ಮುಂದೆಯೇ ಸಣ್ಣದೊಂದು ಪ್ರಾವಿಜನ್ ಸ್ಟೋರ್ ಇಟ್ಟುಕೊಂಡು ಬದುಕು ಕಟ್ಟಿಕೊಳ್ಳುತ್ತಿದ್ದ ವನಜಾಕ್ಷಿಯವರಿಗೆ ಎರಡನೇ ಮಗ ಮಂಜುನಾಥ್ ಎಂದರೆ ಅಚ್ಚುಮೆಚ್ಚು.

ಸದ್ಯ, ಬೆಂಗಳೂರಿನ ಎನ್.ಆರ್. ಕಾಲೊನಿಯಲ್ಲಿರುವ ಅವರ ನಿವಾಸದಲ್ಲಿ ಭೇಟಿಯಾದಾಗ, ವನಜಾಕ್ಷಿಯವರು ಮಾತನಾಡುತ್ತಾ ಸಾಗಿದರು.

'ನಮ್ಮ ಕುಟುಂಬದಲ್ಲೇ ಮಂಜುನಾಥ ತುಂಬಾ ಸ್ಟ್ಯಾಂಡರ್ಡ್. ಚಿಕ್ಕಂದಿನಿಂದ ಸಣ್ಣ-ಪುಟ್ಟ ಕೆಲಸ ಮಾಡುತ್ತಾ, ಅವನ ಶಿಕ್ಷಣದ ಖರ್ಚು-ವೆಚ್ಚ ಅವನೇ ನೋಡಿಕೊಳ್ಳುತ್ತಿದ್ದ. ಚಿತ್ರಕಲೆಯಲ್ಲಂತೂ ಅವನಿಗೆ ಎಲ್ಲಿಲ್ಲದ ಆಸಕ್ತಿ. ರಾಜ್ಯ, ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪದಕಗಳನ್ನು ಗೆದ್ದು ತರುತ್ತಿದ್ದ. ಆದರೆ, ಬೇರೆ ಹುಡುಗರಂತೆ ಹೆಚ್ಚು ಹೊರಗೆ ಹೋಗುತ್ತಿರಲಿಲ್ಲ. ಅವನ ಅಕ್ಕನ ಜೊತೆಯಲ್ಲಿಯೇ ಹೆಚ್ಚು ಕಾಲ ಕಳೆಯುತ್ತಿದ್ದ. ಮುಂದೆ, ಚಿತ್ರಕಲೆಯಲ್ಲೇ ಹೆಚ್ಚಿನ ಶಿಕ್ಷಣ ಪಡೆಯಬೇಕು ಎಂದು ಗದುಗಿನಿಂದ ಬೆಂಗಳೂರಿಗೆ ಬಂದ. ಓದು ಮುಂದುವರಿಸಬೇಕು ಎಂದರೆ ದುಡ್ಡು ಬೇಕಿತ್ತು. ಅದಕ್ಕಾಗಿ, ಬೆಂಗಳೂರಿನಲ್ಲೇ ಒಂದು ಟ್ಯಾಟೂ ಸೆಂಟರ್ ಓಪನ್ ಮಾಡಿದ. ಡ್ರಾಯಿಂಗ್‌ನಲ್ಲಿ ಎಕ್ಸ್‌ಪರ್ಟ್ ಆಗಿದ್ದರಿಂದ ಟ್ಯಾಟೂ ಸೆಂಟರ್ ಕೈ ಹಿಡಿಯಿತು. ಮಕ್ಕಳೊಂದಿಗೆ ನಾನೂ ಇಲ್ಲಿಗೇ ಬಂದುಬಿಟ್ಟೆ...' ಬೆಂಗಳೂರಿನಲ್ಲಿ ನೆಲೆ ಕಂಡುಕೊಂಡ ಕ್ಷಣವನ್ನು ಸಡಗರದಿಂದಲೇ ಹೇಳಿದರು ವನಜಾಕ್ಷಿ.

'ಉತ್ತರ ಕರ್ನಾಟಕದ ಅಡುಗಿ ಎಲ್ಲ ಚಂದ ಮಾಡ್ತೀಯಲ್ಲ. ನಾವ್ಯಾಕ್ ಇಲ್ಲೇ ಒಂದು ಉತ್ತರ ಕರ್ನಾಟಕ ಊಟದ ಹೋಟೆಲ್ ಮಾಡಬಾರದು' ಎಂದು ಮಂಜುನಾಥ್ ಹೇಳಿದ. ನನಗೂ ಸರಿ ಎನಿಸಿತು. ಮನೆಯಲ್ಲೇ ಮಾಡುತ್ತಿದ್ದ ಅಡುಗೆಗಳೇ ಮೆನು ಆಯ್ತು. 'ಕತ್ರಿಗುಪ್ಪೆಯಲ್ಲಿ ಸಣ್ಣದೊಂದು ಹೋಟೆಲ್ ಮಾಡಿದೆವು. ಅದೂ ಚೆನ್ನಾಗಿ ನಡೆಯಿತು.

2ನೇ ಪುಟಕ್ಕೆ...

ಪ್ರಯೋಗಶೀಲ ಯಕ್ಷಗುರು ಐನಬೈಲು

ರವಿ ಮಡೋಡಿ

ಯಕ್ಷಗಾನ ಪರಂಪರೆಯಲ್ಲಿ ಯಕ್ಷಗುರುಗಳಿಗೆ ಮಹತ್ತರ ಸ್ಥಾನವಿದೆ. ಹಿಂದೆಲ್ಲ ಯಕ್ಷಗಾನ ಶಿಕ್ಷಣವನ್ನು ಕಲಾವಿದರೆನಿಸಿಕೊಂಡ ಗುರುಗಳು ಹೆಚ್ಚಾಗಿ ಮೇಳದ ತಿರುಗಾಟದಲ್ಲಿಯೇ ಕಲಿಸುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಆಧುನಿಕ ಜೀವನಕ್ಕೆ ತೆರೆದುಕೊಂಡ ಹಾಗೆ, ಇದು ಬದಲಾಗಿ ಬೇರೆ ಬೇರೆ ಕಲೆ, ಸಂಗೀತ, ರಂಗಭೂಮಿಗಳಂತೆ ಪ್ರತ್ಯೇಕ ಶಿಕ್ಷಣ ಸಂಸ್ಥೆಗಳ ಮೂಲಕವಾಗಿ ಯಕ್ಷ ಕನಸನ್ನು ಕಟ್ಟುವ ಕೈಂಕರ್ಯ ನಡೆಯುತ್ತಿದೆ. ಇದರ ಜೊತೆಯಲ್ಲಿ ಖಾಸಗಿಯಾಗಿ ನಡೆಸುವ ತರಗತಿಗಳು ಹಲವು ದಶಕಗಳಿಂದ ನಡೆಯುತ್ತಿವೆ. ಕಲಿಸುವ ವಿಧಾನ ಯಾವುದಿದ್ದರೂ ಯಕ್ಷಗಾನದಲ್ಲಿ ದೊಡ್ಡ ಗುರು ಪರಂಪರೆಯನ್ನು ಕಾಣುವುದಕ್ಕೆ ಸಾಧ್ಯ. ಇಂತಹ ಪರಂಪರೆಯಲ್ಲಿ ಬೆಳೆದು, ಯಕ್ಷಗುರುಗಳಾಗಿ ಅದ್ವಿತೀಯ ಸಾಧನೆಗೈದವರಲ್ಲಿ ಐನಬೈಲು ಪರಮೇಶ್ವರ ಹೆಗಡೆ ಕೂಡ ಒಬ್ಬರು.

ಪರಮೇಶ್ವರ ಹೆಗಡೆಯವರು ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಐನಬೈಲು ಗ್ರಾಮದಲ್ಲಿ ಜನಿಸಿದವರು. ಯಕ್ಷಗಾನ ಪ್ರಂಪಚದಲ್ಲಿ ಗುರುವಾಗಿ, ಭಾಗವತರಾಗಿ, ನಿರ್ದೇಶಕರಾಗಿ, ವೇಷಧಾರಿಯಾಗಿ, ಪ್ರಸಂಗಕರ್ತರಾಗಿ ಸುಮಾರು ನಲ್ವತ್ತಕ್ಕೂ ಹೆಚ್ಚು ವರುಷಗಳಿಂದ ಸದ್ದಿಲ್ಲದೇ ಕಾರ್ಯವನ್ನು ಮಾಡುತ್ತಿದ್ದಾರೆ. ತಂದೆ ಗಣಪತಿ ಹೆಗಡೆಯವರಿಗೆ ಯಕ್ಷಗಾನದ ಬಗ್ಗೆ ಅತೀವ ಆಸಕ್ತಿ. ತಾವು ಅದರಲ್ಲಿ ಏನಾದರೂ ಸಾಧಿಸಿ ತೋರಬೇಕು ಎಂದುಕೊಂಡಿದ್ದು ನೆರವೇರದಿದ್ದಾಗ, ಮಗನನ್ನು ಆ ಪಥದಲ್ಲಿ ಕಾಣಹೊರಟರು. ಐನಬೈಲ್ ತಮ್ಮ ಹತ್ತನೇ ವರ್ಷದಲ್ಲಿ ಯಕ್ಷಗಾನಕ್ಕೆ ಪದಾರ್ಪಣೆ ಮಾಡಿ, ಹದಿನೆಂಟು ವರ್ಷದವರಿದ್ದಾಗಿನಿಂದ ಅದನ್ನೇ ಬದುಕಾಗಿ ಜೀವಿಸಿದವರು. ತಮ್ಮೊಳಗೆ ಕಲೆ ಎಂದರೇನು, ಯಾಕೆ ಬೇಕು ಎಂಬಂತಹ ಚಿಂತನೆಗಳೆಲ್ಲ ಹರಳುಗಟ್ಟುವ ಮುನ್ನವೇ ಬಣ್ಣ ಹಚ್ಚಿ ಈ ಪರಿಕರ್ಮದಲ್ಲಿ ತೊಡಗಿಸಿಕೊಂಡರು. ಶಿರಳಗಿ ಮಂಜುನಾಥ ಭಟ್ಟರಂತಹ ಗುರುಗಳ ಮಾರ್ಗದರ್ಶನವೂ ಕೈಹಿಡಿದು ಅವರನ್ನು ಬೆಳೆಸಿತು. ಉತ್ತರಕನ್ನಡ ಜಿಲ್ಲೆಯ ಸೋಂದ ಮೇಳದಲ್ಲಿ



ಶಿವಮೊಗ್ಗ ಕುವೆಂಪು ರಂಗಮಂದಿರದಲ್ಲಿ ರೇಣುಕಾಂಬಾ ಗ್ರಾಮೀಣ ಸೇವಾ ಸಂಸ್ಥೆಯ 9ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪರಮೇಶ್ವರ ಹೆಗಡೆ ಐನಬೈಲು ನಿರ್ದೇಶನದ 'ದಕ್ಷಯಜ್ಞ ಮತ್ತು ಗಿರಿಜಾ ಕಲ್ಯಾಣ' ಯಕ್ಷಗಾನ ಪ್ರದರ್ಶನಗೊಂಡಾಗಿನ ಚಿತ್ರ.



ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಐನಬೈಲು ಗ್ರಾಮದ ಯಕ್ಷಗುರುಗಳಾಗಿ ಅದ್ವಿತೀಯ ಸಾಧನೆಗೈದವರಲ್ಲಿ ಐನಬೈಲು ಪರಮೇಶ್ವರ ಹೆಗಡೆ ಕೂಡ ಒಬ್ಬರು...

ವೇಷಗಾರಿಕೆಯನ್ನು ಮಾಡಿ, ಪಾತ್ರಗಳಿಗೆ ನಿರ್ವ್ಯಾಜವಾಗಿ ತೊಡಗಿಸುತ್ತ ಸಾಗಿದಾಗ ಅವರ ಹಲವು ಪಾತ್ರಗಳು ಜನರ ಮನಸ್ಸಿನಲ್ಲಿ ಉಳಿದವು. ಈ ಸಾಲಿನಲ್ಲಿ 'ಬಭ್ರುವಾಹನ'ದ ಬಭ್ರುವಾಹನ, 'ಧರ್ಮಾಂಗ ದಿಗ್ವಿಜಯ'ದ ಧರ್ಮಾಂಗದ, 'ಭೀಷ್ಮ ವಿಜಯ'ದ ಸಾಲ್ವ, 'ಯೋಗಿನಿ ಕಲ್ಯಾಣ'ದ ಕೃಷ್ಣ, 'ಜ್ವಾಲಾ ಪ್ರತಾಪ'ದ ಪ್ರವೀರ ಮುಂತಾದ ಪಾತ್ರಗಳನ್ನು ಸೇರಿಸಬಹುದು. ಆದರೆ ವ್ಯವಸಾಯೀ ಮೇಳದಲ್ಲಿ ಹೆಚ್ಚು ಕಾಲ ವೃತ್ತಿಯನ್ನು ಮಾಡದೆಯೂ ಹವ್ಯಾಸಿಯಾಗಿ ಸಾಧಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಯಕ್ಷಗಾನದ ಸಂಗೀತವು ದಕ್ಷಿಣಾದಿ ಹಾಗೂ ಉತ್ತರಾದಿ ಸಂಗೀತಕ್ಕಿಂತ ಭಿನ್ನ. ಯಕ್ಷಗಾನದಲ್ಲಿ ಹಾಡುವ ಕ್ರಮವು ಪ್ರಸಂಗ ಸಾಹಿತ್ಯವು ರಚನೆಯಾದ ಕ್ರಮಕ್ಕೆ ಆಧರಿಸಿದ್ದು. ಅದರ ಭಾವಕ್ಕೆ ತಕ್ಕುದಾದ ಮಟ್ಟುಗಳನ್ನು ಬಳಸಿ, ಮುಮ್ಮೇಳದ ಪಾತ್ರಗಳು ಪರಿಣಾಮಕಾರಿಯಾಗುವಂತೆ ಭಾಗವತಿಕೆಯನ್ನು ಮಾಡಬೇಕಾಗುತ್ತದೆ. ಇಲ್ಲಿ ರಂಗಕ್ರಿಯೆ ಮುಖ್ಯವಾಗಿರುವುದರಿಂದ ಅದನ್ನು ಲಕ್ಷ್ಯವಾಗಿಸಿಕೊಂಡು ಪದ್ಯವನ್ನು ಹಾಡಬೇಕು. ಐನಬೈಲ್ ಅವರು ವೇಷಗಾರಿಕೆಯ ಜೊತೆ ಜೊತೆಯಲ್ಲಿ ಭಾಗವತಿಕೆಯನ್ನು ಅಭ್ಯಸಿಸಿದರು. ಮೇಲೆ ತಿಳಿಸಿದ ಕ್ರಮದಲ್ಲಿ ಹಾಡುವ ಕೆಲವೇ ಕೆಲವು ಭಾಗವತರಲ್ಲಿ ಐನಬೈಲ್ ಪರಮೇಶ್ವರ ಹೆಗಡೆಯವರು ಕೂಡ ಒಬ್ಬರು.

ಯಕ್ಷಋಷಿ ಹೊಸ್ತೋಟ ಮಂಜುನಾಥ ಭಾಗವತರ ಒಡನಾಟ ಐನಬೈಲ್ ಅವರನ್ನು ಕಲೆಯ ಬಗೆಗಿನ ಹೊಸ ಚಿಂತನೆಗೆಳಿಗೆ ನೂಕಿತು. ಸಾಂಪ್ರದಾಯಿಕ ಕಲೆಯ ಅನೇಕ ಹೊಳಹುಗಳನ್ನು, ಸೂಕ್ಷ್ಮಗಳನ್ನು ತಮ್ಮ ಜ್ಞಾನ ಬತ್ತಳಿಕೆಯಲ್ಲಿ ತುಂಬಿಸಿ ಪ್ರಯೋಗಕ್ಕೆ ಒಡ್ಡಿಕೊಂಡರು. ಹೊಸ್ತೋಟ ಅವರು ಮಾಡುತ್ತಿದ್ದ ಅಭ್ಯಾಸ ತರಗತಿಗಳಿಗೆ ಐನಬೈಲ್ ಸಹಶಿಕ್ಷಕರಾಗಿ ಪದೋನ್ನತಿ ಪಡೆದು, ವಿದ್ಯಾರ್ಥಿಗಳನ್ನು ತಿದ್ದುವ ಮಹತ್ತರ ಕಾರ್ಯವು ಐನಬೈಲಿನವರ ಪಾಲಿಗೆ ಸಿಕ್ಕಿರುವುದು ಗುರುಕಾರುಣ್ಯ ಮತ್ತು ಅಚಲವಾದ ನಂಬಿಕೆಯ ಪ್ರತೀಕ ಎನ್ನಬಹುದು.

ಯಕ್ಷಗಾನದ ಶಿಕ್ಷಣಕ್ಕೆ ವಿಶಿಷ್ಟ ಗಣಿತ ಸೂತ್ರವನ್ನು ಹೊಸ್ತೋಟ ಅಳವಡಿಸಿದ್ದರು. ಅದನ್ನೇ ಐನಬೈಲ್ ಮುಂದುವರೆಸಿದರು. ಈ ಮೂಲಕ ಸರ್ವರಿಗೂ ಸುಲಭವಾಗುವಂತೆ ಕ್ಲಿಷ್ಟತೆಯನ್ನು ಸುಗಮಗೊಳಿಸಿ ತರಗತಿಗಳು ಆಸಕ್ತಿದಾಯಕವಾಗುವಂತೆ ಮಾಡುತ್ತಿದ್ದಾರೆ. ಯಕ್ಷಗಾನದಲ್ಲಿ ಗುರುವಾಗಬೇಕಾದರೆ ಕೇವಲ ನರ್ತನದ ತಿಳಿವಳಿಕೆ ಇದ್ದರೆ ಸಾಲದು. ವಾದನಗಳ ಆವರ್ತನ ಕ್ರಮಗಳು, ಭಾಗವತಿಕೆ, ಮಟ್ಟು, ಅಭಿನಯ, ಪ್ರಸಂಗ ಸಾಹಿತ್ಯ ಹೀಗೆ ಹಲವು ವಿಚಾರಗಳು ತಿಳಿದಿದ್ದರಷ್ಟೆ ಒಬ್ಬ ಉತ್ತಮ ಗುರುವಾಗುವುದಕ್ಕೆ ಸಾಧ್ಯವಿದೆ. ಇಂತಹ ಅಪೇಕ್ಷಿತ ಸಂಗತಿಗಳು ಐನಬೈಲ್ ಅವರಲ್ಲಿ ಅಂತರ್ಗತವಾಗಿರುವುದರಿಂದ ಯಕ್ಷಗಾನದಲ್ಲಿ ಅವರೊಬ್ಬರು ಸಮರ್ಥ ಯಕ್ಷಗುರುಗಳಾಗಲಿಕ್ಕೆ ಸಾಧ್ಯವಾಗಿದೆ.

ಐನಬೈಲ್ ಅವರು ಹಲವು ವರ್ಷಗಳಿಂದ ಧಾರವಾಡ, ಬೆಳಗಾವಿ, ಹುಬ್ಬಳ್ಳಿ, ಶಿರಸಿ, ಸಿದ್ದಾಪುರ, ಶಿವಮೊಗ್ಗ ಮುಂತಾದ ನಗರಗಳು ಸೇರಿದಂತೆ ಅನೇಕ ಪ್ರದೇಶಗಳ ಮಕ್ಕಳಿಗೆ ಯಕ್ಷಗಾನವನ್ನು ಕಲಿಸುತ್ತಿದ್ದಾರೆ. ಅವರಿಂದ ಈಗಾಗಲೇ ಸಾವಿರಾರು ಪ್ರದರ್ಶನಗಳನ್ನು ಮಾಡಿಸಿ, ಕಲೆಯ ಅಭಿರುಚಿ, ಪ್ರತಿಭೆಗೆ ಎರಕವಾಗುತ್ತಿದ್ದಾರೆ. ಇದರ ಜೊತೆಗೆ ಅವರಿಗೆ ಪುರಾಣ, ಭಾಷೆ ಬಗ್ಗೆ ಸುಪ್ತವಾಗಿ ಜ್ಞಾನ ಬೆಳೆಸುತ್ತಿರುವುದು ಅತ್ಯಂತ ಶ್ಲಾಘನೀಯ. ಹೊಸ್ತೋಟ ಭಾಗವತರ, ಚಾಮರಸ ಕವಿಯ 'ಪ್ರಭುಲಿಂಗಲೀಲೆ'ಯ ಮೊದಲ ಭಾಗವನ್ನು ಐನಬೈಲ್ ಅವರು ಯಕ್ಷಗಾನ ಪ್ರಸಂಗವನ್ನು ಪ್ರದರ್ಶನಕ್ಕೆ ಅಣಿಗೊಳಿಸಿ, 'ಮಾಯಾಕೋಲಾಹಲ' ಎಂಬ ಶಿರೋನಾಮೆಯಲ್ಲಿ ನೂರಾರು ಪ್ರಯೋಗಗಳನ್ನು ಯಕ್ಷಗಾನೇತರ ವಲಯದಲ್ಲಿ ಮಾಡಿರುವುದು ಅವರ ಪ್ರಯೋಗಗಳಲ್ಲಿ ಒಂದಾಗಿದೆ.

ಹೊಸ್ತೋಟ ಅವರು ಮೊದಲ ಬಾರಿಗೆ ದೃಷ್ಟಿದೋಷ ಇರುವ ಮಕ್ಕಳಿಂದ ಯಕ್ಷಗಾನ ಪ್ರದರ್ಶನವನ್ನು ಮಾಡಿಸುವ ವಿಶಿಷ್ಟ ಪ್ರಯೋಗವನ್ನು ಮಾಡಿದ್ದರು. ಅವರು ಮಾಡಿದ ಈ ಪ್ರಯೋಗವನ್ನು ಮುಂದುವರೆಸಿದ ಐನಬೈಲ್ ದೃಶ್ಯ ಮಾಧ್ಯಮದ ಈ ಕಲೆಯನ್ನು ದೃಷ್ಟಿದೋಷ ಇರುವ ಮಕ್ಕಳಿಂದ ನೂರಾರು ಪ್ರದರ್ಶನಗಳನ್ನು ಮಾಡಿಸಿ ಅವರಲ್ಲಿಯೂ ಕಲೆಯ ಬೆಳಕನ್ನು ತೋರಿಸಿದ್ದರು. ಇಂತಹ ಮಕ್ಕಳಿಗೆ ಕಲಿಸಿ, ಪ್ರಯೋಗಿಸುವುದು ಸುಲಭದ ಮಾತಲ್ಲ. ಯಕ್ಷಗಾನ ರಂಗ ಸಜ್ಜಿಕೆಯು ನಿರ್ದಿಷ್ಟ ಅಳತೆಯಲ್ಲಿ ಸಾಗಬೇಕಾಗಿರುವುದರಿಂದ ಮಕ್ಕಳಿಗೆ ಅದನ್ನು ಅರ್ಥವಿಸಬೇಕಾಗುತ್ತದೆ. ನರ್ತನ, ಅಭಿನಯವನ್ನು ಕಲಿಸುವಾಗ ಹಾಗೆ ಹೇಳಿದರೆ ಅರ್ಥವಾಗುವುದು ಕಷ್ಟವಾಗಿರುವುದರಿಂದ, ಅವರ ಮೈಯನ್ನು ಮುಟ್ಟಿ, ಅದರ ಆಂಗಿಕ ಅಭಿನಯ, ಮುದ್ರೆಗಳನ್ನು ತೋರಿಸಬೇಕು. ಕುಣಿಯುವಾಗ ಅಪಾಯವಾಗುವ ಸಂಭವವೂ ಇರುತ್ತದೆ. ಇಂತಹ ಸವಾಲುಗಳನ್ನು ಮುಕ್ತವಾಗಿಯೇ ಸ್ವೀಕರಿಸಿ ಅವರು ಮಕ್ಕಳನ್ನು ಅದಕ್ಕಾಗಿ ಅಣಿಗೊಳಿಸುತ್ತಿದ್ದರು. ಇದರ ಜೊತೆಯಲ್ಲಿ ಮೂಕ ಮತ್ತು ಕಿವುಡ ಮಕ್ಕಳಿಗೂ ಕಲೆಯ ಸ್ವಾದವನ್ನು ಕಲಿಸಿ ಅವರಿಂದಲೂ ಪ್ರದರ್ಶನಗಳನ್ನು ಮಾಡಿಸಿದ್ದಾರೆ.

ಐನಬೈಲ್ ತಮ್ಮ ಮಗ ರವೀಶ್ ಹೆಗಡೆಯವರನ್ನೂ ಯಕ್ಷಗಾನ ಕಲಾವಿದರನ್ನಾಗಿ ರೂಪಿಸಿ, ಕಲಾ ಸಂಸ್ಕಾರವನ್ನು ಬೆಳೆಸಿದ್ದಾರೆ. ಮಕ್ಕಳೊಂದಿಗೆ ಹೆಜ್ಜೆಯನ್ನು ಹಾಕಿ ತಾನು ಕುಣಿಯುತ್ತ ಆನಂದವನ್ನು ಪಡುವ ಐನಬೈಲ್ ಅವರ ಸೇವೆ ಕಲೆಗೆ ಇನ್ನಷ್ಟು ಸಿಗಲಿ. ❖

ಕಬೂತರ್ ಜಾ..ಜಾ..

ಒಂದನೇ ಪುಟದಿಂದ...

ರೋಗ ಹರಡುವಿಕೆ

ಪಾರಿವಾಳಗಳಿಗೆ ಆಹಾರ ನೀಡುವುದು ರೋಗ ಹರಡುವ ಅಪಾಯವನ್ನು ಹೆಚ್ಚಿಸುತ್ತದೆ. ಸ್ವಾಭಾವಿಕವಾಗಿ ಆಹಾರ ನೀಡುವುದರಿಂದ ರೋಗ ಹರಡದಿರಬಹುದು, ಆದರೆ ಪಾರಿವಾಳಗಳು ಏವಿಯನ್ ಇನ್‌ಫ್ಲುಯೆನ್ಸ ಮತ್ತು ಸಾಲ್ಮೊನೆಲ್ಲಾಗಳಂತಹ ರೋಗಕಾರಕಗಳ ವಾಹಕಗಳು. ಮಾನವರೊಂದಿಗಿನ ನಿಕಟ ಸಂಪರ್ಕವು ಸಂಭಾವ್ಯ ಆರೋಗ್ಯದ ಅಪಾಯವಾಗಿದೆ. ಹೆಚ್ಚಿದ ಪಾರಿವಾಳಗಳ ಸಂಖ್ಯೆ ಪಕ್ಷಿ-ಸಂಬಂಧಿತ ಝೂನೋಟಿಕ್ ಕಾಯಿಲೆಗಳ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಹಾಗಾಗಿ ಸಾರ್ವಜನಿಕ ಪ್ರದೇಶಗಳಲ್ಲಿ ಪಾರಿವಾಳಗಳಿಗೆ ಆಹಾರ ನೀಡುವುದು ಸಾರ್ವಜನಿಕ ಆರೋಗ್ಯದ ದೃಷ್ಟಿಯಲ್ಲಿ ಆತಂಕಕಾರಿಯಾದ ಚಟುವಟಿಕೆ. ಇನ್ನು ಮಕ್ಕಳು ಮತ್ತು ವೃದ್ಧರಂತಹ ದುರ್ಬಲ ಗುಂಪುಗಳಿಗೆ ಇದು ಚಿಂತೆ ಮಾಡುವ ವಿಷಯವೇ.

ಆಹಾರವನ್ನು ಹುಡುಕುವ ಪಾರಿವಾಳಗಳ ಹಿಂಡುಗಳ ನಡುವೆ ಸ್ಪರ್ಧೆ ಮತ್ತು ಆಕ್ರಮಣಕಾರಿ ನಡವಳಿಕೆಗೆ ಕಾರಣವಾಗಬಹುದು. ಸೀಮಿತ ಸಂಪನ್ಮೂಲಗಳಿಗಾಗಿ ಅವು ಸ್ಪರ್ಧಿಸುವುದರಿಂದ, ಪಾರಿವಾಳಗಳ ನಡುವೆ ಮಾತ್ರವಲ್ಲದೆ ಇತರ ಪಕ್ಷಿ ಪ್ರಭೇದಗಳನ್ನು ಒಳಗೊಂಡಂತೆ ಆ ವಾತಾವರಣದಲ್ಲಿ ಸಂಘರ್ಷ ಉಂಟಾಗಬಹುದು. ಹೆಚ್ಚುವರಿಯಾಗಿ, ಆಕ್ರಮಣಕಾರಿ ಪಾರಿವಾಳಗಳು ಆಹಾರದ ಹುಡುಕಾಟದಲ್ಲಿ ಮನುಷ್ಯರನ್ನು ಸಂಪರ್ಕಿಸಬಹುದು. ಇದರಿಂದ ಸಂಭಾವ್ಯ ದಾಳಿಯ ಅಪಾಯವನ್ನೂ ಹೆಚ್ಚಿಸಬಹುದು. ಹಾಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಪಾರಿವಾಳಗಳೊಂದಿಗೆ ಸಂವಹನ ನಡೆಸುವಾಗ ಎಚ್ಚರಿಕೆಯಿಂದ ಇರಬೇಕಿದೆ.

ಮನುಷ್ಯರು ಸೇವಿಸುವ ಆಹಾರ ಧಾನ್ಯಗಳು, ಚಿಪ್ಸ್, ಬಿಸ್ಕತ್, ಮತ್ತು ಇತರೆ ಸಂಸ್ಕರಿಸಿದ ತಿಂಡಿಗಳನ್ನು ಪಾರಿವಾಳಗಳಿಗೆ ನೀಡುವುದು ಅಸಮರ್ಪಕ ಪೋಷಣೆಯನ್ನು ಉಂಟುಮಾಡುತ್ತದೆ. ಇದರಿಂದ ಪಕ್ಷಿಗಳ ಆರೋಗ್ಯಕ್ಕೆ ಹಾನಿಯಾಗುವುದು. ಇದಲ್ಲದೆ, ಸಾರ್ವಜನಿಕ ಪ್ರದೇಶಗಳಲ್ಲಿ ಆಹಾರ ನೀಡುವುದರಿಂದ, ಆ ಪ್ರಕ್ರಿಯೆ ಸಾರ್ವಜನಿಕ ಸ್ಥಳಗಳಲ್ಲಿ ಕಸವನ್ನು ಹಾಕಿದಂತೆ. ಇನ್ನು ಇದರಿಂದ ಕಬ್ಬನ್ ಪಾರ್ಕ್ ಮತ್ತು ಲಾಲ್‌ಬಾಗ್‌ನಲ್ಲಿ ಸರಿಯಾಗಿ ಶುಚಿತ್ವವನ್ನು ಕಾಪಾಡುವುದು ಮೇಲ್ವಿಚಾರಕರು ಮತ್ತು ಅಧಿಕಾರಿಗಳಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ.

ಅಕಸ್ಮಾತ್ತಾಗಿ ಉಳಿಸಿದ ಆಹಾರವು ಹುಳ-ಹುಪ್ಪಟ್ಟೆ, ಇಲಿ, ಹೆಗ್ಗಣಗಳಿಗೂ ಆಶ್ರಯವಾಗುವುದು. ಇದರಿಂದ ಸಾರ್ವಜನಿಕ ಪ್ರದೇಶದ ಸ್ವಾಭಾವಿಕ ಸೌಂದರ್ಯಕ್ಕೆ ಧಕ್ಕೆಯಾಗುವುದು. ಇಂತಹ ಪ್ರದೇಶದ ಗುಣಮಟ್ಟದ ಮೇಲೆ ಒಟ್ಟಾರೆ ಪರಿಣಾಮ ಬೀರುತ್ತದೆ.

ಇನ್ನೊಂದೆಡೆ, ಈ ರೀತಿ ಕಸವು ಬೀದಿ ವ್ಯಾಪಾರಿಗಳಿಂದಲೂ ಆಗುತ್ತದೆ ಎಂದು ಕೆಲವರು ಆಕ್ಷೇಪಿಸದರೂ, ಬೀದಿ ವ್ಯಾಪಾರಿಗಳ ಚಟುವಟಿಕೆಯಿಂದ ಉಂಟಾಗುವ ಕಸವನ್ನು ಸೂಕ್ತವಾಗಿ ನಿರ್ವಹಿಸಬಹುದು. ಆದರೆ ಎಲ್ಲಂದರೆಲ್ಲಿ ಹಿಕ್ಕೆ ಹಾಕುವ ಪಾರಿವಾಳಗಳನ್ನು ಹೇಗೆ ನಿರ್ವಹಿಸುವುದು?

ಆಹಾರ ಕೊಟ್ಟರೆ ಬರುವುದು ತೊಂದರೆ

ಇನ್ನು ಪಾರಿವಾಳಗಳಿಗೆ ಆಹಾರ ನೀಡುವುದು ಗಮನಾರ್ಹ ತೊಂದರೆ ಉಂಟು ಮಾಡುತ್ತದೆ. ಕಟ್ಟಡಗಳು, ಸ್ಮಾರಕಗಳು ಮತ್ತು ಪ್ರತಿಮೆಗಳ ಮೇಲೆ ಅವು ಹಾನಿ ಉಂಟುಮಾಡುತ್ತವೆ. ಕೆಲ ಎತ್ತರದ ಕಟ್ಟಗಳಲ್ಲಿ ಈ ಪಾರಿವಾಳಗಳನ್ನು ತಡೆಯಲು ಜಾಲಿ ಪರದೆಯನ್ನು ಹಾಕುತ್ತಿದ್ದಾರೆ. ನಿಯಮಿತವಾಗಿ ಆಹಾರ ನೀಡುವುದರಿಂದ ಪಾರಿವಾಳಗಳ ಸಂಖ್ಯೆಯು ಹೆಚ್ಚಾಗುತ್ತಿದ್ದಂತೆ, ಕಟ್ಟಡ ಮಾಲೀಕರು ಮತ್ತು ನಗರ ಅಧಿಕಾರಿಗಳಿಗೆ ಸಮಾನವಾಗಿ ಕಟ್ಟಡ-ಸ್ಮಾರಕಗಳಿಗಾಗುವ ಹಾನಿ ಮತ್ತು ನಿರ್ವಹಣೆ ವೆಚ್ಚಗಳು ಹೆಚ್ಚಾಗುತ್ತವೆ.

ಅಂದಹಾಗೆ, ಆಸ್ಟ್ರಿಯಾ ದೇಶದ ವೆನೀಸ್ ನಗರದಲ್ಲಿ ಈ ರೀತಿ ಪಾರಿವಾಳಗಳಿಗೆ ಆಹಾರ ನೀಡುವುದನ್ನು ಸಂಪೂರ್ಣವಾಗಿ ನಿರ್ಬಂಧಿಸಿದ್ದಾರೆ. ಹಾಗೆ ಆಹಾರ ನೀಡಿದವರಿಗೆ ದಂಡ ವಿಧಿಸುತ್ತಿದ್ದಾರೆ. ಈ ಪಾರಿವಾಳಗಳ ಸಂಖ್ಯೆ ಹೆಚ್ಚಾಗಿ ಅವುಗಳ ಹಿಕ್ಕೆಗಳು ಅಲ್ಲಿನ ಸ್ಮಾರಕಗಳಿಗೆ ಹಾನಿಯುಂಟುವಾಡುತ್ತಿರುವುದೇ ಇದಕ್ಕೆ ಕಾರಣ. ಇದಲ್ಲದೆ ಕೆಲ ಪ್ರದೇಶಗಳಲ್ಲಿ ಪ್ರವಾಸಿಗರು ಯಾವುದೇ ಆಹಾರ ಸೇವಿಸದಂತೆ ಕೂಡ ನಿರ್ಬಂಧ ಹಾಕಿದ್ದಾರೆ. ವೆನೀಸ್ ನಗರದಲ್ಲಿ ಪಾರಿವಾಳಗಳ ನಿರ್ವಹಣೆ ಮಾಡತೊಡಗಿ ಈಗಾಗಲೇ ಮೂರು ದಶಕಗಳೇ ಕಳೆದಿದೆ. ಆದರೂ ಇವುಗಳಿಂದ ಮುಕ್ತಿ ಸಿಕ್ಕಿಲ್ಲ.

ಪಾರಿವಾಳಗಳಿಗೆ ಆಹಾರ ನೀಡುವುದು ಒಂದು ರೀತಿಯ ದಯೆ ಮತ್ತು ಸಹಾನುಭೂತಿಯ ಸೂಚಕವಾಗಿ ಕಂಡುಬಂದರೂ, ಅದು ತರುವ ಸಂಭಾವ್ಯ (ನಕಾರಾತ್ಮಕ) ಪರಿಣಾಮಗಳನ್ನು ತಿಳಿಯುವುದು ಅನಿವಾರ್ಯ. ಮಿತಿಮೀರಿದ ಪಾರಿವಾಳಗಳ ಸಂಖ್ಯೆ, ರೋಗ ಹರಡುವಿಕೆ, ಕಟ್ಟಡ-ಸ್ಮಾರಕಗಳಿಗಾಗುವ ಹಾನಿ, ಆಕ್ರಮಣಕಾರಿ ನಡವಳಿಕೆ, ಮಾಲಿನ್ಯ ಮತ್ತು ವನ್ಯಜೀವಿಗಳಿಗೆ ತೊಂದರೆಗಳು ಪಾರಿವಾಳಗಳಿಗೆ ಆಹಾರ ನೀಡುವುದರಿಂದ ಸಂಭವಿಸುವ ಗಂಭೀರ ಸಮಸ್ಯೆಗಳು.

ಪಾರಿವಾಳಗಳಿಗೆ ಆಹಾರ ನೀಡುವುದರಿಂದ ಎದುರಾಗುವ ಸಮಸ್ಯೆಗಳಿಗೆ ಪ್ರತಿಯಾಗಿ ನಗರ ಪ್ರದೇಶಗಳಲ್ಲಿ ಅಧಿಕಾರಿಗಳು ಈ ಅಭ್ಯಾಸವನ್ನು ನಿಯಂತ್ರಿಸಲು ಹಲವಾರು ಕ್ರಮಗಳನ್ನು ಜಾರಿಗೆ ತರಬೇಕಿದೆ. ಅಧಿಕಾರಿಗಳು ಬಳಸುವ ಪ್ರಾಥಮಿಕ ಕಾರ್ಯತಂತ್ರವೆಂದರೆ, ಸಾರ್ವಜನಿಕ ಜಾಗೃತಿ ಅಭಿಯಾನಗಳು. ಈ ಅಭಿಯಾನಗಳು ಪಾರಿವಾಳಗಳಿಗೆ ಆಹಾರ ನೀಡುವುದರಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಪಾರಿವಾಳಗಳಿಗೆ ಆಹಾರ ನೀಡುವುದರೊಂದಿಗೆ ಸಂಬಂಧಿಸಿದ ಆರೋಗ್ಯದ ಅಪಾಯಗಳು, ಕಟ್ಟಗಳಿಗೆ ಹಾನಿ ಮತ್ತು ಪರಿಸರದ ಪರಿಣಾಮಗಳನ್ನು ಎತ್ತಿ ತೋರಿಸುವ ಮೂಲಕ, ಈ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವವವರಲ್ಲಿ ಇದನ್ನು ತಡೆಯಲು ಪ್ರಯತ್ನಿಸಬೇಕಿದೆ.

ಜಾಗೃತಿ ಅಭಿಯಾನಗಳಿಗೆ ಪೂರಕವಾಗಿ, ಸಂಬಂಧಪಟ್ಟ ಅಧಿಕಾರಿಗಳು ಸೂಚನಾ ಫಲಕಗಳು ಮತ್ತು ಮಾಹಿತಿ ಫಲಕಗಳ ಮೂಲಕ ಪಾರಿವಾಳಗಳಿಗೆ ಆಹಾರ ನೀಡುವ ಉತ್ಸಾಹ ತಗ್ಗಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಸೂಕ್ತ ದೃಶ್ಯ ಜ್ಞಾಪನೆಗಳನ್ನು ಪಾರಿವಾಳಗಳು ಹೆಚ್ಚಾಗಿ ಇರುವ ಪ್ರದೇಶಗಳ ಸುತ್ತಮುತ್ತ ಹಾಕಬೇಕಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ಸ್ಥಳೀಯ ಬೈಲಾಗಳು ಅಥವಾ ಆಡಳಿತಾತ್ಮಕ ಆದೇಶಗಳ ಮೂಲಕ ಹೀಗೆ ಪಾರಿವಾಳಗಳಿಗೆ ಆಹಾರ ನೀಡುವುದನ್ನು ನಿಷೇಧಿಸಬಹುದು. ಹೀಗೆ ಜಾರಿಗೊಳಿಸಿದ ನಿಷೇಧಗಳನ್ನು ಉಲ್ಲಂಘಿಸಿ ಪಾರಿವಾಳಗಳಿಗೆ ಆಹಾರ ನೀಡುತ್ತಿರುವ ವ್ಯಕ್ತಿಗಳಿಗೆ ದಂಡ ಅಥವಾ ಎಚ್ಚರಿಕೆಗಳನ್ನು ನೀಡಲು ಅಧಿಕಾರಿಗಳಿಗೆ ಅಧಿಕಾರ ನೀಡಬಹುದು.

ಪಾರಿವಾಳಗಳಿಗೆ ಆಹಾರವನ್ನು ನೀಡಬೇಕು ಎಂದೆನಿಸುವವರು ಪಕ್ಷಿ ಸಂರಕ್ಷಣಾ ಸಂಸ್ಥೆಗಳನ್ನು ಬೆಂಬಲಿಸಬಹುದು ಮತ್ತು ಎಲ್ಲಾ ಪಕ್ಷಿ ಪ್ರಭೇದಗಳಿಗೆ ಸೂಕ್ತವಾದ ಆಹಾರ, ನೀರು ಮತ್ತು ಆಶ್ರಯದೊಂದಿಗೆ ಪಕ್ಷಿಸ್ನೇಹಿ ಸ್ಥಳಗಳನ್ನು ರಚಿಸಬಹುದು. ಜವಾಬ್ದಾರಿಯುತ ಕ್ರಮಗಳನ್ನು ಉತ್ತೇಜಿಸುವ ಮೂಲಕ ಮತ್ತು ಪಾರಿವಾಳಗಳನ್ನು ಪೋಷಿಸುವ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಮೂಲಕ, ನಾವು ಪಕ್ಷಿಗಳು ಮತ್ತು ಅವು ವಾಸಿಸುವ ನಗರ ಪರಿಸರ ವ್ಯವಸ್ಥೆಯ ಸೂಕ್ಷ್ಮ ಸಮತೋಲನ ಎರಡನ್ನೂ ರಕ್ಷಿಸಬಹುದು.

(ಲೇಖಕರು ಸಂಶೋಧಕ, ಪಕ್ಷಿ ವೀಕ್ಷಕ)



ಮಗಳಾದ ಮಗನ...

ಒಂದನೇ ಪುಟದಿಂದ...

ಈಗ ಎನ್.ಆರ್ ಕಾಲೊನಿಗೆ ಬಂದಿದ್ದು, ಗಮಗಮ ಇನ್ನೂ ಚೆನ್ನಾಗಿ ನಡೆಯುತ್ತಿದೆ' ಎಂದು ಹೇಳುತ್ತಿದ್ದ ವನಜಾಕ್ಷಿ, 2018ರಲ್ಲಿ ತಮ್ಮ ಜೀವನದಲ್ಲಾದ ದೊಡ್ಡ ಬದಲಾವಣೆ ಬಗ್ಗೆ ಹೇಳುವಾಗ ಮಾತ್ರ ಕಣ್ಣಲ್ಲಿ ನೀರು ತುಂಬಿಕೊಂಡರು.

'ಅವತ್ತೊಂದು ದಿನ ರಾತ್ರಿ ದೊಡ್ಡ ಮಗಳು ಶೀಲಾ ವಿಡಿಯೊ ಕಾಲ್ ಮಾಡಿದಳು. 'ಅಮ್ಮಾ, ಮಂಜು ಕಾಂಪಿಟೇಷನ್‌ನಲ್ಲಿ ವಿನ್ ಆಗ್ಯಾನ. ಇಲ್ನೋಡು ಹೆಂಗ್ ಕಾಣಸ್ತಾನ' ಅಂತಾ ತೋರಿಸಿದಳು. ಹೆಣ್ಣುಮಕ್ಕಳ ಡ್ರೆಸ್ ಹಾಕ್ಕೊಂಡಿದ್ದ ಮಗ. ಫ್ಯಾನ್ಸಿ ಡ್ರೆಸ್ ಕಾಂಪಿಟೇಷನ್ ಇರಬೇಕು ಅಂದ್ಕೊಂಡು, 'ಛಲೋ ಐತಿ ಬಿಡು' ಎಂದು ಹೇಳಿ ಮಲಗಿದೆ. ಮನೆಗೆ ಬಂದಾಗಲೂ ಅದೇ ಡ್ರೆಸ್‌ನಲ್ಲಿದ್ದ ಮಂಜುನಾಥ. 'ಸೇಮ್ ಹುಡುಗಿ ಕಂಡಂಗ ಕಾಣ್ತಿ ನೋಡು' ಎಂದೆ. 'ಇನ್ಮ್ಯಾಗ ನಾ ಹಿಂಗ ಇರ್ತೀನಿ, ಇದೇ ನನ್ನ ಜೀವನಾ' ಅಂದುಕೊಂಡು ಒಳಗೆ ಓಡಿದ.

ಮರುದಿನ ಶೀಲಾ ಮತ್ತು ಮಂಜುನಾಥ್ ಸೇರಿ, 'ನಾನು ಅವನಲ್ಲ, ಅವಳು' ಸಿನಿಮಾ ತೋರಿಸಿದರು. 'ಇದೇನ್ ಹಿಂಗೈತಿ ಈ ಫಿಲಮ್ಮು.. ಇದನ್ನೆಲ್ಲ ನಂಗ್ಯಾಕ ತೋರಸಾಕಹತ್ತೀರಿ' ಎಂದೆ. ಶೀಲಾ ಅಳುತ್ತಾ ಹೇಳಿದಳು, 'ಮಂಜೂನು ಹಿಂಗ ಹೆಣ್ಣಾಗಿ ಬದಲಾಗ್ಯಾನ, ಇನ್ಮೇಲೆ ನೀನು ಅವನಿಗೆ ನೀತು ಅಂತಾನ ಕರೀಬೇಕು ಅಂದಳು. ನನಗೆ ನಿಂತ ನೆಲ ಒಮ್ಮೆಗೇ ಕುಸದಂಗಾತು' ಕಣ್ಣೀರು ಒರೆಸಿಕೊಂಡರು ವನಜಾಕ್ಷಿ.

'ನೋಡ್ ಅವ್ವಾಜಿ, ಮಗಾ ಆಗಿ ನನ್ನ ಜವಾಬ್ದಾರಿ ಎಲ್ಲ ಮುಗಿಸೇನಿ. ಹೋಟೆಲ್ಲು, ಟ್ಯಾಟೂ ಸೆಂಟರ್ ಛಲೋ ನಡೀತೈತಿ, ಹೆಣ್ಣಾಗಬೇಕು ಅನ್ನೋದು ಮೊದಲಿನಿಂದಲೂ ನನಗಿದ್ದ ಬಯಕಿ. ಹೊಸಾ ಜೀವನ ರೂಪಿಸಿಕೊಳ್ಳಾಕ ನನಗ ಅವಕಾಶ ಕೊಡು. ನಾನು ಏನಾರ ಸಾಧಿಸ್ತೀನಿ. ನಿನಗ ಕೆಟ್ಟ ಹೆಸರು ತರೂ ಕೆಲಸಾ ಅಂತೂ ಮಾಡಂಗಿಲ್ಲ' ಎಂದು ಮಂಜುನಾಥ್ ಹೇಳಿದ. ನನ್ನ ಗಂಡ ಮತ್ತು ದೊಡ್ಡ ಮಗ ಒಪ್ಪಲಿಲ್ಲ.

'ಹುಟ್ಟಿದಾಗಿಂದ ಭಾಳ ಶಿಸ್ತಿಂದ ಬೆಳೆದಾಂವ ಮಂಜುನಾಥ. ಮೆಜಾರಿಟಿಗೆ ಬ್ಯಾರೆ ಬಂದಾನ. ನಾ ಒಪ್ಪಲಿಲ್ಲ ಅಂದ್ರ ಮನಿ ಬಿಟ್ಟು ಹೊಕ್ಕಾನ' ಅಂದುಕೊಂಡೆ. ಮನೆ ಬಿಟ್ಟು ಹೋಗಿ ಬೀದಿಯಲ್ಲಿ ಭಿಕ್ಷೆ ಬೇಡುವ, ವೇಶ್ಯಾವಾಟಿಕೆ ನಡೆಸಬಹುದೆಂಬ ದೃಶ್ಯ ಕಣ್ಮುಂದೆ ಬಂತು. 'ಇಲ್ಲ, ನಾನು ಹೆತ್ತ ಕೂಸು ಅದು. ನಾನ ಸಪೋರ್ಟ್ ಮಾಡ್ಲಿಲ್ಲ ಅಂದ್ರ ಮತ್ತ್ಯಾರು ಅವನ ಬೆಂಬಲಕ್ಕ ನಿಲ್ತಾರ ಎಂದುಕೊಂಡು ಒಪ್ಪಿದೆ. ಅವನನ್ನ ನೀತು ಅಂತಲೇ ಕರೆಯಲಾರಂಭಿಸಿದೆ' ಎಂದು ವನಜಾಕ್ಷಿ ಮಾತು ಮುಂದುವರಿಸಿದರು.

'ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ನೀತು ರೀಲ್ಸ್ ನೋಡಿದ ನೆಂಟರು, ಊರಿನವರು ನನಗೆ ಫೋನ್ ಮಾಡಿ ಬೈಯತೊಡಗಿದರು. 'ನಿನಗೇನ್ ಬುದ್ಧಿಗಿದ್ದಿ ಐತಿಲ್ಲೋ, ಮಗನಿಗೆ ಮದ್ವಿ ಮಾಡು ಅಂದ್ರ, ಸೀರಿ ಉಡಿಸಿ ಕುಂದ್ರಿಸಿದಿಯಲ್ಲ. ಊರಾಗೆಲ್ಲ ಮಾನ-ಮರ್ಯಾದಿ ಇಲ್ಲದಂಗಾಗೈತಿ. ಬೆಂಗಳೂರಿಗೆ ಹೋಗಿ ಏನೋ ಮಾಡ್ತೀರಿ ಅಂದ್ರ ಇಂಥವೇ ಹಿರೀತನ ಮಾಡ್ತೀರೇನು'' ಎಂದು ನೆಂಟರು ರಾತ್ರಿಯೆಲ್ಲ ಫೋನ್ ಮಾಡಿ ಬೈಯುತ್ತಿದ್ದರು. ನಾನು ಈ ಕಿವಿಯಲ್ಲಿ ಕೇಳಿ, ಆ ಕಿವಿಯಲ್ಲಿ ಬಿಟ್ಟುಬಿಟ್ಟೆ. ನೀತುಗೆ ಸಪೋರ್ಟ್ ಮಾಡಿದೆ. ಮಗ ಆಗಿ ಎಷ್ಟು ಜವಾಬ್ದಾರಿಯಿಂದ ಕೆಲಸ ಮಾಡುತ್ತಿದ್ದನೋ, ಮಗಳಾಗಿಯೂ ಇನ್ನೂ ಹೆಚ್ಚು ಜವಾಬ್ದಾರಿಯಿಂದ ಮನೆ, ಹೋಟೆಲ್ ನಡೆಸುತ್ತಿದ್ದಾಳೆ. ನನಗಷ್ಟು ಸಾಕು' ಎಂದು ಕಣ್ಣೀರು ಒರೆಸಿಕೊಂಡರು.

ಅಮ್ಮನ ಮಾತುಗಳನ್ನ ಧನ್ಯತಾಭಾವದಲ್ಲೇ ಕೇಳುತ್ತಿದ್ದ ನೀತು, 'ಶಾಲೆಯಲ್ಲಿ ಇದ್ದ ದಿನಗಳಿಂದಲೂ ನನ್ನಲ್ಲೇ ಒಂದು ತೊಳಲಾಟವಿತ್ತು. ಗಂಡಾಗಿದ್ದರೂ ನನ್ನಲ್ಲಿ ಪೂರ್ತಿ ಹೆಣ್ಣಿನ ಭಾವನೆಗಳೇ ಇದ್ದವು. ನನ್ನ ಜವಾಬ್ದಾರಿಗಳು ಮುಗಿದ ಮೇಲೆ ಹೆಣ್ಣಾಗಿ ಬದಲಾಗಲು ನಿರ್ಧರಿಸಿದೆ. ಮೊದಲಿನಿಂದಲೂ ಸಂಬಂಧಿಸಿದ ವೈದ್ಯರಲ್ಲಿ ಈ ಬಗ್ಗೆ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದೆ. ಮೊದಲು ಅಕ್ಕನಿಗೆ ಹೇಳಿದ್ದೆ. ಮೊದಲು ಅವಳಿಗೆ ಆಘಾತ ಆಗಿದ್ದರೂ, ನಂತರ ಒಪ್ಪಿದ್ದಳು. ಆಪರೇಷನ್ ಮಾಡಿಸಿಕೊಂಡ ನಂತರವೂ ಮನೆಯಲ್ಲಿ ಹೇಳಿರಲಿಲ್ಲ. 2018ರಲ್ಲಿ ಟ್ರಾನ್ಸ್‌ಕ್ವೀನ್ ಆಗಿ ಗೆದ್ದ ನಂತರವೇ ಅಮ್ಮನಿಗೆ ವಿಷಯ ತಿಳಿಸಿದ್ದು. ಮೊದಲು ಅಪ್ಪ, ಅಣ್ಣ ತುಂಬಾ ವಿರೋಧಿಸಿದರು. ಈಗ ನನ್ನ ಸಾಧನೆಯ ಬಗ್ಗೆ ಖುಷಿ ವ್ಯಕ್ತಪಡಿಸುತ್ತಾರೆ' ಎಂದು ಕಣ್ಣರಳಿಸಿದರು.

ಲಿಂಗತ್ವ ಅಲ್ಪಸಂಖ್ಯಾತ ಮಾಡೆಲ್ ಆಗಿ ನೀತು ಗಮನ ಸೆಳೆದಿದ್ದಾರೆ. ಹಲವು ಫ್ಯಾಷನ್ ಷೋಗಳಲ್ಲಿ ಭಾಗವಹಿಸಿದ್ದಾರೆ. ಝೀ ಕನ್ನಡ ವಾಹಿನಿಯಲ್ಲಿ ಇತ್ತೀಚೆಗೆ ಪ್ರಸಾರವಾದ 'ಸೂಪರ್ ಕ್ವೀನ್'ನಲ್ಲಿ ಹೆಣ್ಣಾಗಿಯೇ ಭಾಗವಹಿಸಿದ್ದಾರೆ. ಹಲವು ಧಾರಾವಾಹಿ-ಸಿನಿಮಾಗಳಲ್ಲಿ ನಟಿಸುವಂತೆಯೂ ಅವರಿಗೆ ಬೇಡಿಕೆ ಬರುತ್ತಿದೆ. ಇತ್ತ, 'ಗಮ ಗಮ' ಹೋಟೆಲ್‌ನಲ್ಲಿ 17 ಹೆಣ್ಣುಮಕ್ಕಳಿಗೆ ಕೆಲಸ ಕೊಟ್ಟಿದ್ದಾರೆ.

'ರಿಲೇಟಿವ್ಸ್ ಈಗಲೂ ಫೋನ್ ಮಾಡ್ತಾರ. ಮೊದ್ಲು ಉಗೀತಿದ್ದವ್ರು ಈಗ ಹೊಗಳ್ತಾರ. ಮದ್ವಿಗೆ, ಫಂಕ್ಷನ್‌ಗಳಿಗೆಲ್ಲ ನೀತುನ ಕರ್ಕೊಂಡ್ ಬಾ ಅಂತಾ ಪೀಡಸ್ತಾರ. ನೀತು ನಮ್ಮೂರಿನ ಹೆಮ್ಮೆ ಅಂತಾರ..' ಎಂದು ಖುಷಿಯಿಂದ ಹೇಳುವ ವನಜಾಕ್ಷಿ, ಇಂತಹ ಕಷ್ಟದ ಮತ್ತು ಇಕ್ಕಟ್ಟಿನ ಸಂದರ್ಭಗಳಲ್ಲಿ ತಂದೆ-ತಾಯಿಗಳು ಮಕ್ಕಳ ಬೆಂಬಲಕ್ಕೆ ನಿಂತರೆ ಯಾವ ಮಕ್ಕಳೂ ಕೆಟ್ಟ ದಾರಿ ತುಳಿಯೋಕೆ ಸಾಧ್ಯವೇ ಇಲ್ಲ' ಎಂದು ಗಟ್ಟಿಧ್ವನಿಯಲ್ಲಿ ಹೇಳುತ್ತಾರೆ. ❖

ಮುನ್ನೋಟ 06-08-2023 ರಿಂದ 12-08-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಅತಿಯಾದ ಭಾವುಕತೆಯಿಂದ ಸಂಸಾರದಲ್ಲಿ ಗೊಂದಲಗಳಾಗಬಹುದು. ಹಣಕಾಸು ತಜ್ಞರ ಸಲಹೆ ಪಡೆದು ದೀರ್ಘಾವಧಿ ಯೋಜನೆಗಳಲ್ಲಿ ಹಣ ಹೂಡಿಕೆ ಮಾಡುವುದು ಒಳ್ಳೆಯದು. ವೈಯಕ್ತಿಕ ವ್ಯವಹಾರಗಳ ಬಗ್ಗೆ ಹಾಗೂ ಬಾಕಿ ಇರುವ ಕೆಲಸಗಳ ಬಗ್ಗೆ ಹೆಚ್ಚು ಗಮನಹರಿಸಿ. ಸಂಗೀತಗಾರರಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ. ಸರ್ಕಾರಿ ಭೂಮಿ ಅಥವಾ ನಿವೇಶನ ಪಡೆಯುವ ಯೋಗವಿದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಭವಿಷ್ಯದ ಬಗ್ಗೆ ಅನಗತ್ಯ ಚಿಂತನೆಗಳನ್ನು ಬಿಟ್ಟು ಈಗಿನ ಅಗತ್ಯಗಳನ್ನು ಪೂರೈಸಿಕೊಳ್ಳುವ ಕಡೆಗೆ ಹೆಚ್ಚು ಗಮನಹರಿಸಿ. ಪತ್ರಿಕೋದ್ಯಮ ಕಲಿಯುತ್ತಿರುವವರಿಗೆ ಹೆಚ್ಚು ಅವಕಾಶಗಳು ದೊರೆತು ಕಲಿಕೆ ಸಲೀಸಾಗುತ್ತದೆ. ನಿಮ್ಮ ಮುಂದಾಳತ್ವವನ್ನು ಜನರು ಹೆಚ್ಚು ಇಷ್ಟಪಡುತ್ತಾರೆ. ಸಹೋದ್ಯೋಗಿಗಳ ಸಹಕಾರದಿಂದ ಅನಿರೀಕ್ಷಿತವಾಗಿ ಉದ್ಯೋಗ ದೊರೆಯುವ ಸಾಧ್ಯತೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ನಿಮ್ಮ ಕಾರ್ಯವೈಖರಿಗೆ ಕಚೇರಿಯಲ್ಲಿ ಶ್ಲಾಘನೆ ದೊರೆಯುವುದು. ಸರ್ಕಾರದ ಕಡೆಯಿಂದ ಬರಬೇಕಾಗಿದ್ದ ಬಾಕಿ ಹಣ ಈಗ ಬರುತ್ತದೆ ಹಾಗೂ ಸರ್ಕಾರಿ ವ್ಯವಹಾರಗಳನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಹಿರಿಯರಿಂದ ನಿಮ್ಮ ಕಾರ್ಯ ಯೋಜನೆಗಳಿಗೆ ಸೂಕ್ತ ಸಲಹೆ ಮತ್ತು ಧನಸಹಾಯ ದೊರೆಯುತ್ತದೆ. ಕುಟುಂಬದ ಸದಸ್ಯರಿಂದ ಸಣ್ಣ ಮಾತುಗಳು ಕೇಳಿಬರಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿಮ್ಮ ನಿರೀಕ್ಷೆಗಳು ಹಿತಮಿತವಾಗಿದ್ದರೆ ಬಹಳ ಒಳ್ಳೆಯದು. ಅತಿಯಾದ ಅಭಿಮಾನ ನಿಮಗೆ ಎಂದೂ ಒಳ್ಳೆಯದಲ್ಲ. ಕೌಟುಂಬಿಕ ವಿಚಾರಗಳತ್ತ ಹೆಚ್ಚಿನ ಗಮನವನ್ನು ಕೊಡುವುದು ಒಳ್ಳೆಯದು. ಮನೆಯನ್ನು ಕಟ್ಟಿಸುವ ಸಲುವಾಗಿ ಸಾಮಗ್ರಿಗಳಿಗಾಗಿ ಹಣ ಖರ್ಚು ಮಾಡುವಿರಿ. ಉದ್ಯೋಗದಲ್ಲಿ ಹೊಸ ಸ್ಥಾನ ಸಿಗುವ ಸಾಧ್ಯತೆ ಇದೆ. ಕಬ್ಬಿಣ ಮತ್ತು ಸಿಮೆಂಟ್ ವ್ಯಾಪಾರಿಗಳಿಗೆ ಹೆಚ್ಚಿನ ವ್ಯವಹಾರ ನಡೆಯುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವಾಣಿಜ್ಯ ಸಂಸ್ಥೆಯಲ್ಲಿ ಉದ್ಯೋಗ ಪಡೆಯಲು ಹಿರಿಯರ ಸಹಾಯ ಪಡೆಯುವಿರಿ. ಕೆಲಸವನ್ನು ಸಾಧಿಸುವ ಹುಮ್ಮಸ್ಸು ನಿಮ್ಮಲ್ಲಿರುತ್ತದೆ. ವ್ಯವಹಾರಗಳಲ್ಲಿದ್ದ ಶತ್ರುಗಳು ಸ್ವಲ್ಪ ಬಲಹೀನರಾಗುವರು. ಹಿತಶತ್ರುಗಳು ನಿಮ್ಮನ್ನು ವಂಚಿಸುವ ಸಲುವಾಗಿ ನಿಮ್ಮ ಸ್ನೇಹ ಬೆಳೆಸುವರು, ಅವರ ಬಗ್ಗೆ ಸಾಕಷ್ಟು ಎಚ್ಚರದಿಂದಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನಿಮ್ಮ ಆಲೋಚನೆಯನ್ನು ಎಲ್ಲರೊಂದಿಗೆ ಹಂಚಿಕೊಂಡಾಗ ಅದಕ್ಕೊಂದು ಖಂಡಿತವಾದ ಉತ್ತರ ದೊರೆಯುತ್ತದೆ. ನಿಮ್ಮ ಯೋಜನೆಗಳಿಗೆ ಕುಟುಂಬದವರ ಮತ್ತು ಸ್ನೇಹಿತರ ಸಹಕಾರ ಬಹಳ ಮುಖ್ಯ. ಹೊಸ ಜನರ ಪರಿಚಯವಾಗಿ ಅವರಿಂದ ಸಹಾಯ ಸಿಗುತ್ತದೆ. ಹಣ ಹೂಡಿಕೆ ಮಾಡುವಾಗ ಎಚ್ಚರವಿರಲಿ, ಮೋಸ ಮಾಡುವವರು ಬರುವರು. ಸ್ವಂತ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಅಗತ್ಯ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಲೆಕ್ಕಪತ್ರದಲ್ಲಿ ಕೆಲಸ ಮಾಡುತ್ತಿರುವವರು ಕೆಲಸವನ್ನು ಮುತುವರ್ಜಿಯಿಂದ ಮಾಡಲೇಬೇಕು, ಇಲ್ಲವಾದಲ್ಲಿ ಅಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗುವಿರಿ. ಕರಕುಶಲಕರ್ಮಿಗಳಿಗೆ ಆದಾಯ ಹೆಚ್ಚುತ್ತದೆ. ಉತ್ತಮವಾದ ಪೂರ್ವ ತಯಾರಿಯೊಂದಿಗೆ ಆರಂಭಿಸಿದ ಕೆಲಸಗಳು ಪೂರ್ಣಗೊಳ್ಳುತ್ತವೆ. ಕೃಷಿಕರಿಗೆ ಸದ್ಯದಲ್ಲಿ ಆದಾಯ ಹೆಚ್ಚುವ ಸಂದರ್ಭವಿದೆ, ಅದರಲ್ಲೂ ವಾಣಿಜ್ಯ ಬೆಳೆಗಾರರಿಗೆ ಆದಾಯ ಹೆಚ್ಚುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಧಾರ್ಮಿಕ ಕಾರ್ಯಕ್ರಮಗಳಿಗೆ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಡುವಿರಿ. ನಿಮ್ಮ ಹೊಸ ವ್ಯವಹಾರಗಳಿಗೆ ತಂದೆ ತಾಯಿಯ ಕೃಪಾಶೀರ್ವಾದ ಸಿಗುತ್ತದೆ. ಚರ್ಮದ ವಸ್ತುಗಳನ್ನು ಮಾರಾಟ ಮಾಡುವವರಿಗೆ ವಿದೇಶಗಳಿಂದ ಬೇಡಿಕೆ ಬರುತ್ತದೆ. ಆಮದು ಮತ್ತು ರಫ್ತು ವ್ಯವಹಾರ ಮಾಡುವವರಿಗೆ ನಿಧಾನ ಗತಿಯ ವ್ಯವಹಾರವಿರುತ್ತದೆ. ಹೆಚ್ಚು ರಾಜಕೀಯ ಚಟುವಟಿಕೆಯಲ್ಲಿ ಇರುವವರಿಗೆ ಬಿರುಸಿನ ಕಾರ್ಯಗಳಿರುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಸಮಯವನ್ನು ವ್ಯವಸ್ಥಿತ ರೀತಿಯಲ್ಲಿ ವಿನಿಯೋಗಿಸಿಕೊಂಡಾಗ ಅದರ ಲಾಭ ನಿಮಗೆ ಖಂಡಿತ ಆಗುತ್ತದೆ. ಮಕ್ಕಳಿಗೆ ಉನ್ನತ ವಿದ್ಯೆಯಲ್ಲಿ ಅವಕಾಶ ದೊರೆತು ಮನಸ್ಸಿಗೆ ಸಂತೋಷವಾಗುತ್ತದೆ. ಕೃಷಿಯಿಂದ ಹೆಚ್ಚು ಲಾಭವಿರುತ್ತದೆ ಹಾಗೂ ಕೃಷಿ ಭೂಮಿಯನ್ನು ಕೊಳ್ಳುವ ಯೋಗವಿದೆ. ಹಿತ ಶತ್ರುಗಳನ್ನು ನೀವು ಸೌಮ್ಯವಾಗಿಯೇ ಇದ್ದು ಮಟ್ಟಹಾಕುವಿರಿ. ವಿದೇಶದಲ್ಲಿ ಇರುವ ಮಕ್ಕಳನ್ನು ನೋಡಲು ಹೋಗಿ ಬರಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಧಾರ್ಮಿಕ ವಿಚಾರಗಳಲ್ಲಿ ಸಾಧನೆ ಮಾಡಬೇಕೆನ್ನುವವರಿಗೆ ಹೆಚ್ಚಿನ ಅನುಕೂಲವಿರುತ್ತದೆ. ಸೇವಕ ವರ್ಗದವರಿಂದ ಹೆಚ್ಚಿನ ಅನುಕೂಲ ನಿಮಗೆ ದೊರೆಯುತ್ತದೆ. ವಾಹನದ ಬಿಡಿಭಾಗಗಳನ್ನು ಮಾರಾಟ ಮಾಡುವವರಿಗೆ ವ್ಯಾಪಾರ ಹೆಚ್ಚಾಗಿ ಹಣ ಬರುತ್ತದೆ. ಕಬ್ಬಿಣದ ವಸ್ತುಗಳನ್ನು ಮಾರಾಟ ಮಾಡುವವರಿಗೆ ವ್ಯವಹಾರ ವಿಸ್ತರಿಸುತ್ತದೆ. ಜನ ನಾಯಕರುಗಳಿಗೆ ಜನ ಬೆಂಬಲ ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ನಿಮ್ಮ ಸಹೋದ್ಯೋಗಿಗಳಿಂದ ನಿಮಗೆ ಸಮಸ್ಯೆ ಬರುವ ಸಾಧ್ಯತೆ ಇದೆ. ಹಾಗಾಗಿ ಅವರೊಡನೆ ಸ್ವಲ್ಪ ಸೂಕ್ಷ್ಮವಾಗಿ ವರ್ತಿಸಿರಿ. ನೆರೆಹೊರೆಯವರ ಕಿರಿಕಿರಿ ನಿಲ್ಲುವ ಸಾಧ್ಯತೆ ಇದೆ. ಅನಿವಾರ್ಯ ಸಮಯಗಳಲ್ಲಿ ಬಂಧು ಮಿತ್ರರ ಸಹಾಯ ಬೇಕಾಗುವುದು, ಹಾಗಾಗಿ ಅವರೊಡನೆ ಕಲಹ ಬೇಡ. ತೆರಿಗೆ ಸಂಗ್ರಹ ಅಧಿಕಾರಿಗಳಿಗೆ ಮೇಲಿನವರಿಂದ ಪ್ರಶಂಸೆಯ ಮಾತುಗಳು ಕೇಳಿ ಬರುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ರಾಜಕಾರಣಿಗಳಿಗೆ ಅವರ ಸ್ಥಾನದಲ್ಲಿ ಬದಲಾವಣೆಯಾಗುವ ಸಾಧ್ಯತೆ ಇದೆ. ಕೆಲವರಿಗೆ ನಾಯಕತ್ವದ ಸ್ಥಾನ ಸಿಗಬಹುದು. ಸಂಘಸಂಸ್ಥೆಗಳನ್ನು ನಡೆಸುತ್ತಿರುವವರಿಗೆ ಬೇಕಾದ ಅನುಕೂಲಗಳು ದೊರೆಯುತ್ತವೆ. ವಿದೇಶಿ ವ್ಯವಹಾರಗಳನ್ನು ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಆಮದು ರಫ್ತು ಮಾಡುವವರಿಗೆ ಇದ್ದ ತೊಡಕುಗಳು ನಿವಾರಣೆಯಾಗುತ್ತವೆ.

ಪದಬಂಧ 2801



ಮೇಲಿನಿಂದ ಕೆಳಕ್ಕೆ

1. ಜೈನರ ಜಿನಾಲಯಕ್ಕೆ ಕನ್ನಡದ ಹೆಸರು 3
2. ಮನಸ್ಸಿನಲ್ಲಾಗುವ ಕಳವಳಕ್ಕೊಂದು ರೂಪ 3
3. ತೊಂದರೆಯ ದಟ್ಟಡವಿ ತದನಂತರ ದಿಬ್ಬ 4
4. ಕುದುರೆಯಂತೆ ಓಡುವ ಮನಸ್ಸಿಗೆ ಹಾಕುವ ಲಗಾಮು 4
7. ಈ ಪ್ರಪಂಚವನ್ನು ನಡೆಸುವ ವಿಧಾತ 3
9. ಮನೆಯಲ್ಲಿ ಮುದ್ದಾಗಿ ಬೆಳೆಸಿದ ನಾಯಿ, ಬೆಕ್ಕು, ಹಸು... 4
10. ಈ ಪರಮಪುರುಷ ಪುರಂದರ ವಿಠಲನೇ ಸರಿ 5
11. ಪಡೆದ ಸಾಲವನ್ನು ಹಿಂತಿರುಗಿಸಿ ಕೊನೆಗಾಣಿಸು 3
13. ಜಗವನ್ನೇ ಗೂಡಲ್ಲಿ ಕಟ್ಟಿಕೊಂಡ ಹಕ್ಕಿ ತಲೆಕೆಳಗುಮಾಡಿದೆ 3
14. ಅಮ್ಮನಾಡುವ ಮಾತು 4
16. ದುಃಖದ ಬಿಸಿಯಲ್ಲಿ ಶೋಕ 3
17. ತಪಸ್ಸಿದ್ಧಿಗೆ ಸೀಮಿತವಾದ ಕಾಡು 4
18. ಕಾವ್ಯದಲ್ಲಿ ರಸದೌತಣ ನೀಡುವ ಕಾವ್ಯ ಬ್ರಹ್ಮ 4
19. ಕಷ್ಟಪಟ್ಟು ಸಂಪಾದಿಸಿದ್ದು 3
20. ಬರೆದದ್ದನ್ನು ಅಳಿಸುವ ಸಾಧನ 3

ಎಡದಿಂದ ಬಲಕ್ಕೆ

1. ಕೆಲಸಕ್ಕೆ ಬಾರದ ಕೇವಲ ವಾಕ್ಕು 4
3. ಕೈಲಾಸಕ್ಕೆ ದಾರಿ ತೋರುವ ದೇಹಶ್ರಮ 3
5. ಸಂತೋಷವನ್ನು ಕೊಡು 4
6. ಚೂರುಪಾರುಗಳನ್ನು ಕೊಂಡು ಮಾರುವವ ಬಲದಿಂದ ಎಡಕ್ಕೆ 3
8. ನಿತ್ಯ ಋಣದ ಪ್ರತಿರೂಪ 4
10. ಪಶ್ಚಿಮ ಕರಾವಳಿಯ ಕಡಲ ದಂಡೆ 6
12. ಜೀವದ ಉಸಿರು ಒಂದು ಚುಕ್ಕೆಗೆ ಸೀಮಿತ 4
13. ಎಷ್ಟು ಅಗೆದರೂ ಸಿಗುವ ಖನಿಜ 2
14. ಸುತಾ ಹಿಂತಿರುಗಿ ಬಾ, ಆಯಿತು ಗಂಟೆ 2
15. ಮಂಜುಳ ದನಿಯಿಂದಾವೃತಳಾದವಳು 4
16. ಹಾಡುಗಾರಿಕೆಯ ಪರಿಮಳ ಹರಡುವ ಕಾರ್ಯಕ್ರಮ 6
19. ಎಲ್ಲೆಯನ್ನು ಮೀರದೆ ಇಪ್ಪತ್ನಾಲ್ಕು ತಾಸು ಓಡುವ ಸಮಯ ಸೂಚಕ 4
21. ಚಿಗುರಿದ ರಾಜವಂಶ 3
22. ಸಮುದ್ರ ತೀರ ಪ್ರದೇಶ 4
23. ಮಾಡುವ ರೀತಿ ಹಿಂದುಮುಂದಾಗಿದೆ 3
24. ವರವ ಪಡೆಯಲು ಮತ್ತೆ ಕೆರೆಗೆ ಚೆಲ್ಲಬಹುದಾದ ಜಲ 4

ಪದಬಂಧ ಉತ್ತರ -2800

ಮೇಲಿಂದ ಕೆಳಕ್ಕೆ

1. ವಿಕಾಸ 2.ತರಾನ 3.ನದಿಜ 4. ಪತನ 5.ಯತನ 8.ಮಾದಾಳ 9.ಸಹಕಲಿಕೆ 11.ಜಲಸ 12.ಮಾಡಾಕು 13.ಕಲ್ಪನೆ 14.ನವಮಾನವ 15.ನಡತೆ 17.ಸುಕೃತ 19.ಕಡತ 20.ಅಂಗಾತ 21.ಗಮನ 22.ಮಾನವಿ 23.ಸಂತಸ 24.ತಿಯಾಯ

ಎಡದಿಂದ ಬಲಕ್ಕೆ

1.ವಿಶ್ರಾಂತಜೀವನ 4.ಪರಿಣಯ 6.ದಿಗಂತ 7.ಸಮಾನಸಮಾಜ 10.ನವಜನ 12. ಮಾಳವಿಕ 13.ಕಠಿನಶಾಸನ 16.ಕುಸುರಿಕೆತ್ತನೆ 18.ಮಾತುಕತೆ 20.ಅಂತರಂಗ 22.ಮಾನವಸಂತತಿ 25. ಮಜ್ಜನ 26.ತನುಧನ 27.ವಿರಾಮಸಮಯ

ಮಂಜುನಾಥನಿಗಿದೋ ಮಂಜು-ನಾದ

ವಿಕ್ರಂ ಕಾಂತಿಕೆರೆ

ಇತ್ತೀಚೆಗೆ ಕರ್ನಾಟಕ ಸಂಗೀತದ ಸ್ವರ-ಆಲಾಪದ ಮಾಧುರ್ಯ ಚೆನ್ನೈನ ಆರ್‌ಕೆ ಕನ್ವೆನ್ಷನ್ ಸೆಂಟರ್ ಸಭಾಂಗಣದಲ್ಲಿ ಭಕ್ತಿಭಾವದ ಅಲೆಗಳೆಬ್ಬಿಸುವಂತೆ ಮಾಡಿತ್ತು. ಕಛೇರಿಯ ಪ್ರಮುಖ ಅಂಗವಾದ ತೋಡಿ ರಾಗವು ಶ್ರೇಯಾ ಮತ್ತು ಅತ್ರೇಯಿ ಅವರ ಗಾಯನದ ಮೂಲಕ ವಿಸ್ತಾರ ಪಡೆದುಕೊಳ್ಳುತ್ತ ಸಾಗುತ್ತಿದ್ದಂತೆ ಶ್ರೋತೃಗಳು ತಲ್ಲೀನರಾಗತೊಡಗಿದ್ದರು. ಶ್ರುತಿ ಮತ್ತು ದಿವ್ಯಶ್ರೀ ಅವರು ನೆರವಲ್ ಪ್ರಸ್ತುತಪಡಿಸಿದಾಗ ರಾಗಭಾವ ಮತ್ತು ಸಾಹಿತ್ಯ ಭಾವ ತೆರೆದುಕೊಳ್ಳುತ್ತ ಸಹೃದಯಿಗಳ ಮನವನ್ನು ಆವರಿಸತೊಡಗಿತು. ಏಳೂ ಮಂದಿಯ ಮಧುರ ಕಂಠದಲ್ಲಿ ಕಲ್ಪನಾ ಸ್ವರಗಳನ್ನು ಹಾಡುತ್ತಿರುವಾಗ ಸಂಗೀತಪ್ರಿಯರ ಹೃದಯ ನಲಿದಾಡಿತು.

ನಾಟಕುರಿಂಜಿಯಲ್ಲಿ ಮೂಡಿಬಂದ ವರ್ಣದಿಂದ ತೊಡಗಿದ ಕಛೇರಿಯಲ್ಲಿ ಚಲನಾಟ, ರೇವತಿ, ಷಟ್‌ವಿಧ ಮುಂತಾದ ರಾಗಗಳು ಕೂಡ ರಂಗು ತುಂಬಿದ್ದವು. ಈ ಎಲ್ಲ ರಾಗಗಳಲ್ಲೂ ಕೇಳಿಬಂದ ಸಾಹಿತ್ಯದ ಗಂಧ ಒಂದೇ; ಅದು, ಧರ್ಮಸ್ಥಳದ ಶ್ರೀ ಮಂಜುನಾಥನ ಮಹಿಮೆ.

ಜುಲೈ ತಿಂಗಳ ಕೊನೆಯ ವಾರದಲ್ಲಿ ಈ ತಂಡದವರು ಕೇರಳದ ಕಾಸರಗೋಡಿನ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನದಲ್ಲಿದ್ದರು. ಮೇಧಾ ಉಡುಪ, ಶ್ರೇಯಾ ಕೊಳತ್ತಾಯ, ಸುಮೇಧಾ ಕೆ.ಎನ್, ಶರಣ್ಯ ಕೆ.ಎನ್ ಅವರ ಗಾಯನ. ಪಿಟೀಲಿನಲ್ಲಿ ತನ್ಮಯಿ ಉಪ್ಪಂಗಳ ಮತ್ತು ಮೃದಂಗದಲ್ಲಿ ಅಜೇಯ ಕೃಷ್ಣ ಉಪ್ಪಂಗಳ ಅವರ ಸಹಕಾರವಿದ್ದ ಕಛೇರಿಯಲ್ಲಿ ರಾಗದ ರಂಗು ಮಳೆಯ ತಂಪು ವಾತಾವರಣದ ನಡುವೆ ಶ್ರೋತೃಗಳಿಗೆ ಗುಂಗು ಹಿಡಿಸಿತ್ತು.

ಚೆನ್ನೈ-ಕಾಸರಗೋಡಿನಲ್ಲಿ ಮಾತ್ರವಲ್ಲ, ಬೆಂಗಳೂರು, ಉಡುಪಿ ಮತ್ತು ಧರ್ಮಸ್ಥಳವೂ ಸೇರಿದಂತೆ ದಕ್ಷಿಣ ಕನ್ನಡದ ವಿವಿಧ ಕಡೆಗಳಲ್ಲಿ ಇಂಥ ಕಛೇರಿಗಳು ನಡೆದಿದ್ದು, ಅಲ್ಲೆಲ್ಲ ಮಂಜುನಾಥನಿಗೆ ಸಂಬಂಧಿಸಿದ ಕೃತಿಗಳ [illegible] ಆಗಿದೆ.

ಕರ್ನಾಟಕದ ಪುಣ್ಯಕ್ಷೇತ್ರವೊಂದಕ್ಕೆ ಸಂಬಂಧಿಸಿದ ಹಾಡುಗಳನ್ನು ಶಾಸ್ತ್ರೀಯ ಸಂಗೀತ ರಾಗ-ಲಯಕ್ಕೆ ಅಳವಡಿಸಿ 'ಕೀರ್ತನೆ'ಗಳ ಸ್ವರೂಪ ನೀಡಿದ ಅಪರೂಪದ ಪ್ರಯತ್ನ ಇದು. ಕರ್ನಾಟಕ ಸಂಗೀತದ ತ್ರಿಮೂರ್ತಿಗಳೆಂದು ಕರೆಯಲಾಗುವ ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶ್ಯಾಮಾ ಶಾಸ್ತ್ರಿಗಳು ತಮಿಳುನಾಡಿನ ಬಹುತೇಕ ಕ್ಷೇತ್ರಗಳ ಕುರಿತು ಕೃತಿಗಳನ್ನು ರಚಿಸಿದ್ದಾರೆ. ಹೀಗಾಗಿ ಶಾಸ್ತ್ರೀಯ ಸಂಗೀತ ಕಿವಿಗೆ ಬಿದ್ದಾಗಲೆಲ್ಲ ಅಲ್ಲಿನ ದೇವಸ್ಥಾನಗಳು ಕಣ್ಣಮುಂದೆ ಕಟ್ಟುತ್ತವೆ. ಧರ್ಮಸ್ಥಳದ ಬಗ್ಗೆ ಇಂಥ ಅನುಭವ ಆಗಬೇಕೆಂಬ ಉದ್ದೇಶದಿಂದ ಮಂಗಳೂರು ಸುರತ್ಕಲ್‌ನ ಮಣಿಕೃಷ್ಣಸ್ವಾಮಿ ಅಕಾಡೆಮಿ 'ಮಂಜು-ನಾದ' ಎಂಬ ಹೆಸರಿನಲ್ಲಿ ಮಾಡಿರುವ ಪ್ರಯೋಗದ ಫಲವೇ ಈ ಕಛೇರಿಗಳು.

> ಚತುರ್ದಾನಕ್ಕೆ ಹೆಸರು ಗಳಿಸಿದ ಪುಣ್ಯಕ್ಷೇತ್ರ ಧರ್ಮಸ್ಥಳಕ್ಕೆ ಸಂಬಂಧಿಸಿದ ಹಾಡುಗಳನ್ನು ಶಾಸ್ತ್ರೀಯ ಸಂಗೀತದ ರಾಗ-ಲಯಕ್ಕೆ ಅಳವಡಿಸಿ 'ಕೀರ್ತನೆ'ಗಳ ಸ್ವರೂಪದಲ್ಲಿ ಹಾಡಲು ಸಜ್ಜುಗೊಳಿಸಿರುವ ಪ್ರಯೋಗ 'ಮಂಜುನಾದ...'

'ಮಂಜುನಾದ' ಯೋಜನೆಗೆ ಮೂರು ಹಂತಗಳ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೊದಲನೆಯದು ಕೃತಿ ರಚನೆ, ಎರಡನೆಯದು ಆ ಕೃತಿಗಳನ್ನು ಸಂಗೀತಕ್ಕೆ ಅಳವಡಿಸಿ ಹಾಡುವುದು, ಮೂರನೆಯದು ಎರಡು ಬಗೆಯ ಕಾರ್ಯಾಗಾರ-ಆನ್‌ಲೈನ್ ಮತ್ತು ಆಫ್‌ಲೈನ್. 180ಕ್ಕೂ ಹೆಚ್ಚು ಆನ್‌ಲೈನ್ ಕಾರ್ಯಾಗಾರಗಳು ಈಗಾಗಲೇ ನಡೆದಿದ್ದು, ಆಫ್‌ಲೈನ್ ಕಾರ್ಯಾಗಾರಗಳು 10ರಷ್ಟು ಆಗಿವೆ. ಈಗಾಗಲೇ ಸಂಗೀತ ಸಂಯೋಜನೆಗೊಂಡಿರುವ ಏಳು ಕೃತಿಗಳ ಪೈಕಿ ಐದನ್ನು ಕಳೆದ ವರ್ಷ ಧರ್ಮಸ್ಥಳದಲ್ಲೇ ಲೋಕಾರ್ಪಣೆಗೊಳಿಸಲಾಗಿತ್ತು. ಈಗ ಕಛೇರಿಗಳಲ್ಲಿ ಭಕ್ತಿ-ಸಂಗೀತದ ಮುದ ನೀಡುತ್ತಿರುವ ಕೃತಿಗಳು ಪುಸ್ತಕ ರೂಪದಲ್ಲೂ ಹೊರಬೀಳಲಿವೆ.

'ಕರ್ನಾಟಕ ಸಂಗೀತದ ತ್ರಿಮೂರ್ತಿಗಳು ರಚಿಸಿದ ಕೀರ್ತನೆಗಳನ್ನು ಕೇಳುವಾಗಲೆಲ್ಲ ಮೈ ಜುಮ್ಮೆನ್ನುತ್ತಿತ್ತು. ಕೆ.ಜೆ. ಜೇಸುದಾಸ್ ಅವರು ಪ್ರತಿ ವರ್ಷ ಜನ್ಮದಿನದಂದು ಕೊಲ್ಲೂರಿಗೆ ಬಂದಾಗಲೆಲ್ಲ ಮೂಕಾಂಬಿಕೆಯ ಕುರಿತು ಕೃತಿಯೊಂದನ್ನು ಹಾಡುತ್ತಿದ್ದರು. ಅದು ಕೂಡ ನನ್ನ ಅಂತರಂಗವನ್ನು ತಟ್ಟುತ್ತಿತ್ತು. ಈ ಸಂದರ್ಭದಲ್ಲಿ ಸುರತ್ಕಲ್‌ನ ಎಂ.ನಾರಾಯಣ ಅವರು ದಕ್ಷಿಣ ಕನ್ನಡ ಜಿಲ್ಲೆಯ ದೇವಾಲಯಗಳ ಬಗ್ಗೆ ರಚಿಸಿದ, ಆದರೆ ಜನರ ಬಳಿಗೆ ತಲುಪದ ಕೃತಿಗಳ ಬಗ್ಗೆ ನೆನಪಾಗುತ್ತಿತ್ತು. ಇದೆಲ್ಲವೂ ಒಟ್ಟು ಸೇರಿ ಮಂಜು-ನಾದಕ್ಕೆ ವೇದಿಕೆಯಾಯಿತು' ಎನ್ನುತ್ತಾರೆ, ಮಣಿಕೃಷ್ಣ ಸ್ವಾಮಿ ಅಕಾಡೆಮಿಯ ನಿತ್ಯಾನಂದ ರಾವ್.

'ಚತುರ್ದಾನಗಳಿಗೆ ಖ್ಯಾತಿ ಗಳಿಸಿರುವ ಧರ್ಮಸ್ಥಳದ ಕುರಿತು ಮೊದಲು ಪ್ರಯೋಗ ಮಾಡಲು ನಿರ್ಧರಿಸಲಾಯಿತು. ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬದವರಿಗೆ ಸಂಗೀತದ ಅಪಾರ ಒಲವು ಇರುವ ಕಾರಣ ಈ ಯೋಜನೆ ಬೇಗ ಸಾಕಾರಗೊಂಡಿತು. ಹೆಗ್ಗಡೆ ಅವರ ಸಲಹೆಯಂತೆ ವಿವಿಧ ಹಂತಗಳಲ್ಲಿ 'ಮಂಜುನಾದ'ವನ್ನು ಸಿದ್ಧಗೊಳಿಸಲು ಮುಂದಾದೆವು' ಎಂದರು ನಿತ್ಯಾನಂದ ರಾವ್.

ಯಕ್ಷಗಾನದ ಪೂರ್ವರಂಗದಿಂದ ಎರವಲು ಪಡೆದ 'ಕಾಮಿನಿ ಕರೆದು ತಾರೆ' ಎಂಬ ಪದ್ಯವನ್ನು ಯೋಜನೆಯಲ್ಲಿ ಬಳಸಲಾಗಿದೆ. ನಿತ್ಯಾನಂದ ರಾವ್ ಅವರ ಎರಡು, ಶತಾವಧಾನಿ ಗಣೇಶ್ ಮತ್ತು ಎಂ.ನಾರಾಯಣ ಅವರ ಒಂದೊಂದು ಕೃತಿಗಳನ್ನು ಕೂಡ ಸದ್ಯ ಬಳಸಲಾಗಿದ್ದು, ರಾಜ್‌ಕುಮಾರ್ ಭಾರತಿ ಅವರು ರಾಗ ಸಂಯೋಜನೆ ಮಾಡಿದ್ದಾರೆ. ಇನ್ನೂ 2 ಕೃತಿಗಳ ಸಂಯೋಜನೆ ಅಂತಿಮ ಹಂತದಲ್ಲಿದ್ದು, ಸಿದ್ಧಗೊಂಡಿರುವ 5 ಕೃತಿಗಳನ್ನು ಒಳಗೊಂಡ 14 ಕಛೇರಿಗಳು ಈಗಾಗಲೇ ನಡೆದಿವೆ.

'ಚತುರ್ದಾನಕ್ಕೆ ಹೆಸರಾದ ಧರ್ಮಸ್ಥಳ ಕ್ಷೇತ್ರದ ಮಹಿಮೆ ಅದ್ಭುತ. ಇಂಥ ಪುಣ್ಯ ಸ್ಥಳಕ್ಕೆ ಸಂಬಂಧಿಸಿದ ಕೃತಿಗಳನ್ನು ಶಾಸ್ತ್ರೀಯ ಸಂಗೀತಕ್ಕೆ ಅಳವಡಿಸಿದ್ದು ಕೃತಾರ್ಥ ಭಾವ ಮೂಡಿಸಿದೆ. ಕೃತಿಗಳಿಗೆ ನಿರೀಕ್ಷೆಗೂ ಮೀರಿದ ಸ್ಪಂದನೆ ಸಿಕ್ಕಿದೆ' ಎಂದು ನಿತ್ಯಾನಂದ ರಾವ್ ಭಾವುಕರಾಗಿ ನುಡಿಯುತ್ತಾರೆ.


ಸಿರಿಬಾಗಿಲಿನಲ್ಲಿ ನಡೆದ ಮಂಜು-ನಾದ ಕಛೇರಿ

> ಧರ್ಮಸ್ಥಳ ಕ್ಷೇತ್ರಕ್ಕೆ ಸಂಬಂಧಿಸಿದ ಪದ್ಯಗಳಲ್ಲಿ ಕೃತಿಕಾರರ ಭಾವನೆಗಳು ನಳನಳಿಸುತ್ತಿವೆ. ಲಕ್ಷಗಟ್ಟಲೆ ಭಕ್ತರು ಇರುವ ಇಲ್ಲಿನ ಕುರಿತ ಕೃತಿಗಳನ್ನು ಹಾಡುವಾಗ ನಮಗೂ ಮಹದಾನಂದವಾಗುತ್ತದೆ. ಧರ್ಮಸ್ಥಳದಲ್ಲಿ ಮೊದಲ ಬಾರಿ ಹಾಡುವುದಕ್ಕೂ ಮುನ್ನ ಒಂದು ರಾತ್ರಿ ಪೂರ್ತಿ ಅಭ್ಯಾಸ ಮಾಡಲಾಗಿತ್ತು.
>
> –ಶ್ರೇಯಾ ಕೊಳತ್ತಾಯ, ಗಾಯಕಿ

ಸ್ತ್ರೀ ಚಹರೆಯ ಸಿಕ್ಕುಗಳ ಅನ್ವೇಷಣೆ

ರಾಜೇಂದ್ರ ಚೆನ್ನಿ

ವಿಮರ್ಶೆ

ತುಳಸಿ ವೇಣುಗೋಪಾಲ್ ಅವರ ಸಮಗ್ರ ಕತೆಗಳನ್ನು ಓದುವುದೆಂದರೆ ಅಪೂರ್ವವಾದ ಸೂಕ್ಷ್ಮತೆ, ಬದುಕಿನ ಬಗ್ಗೆ ತೀವ್ರವಾದ ಕುತೂಹಲದ ಜೊತೆಗೆ ಅದರ ಬಗ್ಗೆ ಮೂಲಭೂತವಾದ ತಾತ್ವಿಕ ಪ್ರಶ್ನೆಗಳನ್ನು ಕೇಳಬಲ್ಲ ವೈಚಾರಿಕ ಪ್ರತಿಭೆಯುಳ್ಳ ಬರಹಗಾರ್ತಿಯೊಬ್ಬಳ ಅಂತರಂಗವನ್ನು ಪ್ರವೇಶಿಸಿದಂತೆ. ಈ ಅಂತರಂಗವು ಭೋಳೆ ನಂಬಿಕೆ ಮತ್ತು ತೆಳುವಾದ ಭಾವನೆಗಳ ಪ್ರಪಂಚವಲ್ಲ. ಕ್ಷೋಭೆ, ನೋವು, ವಿಷಾದಗಳೇ ಸ್ಥಾಯಿಯಾಗಿರುವ ಆತಂಕಗಳ ಭಾವ ಪ್ರಪಂಚವಿದಾಗಿದೆ. ಈ ಮಾತು ಸಮಗ್ರ ಕತೆಗಳ ಈ ಸಂಗ್ರಹದ ಮೊದಲರ್ಧದ ಕತೆಗಳ ಬಗ್ಗೆಯಂತೂ ನಿಜ. ಈ ಭಾಗದ ಕತೆಗಳು ಹೊರಗಿನ ಜಗತ್ತನ್ನು ಗಮನಿಸುತ್ತವೆಯಾದರೂ ಅದರ ವಿವರಗಳು ಕೇಂದ್ರ ಪ್ರಜ್ಞೆಯ ಮೂಲಕವೇ ಅರ್ಥ ಪಡೆಯುತ್ತವೆ. ಹೀಗಾಗಿ ಕೆಲವು ಕತೆಗಳಲ್ಲಿ ಇವು ಸ್ವಾನುಭವದ ಕಥನಗಳು ಎನ್ನುವ ಭಾವನೆ ಬರುತ್ತದೆ. ಅಲ್ಲದೆ ಇಲ್ಲಿ ಘಟನೆಗಳು ಮುಖ್ಯವಲ್ಲ, ಕೇಂದ್ರ ಪ್ರಜ್ಞೆಯೊಳಗೆ ನಡೆಯುವ ಪಲ್ಲಟಗಳೇ ಮುಖ್ಯವಾಗುತ್ತವೆ. ಇದು ಕನ್ನಡ ನವ್ಯ ಕತೆಗಳ ಮಾದರಿಯೆಂದು ಹೇಳುವಾಗಲೇ ಆ ಮಾದರಿಯೊಳಗೆ ಅಭಿವ್ಯಕ್ತವಾಗುತ್ತಿರುವುದು ಹರಿತವಾದ ಸ್ತ್ರೀಪ್ರಜ್ಞೆ ಎನ್ನುವುದನ್ನು ನೆನಪಿಡಬೇಕು. ಅನೇಕ ಕತೆಗಳ ಮುಖ್ಯ ವಸ್ತು ಆಪ್ತ ಸಂಬಂಧಗಳಲ್ಲಿ-ಗಂಡು ಹೆಣ್ಣಿನ ಸಂಬಂಧಗಳಲ್ಲಿ-ಕಂಡುಬರುವ ಬಿರುಕುಗಳು. ಸುಖ ಸಂಸಾರವೆಂದು ಕಾಣುವ ಮನೆಗಳಲ್ಲಿ, ಶಿಕ್ಷಿತ ಮಧ್ಯಮ ವರ್ಗದಲ್ಲಿ ಬೇರೆ ಯಾವ ಸಮಸ್ಯೆಯೂ ಇಲ್ಲದ ಸಂದರ್ಭದಲ್ಲಿ ಈ ಬಿರುಕುಗಳು ಗೋಚರವಾಗುತ್ತವೆ. ಇವು ಅದೆಷ್ಟು ಸೂಕ್ಷ್ಮವಾಗಿರುತ್ತವೆಯೆಂದರೆ, ಭಾಷೆಗೆ ಕೂಡ ನಿಲುಕುವುದಿಲ್ಲ. ಅನೇಕ ಕತೆಗಳಲ್ಲಿ ಈ ಬಿರುಕಿನ ಸ್ವರೂಪ ಖಚಿತವಾಗುವುದರೊಂದಿಗೆ ಕತೆ ಮುಕ್ತಾಯವಾಗುತ್ತದೆ. ತಾನು ಸಮಜಾಯಿಷಿಗಳ ಹೊಂದಾಣಿಕೆಗಳ ಅಪ್ರಾಮಾಣಿಕ ಬದುಕು ಈವರೆಗೆ ಬದುಕಿದ್ದೇನೆ ಎನ್ನುವ ಅರಿವು ನಾಯಕಿಗೆ ಬರುತ್ತದೆ. ಆದರೆ ಕುಟುಂಬವೆನ್ನುವ ಇಕ್ಕಟ್ಟಿನಲ್ಲಿ ಈ ಅರಿವು ಕೂಡ ಇನ್ನೊಂದು ಹೊಂದಾಣಿಕೆಯಲ್ಲಿ ಮುಗಿಯುತ್ತದೆ. ಕೆಲವು ಕಡೆ ಮಾತ್ರ ಗಟ್ಟಿಯಾದ ನಿರ್ಧಾರದಲ್ಲಿ ಕೊನೆಗೊಳ್ಳುತ್ತದೆ. ಉದಾಹರಣೆಗೆ 'ಮುಂಜಾವಿಗೆ ಕಾದವಳು' ಕತೆಯಲ್ಲಿ ಆತ್ಮಹತ್ಯೆಯ ಪ್ರಯತ್ನದ ನಂತರವೂ ನಾಯಕಿ ಬಯಸುವ ಬದಲಾವಣೆ ಸಾಧ್ಯವಾಗುವುದಿಲ್ಲ. 'ತಪ್ತರು' ಕತೆಯಲ್ಲಿ ಎಲ್ಲವನ್ನೂ ಧೈರ್ಯವಾಗಿ ಎದುರಿಸುವ ನಾಯಕಿಯೇ ಶರಣಾಗತಳಾಗಲು ಹೊರಡುತ್ತಾಳೆ. ಕತೆಗಳ ಸತ್ವವಿರುವುದು ಮುಖ್ಯ ಸ್ತ್ರೀ ಪಾತ್ರವು ತನ್ನ ಸ್ವಂತಿಕೆ, ತನ್ನ ಗುರುತು ಹಾಗೂ ಪ್ರತ್ಯೇಕತೆಯ ಅರಿವನ್ನು ಪಡೆಯುವುದರಲ್ಲಿ. ಕತೆಗಳ ಮುಕ್ತಾಯದ ಆಚೆಗೂ ಈ ಅಂಶವು ಪ್ರಭಾವಿಯಾಗಿಯೇ ಉಳಿಯುತ್ತದೆ. ವೀಣಾ ಶಾಂತೇಶ್ವರರ ಕತೆಗಳ ಮುಖ್ಯ ಸ್ತ್ರೀ ಪಾತ್ರಗಳಿಗೆ ಹೋಲಿಸಲು ಸಾಧ್ಯವಾಗದಿದ್ದರೂ ತುಳಸಿಯವರ ಕತೆಗಳಲ್ಲಿ ಸ್ತ್ರೀತ್ವವೆನ್ನುವುದು ಗಟ್ಟಿಯಾಗಿ ಅಭಿವ್ಯಕ್ತವಾಗುತ್ತದೆ. ನಾನು ಈವರೆಗೆ ಚರ್ಚಿಸಿದ ಕತೆಗಳು ಪ್ರಾಯಶಃ 1990-2000ದ ಅವಧಿಯಲ್ಲಿ ಬರೆದ ಕತೆಗಳು.

ಅಲ್ಲಿಂದಾಚೆಗೆ 'ಆವಿಷ್ಕಾರ' ಕತೆಯಿಂದ ಆರಂಭವಾಗಿ ಈ ಕೃತಿಯ ಕೊನೆಯವರೆಗಿನ ಕತೆಗಳ ಲೋಕವೇ ತೀರಾ ಭಿನ್ನವಾಗಿದೆ. ಜಯಂತ ಕಾಯ್ಕಿಣಿಯವರ ಕತೆಗಳಲ್ಲಿ ಮುಂಬಯಿ ಮೈತಳೆದು ನಿಲ್ಲುವಂತೆ, ಇಲ್ಲಿಯೂ ಮುಂಬಯಿಯೇ ಒಂದು ಪಾತ್ರವಾಗಿದೆ. ಹಿಂದಿನ ಕತೆಗಳ ಪುಟ್ಟ ಮಧ್ಯಮ ವರ್ಗದ ಸಂಸಾರದ ಬದಲು ಇಲ್ಲಿ ಭಾಷೆ, ಕಸುಬು, ಹಿನ್ನೆಲೆ, ಸ್ವಭಾವ ಇವೆಲ್ಲವುಗಳಲ್ಲಿ ವೈವಿಧ್ಯ ಇದೆ. ಮುಂಬಯಿ ಜಗತ್ತು ಕತೆಗಳ ಗಡಿಗಳನ್ನು ತಳ್ಳಿಕೊಂಡು ಪ್ರವೇಶ ಮಾಡುತ್ತದೆ. ಭಾವುಕ ಸಂವೇದನೆಗಳ ಅಂತರ್ಮುಖಿ ಅಂತರಂಗದ ಸ್ಥಾನದಲ್ಲಿ ಇಲ್ಲಿರುವುದು ನಿರ್ಭಾವುಕವಾಗಿ ಕಾಣುವ ಕ್ರೂರವಾದ ಜಗತ್ತು. ರಾತ್ರಿ ಹೆಗ್ಗಣಗಳನ್ನು ಬಡಿಗೆಯಿಂದ ಹೊಡೆದು ಕೊಂದು ಎಣಿಸಿ ಇಪ್ಪತ್ತು ಹೆಣಗಳನ್ನು ತೋರಿಸಿದರೆ ಮಾತ್ರ ಅಂದಿನ ಕೂಲಿ ಪಡೆಯುವವ ಇಲ್ಲಿ ಒಂದು ಪಾತ್ರ. ಅಷ್ಟೇ ನಿರ್ಭಾವುಕವಾಗಿ ತನ್ನ ಹೆಂಡತಿ ಮಕ್ಕಳನ್ನು ಅವನು ಕತೆಯ ಕೊನೆಗೆ ಹೊಡೆಯುತ್ತಾನೆ. ನಿರಾಶ್ರಿತರಿಗಾಗಿ ನಿರ್ಮಿಸಿದ ಸಮುಚ್ಚಯದಲ್ಲಿ ಕ್ರೀಡಾಂಗಣವೇ ರಣಾಂಗಣವಾಗುತ್ತದೆ. ಈ ಕತೆಯಂತೂ (ಲವ್ ಆಲ್) ಪರಿಪೂರ್ಣ ಕಾದಂಬರಿಯಂತಿದೆ. ಇಲ್ಲಿಯ ನಿವಾಸಿಗಳನ್ನು ಸಾಧ್ಯವಾದಷ್ಟು ತಹಬಂದಿಯಲ್ಲಿ ಇಡಲು ತಿಣುಕುವ ರೇಷನ್ ಅಂಗಡಿಯ ಮಂಗೂಜಿ ಒಂದು ಅಪೂರ್ವ ಪಾತ್ರ. ನೆರೆಹೊರೆಯವರ ಒಂದು ಸಮುದಾಯದ ಬದುಕಿನ ಏರಿಳಿತಗಳನ್ನು ಸಂಯಮದಿಂದ, ಭಾಷಾಡಂಬರವಿಲ್ಲದೆ ಮಾಗಿದ ದೃಷ್ಟಿಯಿಂದ ವಿವರಿಸುವ ಬರಹಗಾರ್ತಿಯ ಕಲೆಗಾರಿಕೆ ಬಹುದೊಡ್ಡ ಸಾಧನೆಯಾಗಿದೆ. ಈ ಭಾಗದ ಅನೇಕ ಕತೆಗಳು ಅವರ ಬಾಲ್ಯದ ಜಗತ್ತಿಗೆ ಮರಳುತ್ತವೆ. ಅನೇಕ ಕಡೆಗೆ ಯಶವಂತ ಚಿತ್ತಾಲರ ನೆನಪನ್ನು ತರುತ್ತದೆ. ದಾಯಾದಿಗಳಿಂದಾಗಿ ನೆಟ್ಟನೆಯ ಬಚ್ಚಲು ಮನೆಯೂ ಇಲ್ಲದ ಗುಲಾಬಿಯು ತನ್ನ ವಾರದ ಅಭ್ಯಂಜನವನ್ನು ಎಲ್ಲರ ಕಣ್ಣಿಗೆ ಬೀಳುವಂತೆ ಮಾಡಬೇಕಾಗುತ್ತದೆ. ಬೆತ್ತಲೆಯಾಗಿ ಎದ್ದು ನಿಂತು ದೂರದಿಂದ ನೋಡುವ ಗಂಡಸರಿಗೆ ಅವಳು ಸವಾಲು ಎಸೆಯುವುದು ದೊಡ್ಡ ಪ್ರತಿಭಟನೆಯ ದ್ಯೋತಕವಾಗುತ್ತದೆ. ಈ ಕತೆಯಲ್ಲಿ ಬರುವ ಗೃಹಿಣಿಯರ ಲೋಕವು ವೈದೇಹಿಯವರ ಕತೆಗಳಲ್ಲಿಯಂತೆ ಸಶಕ್ತವಾಗಿದೆ.


ಪು: 332 ₹395

ಸಮಗ್ರ ಕತೆಗಳು–ತುಳಸಿ ವೇಣುಗೋಪಾಲ್

ಲೇ: ತುಳಸಿ ವೇಣುಗೋಪಾಲ್

ಪ್ರ: ಪ್ರಿಸಮ್

ಸಂ: 080-26714108

ಮೊದಲ ಈ ಹಂತದ ಕತೆಗಳಲ್ಲಿ ಮುಖ್ಯ ಕಾಳಜಿಯೆಂದರೆ ಹೆಣ್ಣಿನ ಸ್ವಂತದ ಚಹರೆಯು ಯಾವುದೇ ಎದ್ದು ಕಾಣುವ ಹಿಂಸೆ ಅಥವಾ ಬಲಪ್ರಯೋಗವಿಲ್ಲದೆಯೆ ವಿವಾಹವೆನ್ನುವ ಸಂಸ್ಥೆಯ ಮೂಲದಲ್ಲಿಯೇ ಇರುವ ಅಸಮಾನತೆಯಿಂದಾಗಿ ಕಣ್ಮರೆಯಾಗುವುದರ ಬಗ್ಗೆ ಇರುವ ಆತಂಕವಾಗಿದೆ. ಅವರ ಸ್ತ್ರೀ ಪಾತ್ರಗಳು ಈ ಸಂಸ್ಥೆಯಿಂದ ಹೊರಬರುವ ಬಂಡಾಯದ ಕಿಚ್ಚನ್ನು ಹೊಂದಿಲ್ಲ. ಹೀಗಾಗಿ ಅದರ ಚೌಕಟ್ಟಿನೊಳಗೇ ತಮ್ಮ ಪ್ರತಿರೋಧವನ್ನು ತೋರಿಸಿ ಬಹುಪಾಲು ಸೋಲನ್ನು ಅನುಭವಿಸುತ್ತಾರೆ. ವಿವಾಹ, ದಾಂಪತ್ಯ ಇವುಗಳ ಬಗ್ಗೆ ಮೂಲಭೂತವಾದ ಪ್ರಶ್ನೆಗಳನ್ನು ಎತ್ತುತ್ತಾರೆ. ಸೂಕ್ಷ್ಮವಾದ ನೆಲೆಯಲ್ಲಿ ಸ್ವೀಕೃತ ಮೌಲ್ಯಗಳ ಹಿಂದಿರುವ ಗಂಡಾಳ್ವಿಕೆಯ ಅನಾವರಣವಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಪುರುಷ ಪಾತ್ರಗಳು ತಮ್ಮ ನಡವಳಿಕೆಯನ್ನು ಅವಲೋಕನ ಮಾಡಿಕೊಳ್ಳತೊಡಗುತ್ತವೆ. ತುಳಸಿಯವರ ಪ್ರಾಮಾಣಿಕತೆ ಇರುವುದು ತಮ್ಮದೇ ರೀತಿಯ ಪ್ರತಿರೋಧ ಒಡ್ಡುವ ಸ್ತ್ರೀ ಪಾತ್ರಗಳು ಅನುಭವಿಸುವ ಏಕಾಂಗಿತನ, ವಿಷಾದ ಹಾಗೂ ನೋವುಗಳನ್ನು ಕೂಡ ದಾಖಲಿಸುವುದರಲ್ಲಿ.

ಎರಡನೇ ಹಂತದ ಕತೆಗಳಲ್ಲಿ ನಿರುದ್ವಿಗ್ನವಾದ ಮಾಗಿದ ಶೈಲಿಯಲ್ಲಿ ಮನುಷ್ಯ ಸ್ವಭಾವ ಹಾಗೂ ಅದಕ್ಕೆ ಕಾರಣವೂ ಆದ ಮುಂಬಯಿಯಂಥ ಸಮಾಜ ಸ್ಥಿತಿಗಳನ್ನು ವಿಶ್ಲೇಷಿಸುತ್ತಾರೆ. 'ಭಂಗಾರ್ ಬಾಬಾ ವಂಡರ್‌ಲ್ಯಾಂಡ್' ಕತೆಯಲ್ಲಿ ಅನಿರೀಕ್ಷಿತವಾಗಿ ಮೊಮ್ಮಗಳು ತನ್ನ ವಿಕ್ಷಿಪ್ತ ಅಜ್ಜನೇ ಭಂಗಾರ್ ಬಾಬಾ ಆದ ಎನ್ನುವುದನ್ನು ಕಂಡುಕೊಳ್ಳುತ್ತಾಳೆ. ಅವಳ ತಾಯಿ ಮತ್ತು ಅಜ್ಜನ ಸಂಘರ್ಷಮಯ ಸಂಬಂಧದಿಂದ ಆರಂಭವಾಗಿ ಸ್ವತಃ ತನ್ನ ಅನುಭವಗಳನ್ನು ನೆನಪಿಸಿಕೊಳ್ಳುತ್ತಾಳೆ. ಈ ಕತೆಯ ಹಿಂದಿರುವ ಸಂಕೀರ್ಣವಾದ ತಿಳಿವಳಿಕೆ ಅಪೂರ್ವವಾದುದು. ಹಾಗೆಯೆ ಹುಟ್ಟಿದೂರಿನಿಂದ ಹೋಗಿ ಮುಂಬಯಿಕಾರ್‌ರಾಗಿ ಮಕ್ಕಳೊಂದಿಗೆ ರಜೆಯಲ್ಲಿ ಮಾತ್ರ 'ರಜಾಕಾರ್'ರಂತೆ ಭೇಟಿ ಕೊಡುವ ತಲೆಮಾರಿನ ಇನ್ನೊಂದು ಮಗ್ಗಲನ್ನು 'ಕಣ್ಣುಮುಚ್ಚಿ ಕಾಡಿದ ಗರಿಯೇ' ಕತೆಯಲ್ಲಿ ಕಾಣಬಹುದಾಗಿದೆ. ತಮ್ಮ ಅನುಭವ ಲೋಕ ಅನ್ವೇಷಿಸುವ ಪ್ರಯತ್ನದಲ್ಲಿ ತುಳಸಿಯವರು ಪ್ರಯೋಗಿಸಿರುವ ಅನೇಕ ಕಥನ ಶೈಲಿಗಳು ಅಭ್ಯಾಸಯೋಗ್ಯವಾಗಿವೆ.

'ಸೆರೆ ಅಂಗಡಿ ಸಂಗವ್ವ' ಇನ್ನು ನೆನಪು

ಮಲ್ಲಿಕಾರ್ಜುನ ಕಡಕೋಳ

ನುಡಿ ನಮನ

'ಸೆರೆ ಅಂಗಡಿ ಸಂಗವ್ವ'-ಇದು ಇತ್ತೀಚಿಗೆ ಮಿಂಚಿನಂತೆ ಹೆಸರು ಮಾಡಿದ ವೃತ್ತಿ ರಂಗಭೂಮಿಯ ಹೆಸರಾಂತ ನಾಟಕ. ಇದನ್ನು ರಚಿಸಿದ ನಾಟಕಕಾರ ಜೇವರ್ಗಿ ರಾಜಣ್ಣನವರ ಅಕ್ಷರ ಕೌಶಲಕ್ಕೆ ಮಿಗಿಲಾದ ರಂಗಮೌಲ್ಯ ದಕ್ಕಿಸಿದ್ದು ನಾಟಕದ ಸಂಗವ್ವ ಪಾತ್ರಧಾರಿ. ಸಂಗವ್ವ ಪಾತ್ರದ ಮೂಲಕ ಗುಡೂರು ಮಮತಾ ಅವರ ಅಮೋಘ ಅಭಿನಯ ಭಿನ್ನ ರಂಗಮೌಲ್ಯದ ಆಯಾಮವನ್ನೇ ಸೃಷ್ಟಿಸಿತ್ತು. ನಾಟಕಗಳದ್ದೇ ಜಾತ್ರೆ ಎಂದು ಪ್ರಸಿದ್ಧಿ ಪಡೆದಿರುವ ಬನಶಂಕರಿ ಜಾತ್ರೆಯಲ್ಲಿ ನೂರಾರು ಪ್ರಯೋಗಗಳ ಮೂಲಕ ಈ ನಾಟಕ ಒಂದು ಕೋಟಿ ರೂಪಾಯಿಗೂ ಹೆಚ್ಚು ಹಣ ಸಂಪಾದನೆ ಮಾಡಿತು. ಗುಡೂರು ಮಮತಾ ಅವರ ಪಾತ್ರಕ್ಕೆ ಅದರ ಎಲ್ಲ ಶ್ರೇಯಸ್ಸು ಸಲ್ಲಬೇಕು. ನೆನಪಿರಲಿ, ಇಂತಹದ್ದೊಂದು ಅಪರೂಪದ ದಾಖಲೆ ನಿರ್ಮಿಸಿದ ಮಮತಾ ಗುಡೂರು ಅವರಿಗೆ ಆಗ ಎಪ್ಪತ್ತರ ಏರುಪ್ರಾಯವಿತ್ತು.

ನಿಸ್ಸಂದೇಹವಾಗಿ ನಾಟಕದ ಹೆಗ್ಗಳಿಕೆಯೇ ಸಂಗವ್ವ ಪಾತ್ರ. ಇದು ವೃತ್ತಿ ರಂಗಭೂಮಿಯ ಚರಿತ್ರೆಯಲ್ಲಿ ಇತಿಹಾಸ ಸೃಷ್ಟಿಸಿದ ಸ್ತ್ರೀ ಪಾತ್ರ. ತಿಂಗಳುಗಟ್ಟಲೆ ಜರುಗುವ ಕಿಕ್ಕಿರಿದ ಬನಶಂಕರಿ ಜಾತ್ರೆಯಲ್ಲಿ ಎಪ್ಪತ್ತರ ಗುಡೂರು ಮಮತಾ ಖಾಸಗಿಯಾಗಿ ಅಡ್ಡಾಡುವುದೇ ಕಷ್ಟವಾಗಿತ್ತು. 'ಸೆರೇದ ಅಂಗಡಿ ಸಂಗವ್ವ ಬಂದ್ಳು, ಸಂಗವ್ವ ಬಂದ್ಳು... ಜಾಗ ಬಿಡಿ, ಜಾಗ ಬಿಡಿ...' ಎಂದು ಜನರು ಭಾವುಕರಾಗಿ ಸಂಗವ್ವ ಪಾತ್ರದ ಗುಡೂರು ಮಮತಾ ಅವರನ್ನು ನೋಡಲು ಮುಗಿಬೀಳುತ್ತಿದ್ದರು. ಆ ಪಾತ್ರ ಅಷ್ಟೊಂದು ಜನಪ್ರಿಯವಾಗಿತ್ತು.

ಚಿಗರಿಕಾರರಂತಹ ಬುಡಕಟ್ಟು ಜನಾಂಗದ ಮಹಿಳೆ ಸಂಗವ್ವಳದು ನಾಟಕದಲ್ಲಿ ಭಟ್ಟಿ ಸಾರಾಯಿ ಮಾರಾಟ ಮಾಡುವ ಕಾಯಕ. ಅವಳ ಕಾಯಕ ತಮ್ಮೂರ ನಾಗರಿಕ ಬದುಕಿಗೆ ಮಾರಕವೆಂದು ಊರ ಮುಖಂಡ ದೊಡಪ್ಪ ಧಣಿಯ ಆಕ್ರಮಣಕಾರಿ ತಕರಾರು. ಪ್ರತಿರೋಧದ ಆಕ್ರೋಶ ತಾರಕಕ್ಕೇರಿ ಒಂದು ಹಂತದಲ್ಲಿ ಧಣಿಯೇ ಕುಡುಕನಾಗುವ ವ್ಯತಿರಿಕ್ತ ಸನ್ನಿವೇಶ ನಿರ್ಮಾಣ. ಇದು ನಾಟಕದ ಸಂಕ್ಷೇಪ ಕಥನ. ಸಂಗವ್ವಳದು ಒಂದು ಬಗೆಯ ವಿಲಕ್ಷಣದ ಕ್ಯಾರೆಕ್ಟರ್. ಒಂದಷ್ಟು ನವಿರು ವಿನೋದ, ಮತ್ತೊಂದಿಷ್ಟು ವಿಲನ್, ಎರಡರ ವಿಸಂಗತ ಭಾವಗಳ ಬುಗ್ಗೆಯನ್ನೇ ಹರಿಸುವುದು ಇನ್ನೊಂದು ವಿಶೇಷ. ಇದೆಲ್ಲ ರಂಗಸಾಧ್ಯತೆ ಗುಡೂರು ಮಮತಾಗೆ ಮಾತ್ರ ಸಾಧ್ಯವಿತ್ತು. ಇರಾನಿ ಹುಡುಗಿಯರ ಉಡುಪು ಹೋಲುವ ವೇಷಭೂಷಣದ ಪರಿಕಲ್ಪನೆಯೂ ಮಮತಾ ಅವರದ್ದೇ ಆಗಿತ್ತು.

ಪ್ರಮೀಳಾ ಮತ್ತು ಮಮತಾ ಗುಡೂರು ಸಹೋದರಿಯರದು ವೃತ್ತಿ ರಂಗಭೂಮಿ ಚರಿತ್ರೆಯಲ್ಲಿ ಮುಪ್ಪಾಗದ ಮತ್ತು ಮುಕ್ಕಾಗದ ಹೆಸರು. ಇವರ ಹುಟ್ಟೂರು ಅಂದಿನ ಹುನಗುಂದ ತಾಲೂಕಿನ ಗುಡೂರು. ಕಡು ಬಡತನದ ಮುಸ್ಲಿಮರ ಇಟಗಿ ಮನೆತನದ ಫಕ್ರುಸಾಬ ಮತ್ತು ಇಮಾಂಬಿ ಇವರ ಅಪ್ಪ ಅಮ್ಮ. ಬಾಲ್ಯದಲ್ಲೇ ಬಣ್ಣದ ಬದುಕಿನ ಪ್ರವೇಶ. ಸೋದರಿಯರಿಬ್ಬರೂ ಜಾತಿ, ಮತ, ಧರ್ಮಾತೀತ ನಿಲುವಿನ ಭಾವೈಕ್ಯದ ಬಾಳನ್ನೇ ಬದುಕಿದವರು. ಡಾ. ಗುಬ್ಬಿ ವೀರಣ್ಣ ಪ್ರಶಸ್ತಿಗೆ ಭಾಜನರಾಗಿದ್ದ ಅಕ್ಕ ಪ್ರಮೀಳಾ ಈಗ್ಗೆ ಐದು ವರ್ಷಗಳ ಹಿಂದೆ ತೀರಿಕೊಂಡರು.

ಮೊನ್ನೆ ಆಗಸ್ಟ್ 3ರಂದು ಮಮತಾ ತಮ್ಮ ಹುಟ್ಟೂರು ಗುಡೂರಲ್ಲಿ ತೀರಿಕೊಂಡರು. ಕಳೆದ ಎಂಟು ತಿಂಗಳಿಂದ ಮಿದುಳಿನ ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದಿದ್ದರು. ಮಮತಾ ಅವರಿಗೆ ಅವರ ಅಪ್ಪ ಅಮ್ಮ ಇಟ್ಟ ಹೆಸರು ಮುಮ್ತಾಜ್. ರಂಗಭೂಮಿಯ ಸುಪ್ರಸಿದ್ಧ ರಂಗನಟನನ್ನು ವರಿಸಿದ ಮೇಲೆ ಮುಮ್ತಾಜ್, ಮಮತಾ ಆದದ್ದು. ಅವರ ಅಕ್ಕನದೂ ಅದೇ ಕತೆ. ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತ ಹೆಸರಾಂತ ನಾಟಕಕಾರ ಬಿ. ಆರ್. ಅರಿಷಿಣಗೋಡಿ ಅವರನ್ನು ವರಿಸಿ ಫಾತಿಮಾ, ಪ್ರಮೀಳಾ ಆದರು. ಈ ಬಗೆಯ ಕ್ರಾಂತಿಕಾರಕ ವರ್ಣಸಂಕರ ನಿದರ್ಶನಗಳು ವೃತ್ತಿ ರಂಗಭೂಮಿಯಲ್ಲಿ ಸಾಮಾನ್ಯ. ನಮ್ಮ ನಡುವಿನ ಪುಷ್ಪಮಾಲಾ ಅಬ್ದುಲ್ ಸಾಬ ಅಣ್ಣಿಗೇರಿ ಇಂತಹ ರಂಗ ಸೌಹಾರ್ದಕ್ಕೆ ಮತ್ತೊಂದು ಹೆಸರು. ಯಾವುದೇ ವೈರುಧ್ಯಗಳಿಲ್ಲದೇ ವೈವಿಧ್ಯದ ರಂಗಬಾಳು ಬದುಕುತ್ತಾರೆ.


ಯೌವನ ಕಾಲದಲ್ಲಿ ಮಮತಾ

ನೋವಿನ ಸಂಗತಿಯೆಂದರೆ ಅಂತರ್‌ಧರ್ಮೀಯ ರಂಗಸಾಂಗತ್ಯದ ಸುಡುವ ಸತ್ಯಗಳ ನಡುವೆ ರಂಗಜೋಡಿ ಕಲಾವಿದರು ತಲೆಎತ್ತಿ ಬಾಳುವುದಕ್ಕೆ ಸಮಾಜದ ಸಹಾನುಭೂತಿಯ ಅಗತ್ಯವಿದೆ.


ಮಮತಾ ಅವರಿಗೆ ಆರನೇ ವಯಸ್ಸಿಗೆ ಬಣ್ಣದ ನಂಟು ಅಂಟಿಕೊಂಡಿತು. ಅಷ್ಟು ಹೊತ್ತಿಗಾಗಲೇ ಅಕ್ಕ ಪ್ರಮೀಳಾ ನಾಯಕಿ ಪಾತ್ರಕ್ಕೆ ಕಾಲಿಟ್ಟಿದ್ದರು. ಚಿತ್ತರಗಿ ಕಂಪನಿ, ಅರಿಷಿಣಗೋಡಿ ಕಂಪನಿ, ಸುಳ್ಳದ ದೇಸಾಯರ ಕಂಪನಿ, ಏಣಗಿ ಬಾಳಪ್ಪ ಕಂಪನಿ, ಚಿಂದೋಡಿ ಕಂಪನಿ... ಹೀಗೆ ಕರ್ನಾಟಕದ ಎಲ್ಲಾ ಹೆಸರಾಂತ ನಾಟಕ ಕಂಪನಿಗಳಲ್ಲಿ ನಾಯಕಿ, ಖಳನಾಯಕಿ, ಪೋಷಕಿ, ಹಾಸ್ಯಪಾತ್ರಗಳ ಮೂಲಕ ಪ್ರೇಕ್ಷಕರ ಮನಗೆದ್ದ ರಂಗತಾರೆ ಮಮತಾ. 'ರಕ್ತರಾತ್ರಿ', 'ಕುರುಕ್ಷೇತ್ರ', 'ಗರೀಬಿ ಹಟಾವೋ', 'ಗುಣನೋಡಿ ಹೆಣ್ಣು ಕೊಡು', 'ರೈತನ ಮಕ್ಕಳು', 'ಎಚ್ಚರ ತಂಗಿ ಎಚ್ಚರ'... ಹೀಗೆ ಪೌರಾಣಿಕ, ಸಾಮಾಜಿಕ ನಾಟಕಗಳ ಎಲ್ಲ ಬಗೆಯ ಪಾತ್ರಗಳು ಇವರನ್ನು ಹುಡುಕಿ ಬಂದಿವೆ. ಅದರಲ್ಲೂ ವಿಶೇಷವಾಗಿ ದಾಂಪತ್ಯ ದೀವಿಗೆಯ ಸರಸ ಸಲ್ಲಾಪ, ಉತ್ಕಟ ಪ್ರೇಮಾಂಕುರದ ರಸಿಕೋನ್ಮಾದ ದೃಶ್ಯಗಳಿಗೆ ಜೀವತುಂಬುವ ಕುಶಲಕಲೆ ಮಮತಾ ಅವರಿಗೆ ಸಿದ್ಧಿಸಿತ್ತು. ಅಂತೆಯೇ ಅವರ ಅಭಿನಯದ ಅಂತಹ ಸನ್ನಿವೇಶಗಳನ್ನು ಮೆಚ್ಚಿದ ದುತ್ತರಗಿ ಕವಿಗಳು 'ಷಂಡ, ಸುಗುಡಿಯರಲ್ಲೂ ರಸಿಕತೆಯ ಪಸೆ ಒಸರಿಸುವ ಭಾವಭಾಗ್ಯದ ನಟಿ' ಎಂದು ಮಮತಾ ಪಾತ್ರವನ್ನು ಕೊಂಡಾಡಿದ್ದಾರೆ.

ಕನ್ನಡದ ಇಪ್ಪತ್ತಕ್ಕೂ ಹೆಚ್ಚು ಸಿನೆಮಾಗಳಲ್ಲಿ ಮಮತಾಗೆ ಪ್ರಮುಖ ಪಾತ್ರಗಳು ದೊರಕಿವೆ. ಹಿರಿಯ ಕಲಾವಿದರಾದ ವಜ್ರಮುನಿ, ಲೋಕೇಶ್, ಅಂಬರೀಷ್, ಸುಧೀರ್, ಮಾಲಾಶ್ರೀ, ಉಮಾಶ್ರೀ, ರಾಜೇಶ್, ಸುಂದರಕೃಷ್ಣ ಅರಸ್ ಮುಂತಾದವರೊಂದಿಗೆ ಅಭಿನಯಿಸಿದ ಪ್ರೀತಿ. ವರದರಾಜು ಡಾ. ರಾಜಕುಮಾರ್ ಪ್ರಶಸ್ತಿ, ನಾಟಕ ಅಕಾಡೆಮಿ ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಮಮತಾ ಮುಡಿ ಏರಿವೆ.

ಹುಡುಕಾಟದ ಕಣ್ಣು ಕಾಣಿಸಿದ ಬರಹಗಳು

ಪ್ರವಾಸ ಕಥನಗಳ ಮಾದರಿಗಳು ಹಲವು. ಕಂಡದ್ದನ್ನು ಚಿತ್ರಿಸಿ, ಆ ಸಂದರ್ಭಕ್ಕೆ ಹಗುರಾಗುವುದು ಸಾಮಾನ್ಯವಾಗಿ ಆಯ್ಕೆ ಮಾಡಿಕೊಳ್ಳುವ ದಾರಿ. ರಹಮತ್ ತರೀಕೆರೆ ಅವರ 'ಜೆರುಸಲೆಂ' ಪ್ರವಾಸ ಚಿಂತನೆಯ ಕೃತಿ. ಹೀಗಾಗಿಯೇ ಅದು ಅನುಭವದಾಚೆಗೆ ಅಧ್ಯಯನ, ಪರಾಮರ್ಶೆ, ಶೋಧನೆ ಹೀಗೆ ಬಿಳಲುಗಳನ್ನು ಕಾಣಿಸಿದೆ. ನೇಪಾಳ, ಜೋರ್ಡಾನ್, ಈಜಿಪ್ಟ್, ಪ್ಯಾಲೆಸ್ತೈನ್, ಇಸ್ರೇಲ್, ಟರ್ಕಿ, ಮಲೇಷ್ಯಾ, ಜರ್ಮನಿ, ಭೂತಾನ್, ನೆದರ್‌ಲ್ಯಾಂಡ್ಸ್, ಕ್ರೊಯೇಷಿಯಾ, ಸ್ಲೋವೇನಿಯಾ ಮುಂತಾದೆಡೆಗೆ ಪ್ರವಾಸಕ್ಕೆ ಹೋದಾಗಿನ ಅನುಭವ ಪ್ರೇರೇಪಿಸಿದ ಚಿಂತನಾ ಬರಹಗಳು ಇವು. ನಡು ಏಷ್ಯಾ, ಯೂರೋಪು, ಹಿಂದೂಸ್ತಾನ, ಕರ್ನಾಟಕ, ಪ್ರವಾಸತತ್ವ ಹೀಗೆ ವಿಭಾಗಗಳಾಗಿ ಇಲ್ಲಿನ 30 ಪ್ರಬಂಧಗಳನ್ನು ರಹಮತ್ ವಿಂಗಡಿಸಿದ್ದಾರೆ. ಆದರೆ, ಓದಿನ ಸುಖದ ವಿಷಯದಲ್ಲಿ ಎಲ್ಲವುಗಳದ್ದೂ ಏಕತ್ರ ಪರಿಣಾಮ.

'ನೀಲಕುರಿಂಜಿಯ ವನಗಳಲಿ' ಎನ್ನುವ ಬರಹವನ್ನೇ ಗಮನಿಸೋಣ. 'ಕುರಿಂಜಿ ನೋಡಲು ಮೊಳಕಾಲೆತ್ತರದ ಗಿಡ; ಅದರ ಕಪ್ಪುಹಸುರಿನ ದಪ್ಪನೆಯ ಎಲೆಗಳಿಗೆ ಹಸ್ತರೇಖೆಯಂತೆ ಎದ್ದುಕಾಣುವ ಗೀರುನರ; ಚಳಿಗೆದ್ದ ನವಿರಿನಂತೆ ಸೂಕ್ಷ್ಮಸುಂಕು; ಅಂಚಲ್ಲಿ ಗರಗಸದ ಹಲ್ಲಿನಂತೆ ಕಚ್ಚು.' ಈ ರೀತಿಯಲ್ಲಿ ಕಣ್ಣಿಗೆ ಕಟ್ಟುವ ಚಿತ್ರಬರಹವು ಕ್ರಮೇಣ ಒಂದು ಸಾಂಸ್ಕೃತಿಕ ಅಧ್ಯಯನದ ದರ್ಶನವಾಗಿ ಬೆಳೆಯುತ್ತದೆ. ಕುರಿಂಜಿ ಕುರಿತ ಬರಹಗಳಿಗಾಗಿ ಹುಡುಕಾಡಿರುವ ಲೇಖಕರು, ಬಿಜಿಎಲ್ ಸ್ವಾಮಿ ಅವರ 'ಹಸಿರಹೊನ್ನು'ವಿನಲ್ಲು ಇದರ ಪ್ರಸ್ತಾಪ ಇಲ್ಲದ್ದನ್ನು ಗುರುತಿಸುತ್ತಾರೆ. ಎ.ಕೆ. ರಾಮಾನುಜನ್ ಇಂಗ್ಲಿಷ್‌ಗೆ ಅನುವಾದಿಸಿದ ಪ್ರಾಚೀನ ಸಂಗಂ ಸಾಹಿತ್ಯದಲ್ಲಿನ ಕುರಿಂಜಿ ತಿಣೈನ ಎರಡು ಪದ್ಯಗಳನ್ನು ನಮ್ಮ ಓದಿಗೆ ಹಿಡಿದು ಕೊಡುತ್ತಾರೆ. ಕಂಡುಬಂದ ಜಾಗೆಗಳನ್ನು ಹೀಗೆ ಹುಡುಕಾಟದ ಕಣ್ಣುಗಳಿಂದ ಬಗೆ ಬಗೆದು ತೆಗೆದು, ಮೊಗೆದು ಕೊಟ್ಟಂತಹ ಬರಹಗಳು ವಿಸ್ತಾರವಾದ ಓದಿನ ತೃಪ್ತಿಯನ್ನು ಒದಗಿಸುತ್ತವೆ.


ಪು: 216 ₹250

ಜೆರುಸಲೆಂ–ಪ್ರವಾಸ ಚಿಂತನೆ

ಲೇ: ರಹಮತ್ ತರೀಕೆರೆ

ಪ್ರ: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್


ಸಂ: 080-22161900

ಹರಿದಾಸಿ ಪದ್ಮಾವತಿ ನೆನಪಿನ ಕಥನ

ಬಾಲಭಾರತಿ ಹರಿಕೀರ್ತನಾ ವಿದುಷಿ ಮಾರ್ಪಳ್ಳಿ ಪದ್ಮಾವತಿ ಶಿವರಾಮ ರಾವ್ ಅವರ ಜನ್ಮಶತದಿನೋತ್ಸವದ ಅಂಗವಾಗಿ ಹೊರತಂದ ಕೃತಿ 'ಶತದಳ ಪದ್ಮ'. ಪದ್ಮಾವತಿ ಅವರ ಪುತ್ರಿ ವಿಜಯಲಕ್ಷ್ಮಿ ನಂದಳಿಕೆ ಕುಟುಂಬದವರೇ ಸಂಪಾದಿಸಿರುವ ಕೃತಿಯಿದು. ಇದರಲ್ಲಿ ಪದ್ಮಾವತಿ ಅವರ ಕುರಿತು ನಾಡಿನ ವಿವಿಧ ಗಣ್ಯರು ಬರೆದ ಬಿಡಿ ಲೇಖನಗಳಿವೆ. ಧರ್ಮಸ್ಥಳದ ಡಿ.ವೀರೇಂದ್ರ ಹೆಗ್ಗಡೆಯವರು ಸಂದೇಶದ ಮೂಲಕ ಹರಿಕಥಾ ಜಗತ್ತಿಗೆ ಪದ್ಮಾವತಿ ಅವರ ಕೊಡುಗೆಯನ್ನು ಸ್ಮರಿಸಿದ್ದಾರೆ. ನಾಡಿನ ಹಲವು ಯತಿಗಳು ಹರಿಕೀರ್ತನಾ ವಿದುಷಿ ಕುರಿತು ಬರೆದಿದ್ದಾರೆ.

'ಶತದಳ ಪದ್ಮ–ನೆನಪಿನ ಗೋಪುರಕ್ಕೊಂದು ಕಲಶ' ಎಂಬ ಕೃತಿಯ ಪ್ರಾರಂಭಿಕ ಲೇಖನದಲ್ಲಿ ಬಿ.ಎ.ವಿವೇಕ್ ರೈ ಅವರು ಪದ್ಮಾವತಿ ಶಿವರಾಮ ರಾವ್ ಅವರ ಕಿರುಪರಿಚಯ ಮಾಡಿಕೊಟ್ಟಿದ್ದಾರೆ. ಅವರು ಹರಿಕಥೆಯ ರಂಗಕ್ಕೆ ಪ್ರವೇಶಿಸಿದ್ದು, ಅದರಲ್ಲಿ ಮಾಡಿದ ಪ್ರಯೋಗಗಳು, ಅವರ ಕುರಿತು ಮೂಡಿಬಂದ ಸಂದರ್ಶನಗಳ ಮೆಲುಕು ಈ ಲೇಖನದಲ್ಲಿ ಸಿಗುತ್ತವೆ.

ಭದ್ರಗಿರಿ ಅಚ್ಯುತ ದಾಸರ ಲೇಖನ ಹರಿಕಥಾ ಸಂಕೀರ್ತನ ಜಗತ್ತಿನಲ್ಲಿ ಪದ್ಮಾವತಿ ಅವರ ಸಾಧನೆಗಳ ಚಿತ್ರಣ ಕಟ್ಟಿಕೊಡುತ್ತದೆ. 'ನಂದಳಿಕೆಯಿಂದ' ಎಂಬ ಲೇಖನದಲ್ಲಿ ನಂದಳಿಕೆ ಬಾಲಚಂದ್ರ ರಾವ್ ಅವರು ತಮ್ಮ ಅತ್ತೆಯ ಅವರ ಬದುಕಿನ ಅನೇಕ ಘಟನೆಗಳನ್ನು ನೆನಪು ಮಾಡಿಕೊಂಡಿದ್ದಾರೆ. ವಿಜಯಲಕ್ಷ್ಮಿ ನಂದಳಿಕೆ ಅಮ್ಮನ ಕುರಿತು ಬರೆದ ಬರಹ ಮಾರ್ಪಳ್ಳಿ ಪದ್ಮಾವತಿ ಅವರು ಬೆಳೆದು ಬಂದ ಹಾದಿಯನ್ನು ತೋರಿಸುತ್ತದೆ. ತಮ್ಮ ಬಾಲ್ಯದಿಂದಲೇ ಹರಿಕಥೆ ಪ್ರಾರಂಭಿಸಿದ ಪದ್ಮಾವತಿಯವರ ಅನೇಕ ಚಿತ್ರಗಳನ್ನು ಈ ಕೃತಿಯಲ್ಲಿ ನೀಡಲಾಗಿದೆ.


ಪು: 128 ₹115

ಶತದಳ ಪದ್ಮ


ಸಂ: ವಿಜಯಲಕ್ಷ್ಮಿ ನಂದಳಿಕೆ, ನಂದಳಿಕೆ ಬಾಲಚಂದ್ರ ರಾವ್, ಸೌಜನ್ಯ ರಾವ್

ಪ್ರ: ಆಕೃತಿ ಆಶಯ ಪಬ್ಲಿಕೇಶನ್ಸ್

ಸಂ: 9448144495

ಆಪ್ತ ಶೈಲಿಯ ಸಾಂಸ್ಕೃತಿಕ ಸಂಕಥನ

ಚದುರಂಗರ ಮಗ ವಿಕ್ರಂ ಚದುರಂಗ ತಮ್ಮ ನೆನಪುಗಳ ಗುಚ್ಛವನ್ನು ಹೂ ಕಟ್ಟುವಂತೆ ಕಟ್ಟಿಕೊಟ್ಟಿರುವ ಕೃತಿ ಇದು. ತಮ್ಮ ತಂದೆ–ತಾಯಿಯರ ಬದುಕಿನ ಪುಟಗಳನ್ನು ಘನತೆಯೊಂದಿಗೆ, ಹೆಮ್ಮೆಯೊಂದಿಗೆ ತಿರುವಿಹಾಕುವ ಭಾವದಲ್ಲಿ ಅವರು ಈ ಪುಸ್ತಕವನ್ನು ಬರೆದಿದ್ದಾರೆ. 1940ರ ದಶಕದ ಕಾಲಘಟ್ಟದಲ್ಲಿ ಚದುರಂಗ ಹಾಗೂ ದೊಡ್ಡಮ್ಮಣ್ಣಿ ಒಪ್ಪಿತವಲ್ಲದ ಮದುವೆಗಳನ್ನು ಧಿಕ್ಕರಿಸಿ ಹೇಗೆ ತಮ್ಮದೇ ಬದುಕು ಕಟ್ಟಿಕೊಂಡರು ಎನ್ನುವುದನ್ನು ಕೃತಿ ನಿರುದ್ವೇಗದಿಂದ ಬಣ್ಣಿಸುತ್ತದೆ. ವಿವರಗಳು ಬರೀ ಮಾಹಿತಿಯಾಗದೆ ಆಪ್ತವಾಗಿ ದಾಟಿಕೊಳ್ಳುತ್ತವೆ. ಧಾರಾವಾಹಿಯ ಕಂತುಗಳನ್ನು ನೋಡುತ್ತಿರುವಂತೆ ಓದುಗರಿಗೆ ಭಾಸವಾಗುವ ಶೈಲಿ ಇದು. ತಮ್ಮ ತಾಯಿ ಬಿಡಿಸಿರುವ ಅಪರೂಪದ ವರ್ಣಚಿತ್ರಗಳು, ತಂದೆಯ ಕೃಷಿ–ಸಾಹಿತ್ಯ ಪ್ರೀತಿ, ಮೈಸೂರು ಅರಮನೆ ಕುರಿತ ಒಳನೋಟಗಳನ್ನು ವಿಕ್ರಂ ಚದುರಂಗ ಓದಿಸಿಕೊಳ್ಳುವಂತೆ ಬರೆದಿದ್ದಾರೆ. ಇತಿಹಾಸಕಾರರು ಮೂರನೇ ವ್ಯಕ್ತಿಗಳಾಗಿ ನೋಡಿ ಬರೆಯುವುದು ಬೇರೆ. ಈ ರೀತಿ ತಮ್ಮ ತಂದೆ–ತಾಯಿಯ ಬಗೆಗೆ ಮಗನೇ ದಾಖಲಿಸುವುದು ಬೇರೆ. ಈ ನಿಟ್ಟಿನಲ್ಲಿ ವಿಕ್ರಂ ಚದುರಂಗ ಅವರದ್ದು ಅಂತಃಕರಣದ ಭಾವಗಳನ್ನು ದಾಟಿಸುವಂತಹ ಬರಹ. ಚದುರಿದಂತೆ ಇದ್ದೂ, ಆಪ್ತ ನೆನಪುಗಳ ಕಟ್ಟಾಗಿ ಈ ಕೃತಿಯನ್ನು ಓದಬಹುದು.


ಪು: 208 ₹300

ಸ್ಮೃತಿ (ಸಾಂಸ್ಕೃತಿಕ ಸಂಕಥನ)

ಲೇ: ವಿಕ್ರಂ ಚದುರಂಗ

ಪ್ರ: ಸಂವಾದ, ಮೈಸೂರು

ಸಂ: 9902639593



ಕೂಲಿ... ನಲಿ

ಕೆಲವು ತಿಂಗಳ ಮಟ್ಟಿಗೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತಾತ್ಕಾಲಿಕವಾಗಿ ವಲಸೆ ಹೋಗುವವರು ನಮ್ಮ ನಡುವೆ ಇದ್ದಾರೆ; ಹಕ್ಕಿಗಳು ಋತುಮಾನಕ್ಕೆ ತಕ್ಕಹಾಗೆ ವಲಸೆ ಹೋಗಿ ಬರುತ್ತವಲ್ಲ ಹಾಗೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುಂಗಾರು ತಲೆಯಿಟ್ಟ ಕೆಲವು ದಿನಗಳವರೆಗೆ ಭತ್ತದ ನಾಟಿಯ ಸಿರಿಗಾಲ. ಇಲ್ಲಿಗೆ ಉತ್ತರ ಕರ್ನಾಟಕದ ಹಲವು ಊರುಗಳಿಂದ ಭತ್ತ ನಾಟಿ ಮಾಡಲೆಂದೇ ರೈತರು ಬರುತ್ತಾರೆ. ಎಕರೆಗೆ ಕಾರ್ಮಿಕರಿಗೆ ₹ 4,500 ಕೂಲಿ. ಅದರಲ್ಲಿ ಮಧ್ಯವರ್ತಿಗಳ ಕೈಸೇರುವುದು ₹ 1,000. ಏನಿಲ್ಲವೆಂದರೂ 3,000 ಎಕರೆಯಲ್ಲಿ ಭತ್ತದ ನಾಟಿ ಮಾಡಿ, ಎರಡು ತಿಂಗಳಲ್ಲಿ ಒಂದಿಷ್ಟು ದುಡಿದುಕೊಂಡು ಹೋಗುತ್ತಾರೆ. ಹೀಗೆ ಕೂಲಿಗೆ ಬರುವ ಎಷ್ಟೋ ಜನರಿಗೆ ಸ್ವಂತ ಜಮೀನಿದೆ. 2011ರಿಂದ ಶುರುವಾದ ಇಂತಹ ಕೂಲಿ ವಲಸೆ ಈ ವರ್ಷವೂ ಮುಂದುವರಿದಿದೆ. ನಾಟಿ ಮಾಡುವಾಗ ಕಂಡ ಚಿತ್ರಗಳು ಸೌಂದರ್ಯ ಕಾಣಿಸಿದರೂ ಬದುಕಿನ ಹುದುಗಿದ ಅರ್ಥವನ್ನೂ ದಾಟಿಸುವಂತಿವೆ. ಕರಾವಳಿಯಲ್ಲೀಗ ಇಂತಹ ಚಿತ್ರಗಳು ಕಣ್ಣಿಗೆ ಕಟ್ಟುತ್ತವೆ.

ಚಿತ್ರಗಳು ಹಾಗೂ ಮಾಹಿತಿ:
ಫಕ್ರುದ್ದೀನ್ ಎಚ್.









ಕೇರಿಯ ಹಾಡಿಗೆ...

ಒಂದನೇ ಪುಟದಿಂದ...

ಒಬ್ಬೊಬ್ಬರ ಕಥೆಗಳನ್ನೇ ಇಟ್ಟುಕೊಂಡು, ಒಟ್ಟು 25 ಕಥೆಗಳ ಮೂಲಕ ದೃಶ್ಯಕಟ್ಟುತ್ತಾ ಹೋದೆವು. ಹೋರಾಟದ ಹಾಡುಗಳು ಅದಕ್ಕೆ ಸಾಥ್ ನೀಡಿದವು.

ತಮ್ಮದೇ ಕಾರಣಗಳಿಂದಾಗಿ ಬೇರೆಯಾಗಿದ್ದ ಆ ಊರಿನ ಪರಿಶಿಷ್ಟ ಜನರು ಈ ಎಲ್ಲಾ ಚಟುವಟಿಕೆಗಳಿಂದ ಒಂದಾದರು. ಒಂದು ತಿಂಗಳ ಈ ಚಟುವಟಿಕೆ ಅವರಿಗೆ ಹೊಸ ಉತ್ಸಾಹ, ಆತ್ಮವಿಶ್ವಾಸ ತಂದುಕೊಟ್ಟಿತು. ನಾವೆಲ್ಲರೂ ಒಂದಾಗಿದ್ದರೆ ಯಾವ ಕಷ್ಟವನ್ನೂ ಎದುರಿಸಬಹುದು ಎಂಬ ನಂಬಿಕೆ ಅವರಲ್ಲಿ ಮೊಳಕೆ ಒಡೆಯಿತು. ಇದಕ್ಕಿಂತ ಬೇರೆ ಏನು ಬೇಕಿತ್ತು ಹೇಳಿ. ರಂಗಭೂಮಿಯ ಶಕ್ತಿ ಇದು.

ಈ ನಾಟಕ ಹುಟ್ಟಿಕೊಂಡ ಬಗೆ ನಿಜಕ್ಕೂ ಚಕಿತಗೊಳಿಸುವಂಥದ್ದು. ಪೂರ್ವ ನಿರ್ಧರಿತ ಎಂದು ಹೇಳಿಕೊಳ್ಳುವ ಯಾವುದೂ ಇರದೆ ಹುಟ್ಟಿಕೊಂಡಂತಹದ್ದು. ತಮ್ಮ ಕಥೆ ಹೇಳಿಕೊಂಡ ಜನರಂತೂ ಮೈಭಾರ ಇಳಿಸಿಕೊಂಡಿದ್ದರು. ಹಾಸನ, ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ (ಬಿಐಸಿ) ಸೇರಿದಂತೆ ಹಲವು ಕಡೆಗಳಲ್ಲಿ ಪ್ರದರ್ಶನ ನೀಡಿದ್ದೇವೆ. ಬಿಐಸಿನಲ್ಲಿ ನಾಟಕದ ಕುರಿತು ಚರ್ಚೆ ಕೂಡ ನಡೆಯಿತು. ಜನರು ತುಂಬಾ ಒಳ್ಳೆಯ ಪ್ರತಿಕ್ರಿಯೆ ನೀಡಿದರು. ಬೆಂಗಳೂರನ್ನೇ ನೋಡಿರದ ಅಲ್ಲಿನ ಜನರು ಸಂತೋಷಪಟ್ಟರು. ನಮ್ಮ ಕಥೆಗಳನ್ನೂ ಕೇಳುವವರು ಇದ್ದಾರೆ ಎಂದು ಸಮಾಧಾನಪಟ್ಟುಕೊಂಡರು.

ದಿಂಡಗೂರು ಮಾತ್ರವಲ್ಲ, ದೇಶದ ಎಲ್ಲೆಡೆಯೂ ಪರಿಶಿಷ್ಟ ಸಮುದಾಯಗಳ ಜನರ ಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಮೊದಲೇ ಹೇಳಿದ ಹಾಗೆ ಜಾತಿಯ ಕಾರಣಕ್ಕಾಗಿಯೇ ನಾನು ಇಂಥ ಅಪಮಾನಗಳನ್ನು ಅನುಭವಿಸಿದ್ದೇನೆ. ಒಮ್ಮೆ ಕೇರಳದಲ್ಲಿ ಬೇರೆಯ ನಾಟಕವೊಂದಕ್ಕೆ ತಯಾರಿ ನಡೆಸುತ್ತಿದ್ದ ವೇಳೆ ನನ್ನ ಸ್ನೇಹಿತ, ಆ ನಾಟಕದ ಸಹ ನಟ ಅನಿರುದ್ಧ್ ನಾಯರ್ ಅಂತ ಆತನ ಹೆಸರು. ಹೀಗೇ ಲೋಕಾಭಿರಾಮವಾಗಿ ಮಾತನಾಡುತ್ತಿದ್ದಾಗ ನನ್ನ ಅಪಮಾನಗಳ ಬಗ್ಗೆ ಹೇಳಿಕೊಂಡೆ. ಆತನಿಗೆ ಇಂಥ ಅನುಭವ ಎಂದೂ ಆಗಿರಲಿಲ್ಲ. ಆಗುವುದಕ್ಕೆ ಸಾಧ್ಯವೂ ಇರಲಿಲ್ಲ ಬಿಡಿ. ನಮ್ಮಿಬ್ಬರ ಇದೇ ಮಾತುಕತೆಗೆ ನಾಟಕ ರೂಪ ನೀಡಲು ನಿರ್ಧರಿಸಿದೆವು. ಹೀಗೆ ರೂಪುಗೊಂಡದ್ದೆ 'ಕ್ರಿಮಿನಲ್ ಟ್ರೈಬ್ಸ್ ಆ್ಯಕ್ಟ್'. ಸುಮಾರು ಒಂದು ತಾಸಿನ ನಾಟಕ. ಜಪಾನ್, ಸ್ವಿಟ್ಜರ್ಲೆಂಡ್, ಆಫ್ರಿಕಾ ಸೇರಿದಂತೆ ಹಲವು ದೇಶಗಳಲ್ಲಿ ಈ ನಾಟಕವನ್ನು ಆಡಿದ್ದೇವೆ.

ನಾನು ಮತ್ತು ನನ್ನ ಕೆಲವು ಸ್ನೇಹಿತರು ಸೇರಿ 'ಜನಮನ ಕಲೆಕ್ಟಿವ್' ಅಂತ ಒಂದು ತಂಡ ಕಟ್ಟಿಕೊಂಡಿದ್ದೇವೆ. ಸರ್ಕಾರಿ ಶಾಲೆಗೆ ಹೋಗಿ, ಅವರ ಪಠ್ಯಕ್ಕೆ ಸಂಬಂಧಿಸಿದಂತೆ ನಾಟಕ ಆಡಿಸುತ್ತೇವೆ ಇಲ್ಲವೇ ಪಾಠ ಮಾಡುತ್ತೇವೆ. ದಲಿತ ಕಾವ್ಯಗಳನ್ನು ಆಧರಿಸಿ ಲಕ್ಷ್ಮಣ ಕೆ.ಪಿ. ಅವರ 'ದಕ್ಲಕಥಾ ದೇವಿಕಾವ್ಯ' ನಾಟಕವನ್ನು ದೇಶದಾದ್ಯಂತ ಆಡಿದ್ದೇವೆ.

ಟ್ರಾನ್ಸ್‌ಜೆಂಡರ್ ರೇವತಿ ಅವರ 'ಬದುಕು ಬಯಲು' ಆತ್ಮಕಥೆಯನ್ನು 'ಜನಮನದಾಟ' ರಂಗ ತಂಡದಲ್ಲಿ ಗಣೇಶ್ ಮೇಷ್ಟ್ರು ನಾಟಕ ಆಡಿಸಿದ್ದರು. ಇದರಲ್ಲೂ ನಟಿಸಿದ್ದೇನೆ. ಟ್ರಾನ್ಸ್‌ಜೆಂಡರ್‌ಗಳೇ ಕಟ್ಟಿಕೊಂಡಿರುವ 'ಪಯಣ' ಮತ್ತು 'ರಾಹಿ' ತಂಡದಲ್ಲಿ ಸಕ್ರಿಯನಾಗಿದ್ದೇನೆ. ಅವರಿಗಾಗಿ, ಅವರ ಕಥೆಗಳನ್ನು ಇಟ್ಟುಕೊಂಡು ಹಲವು ನಾಟಕಗಳನ್ನು ನಿರ್ದೇಶಿಸಿದ್ದೇನೆ. ಕನ್ನಡ ರಂಗಭೂಮಿಯಲ್ಲಿ ಕೆಲವೇ ತಂಡಗಳಷ್ಟೇ ಸಮುದಾಯಗಳನ್ನು ಒಳಗೊಂಡಂತೆ ನಾಟಕಗಳನ್ನು ಕಟ್ಟಿವೆ. ಉಳಿದಂತೆ ರಾಶಿ ರಾಶಿ ಕ್ಲೀಷೆಗಳಿಂದ ತುಂಬಿಹೋಗಿದೆ ಅನ್ನಿಸುತ್ತದೆ. ಅಂಬೇಡ್ಕರ್ ವಿಚಾರಗಳನ್ನು ನಾಟಕಗಳ ಮೂಲಕ ಜನ ಮಾನಸಕ್ಕೆ ತಲುಪಿಸುವ ಆಸೆಯೂ ಇದೆ.

ಮಜ ಮಜ ಮಜಕೂರ


• ಎಂ.ಎಸ್.ಪೂಜಾರ



ಡಬ್ಬು ಚಕ್ಕು ಕ್ಲೀಶ್ರಷ್ಣು ಕಥೆಯ — ಟ್ರಿಣ್ ಟ್ರಿಣ್..ಟಪಕ್!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನ ಶಾಲೆಯು ಮೈಸೂರಿಗೆ ಶಾಲಾಪ್ರವಾಸ ಆಯೋಜಿಸಿತ್ತು. ಇದಕ್ಕಾಗಿ ಬೆಳಿಗ್ಗೆ ಐದು ಗಂಟೆಗೇ ಗುಂಡ ಶಾಲೆಯಲ್ಲಿ ಇರಬೇಕಿತ್ತು. ಪ್ರವಾಸಕ್ಕೆ ಬೇಕಾದ ಎಲ್ಲ ವಸ್ತುಗಳನ್ನು ರಾತ್ರಿಯೇ ಸಿದ್ಧಪಡಿಸಿಕೊಂಡು, ಬೆಳಗ್ಗೆ 4 ಗಂಟೆಗೆ ತನ್ನ ಟೇಬಲ್ ಗಡಿಯಾರದಲ್ಲಿ ಅಲಾರ್ಮ್ ಇಟ್ಟು, ಅದನ್ನು ಮಂಚದ ಮೇಲ್ಭಾಗದಲ್ಲಿಟ್ಟುಕೊಂಡು ಮಲಗಿದ. ಬೆಳಿಗ್ಗೆ ನಾಲ್ಕಾಗುತ್ತಿದ್ದಂತೆಯೇ ಗಡಿಯಾರ ಟ್ರಿಣ್...ಟ್ರಿಣ್... ಟ್ರಿಣ್ ಎನ್ನುತ್ತಾ ಸದ್ದು ಮಾಡಿತು. ಆದರೆ ಗುಂಡ ಗಾಢ ನಿದ್ದೆಯಲ್ಲಿದ್ದ. ಎಷ್ಟೇ ಸದ್ದಾದರೂ ಗುಂಡ ಏಳಲೇ ಇಲ್ಲ. ಪದೇ ಪದೇ ಟ್ರಿಣ್...ಟ್ರಿಣ್...ಟ್ರಿಣ್ ಎಂದು ಸದ್ದು ಮಾಡುತ್ತಾ ಗಡಿಯಾರ ಗುಂಡನ ತಲೆಯ ಮೇಲೆಯೇ ಬಿತ್ತು. ಗುಂಡ ತಕ್ಷಣ ಬೆಚ್ಚಿ ಎದ್ದು ಕುಳಿತ.



ಅಲ್ಫಾಬೆಟ್ ಗೇಮ್

ಇಲ್ಲಿ ಕೊಟ್ಟಿರುವ 'OO' ಅಕ್ಷರಗಳಿಗೆ, ಅಕ್ಷರ ಪಟ್ಟಿಯಿಂದ ಹಿಂದೊಂದು ಮುಂದೊಂದು ಅಕ್ಷರ ತುಂಬಿ ಅರ್ಥಬದ್ಧ ಶಬ್ದ ಮಾಡಿ.

1		O	O	
2		O	O	
3		O	O	
4		O	O	
5		O	O	
6		O	O	
7		O	O	
8		O	O	
9		O	O	
10		O	O	
11		O	O	
12		O	O	
13		O	O	
14		O	O	
15		O	O	

ಗಣಿತದಲ್ಲಿ ಗರ್ದಿ ಗಮ್ಮತ್ತು

$9^{9^{9}}$

ಸೋಜಿಗ ಗಣಿತ

999 ಎಂಬ ಸಂಖ್ಯೆಯನ್ನು ವಿಸ್ತರಿಸಿ ಬರೆದಾಗ ಆ ಸಂಖ್ಯೆಯಲ್ಲಿ 30 ಕೋಟಿ ಸ್ಥಾನಗಳಿವೆ. ಈ ಸಂಖ್ಯೆ 428,124,773,175,7 47,048,035,987,115...ಎಂದು ಪ್ರಾರಂಭವಾಗಿ 89ರಿಂದ ಕೊನೆಯಾಗುತ್ತದಂತೆ! ಇದನ್ನು ಸಾಧಾರಣವಾಗಿ ಒಂದು ಸಾಲಿನಲ್ಲಿ ಬರೆದರೆ ಬರೆಯಲು 1100 ಮೈಲಿಯಷ್ಟು ಉದ್ದದ ಕಾಗದ ಬೇಕಂತೆ! ಹೋಗಲಿ ಅದನ್ನು ಮುದ್ರಿಸಿದರೆ ಪುಟಕ್ಕೆ 140ರ ಅಂಕಿಗಳು, ಪುಸ್ತಕಕ್ಕೆ 800 ಪುಟಗಳು ಎಂದು ಲೆಕ್ಕಹಾಕಿ ಒಬ್ಬ ಪ್ರತಿಭಾವಂತ ಗಣಿತಜ್ಞ ಹೇಳಿದನಂತೆ!

ಅಕ್ಷರ ಪಟ್ಟಿ

G	D	B	L	D	L	F	H	C	K	T	F	M	M	R	D	S	N	N	R	N	N	F	D	L	M	L	R	P	K

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1. ನರಕಮಯ: ___________
2. ಪರದಾಡಿ: ___________
3. ಮರದರಸ: ___________
4. ಕರಿ ಹುಟ್ಟು: ___________



ವಿಸ್ಮಯ ವಿಷಯ

ಈ ಚಿತ್ರದಲ್ಲಿರುವ ಹಲ್ಲಿಯನ್ನು ಗಮನಿಸಿ. ಇದಕ್ಕೆ ಎರಡು ಬಾಲಗಳಿವೆ!



ಟು ಇನ್ ಒನ್
ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.
ಉದಾ: 1.ಕರ– ಪದಕ್ಕೆ ಆರಂಭಕ್ಕೆ 'ಆ' ಅಕ್ಷರ ಹಾಗೂ ಕೊನೆಗೆ 'ಡಿ' ಅಕ್ಷರ ತುಂಬಿದರೆ, ಆಕರಡಿ –ಇಲ್ಲಿ ಆಕರ ಮತ್ತು ಕರಡಿ ಎಂಬ ಎರಡು ಪದಗಳಾಗುತ್ತವೆ. ಮುಂದೆ ನೀವೇ ಪ್ರಯತ್ನಿಸಿ.

ಕರ
ಜಗ
ಸರ
ಮರ
ಗರ

ಚೂರು–ಮುರಿ

SU B BOOK KEE PER

ಇಲ್ಲಿ ಜೋಡಿ ಅಕ್ಷರಗಳ ಗಮ್ಮತ್ತನ್ನು ಗಮನಿಸಿ.



ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:


majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ: 1.ಗಳಗಂಡ 2.ಕಳೇಬರ 3.ಲೇವಾದೇವಿ 4.ಉತ್ತರಾಣಿ 5.ಹರಕತ್ತು
ಅದಲು ಬದಲು...: 1.ಬಸರಿಮರ 2.ಹಾಸ್ಯದರಸ 3.ಗುರಿಮುಟ್ಟು 4.ನಗುತಿರು
ಟ್ವೆಂಟಿ–20: 1-H, 2-L, 3-S, 4-J, 5-C, 6-Q, 7-F, 8-D, 9-N, 10-P, 11-G, 12-R, 13-K, 14-I, 15-A, 16-T, 17-O, 18-B, 19-E, 20-M.

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಹರಿಣಿ ಬಿ.ಟಿ.
ಹೂವಿನ ಹಡಗಲಿ


ನಿಶಾಂತ್ ಭಾರದ್ವಾಜ್
ಚಿಕ್ಕಮಗಳೂರು


ಪೃಥ್ವಿ ಎನ್.
ತುಮಕೂರು


ಧನುಷ್ ಕೆ.
ರಾಯಚೂರು


ಸನೀಕ್ಷ.ವೈ.ಎಸ್
ಚಿಕ್ಕಬಳ್ಳಾಪುರ


ಯಕ್ಷ
ರಾಯಚೂರು